ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ರಾಮನಗರ

ಪಾಠ ಆಧಾರಿತ ಮೌಲ್ಯಾಂಕನ ಸಾಮಗ್ರಿ

2025-26

ಪ್ರಥಮ ಭಾಷೆ ಕನ್ನಡ

9ನೇ ತರಗತಿ

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ,

ಬನಶಂಕರಿ 3ನೇ ಹಂತ, ಬೆಂಗಳೂರು-560085

ಪರಿಕಲ್ಪನೆ ಮತ್ತು ಮಾರ್ಗದರ್ಶನ	
ಶ್ರೀಮತಿ ರಶ್ಮಿ ಮಹೇಶ್ V, ಭಾ.ಆ.ಸೇ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ	
ಡಾ. ತ್ರಿಲೋಕ್ ಚಂದ್ರ K V., ಭಾ.ಆ.ಸೇ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು	**ಶ್ರೀ ಗೋಪಾಲಕೃಷ್ಣ H N,** ನಿರ್ದೇಶಕರು, DSERT, ಬೆಂಗಳೂರು
ಡಯಟ್ ಸಹಕಾರ	
ಪ್ರಾಂಶುಪಾಲರು **ಶ್ರೀ ಶಿವಕುಮಾರ ಡಿ (ಪ್ರಭಾರಿ)** **ಪ್ರಾಂಶುಪಾಲರು,** ಡಯಟ್, ರಾಮನಗರ	**ಮೆಂಟರ್** **ಶ್ರೀ ಶರಣಪ್ಪ** ಉಪನ್ಯಾಸಕರು, ಡಯಟ್, ರಾಮನಗರ
ಸಂಯೋಜನೆ	
ಶ್ರೀಮತಿ ರಾಧಾ ಪಿ. ಹಿರಿಯ ಸಹಾಯಕ ನಿರ್ದೇಶಕರು, DSERT, ಬೆಂಗಳೂರು	
ಪಾಠ ಆಧಾರಿತ ಮೌಲ್ಯಾಂಕನ ಸಾಮಗ್ರಿ ರಚನಾ ಸಂಪನ್ಮೂಲ ತಂಡ	
1. **ಶ್ರೀಪದೀಪ್ ಕುಮಾರ** ಕನ್ನಡ ಭಾಷಾ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ, ಹರಿಸಂದ್ರ, ರಾಮನಗರ	**2. ಶ್ರೀಸತೀಶ್ ಕುಮಾರ್ ಎಂ. ಕೆ** ಕನ್ನಡ ಭಾಷಾ ಶಿಕ್ಷಕರು ಸರ್ಕಾರಿ ಪದವಿ ಪೂರ್ವ ಕಾಲೇಜು, (ಪ್ರೌಢಶಾಲಾ ವಿಭಾಗ) ಮಾಗಡಿ ಟೌನ್
ಮಾರ್ಗದರ್ಶಕರು ಹಾಗೂ ಪರಿಶೀಲಕರು	
ಶ್ರೀ ನರಸಿಂಹಮೂರ್ತಿ ಬಿ. ಕೆ ಸಹಶಿಕ್ಷಕರು ಕರ್ನಾಟಕ ಪಬ್ಲಿಕ್ ಶಾಲೆ, ಸಾರಕ್ಕಿ ಜೆ. ಪಿ ನಗರ, ಬೆಂಗಳೂರು ದಕ್ಷಿಣ ವಲಯ-೧	

ಪರಿವಿಡಿ

ಕ್ರ. ಸಂ	ಗದ್ಯಭಾಗ	ಕಲಿಕಾಫಲಗಳು	ಪುಟ ಸಂಖ್ಯೆ
1	ಪ್ರಜಾ ನಿಷ್ಠೆ	➢ ಪಠ್ಯವಸ್ತುವಿನಲ್ಲಿರುವ ವಿವಿಧ ರೀತಿಯ ಕಥೆಗಳ ಧ್ವನಿಮುದ್ರಿತ ಪ್ರಸ್ತುತಿ ಮತ್ತು ಚರ್ಚೆಗಳನ್ನು ಓದುವರು ಮತ್ತು ಅರ್ಥಮಾಡಿಕೊಳ್ಳುವರು. ➢ ಪಾತ್ರಗಳ ವಿಶ್ಲೇಷಣೆ ಸಂಭಾಷಣೆಗಳನ್ನು ತಾರ್ಕಿಕವಾಗಿ ವಿಮರ್ಶಿಸುವರು. ➢ ಚರ್ಚೆ ಮತ್ತು ಸಂಭಾಷಣೆಗಳಲ್ಲಿ ಭಾಗವಹಿಸಿ ತಾರ್ಕಿಕ ವಾದವನ್ನು ಮಂಡಿಸುವರು. ➢ ಸರಳ ಕ್ರಿಯಾತ್ಮಕ ವ್ಯಾಕರಣಾಂಶಗಳನ್ನು ಗ್ರಹಿಸುತ್ತಾರೆ.	
2	ಬೆಡಗಿನ ತಾಣ ಜಯಪುರ	➢ ಪ್ರವಾಸ ಕಥನ ಸಾಹಿತ್ಯವನ್ನು ಓದುವರು ಮತ್ತು ಅರ್ಥಮಾಡಿಕೊಳ್ಳುವರು. ➢ ಪಾತ್ರಗಳ ವಿಶ್ಲೇಷಣೆ, ಸಂಭಾಷಣೆ, ವರ್ತನೆಗಳಂತ ವಿಭಿನ್ನ ಸ್ವರೂಪಗಳನ್ನು ಓದಿ ತಾರ್ಕಿಕವಾಗಿ ಚರ್ಚಿಸುವರು. ➢ ವ್ಯಾಕರಣ ಅಂಶವನ್ನು ಅರ್ಥೈಸಿಕೊಳ್ಳುವರು ➢ ಪತ್ರ, ಪ್ರಬಂಧ, ಗಾದೆ ಅರ್ಥೈಸಿಕೊಂಡು ಸ್ವರಚನೆ ಆರಂಭಿಸುವುದು. ➢ ಸರಳ ಕ್ರಿಯಾತ್ಮಕ ವ್ಯಾಕರಣಾಂಶಗಳನ್ನು ಗ್ರಹಿಸುತ್ತಾರೆ.	
3	ರಾಮರಾಜ್ಯ	➢ ಚರ್ಚೆ ಮತ್ತು ಸಂಭಾಷಣೆಗಳಲ್ಲಿ ಭಾಗವಹಿಸಿ ತಾರ್ಕಿಕವಾದವನ್ನು ಮಂಡಿಸುವರು. ➢ ಸರಳ ಕ್ರಿಯಾತ್ಮಕ ವ್ಯಾಕರಣಾಂಶಗಳನ್ನು ಗ್ರಹಿಸುತ್ತಾರೆ.	
4	ಆದರ್ಶ ಶಿಕ್ಷಕ ಸರ್ವೆಪಲ್ಲಿ ರಾಧಾಕೃಷ್ಣನ್	➢ ಕನ್ನಡ ಭಾಷೆಯ ವಿವಿಧ ಸಾಹಿತ್ಯ ಪ್ರಕಾರಗಳನ್ನುಓದಿ ಅರ್ಥಮಾಡಿಕೊಂಡು ಪ್ರಶಂಸಿಸುತ್ತಾರೆ. ➢ ಸರಳ ಕ್ರಿಯಾತ್ಮಕ ವ್ಯಾಕರಣಾಂಶಗಳನ್ನು ಗ್ರಹಿಸುತ್ತಾರೆ.	
5	ಜನಪದ ಕಲೆಗಳ ವೈಭವ	➢ ಸಮಿತಿ ರಚನೆ ಪಾತ್ರಗಳ ವಿಶ್ಲೇಷಣೆ ಸಂಭಾಷಣೆ ವರ್ತನೆಗಳಂತಹ ವಿಭಿನ್ನ ಸ್ವರೂಪಗಳ ಪಠ್ಯಗಳನ್ನು ಓದಿ ತಾರ್ಕಿಕವಾಗಿ ವಿಮರ್ಶಿಸುವರು. ➢ ಸರಳ ಕ್ರಿಯಾತ್ಮಕ ವ್ಯಾಕರಣಾಂಶಗಳನ್ನು ಗ್ರಹಿಸುತ್ತಾರೆ.	

6	ಅಧಿಕಾರ	➢ ಪಾತ್ರಗಳ ವಿಶ್ಲೇಷಣೆ, ಸಂಭಾಷಣೆ, ಪಾತ್ರಗಳ ವರ್ತನೆಗಳಂತಹ ವಿಭಿನ್ನ ಸ್ವರೂಪಗಳ ಪಠ್ಯಗಳನ್ನುಓದಿ, ತಾರ್ಕಿಕವಾಗಿ ವಿಮರ್ಶಿಸುವರು. ➢ ಸರಳ ಕ್ರಿಯಾತ್ಮಕ ವ್ಯಾಕರಣಾಂಶಗಳನ್ನು ಗ್ರಹಿಸುತ್ತಾರೆ.	
7	ನಾ ಕಂಡಂತೆ ಬಿಜಿಎಲ್ ಸ್ವಾಮಿ	➢ ಕಲಿಕಾಫಲ/ಕಲಿಕಾ ಸಾಮರ್ಥ್ಯ: ಚರ್ಚೆ, ಪ್ರಬಂಧ ಮತ್ತು ಸಂಭಾಷಣೆಗಳನ್ನು ಸೂಕ್ತ ಲೇಖನ ಚಿಹ್ನೆಗಳೊಂದಿಗೆ ಬರೆಯುವರು. ➢ ಸರಳ ಕ್ರಿಯಾತ್ಮಕ ವ್ಯಾಕರಣಾಂಶಗಳನ್ನು ಗ್ರಹಿಸುತ್ತಾರೆ.	
8	ಹರಲೀಲೆ	➢ ಹಳೆಗನ್ನಡ, ನಡುಗನ್ನಡ, ಹೊಸಗನ್ನಡ ಸಾಹಿತ್ಯ ಪ್ರಕಾರಗಳನ್ನು ಓದಿ ಅರ್ಥೈಸಿಕೊಂಡು ಹೇಳುವರು.	
	ಪದ್ಯಭಾಗ		
1	ಪಾರಿವಾಳ	➢ ಕಥೆಗಳು ಕವಿತೆಗಳು ಮತ್ತು ಇತರೆ ಸಾಹಿತ್ಯ ಪ್ರಕಾರಗಳನ್ನು ಪ್ರಶಂಶಿಸುವರು ಮತ್ತು ತಮ್ಮ ಅಭಿಪ್ರಾಯಗಳನ್ನು ಮೌಖಿಕ ಮತ್ತು ಲಿಖಿತರೂಪದಲ್ಲಿ ಅಭಿವ್ಯಕ್ತಿಸುವರು. ➢ ಭಾಷಾ ನಿಯಮಗಳಿಗೆ ಅನುಸಾರವಾಗಿ ಛಂಧಸ್ಸು, ಅಲಂಕಾರಗಳ ಮೂಲ ಅಂಶಗಳನ್ನು ಗುರ್ತಿಸಿ ಬರೆಯುವುದುನ್ನು ಕಲಿಯುವರು.	
2	ಹೊಸ ಹಾಡು	➢ ಕಥೆಗಳು ಕವಿತೆಗಳು ಮತ್ತು ಇತರೆ ಸಾಹಿತ್ಯ ಪ್ರಕಾರಗಳನ್ನು ಪ್ರಶಂಶಿಸುವರು ಮತ್ತು ತಮ್ಮ ಅಭಿಪ್ರಾಯಗಳನ್ನು ಮೌಖಿಕ ಮತ್ತು ಲಿಖಿತರೂಪದಲ್ಲಿ ಅಭಿವ್ಯಕ್ತಿಸುವರು.	
3	ಚಕ್ರ ಗ್ರಹಣ (ಯಕ್ಷಗಾನ)	➢ ಪಠ್ಯವಸ್ತುವಿನಲ್ಲಿರುವ ನಡುಗನ್ನಡ ಸಾಹಿತ್ಯ ಪ್ರಕಾರವಾದ ಯಕ್ಷಗಾನ ನಾಟಕ ಪ್ರಸಂಗವನ್ನು ಓದಿ ಅರ್ಥಮಾಡಿಕೊಂಡು ಸಾರಾಂಶವನ್ನು ಹೇಳುವರು. ಭಾಷಾ ನಿಯಮಗಳಿಗೆ ಅನುಸಾರವಾಗಿ ಛಂಧಸ್ಸು, ಅಲಂಕಾರಗಳ ಮೂಲ ಅಂಶಗಳನ್ನು ಗುರ್ತಿಸಿ ಬರೆಯುವುದುನ್ನು ಕಲಿಯುವರು.	
4	ಬಲಿಯನಿತ್ತೊಡೆ ಮುನಿವೆಂ	➢ ಹಳಗನ್ನಡ ನಡುಗನ್ನಡ, ಹೊಸಗನ್ನಡ ಸಾಹಿತ್ಯ ಪ್ರಕಾರಗಳನ್ನು ಓದಿ ಅರ್ಥ ಮಾಡಿಕೊಂಡು ಸಾರಾಂಶ ಹೇಳುವರು ➢ ಭಾಷಾ ನಿಯಮಗಳಿಗೆ ಅನುಸಾರವಾಗಿ ಛಂದಸ್ಸು, ಅಲಂಕಾರಗಳ ಮೂಲ ಅಂಶಗಳನ್ನು ಬರೆಯುವುದನ್ನು ಕಲಿಯುವರು ➢ ಸಂಧಿಗಳು , ಸಮಾಸಗಳು ವಿಭಕ್ತಿ ಪ್ರತ್ಯಯಗಳ ವ್ಯಾಕರಣ ರಚನೆ ಮತ್ತು ನಿಯಮಗಳನ್ನು ತಿಳಿಯುವರು.	
5	ಹೇಮಂತ	➢ ತಾವು ಓದಿದ ಗದ್ಯ, ಪದ್ಯ ಕಥೆ ಕಾವ್ಯಗಳನ್ನು ಕುರಿತು, ಅದರ ಸತ್ಯಾಸತ್ಯತೆಯ ಮೌಲ್ಯಗಳ ಬಗೆಗೆ ತಮ್ಮ ನಿರ್ಧಾರಗಳನ್ನು ಅಭಿವ್ಯಕ್ತಪಡಿಸುತ್ತಾರೆ'. ➢ ಹೇಮಂತ ಋತುವಿನ ವಿಶೇಷತೆಗಳನ್ನು ವರ್ಣಿಸುವರು.	

		➢ ಮನುಷ್ಯ ಪ್ರಕೃತಿಯಂತೆ ಕಷ್ಟನಷ್ಟ ಸುಖದುಃಖಗಳ ನಡುವೆ ಸಹಬಾಳ್ವೆ ನಡೆಸುವ ಮೌಲ್ಯ ವಿವರಿಸುವರು.	
6	ತತ್ವಪದಗಳು	➢ ಅವರ ಆಲೋಚನೆಗಳನ್ನು ಪದ್ಯ ಮತ್ತು ಕತೆಗಳ ಮೂಲಕ ಮೌಖಿಕವಾಗಿ ಮತ್ತು ಬರವಣಿಗೆಯ ರೂಪದಲ್ಲಿ ಕ್ರಿಯಾತ್ಮಕವಾಗಿ ಅಭಿವ್ಯಕ್ತಿಸುವರು. ➢ ತಾವು ಓದಿದ ಗದ್ಯ, ಪದ್ಯ ಕಥೆ ಕಾವ್ಯಗಳನ್ನು ಕುರಿತು, ಅದರ ಸತ್ಯಾಸತ್ಯತೆಯ ಮೌಲ್ಯಗಳ ಬಗೆಗೆ ತಮ್ಮ ನಿರ್ಧಾರಗಳನ್ನು ಅಭಿವ್ಯಕ್ತಪಡಿಸುತ್ತಾರೆ’.	
7	ನಿನ್ನ ಮುತ್ತಿನ ಸತ್ತಿಗೆಯನ್ನಿತ್ತು ಸಲಹು	➢ ಹಳಗನ್ನಡ ನಡುಗನ್ನಡ ಹೊಸಗನ್ನಡ ಸಾಹಿತ್ಯ ಪ್ರಕಾರಗಳನ್ನು ಓದಿ ಅರ್ಥೈಸಿಕೊಂಡು ಸಾರಾಂಶ ಹೇಳುವರು.	
8	ಕನ್ನಡ ನಾಡು ನುಡಿ	➢ ಕಲಿಕಾ ಫಲ / ಸಾಮರ್ಥ್ : ಹಳಗನ್ನಡ ನಡುಗನ್ನಡ ಹೊಸಗನ್ನಡ ಸಾಹಿತ್ಯ ಪ್ರಕಾರಗಳನ್ನು ಓದಿ ಅರ್ಥೈಸಿಕೊಂಡು ಸಾರಾಂಶ ಹೇಳುವರು. ಭಾಷಾ ನಿಯಮಗಳಿಗೆ ಅನುಸಾರವಾಗಿ ಛಂದಸ್ಸು , ಅಲಂಕಾರಗಳ ಮೂಲ ಅಂಶಗಳನ್ನು ಗುರುತಿಸಿ ಬರೆಯುವುದನ್ನು ಕಲಿಯುವರು.	
	ಪಠ್ಯ ಪೂರಕ ಅಧ್ಯಯನ		
1	ಪುಟ್ಟಹಕ್ಕಿ	➢ ಕಥೆಗಳು ಕವಿತೆಗಳು ಮತ್ತು ಇತರೆ ಸಾಹಿತ್ಯ ಪ್ರಕಾರಗಳನ್ನು ಪ್ರಶಂಶಿಸುವರು ಮತ್ತು ತಮ್ಮ ಅಭಿಪ್ರಾಯಗಳನ್ನು ಮೌಖಿಕ ಮತ್ತು ಲಿಖಿತ ರೂಪದಲ್ಲಿ ಅಭಿವ್ಯಕ್ತಿಸುವರು.	
2	ಚೆನ್ನಭೈರಾ ದೇವಿ	➢ ಪಾತ್ರಗಳ ವಿಶ್ಲೇಷಣೆ, ಸಂಭಾಷಣೆ, ಪಾತ್ರಗಳ ವರ್ತನೆಗಳಂತಹ ವಿಭಿನ್ನ ಸ್ವರೂಪಗಳ ಪಠ್ಯಗಳನ್ನು ಓದಿ ತಾರ್ಕಿಕವಾಗಿ ವಿಮರ್ಶಿಸುವರು .	
3	ಸಿರಿಯ ನಿನ್ನೇನ ಬಣ್ಣಿಪೆನು	➢ ಹಳಗನ್ನಡ – ನಡುಗನ್ನಡ – ಹೊಸಗನ್ನಡ ದ ಸಾಹಿತ್ಯ ಪ್ರಕಾರಗಳನ್ನು ಓದಿ ಅರ್ಥೈಸಿಕೊಂಡು ಸಾರಾಂಶವನ್ನು ಹೇಳುವರು .	
4	ನನ್ನಾಸೆ	➢ ಅವರ ಆಲೋಚನೆಗಳನ್ನು ಪದ್ಯ ಮತ್ತು ಕತೆಗಳ ಮೂಲಕ ಮೌಖಿಕವಾಗಿ ಮತ್ತು ಬರವಣಿಗೆಯ ರೂಪದಲ್ಲಿ ಕ್ರಿಯಾತ್ಮಕವಾಗಿ ಅಭಿವ್ಯಕ್ತಿಸುವರು. ➢ ತಾವು ಓದಿದ ಗದ್ಯ,ಪದ್ಯ ಕಥೆಕಾವ್ಯಗಳನ್ನು ಕುರಿತು, ಅದರ ಸತ್ಯಾಸತ್ಯತೆಯ ಮೌಲ್ಯಗಳ ಬಗೆಗೆ ತಮ್ಮ ನಿರ್ಧಾರಗಳನ್ನು ಅಭಿವ್ಯಕ್ತಪಡಿಸುತ್ತಾರೆ’	
5	ಉರಿದ ಬದುಕು	➢ ಪಾತ್ರಗಳ ವಿಶ್ಲೇಷಣೆ, ಸಂಭಾಷಣೆ, ಪಾತ್ರಗಳ ವರ್ತನೆಗಳಂತಹ ವಿಭಿನ್ನ ಸ್ವರೂಪಗಳ ಪಠ್ಯಗಳನ್ನು ಓದಿ, ತಾರ್ಕಿಕವಾಗಿ ವಿಮರ್ಶಿಸುವರು.	
6	ಗುಣಸಾಗರಿ ಪಂಡರಿಬಾಯಿ	➢ ಪಠ್ಯವಸ್ತುವಿನಲ್ಲಿರುವ ವಿವಿಧ ರೀತಿಯ ನಾಟಕಗಳು, ಪದ್ಯಗಳು, ಹಾಸ್ಯಪೂರ್ಣ ಕಥೆಗಳು, ವೈಜ್ಞಾನಿಕ ಲೇಖನಗಳು, ಆತ್ಮಚರಿತ್ರೆಗಳು, ಪುರಾತನ ಸಾಹಿತ್ಯ, ಕೀರ್ತನೆಗಳು, ವಚನಗಳು, ಆಧುನಿಕ ಸಾಹಿತ್ಯ ಮತ್ತು ಧ್ವನಿಮುದ್ರಿತ ಪ್ರಸ್ತುತಿ ಮತ್ತು ಚರ್ಚೆಗಳನ್ನು ಓದುವರು ಮತ್ತುಅರ್ಥಮಾಡಿಕೊಳ್ಳುವರು.	

ಪ್ರಶ್ನೆಪತ್ರಿಕೆ ವಿನ್ಯಾಸ ಹಾಗೂ ನೀಲನಕ್ಷೆ

ಪ್ರಥಮಭಾಷೆ-ಕನ್ನಡ

ಗರಿಷ್ಠ ಅಂಕಗಳು=100 **ಅವಧಿ- 3 ಗಂಟೆ 15 ನಿಮಿಷಗಳು**

ಘಟಕ: ಗದ್ಯ,ಪದ್ಯ, ಪಠ್ಯಪೋಷಕ ಅಧ್ಯಯನ ಅಪಠಿತ ಗದ್ಯ, ವ್ಯಾಕರಣ ಮತ್ತು ವಾಕ್ಯರಚನೆ.

1.ಉದ್ದಿಷ್ಟಾನುಸಾರ ಪ್ರಾಮುಖ್ಯತೆ:

ಉದ್ದಿಷ್ಟಗಳು	ಪ್ರತಿಶತ	ದತ್ತ ಅಂಕಗಳು
ಸ್ಮರಣೆ	21	21
ಗ್ರಹಿಕೆ	36	36
ಅಭಿವ್ಯಕ್ತಿ	39	39
ಪ್ರಶಂಶೆ	04	04
ಒಟ್ಟು	100	100

2. ವಿಷಯಾನುಸಾರ ಪ್ರಾಮುಖ್ಯತೆ:

ವಿಷಯ ಉಪಘಟಕ	ಪ್ರತಿಶತ	ದತ್ತ ಅಂಕಗಳು	ಪ್ರಶೆಗಳ ಸಂಖ್ಯೆ
ಗದ್ಯ	28	26	13
ಪದ್ಯ	30	30	11
ಪಠ್ಯಪೋಷಕ ಅಧ್ಯಯನ	09	09	05
ಅಪಠಿತ ಗದ್ಯ	04	04	01
ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ	29	29	15
ಒಟ್ಟು	100	100	45

3. ಪ್ರಶ್ನೆವಾರು ಪ್ರಾಮುಖ್ಯತೆ:

ಪ್ರಶ್ನೆಗಳ ವಿಧಗಳು	ಪ್ರತಿಶತ	ದತ್ತ ಅಂಕಗಳು	ಪ್ರಶೆಗಳ ಸಂಖ್ಯೆ	ಅಪೇಕ್ಷಿತ ಸಮಯ
ವಸ್ತುನಿಷ್ಠ	10	10	10	15 ನಿಮಿಷಗಳು
ಕಿರು ಉತ್ತರ-1	07	07	07	15 ನಿಮಿಷಗಳು
ಕಿರು ಉತ್ತರ-2	20	20	10	40 ನಿಮಿಷಗಳು
ದೀರ್ಘ ಉತ್ತರ-1	33	33	11	50 ನಿಮಿಷಗಳು
ದೀರ್ಘ ಉತ್ತರ-2	20	20	05	35 ನಿಮಿಷಗಳು
ದೀರ್ಘ ಉತ್ತರ-3	10	10	02	25 ನಿಮಿಷಗಳು
ಒಟ್ಟು	100	100	45	180+15 ನಿಮಿಷಗಳು

ಷರಾ: ಆರಂಭದಲ್ಲಿ ಪ್ರಶ್ನೆಪತ್ರಿಕೆ ಅವಲೋಕಿಸಲು 15 ನಿಮಿಷಗಳು

4. ಕಠಿಣತೆಯಮಟ್ಟ

ಸುಲಭ	ಸಾಧಾರಣ	ಕಠಿಣ	ಒಟ್ಟು
30%	50%	20%	100%

I. ಉದ್ದಿಷ್ಟಾನುಸಾರ ಆಧರಿಸಿ ಶೇಕಡವಾರು ಅಂಕ ಹಂಚಿಕೆ

9ನೆಯ ತರಗತಿ ಪ್ರಥಮ ಭಾಷೆ ಕನ್ನಡ

ಕ್ರ.ಸಂ	ಉದ್ದಿಷ್ಟಗಳು	ಪ್ರತಿಶತ	ದತ್ತಅಂಕ	ಪ್ರಶ್ನೆಸಂಖ್ಯೆ
1	ಸ್ಮರಣೆ	21%	21	14
2	ಗ್ರಹಿಕೆ	36%	36	19
3	ಅಭಿವ್ಯಕ್ತಿ	39%	39	11
4	ಪ್ರಶಂಸೆ	04%	04	01
5	**ಒಟ್ಟು**	**100%**	**100**	**45**

II.ಪ್ರಶ್ನೆಗಳ ಸ್ವರೂಪ ಆಧರಿಸಿ ಶೇಕಡವಾರು ಅಂಕ ಹಂಚಿಕೆ

ಕ್ರ.ಸಂ	ಪ್ರಶ್ನೆಯ ಸ್ವರೂಪ	ಪ್ರತಿಶತ	ದತ್ತಅಂಕ	ಪ್ರಶ್ನೆಗಳು
1	ವಸ್ತುನಿಷ್ಠ	10%	10	10
2	ಕಿರು ಉತ್ತರ 1	07%	07	07
3	ಕಿರು ಉತ್ತರ 2	20%	20	10
4	ದೀರ್ಘ ಉತ್ತರ 1	33%	33	11
5	ದೀರ್ಘ ಉತ್ತರ 2	20%	20	05
6	ದೀರ್ಘ ಉತ್ತರ 3	10%	10	02
7	**ಒಟ್ಟು**	**100%**	**100**	**45**

III. ಕ್ಲಿಷ್ಟತೆ ಮಟ್ಟವನ್ನುಆಧರಿಸಿ ಶೇಕಡವಾರು ಅಂಕ ಹಂಚಿಕೆ

ಕ್ರ.ಸಂ	ಕ್ಲಿಷ್ಟತೆಯ ಮಟ್ಟ	ಶೇಕಡವಾರು	ಅಂಕಗಳು	ಪ್ರಶ್ನೆಸಂಖ್ಯೆ
1	ಸುಲಭ	30%	30	21
2	ಸಾಧಾರಣ	50%	50	20
3	ಕಠಿಣ	20%	20	04
4	**ಒಟ್ಟು**	**100%**	**100**	**45**

V. [A] ಪಠ್ಯಾಂಶ ಆಧರಿಸಿ ಶೇಕಡವಾರು ಅಂಕ ಹಂಚಿಕೆ

ಕ್ರ.ಸಂ	ವಿಷಯ	ಶೇಕಡವಾರು	ದತ್ತಅಂಕಗಳು	ಪ್ರಶ್ನೆಸಂಖ್ಯೆ
1	ಗದ್ಯ	28%	28	13
2	ಪದ್ಯ	30%	30	11
3	ಪಠ್ಯ ಪೂರಕ ಅಧ್ಯಯನ	09%	09	05
4	ಅಪಠಿತ ಗದ್ಯ	04%	04	01
5	ವ್ಯಾಕರಣ, ಅಲಂಕಾರ, ಛಂದಸ್ಸು, ವಾಕ್ಯರಚನೆ	29%	29	15
6	**ಸಮಗ್ರಒಟ್ಟು**	**100%**	**100**	**45**

IV. [B] ಪಠ್ಯಾಂಶ ಆಧರಿಸಿ ಶೇಕಡವಾರು ಅಂಕ ಹಂಚಿಕೆ

1.ಗದ್ಯಭಾಗ

ಕ್ರ.ಸಂ	ಗದ್ಯಪಾಠದ ಹೆಸರು	ಶೇಕಡವಾರು	ದತ್ತಅಂಕಗಳು	ಪ್ರಶ್ನೆಸಂಖ್ಯೆ
1	ಪ್ರಜಾನಿಷ್ಠೆ	03%	03	01
2	ಬೆಳಗಿನ ತಾಣ ಜಯಪುರ	03%	03	02
3	ರಾಮರಾಜ್ಯ	05%	05	02
4	ಆದರ್ಶಶಿಕ್ಷಕಸರ್ವೇಪಲ್ಲಿರಾಧಾಕೃಷ್ಣನ್	03%	03	02
5	ಜನಪದಕಲೆಗಳವೈಭವ	03%	03	02
6	ಅಧಿಕಾರ	03%	03	01
7	ನಾಕಂಡಂತೆಬಿ.ಜಿ. ಎಲ್. ಸ್ವಾಮಿ	03%	03	02
8	ಹರಲೀಲೆ	04	04	01
	ಒಟ್ಟು	**28%**	**28**	**13**

2. ಪದ್ಯಭಾಗ

ಕ್ರ.ಸಂ	ಪದ್ಯಪಾಠದ ಹೆಸರು	ಶೇಕಡವಾರು	ದತ್ತಅಂಕಗಳು	ಪ್ರಶ್ನೆಸಂಖ್ಯೆ
1	ಪಾರಿವಾಳ	05%	05	02
2	ಹೊಸಹಾಡು	04%	04	02
3	ಚಕ್ರಗ್ರಹಣ	03%	03	02
4	ಬಲಿಯನಿತ್ತೊಡೆ ಮುನಿವೆಂ	04%	04	01
5	ಹೇಮಂತ	03%	03	01
6	ತತ್ವಪದಗಳು	04%	04	01
7	ನಿನ್ನಮುತ್ತಿನ ಸತ್ತಿಗೆಯನ್ನಿತ್ತು ಸಲಹು	04%	04	01
8	ಕನ್ನಡ ನಾಡು ನುಡಿ	03%	03	01
	ಒಟ್ಟು	**30%**	**30**	**11**

3. ಪಠ್ಯ ಪೂರಕ ಅಧ್ಯಯನ ಭಾಗ

ಕ್ರ.ಸಂ	ಪಠ್ಯ ಪೂರಕ ಅಧ್ಯಯನ	ಶೇಕಡವಾರು	ದತ್ತಅಂಕಗಳು	ಪ್ರಶ್ನೆಸಂಖ್ಯೆ
1	ಪುಟ್ಟಹಕ್ಕಿ	01%	01	01
2	ಚೆನ್ನಭೈರಾದೇವಿ	02%	02	01
3	ಸಿರಿಯನಿನ್ನೇನಬಣ್ಣಿಪೆನು	0%	00	00
4	ನನ್ನಾಸೆ	02%	02	01
5	ಉರಿದಬದುಕು	02%	02	01
6	ಗುಣಸಾಗರಿಪಂಢರಿಬಾಯಿ	02	02	01
	ಒಟ್ಟು	**09%**	**09**	**05**

4. ಅಪರಿತ ಗದ್ಯಭಾಗ

ಕ್ರ.ಸಂ	ಅಪರಿತಗದ್ಯ	ಶೇಕಡವಾರು	ದತ್ತಅಂಕಗಳು	ಪ್ರಶ್ನೆಸಂಖ್ಯೆ
1	ಅಪರಿತಗದ್ಯ	04%	04	01
4	**ಒಟ್ಟು**	**04%**	**04**	**01**

4. ವ್ಯಾಕರಣ, ಛಂದಸ್ಸು , ಅಲಂಕಾರ , ವಾಕ್ಯರಚನೆಭಾಗ

ಕ್ರ.ಸಂ	ಪಠ್ಯಭಾಗದಹೆಸರು	ಶೇಕಡವಾರು	ದತ್ತಅಂಕಗಳು	ಪ್ರಶ್ನೆಸಂಖ್ಯೆ
1	ವ್ಯಾಕರಣ	10%	10	10
2	ಅಲಂಕಾರ	03%	03	01
3	ಛಂದಸ್ಸು	03%	03	01
4	ವಾಕ್ಯರಚನೆ	13%	13	03
5	**ಒಟ್ಟು**	**29%**	**29**	**15**

1. ಪ್ರಜಾನಿಷ್ಠೆ - ಸಾ.ಶಿ ಮರುಳಯ್ಯ

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. (ಸ್ಮರಣೆ – ಸುಲಭ)

1) 'ಕುಲೋತ್ತುಂಗ' ಪದದಲ್ಲಿ ಆಗಿರುವ ಸಂಧಿ
(ಎ) ಲೋಪಸಂಧಿ (ಬಿ) ಆದೇಶಸಂಧಿ (ಸಿ) ಗುಣಸಂಧಿ (ಡಿ) ಆಗಮಸಂಧಿ

2) 'ಮೈಮರೆ' ಪದದಲ್ಲಿ ಆಗಿರುವ ಸಮಾಸವಿದು
(ಎ) ಕ್ರಿಯಾ ಸಮಾಸ (ಬಿ) ಗಮಕ ಸಮಾಸ (ಸಿ) ಬಹುವ್ರೀಹಿ ಸಮಾಸ (ಡಿ) ಕರ್ಮಧಾರೆಯ ಸಮಾಸ

3) 'ದಂಡವನ್ನು' ಪದದಲ್ಲಿರುವ ವಿಭಕ್ತಿಯ ಹೆಸರು
(ಎ) ಸಪ್ತಮಿ (ಬಿ) ದ್ವಿತೀಯ (ಸಿ) ಪ್ರಥಮ (ಡಿ) ಚತುರ್ಥಿ

4) 'ವಿನಿಯೋಗವಾಗಲಿ' ಪದವು ಈ ಕ್ರಿಯಾಪದಕ್ಕೆ ಉದಾಹರಣೆಯಾಗಿದೆ
ಅ) ನಿಷೇಧಾರ್ಥಕ ಬ) ಪ್ರಶ್ನಾರ್ಥಕ ಕ) ವಿಧ್ಯರ್ಥಕ ಡ) ಸಂಭವನಾರ್ಥಕ

5) ನೀವು ಯಾರು ತಾಯಿ - ಇಲ್ಲಿರ ಬೇಕಾದ ಲೇಖನ ಚಿಹ್ನೆ
(ಅ) ಅಲ್ಪ ವಿರಾಮ (ಬಿ) ಪ್ರಶ್ನಾರ್ಥಕ (ಸಿ) ಅರ್ಧ ವಿರಾಮ (ಡಿ) ಆಶ್ಚರ್ಯಸೂಚಕ

6) ಕಿಸುರು ಪದದ ಅರ್ಥ ಇದಾಗಿದೆ
ಅ) ಸಂತೋಷ ಬ) ಹಳದಿ ಕ) ಕೆಂಪುಬಣ್ಣ ಡ) ಕನಿಕರ

7) ದಿಗ್ವಾಚಕ ಪದಕ್ಕೆ ಉದಾಹರಣೆಯಾಗಿದೆ
ಅ) ಮೂಡಣ ಬ) ಅವಳು ಕ) ಹೊನ್ನು ಡ) ನದಿ

8) ಆದಿಯಮ ಮತ್ತು ವಿಷ್ಣುವರ್ಧನರು ಯುದ್ಧ ಮಾಡಿದರು- ವಾಕ್ಯವು ಈ ಕಾಲರೂಪದಲ್ಲಿದೆ
(ಎ) ವರ್ತಮಾನ ಕಾಲ (ಬಿ) ಭೂತ ಕಾಲ (ಸಿ) ಭವಿಷತ್ಕಾಲ (ಡಿ) ಭೂತ ಭವಿಷ್ಯತ್ಕಾಲ

9) ನಾಮಪದಗಳ ಬದಲಾಗಿ ಬಳಸುವ ಪದಗಳನ್ನು ಹೀಗೆನ್ನುವರು.
(ಎ) ಭಾವನಾಮ (ಬಿ) ರೂಢನಾಮ (ಸಿ) ಸರ್ವನಾಮ (ಡಿ) ಕೃನ್ನಾಮ

10) ಆದಿಯಮ ಕುಲೋತ್ತುಂಗ ವಿಷ್ಣುವರ್ಧನರು ಇಲ್ಲಿರುವ ಸಮಾಸ
(ಎ) ಬಹುವ್ರೀಹಿ ಸಮಾಸ (ಬಿ) ದ್ವಂದ್ವಸಮಾಸ (ಸಿ) ಕ್ರಿಯಾಸಮಾಸ (ಡಿ) ತತ್ಪುರುಷಸಮಾಸ

II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ, ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ. (ಗ್ರಹಿಕೆ - ಸಾಧಾರಣ)

11) ಮಳವಳ್ಳಿ : ಅಂಕಿತನಾಮ :: ಊರು ....

12) ಎರಡು : ಸಂಖ್ಯಾವಾಚಕ :: ಐದನೆಯ....................

13) ನಾನು : ಉತ್ತಮಪುರುಷ :: ಅವನು ....

14) ಮ್ಯಾಲೆ : ಮೇಲೆ :: ಇಚಾರಾ....................

15) ಕಟ್ಟು : ಸಕರ್ಮಕ ಧಾತು :: ಮಲಗು ....

16) ಕಟ್ಟೋಣ: ಸಂಭವನಾರ್ಥಕ:: ತಿನ್ನನು ....

17) ಚಿಕ್ಕಪುಟ್ಟ: ಜೋಡುನುಡಿ:: ಮೊದಮೊದಲು ....

18) ಲಕ್ಷ್ಮೀ : ಲಕುಮಿ :: ವರ್ಷ ....

III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. (ಸ್ಮರಣೆ – ಸುಲಭ)

19) ವಿಷ್ಣುವರ್ಧನ ಭೂಪಾಲನ ಮೇಲೆ ಯುದ್ಧ ಮಾಡಲು ಆದಿಯಮನಿಗೆ ಪ್ರಚೋದಿಸಿದ ಚೋಳರ ದೊರೆ ಯಾರು?

20) ಚೋಳರು ಮತ್ತು ಹೊಯ್ಸಳರ ನಡುವೆ ಯುದ್ಧ ಎಲ್ಲಿ ನಡೆಯಿತು?

21) ತಲಕಾಡು ಕೋಟೆಯನ್ನು ಗೆದ್ದ ವಿಷ್ಣುವರ್ಧನ ಭೂಪಾಲನಿಗೆ ಸಂದ ಬಿರುದು ಯಾವುದು?

22) ರಾಜ್ಯ ಸಂರಕ್ಷಣೆಯಲ್ಲಿ ಮಹಾರಾಣಿ ಶಾಂತಲಾ ದೇವಿಯ ನೆರವಿಗೆ ನಿಂತಿದ್ದವರು ಯಾರು?

23) ಸಾಮ್ರಾಟನು ರಾಜಧಾನಿಯಲ್ಲಿ ಇಲ್ಲದಿದ್ದಾಗ ರಾಜ್ಯದ ಸಂರಕ್ಷಕರಾಗಿ ನಿಂತಿದ್ದವರು ಯಾರು?

24) ಬನದಮ್ಮನಹಳ್ಳಿಯ ಜನರು ಎಲ್ಲಿ ಪಂಚಾಯಿತಿ ಸೇರಿದ್ದರು?

25) ಬನದಮ್ಮನಹಳ್ಳಿಯ ಪಂಚಾಯಿತಿಯಲ್ಲಿ ಯಾರ್ಯಾರ ನಡುವೆ ನ್ಯಾಯ ತೀರ್ಮಾನವಾಗುತ್ತಿತ್ತು?
26) ಬೀರಣ್ಣ ಈರಣ್ಣನಿಗೆ ತನ್ನ ಹೊಲವನ್ನುಎಷ್ಟು ಹೊನ್ನಿಗೆ ಮಾರಿದ್ದನು?
27) ಇಬ್ಬರಿಗೂ ಬೇಡವಾದ ಹೊನ್ನು ಯಾರಿಗೆ ಸೇರಬೇಕೆಂದು ಕೇತುಮಲ್ಲ ಹೇಳಿದನು?
28) ದೊರೆಯ ಹಣ ಯಾವುದಕ್ಕೆ ಮೀಸಲಾಗಿರಬೇಕು?
29) ಅವಳಿ ದೇಗುಲಗಳ ಹೆಸರುಗಳೇನು?
30) ದ್ವಾರಸಮುದ್ರದಲ್ಲಿ ಕಟ್ಟಲ್ಪಡುವ ದೇವಾಲಯಗಳು ಯಾರ ಹೆಸರಿನಲ್ಲಿ ಕಟ್ಟಲ್ಪಟ್ಟವು?

IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. (ಗ್ರಹಿಕೆ - ಸಾಧಾರಣ)

31) ತಲಕಾಡಿನ ಲೂಟಿಯ ವಿಚಾರದಲ್ಲಿ ವಿಷ್ಣುವರ್ಧನನ ನಿಲುವೇನು?
32) ರಾಣಿ ಶಾಂತಲಾ ದೇವಿಯು ಸಾಮ್ರಾಜ್ಯವನ್ನು ಹೇಗೆ ರಕ್ಷಣೆ ಮಾಡುತ್ತಿದ್ದಳು?
33) ಬನದಮ್ಮನಹಳ್ಳಿಯ ದೇವಾಲಯದ ಮುಂದೆ ಯಾವ ವಿಚಾರವಾಗಿ ಚರ್ಚೆ ನಡೆದಿತ್ತು?
34) ಈರಣ್ಣ ಹೊನ್ನನ್ನು ಬೀರಣ್ಣನಿಗೆ ಕೊಡಬೇಕೆಂದು ನಿರ್ಧರಿಸಲು ಕಾರಣವೇನು?
35) ದೈವದವರ ತೀರ್ಪಿನ ಬಗೆಗೆ ಶಾಂತಲೆಯ ಅಭಿಪ್ರಾಯವೇನು?
36) ಶಾಂತಲೆಯು ನೀಡಿದ ತೀರ್ಪೇನು?
37) ಅವಳಿ ದೇಗುಲಗಳ ವೈಶಿಷ್ಟ್ಯತೆಯನ್ನು ಕುರಿತು ಬರೆಯಿರಿ?
38) ರಾಣಿ ಶಾಂತಲಾ ದೇವಿ ಎಂದು ತಿಳಿದಾಗ ಬನದಮ್ಮನಹಳ್ಳಿಯ ಜನತೆಯ ಭಕ್ತಿ ಪ್ರದರ್ಶನ ಹೇಗಿತ್ತು?

V. ಕೆಳಗಿನ ಕವಿಗಳ/ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. (ಸ್ಮರಣೆ – ಸುಲಭ)

39) ಸಾ, ಶಿ, ಮರುಳಯ್ಯ

VI. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. (ಅಭಿವ್ಯಕ್ತಿ-ಸಾಧಾರಣ)

40) "ತಲಕಾಡು ಗೊಂಡನಿಗೆ ಜಯವಾಗಲಿ".
41) "ಸೆರೆ ಸಿಕ್ಕ ಸೈನಿಕರ ಮೇಲೆ ದೌರ್ಜನ್ಯ ನಡೆಸುವುದು ಯೋಧಧರ್ಮ ಅಲ್ಲ".
42) " ಏನ್ರಪ್ಪಾ......ದೈವದವರು ಏನು ಹೇಳ್ತೀರಾ ಹೇಳಿ".
43) "ತಂಬುಲ ಉಗದ ಮ್ಯಾಲೆ ಮತ್ತೆ ಎತ್ತಿ ಬಾಯಿಗಾಕ್ಕೊಳ್ಳೋ ಕೆಟ್ಟತನ ಬ್ಯಾಡಾ".
44) "ಇಬ್ಬರಿಗೂ ಬ್ಯಾಡವಾದ ಹೊನ್ನು ರಾಜ್ಯದ ಬೊಕ್ಕಸಾ ಸೇರಲಿ".
45) "ನಿಮ್ಮ ಊರಿನ ಹಣ ನಿಮ್ಮೂರಿನ ಏಳಿಗೆಗಾಗಿಯೇ ವಿನಿಯೋಗವಾಗಲಿ".

VII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. (ಅಭಿವ್ಯಕ್ತಿ-ಕಠಿಣ)

46) ಚೋಳ ದೊರೆ ಕುಲೋತ್ತುಂಗನು ಹೊಯ್ಸಳ ಸಾಮ್ರಾಜ್ಯದ ಮೇಲೆ ಯುದ್ಧ ಸಾರಲು ಇದ್ದ ಕಾರಣ ಹಾಗೂ ಪರಿಣಾಮವನ್ನು ವಿವರಿಸಿ.
47) ಬನದಮ್ಮನಹಳ್ಳಿಯ ಪಂಚಾಯಿತಿಯಲ್ಲಿ ನಡೆದ ನ್ಯಾಯ ಹಾಗೂ ಅದರ ತೀರ್ಪಿನ ಬಗ್ಗೆ ವಿವರಿಸಿ.

****

2. ಬೆಡಗಿನ ತಾಣ ಜಯಪುರ – ಶಿವರಾಮ ಕಾರಂತ

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. (ಸ್ಮರಣೆ – ಸುಲಭ)

1. "ದೇವರು ಎಲ್ಲರಿಗೂ ಒಳ್ಳೆಯದನ್ನೇ ಉಂಟು ಮಾಡಲಿ"- ಈ ವಾಕ್ಯದಲ್ಲಿರುವ ಕ್ರಿಯಾಪದ.
   (ಎ) ದೇವರು (ಬಿ) ಎಲ್ಲರಿಗೂ (ಸಿ) ಒಳ್ಳೆಯನ್ನೇ (ಡಿ) ಉಂಟುಮಾಡಲಿ
2. ನಿಷೇಧಾರ್ಥಕ ಕ್ರಿಯಾಪದಕ್ಕೆ ಉದಾಹರಣೆಯಾಗಿದೆ.
   (ಎ) ತಿನ್ನನು (ಬಿ) ತಿನ್ನಲಿ (ಸಿ) ತಿಂದನು (ಡಿ) ತಿನ್ನುತ್ತಾನೆ
3. ಗುಂಪಿಗೆ ಸೇರದ ಪದ
   (ಎ) ಉತ್ಸಾಹ (ಬಿ) ಉಪಮಾ (ಸಿ) ಮಂದಾನಿಲ (ಡಿ) ಲಲಿತ
4. <u>'ಲಕ್ಷೋಪಲಕ್ಷ'</u> ಇಲ್ಲಿ ಉಂಟಾಗಿರುವ ಸಂಧಿ
   (ಎ) ಗುಣಸಂಧಿ (ಬಿ) ಸವರ್ಣ ದೀರ್ಘಸಂಧಿ (ಸಿ) ಲೋಪಸಂಧಿ (ಡಿ) ವೃದ್ಧಿಸಂಧಿ
5. <u>'ಬಣ್ಣಬಣ್ಣ'</u> ಈ ಪದ ಈ ವ್ಯಾಕರಣಾಂಶಕ್ಕೆ ಸೇರಿದೆ
   (ಎ) ದ್ವಿರುಕ್ತಿ (ಬಿ) ಅನುಕರಣಾವ್ಯಯ (ಸಿ) ಜೋಡುನುಡಿ (ಡಿ) ನುಡಿಗಟ್ಟು
6. <u>'ನೀರನ್ನು'</u> ಪದದಲ್ಲಿರುವ ವಿಭಕ್ತಿ ಪ್ರತ್ಯಯ
   (ಎ) ಪ್ರಥಮ (ಬಿ) ದ್ವಿತೀಯ (ಸಿ) ಪಂಚಮಿ (ಡಿ) ಸಪ್ತಮಿ
7. 'ನಡುಬಾನು' ಪದ ಈ ಸಮಾಸಕ್ಕೆ ಸೇರಿದೆ
   (ಎ) ತತ್ಪುರುಷ ಸಮಾಸ (ಬಿ) ಕರ್ಮಧಾರಯ ಸಮಾಸ (ಸಿ) ಅಂಶಿ ಸಮಾಸ (ಡಿ) ಗಮಕ ಸಮಾಸ

II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ. (ಗ್ರಹಿಕೆ - ಸುಲಭ)

8. ತಿನ್ನನು : ನಿಷೇಧಾರ್ಥಕ :: ತಿಂದಾನು : ....
9. ರಾಜ : ರಾಯ :: ಶೃಂಗಾರ : ....
10. ಉಸುಬು : ಉಸುಕು :: ಮುಂಡಾಸು : ......
11. ಕುವೆಂಪು : ಶ್ರೀರಾಮಾಯಣದರ್ಶನಂ :: ಶಿವರಾಮಕಾರಂತ: .....

III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. (ಸ್ಮರಣೆ – ಸುಲಭ)

12. ರೈಗಳ ಮನೆ ಎಂಥ ಪ್ರದೇಶದಲ್ಲಿತ್ತು?
13. ಲೇಖಕರಿಗೆ ಜಯಪುರದ ಮನೆಗಳ ಮೇಲೆ ಮೋಹವೇಕೆ ?
14. ಜಯಪುರದ ಜನರಿಗೆ ಯಾವ ಯಾವ ಬಣ್ಣಗಳು ಇಷ್ಟ ?
15. ಜಯಪುರದ ಪೂರ್ವದ ರಾಜಧಾನಿ ಯಾವುದು ?
16. ಲೇಖಕರಿಗಿದ್ದ ಹಂಬಲವೇನು ?
17. ಲೇಖಕರ ಜಯಪುರದ ಭೇಟಿ ಎಷ್ಟನೆಯದಾಗಿತ್ತು ?
18. ಕಾರಂತರು ಹೇಳುವಂತೆ ತಣ್ಣೀರು ಮೀಯುವ ಅಭ್ಯಾಸ ಯಾರದ್ದು?
19. ಮಿತ್ರ ರೈಗಳಿಗೆ ಯಾವುದರ ಅರಿವಿರಲಿಲ್ಲ ?
20. ಬಣ್ಣಗಾರರ ತವರೂರು ಯಾವುದು ?
21. ಲೇಖಕರ ಮೊದಲ ಭೇಟಿಯಲ್ಲಿ ಅಂಬೇರದ ಗುಡಿ ಗೋಪುರ ಹೇಗಿತ್ತು ?
22. ಅಂಬೇರದ ಅರಮನೆಯ ಒಳಾಂಗಣ ಯಾವ ಕಲ್ಲಿನ ಬಳಕೆಯಿಂದ ರಚಿತವಾಗಿದೆ ?
23. ಮೀರಾಬಾಯಿ ಯಾರನ್ನು ಪೂಜಿಸುತ್ತಿದ್ದಳು ?
24. ರಜಪೂತಾನ ಸ್ತ್ರೀಯರಿಗೆ ಬಣ್ಣದ ಬಗೆಗೆ ಪ್ರೇರಣೆ ಉಂಟಾಗಲು ಕಾರಣವಾದ ಪಕ್ಷಿ ಯಾವುದು ?
25. ಪುರಾತನ ಖಗೋಳ ವಿಜ್ಞಾನ ಪರಿಶೀಲನಾಲಯ ಯಾವುದು ?
26. ಲೇಖಕರಿಗೆ ಜಯಪುರದ ಜಾನಪದ ನೃತ್ಯ ನೋಡಲು ವ್ಯವಸ್ಥೆ ಮಾಡಿದವರು ಯಾರು ?
27. ಯಾವ ಸಮಯದಲ್ಲಿ ಅಂಬೇರದ ಬೆಟ್ಟ, ಗುಡ್ಡ, ಕಣಿವೆಗಳು ಮೋಹಕತೆಯನ್ನು ತಾಳುತ್ತವೆ ?

IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. (ಗ್ರಹಿಕೆ - ಸಾಧಾರಣ)

28. ಜಯಪುರದ ಬೀದಿ ಹಾಗೂ ಮನೆಗಳ ಸೌಂದರ್ಯವನ್ನು ವರ್ಣಿಸಿ.

29. ಲೇಖಕರ ಮೊದಲ ಅಂಬೇರ ಭೇಟಿಗೂ ಇತ್ತೀಚಿನ ಭೇಟಿಗೂ ಯಾವ ವ್ಯತ್ಯಾಸವಿತ್ತು ?
30. ಮೀರಾಬಾಯಿ ದೇವಾಲಯದ ಸೌಂದರ್ಯವನ್ನು ವಿವರಿಸಿ ?
31. ಲೇಖಕರು ನೋಡಿದ ಜನಪದ ನೃತ್ಯ ಸೊಬಗನ್ನು ಚಿತ್ರಿಸಿ ?
32. ಕಾರಂತರು ಮತ್ತು ಶ್ರೀಪತಿಯವರ ಸ್ನಾನದ ಪ್ರಸಂಗವನ್ನು ವಿವರಿಸಿ.
33. ಜಯಪುರದ ಹೆಂಗಸರು ಮತ್ತು ಗಂಡಸರ ಉಡುಪಿನ ವಿಶೇಷತೆಗಳೇನು ?
34. ಅಂಬೇರದಲ್ಲಿನ ಪುಟ್ಟಕೆರೆ ಮತ್ತು ಉದ್ಯಾನವನದ ವಿಶೇಷತೆಯನ್ನು ತಿಳಿಸಿ.
35. ಅಂಬೇರದ ಅರಮನೆಯ ಅಂತ:ಪುರವನ್ನು ಕುರಿತು ಬರೆಯಿರಿ.
36. ಲೇಖಕರು ಹೇಳುವಂತೆ ಅಂಬೇರದಲ್ಲಿನ ಪಾನೀಯವನ್ನು ಹೇಗಿತ್ತು ?
37. ಜಯಪುರದ ಹೊಲಗದ್ದೆಗಳ ನೋಟ ಮತ್ತು ಅದರ ಬಗ್ಗೆ ಲೇಖಕರ ಅಭಿಪ್ರಾಯವನ್ನು ತಿಳಿಸಿ ?

V. ಕೆಳಗಿನ ಕವಿಗಳ/ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ. (ಸ್ಮರಣೆ – ಸುಲಭ)

38. ಶಿವರಾಮ ಕಾರಂತ

VI. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. (ಅಭಿವ್ಯಕ್ತಿ - ಸಾಧಾರಣ)

39. “ಅಲ್ಲಿ ಮಧ್ಯಾಹ್ನ ವೇಳೆ ಸ್ನಾನಕ್ಕೆ ನೀರು ಕಾಯಿಸುವ ಅಗತ್ಯವಿಲ್ಲ”
40. “ಪ್ರಾಚೀನ ಗುಡಿಗೋಪುರಗಳು ಗೂಬೆಯ ಮನೆಗಳಾಗಿದ್ದವು”
41. “ಚಾವಡಿಗೆ ನಕ್ಷತ್ರಲೋಕದ ಸೊಬಗನ್ನು ಕೊಡುತ್ತದೆ”
42. “ಜಯಪುರ ಬಣ್ಣಗಾರರ ತವರೂರು”
43. “ನಮ್ಮ ಪಾಲಿಗೆ ದೊರೆತ ಕುಡಿಯಬಹುದಾದ ಪಾನೀಯವೂ ಅದೊಂದೇ”
44. “ರಜಪೂತಾನ ಸ್ತ್ರೀಯರಿಗೆ ಬೇರೆ ಪ್ರೇರಣೆ ಬೇಕಿಲ್ಲ”
45. “ಕಾಲಿನ ನಡಿಗೆಯಲ್ಲಿ ಕೈಗಳ ಚಲನೆಯಲ್ಲಿ ಜಾಣ್ಮೆ ಚೆಲುವುಗಳೆರಡು ಇದ್ದವು”
46. “ಗಂಡಸರೂ ರಂಗುರಾಯರೇ”

VII . ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.(ಅಭಿವ್ಯಕ್ತಿ - ಕಠಿಣ)

47. ಜಯಪುರದ ಜನರಿಗೆ ಬಣ್ಣಗಳ ಬಗೆಗೆ ಇರುವ ಮೋಹವನ್ನು ತಿಳಿಸಿ.
48. ಅಂಬೇರ ಬೆಟ್ಟದ ಮೂರು ಅಂತಸ್ತಿನ ಅರಮನೆಯ ಒಳಾಂಗಣ ಚೆಲುವನ್ನು ವರ್ಣಿಸಿ.
49. ಜಂತ್ರ ಮಂತ್ರದ ವಿಶೇಷತೆಯನ್ನು ಪರಿಚಯ ಮಾಡಿ ಕೊಡಿ.

VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ. (ಅಭಿವ್ಯಕ್ತಿ - ಕಠಿಣ)

50. “ದೇಶ ಸುತ್ತಿ ನೋಡು ಕೋಶ ಓದಿ ನೋಡು”

IX. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. (ಅಭಿವ್ಯಕ್ತಿ - ಕಠಿಣ)

ನಿಮ್ಮ ಶಾಲೆಯಲ್ಲಿ ಕೈಗೊಂಡ ಶೈಕ್ಷಣಿಕ ಪ್ರವಾಸದ ಅನುಭವವನ್ನು ಕುರಿತು ನಿಮ್ಮ ಪ್ರೀತಿಯ ಗೆಳೆಯ ಅಥವಾ ಗೆಳತಿಗೆ ಒಂದು ಪತ್ರ ಬರೆಯಿರಿ.

X. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. (ಅಭಿವ್ಯಕ್ತಿ - ಕಠಿಣ)

51. ಶೈಕ್ಷಣಿಕ ಪ್ರವಾಸ ಮತ್ತು ಅದರ ಪ್ರಯೋಜನಗಳು

****

3. ರಾಮ ರಾಜ್ಯ - ಎನ್. ರಂಗನಾಥಶರ್ಮಾ

I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. (ಸ್ಮರಣೆ – ಸುಲಭ)

1. 'ಬಣ್ಣಗೆಟ್ಟಿತ್ತು' ಎಂಬ ಪದವು ಈ ಸಂದಿಗೆ ಉದಾಹರಣೆಯಾಗಿದೆ.
 (ಎ) ಲೋಪಸಂಧಿ (ಬಿ) ಆಗಮಸಂಧಿ (ಸಿ) ಆದೇಶಸಂಧಿ (ಡಿ) ಗುಣಸಂಧಿ
2. ವಿಶೇಷಣ – ವಿಶೇಷ್ಯಗಳಿಂದ ಕೂಡಿ ಆಗುವ ಸಮಾಸವಿದು.
 (ಎ) ಕ್ರಿಯಾ ಸಮಾಸ (ಬಿ) ಕರ್ಮಧಾರೆಯ ಸಮಾಸ (ಸಿ) ತತ್ಪುರುಷ ಸಮಾಸ (ಡಿ) ಗಮಕಸಮಾಸ
3. 'ಇಮ್ಮಡಿ' ಎಂಬ ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.
 (ಎ) ಗಮಕ ಸಮಾಸ (ಬಿ) ತತ್ಪುರುಷ ಸಮಾಸ (ಸಿ) ದ್ವಂದ್ವ ಸಮಾಸ (ಡಿ) ದ್ವಿಗುಸಮಾಸ
4. ಲೋಪಸಂಧಿಗೆ ಉದಾಹರಣೆಯಾದ ಪದವಿದು.
 (ಎ) ದರ್ಶನವವನ್ನು (ಬಿ) ನಿರ್ಭಯವಾಗಿ (ಸಿ) ಕಣ್ಣಿಟ್ಟರು (ಡಿ) ತುದಿಗಾಲು
5. 'ಮಾಡಿದಡುಗೆ' ಎಂಬ ಸಮಾಸ ಪದದ ವಿಗ್ರಹ ರೂಪ.
 (ಎ) ಮಾಡಿದುದು + ಅಡುಗೆ (ಬಿ) ಮಾಡಿದ + ಅಡುಗೆ (ಸಿ) ಮಾಡದ + ಅಡುಗೆ (ಡಿ) ಮಾಡಿ + ಅಡುಗೆ
6. 'ತಲೆನೋವು' ಎಂಬ ಪದವು ಈ ಸಮಾಸವನ್ನು ಸೂಚಿಸುತ್ತದೆ
 (ಎ) ತತ್ಪುರುಷ ಸಮಾಸ (ಬಿ) ಗಮಕ ಸಮಾಸ (ಸಿ) ದ್ವಿಗು ಸಮಾಸ (ಡಿ) ಕ್ರಿಯಾ ಸಮಾಸ
7. 'ಹಳ್ಳಿಯಲ್ಲಿ' ಎಂಬ ಪದವು
 (ಎ) ಲೋಪ ಸಂಧಿ (ಬಿ) ಆಗಮ ಸಂಧಿ (ಸಿ) ಆದೇಶ ಸಂಧಿ (ಡಿ) ಸವರ್ಣದೀರ್ಘ ಸಂಧಿ
8. ಪೂರ್ವಪದ ಸಂಖ್ಯಾವಾಚಕವಾಗಿದ್ದು, ಉತ್ತರ ಪದದ ನಾಮಪದದೊಂದಿಗೆ ಸೇರಿ ಆಗುವ ಸಮಾಸ.
 (ಎ) ಕರ್ಮಧಾರೆಯ ಸಮಾಸ (ಬಿ) ದ್ವಿಗು ಸಮಾಸ (ಸಿ) ಗಮಕ ಸಮಾಸ (ಡಿ) ತತ್ಪುರುಷ ಸಮಾಸ
9. ಇದು ಕನ್ನಡದ ವ್ಯಂಜನ ಸಂಧಿ
 (ಎ) ಲೋಪ ಸಂಧಿ (ಬಿ) ಆಗಮ ಸಂಧಿ (ಸಿ) ಆದೇಶ ಸಂಧಿ (ಡಿ) ಗುಣ ಸಂಧಿ
10. 'ಜಾವದಲ್ಲೆದ್ದು' ಎಂಬ ಪದವನ್ನು ಬಿಡಿಸಿ ಬರೆದಾಗ
 (ಎ) ಜಾವದ + ಎದ್ದು (ಬಿ) ಜಾವದಲ್ಲಿ + ಎದ್ದು (ಸಿ) ಜಾವದಲ್ಲಿ + ಅದು (ಡಿ) ಜಾವದಲ್ಲೇ + ಎದ್ದು

II. **ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೇ ಪದಕ್ಕೆ ಸಂಬಂಧಿಕರಿಸಿ ಬರೆಯಿರಿ.** (ಗ್ರಹಿಕೆ-ಸಾಧಾರಣ)

11. ಮೂಗಾವುದ: ದ್ವಿಗು ಸಮಾಸ :: ಈ ಮನುಷ್ಯ; _ _ _
12. ಅನುಜ : ಸೋದರ :: ಮೇಧಾವಿ : _ _ _
13. ಹೆಜ್ಜೇನು : ಕರ್ಮಧಾರೆಯ ಸಮಾಸ :: ಮೈಮರೆತು : _ _ _
14. ಮನೆಕಟ್ಟಿದನು : ಕ್ರಿಯಾ ಸಮಾಸ :: ಬೆಟ್ಟದಾವರೆ : ___ ___ ___
15. ತುಪ್ಪಳದಂತೆ : ಲೋಪ ಸಂಧಿ :: ಕಂಬನಿ : _ _ ___

III. **ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** (ಸ್ಮರಣೆ - ಸುಲಭ)

16. ತೇಜಸ್ವಿಯಾದ ಭರತನು ಶ್ರೀ ರಾಮನ ಕಣ್ಣಿಗೆ ಯಾವ ರೀತಿ ಕಾಣಿಸಿದನು?
17. ಅಮಾತ್ಯರು ಯಾವ ವಿಷಯದಲ್ಲಿ ನಿಪುಣರಾಗಿರಬೇಕು?
18. ರಾಜನು ಯಾವ ಕಾರ್ಯವನ್ನು ಕೂಡಲೇ ಆಚರಣೆಗೆ ತರಬೇಕು?
19. ಸಾವಿರ ಮೂರ್ಖರಿಗಿಂತಲು ಯಾರು ಲೇಸೆಂದು ಶ್ರೀ ರಾಮನು ಹೇಳುತ್ತಾನೆ?
20. ಕಷ್ಟಕಾಲದಲ್ಲಿ ಸಹಾಯಕ್ಕೆ ನಿಲ್ಲುವವರು ಯಾರು?
21. ರಾಜನಿಗೆ ಮಹತ್ತರವಾದ ಶ್ರೇಯಸ್ಸನ್ನು ತಂದು ಕೊಡಬಲ್ಲವನು ಯಾರು?
22. ಉತ್ತಮರಾದ ಅಧಿಕಾರಿಗಳನ್ನು ಯಾವ ಕಾರ್ಯದಲ್ಲಿ ನೇಮಿಸಬೇಕು?
23. ಎಂತಹ ವೈದ್ಯನನ್ನು ರಾಜನು ತ್ಯಜಿಸಬೇಕು?
24. ದೇಶಕ್ಕೆ ದೊಡ್ಡ ಗಂಡಾಂತರ ತರಬಲ್ಲವರು ಯಾರು?
25. ಯಾರೊಡನೆ ಸಮಾಲೋಚಿಸುವುದು ರಾಜದೋಷ ಎಂದು ರಾಮನು ಹೇಳುತ್ತಾನೆ?
26. ಬುದ್ಧಿಶಾಲಿಯಾದ ರಾಜನು ಪ್ರಜೆಗಳನ್ನು ಹೇಗೆ ಪಾಲಿಸಬೇಕು?

27. ರಾಜನಾದವನು ಪ್ರಮುಖ ನಿರ್ಣಯಕ್ಕೆ ಬರುವ ಮುನ್ನ ಯಾರೊಡನೆ ಸಮಾಲೋಚಿಸಬೇಕು?

IV.**ಈ ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** (ಗ್ರಹಿಕೆ-ಸಾಧಾರಣ)

28. ಮಂತ್ರಾಲೋಚನೆಯನ್ನು ಹೇಗೆ ನಡೆಸಬೇಕೆಂದು ರಾಮನ ಅಭಿಪ್ರಾಯ?

29. ಸಾವಿರ ಮೂರ್ಖರಿಗಿಂತ ಒಬ್ಬ ಪಂಡಿತನೇ ಲೇಸು ಏಕೆ?

30. ರಾಜ್ಯದ ಅಮಾತ್ಯರಲ್ಲಿ ಯಾವ ಗುಣಗಳಿರಬೇಕು?

31. ಯಾವ ಮೂರು ವ್ಯಕ್ತಿಗಳನ್ನು ರಾಜನು ತ್ಯಜಿಸಬೇಕು? ಏಕೆ?

32. ದೇಶದಿಂದ ಹೊರಗೆ ಓಡಿಸಿದ ಶತ್ರುಗಳ ವಿಚಾರದಲ್ಲಿ ರಾಜನು ಹೇಗಿರಬೇಕು?

33. ದೂತನು ಹೇಗಿರಬೇಕು?

34. ಸೇವಕರ ವಿಚಾರದಲ್ಲಿ ರಾಜನ ವರ್ತನೆ ಹೇಗಿರಬೇಕು?

35. ಖಜಾನೆಯನ್ನು ಹೇಗೆ ನಿಭಾಯಿಸಬೇಕೆಂದು ರಾಮನು ಹೇಳುತ್ತಾನೆ?

V. ಕೆಳಗಿನ ಕವಿಗಳ/ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. (ಸ್ಮರಣೆ-ಸುಲಭ)

36. ಎನ್. ರಂಗನಾಥ ಶರ್ಮಾ

VI. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ.

37. ತುಂಬಿದ ಕೊಡ ತುಳುಕುವುದಿಲ್ಲ. (**ಅಭಿವ್ಯಕ್ತಿ - ಕಠಿಣ)**

38 . ಬೆಳ್ಳಗಿರುವುದೆಲ್ಲ ಹಾಲಲ್ಲ

VII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. (**ಅಭಿವ್ಯಕ್ತಿ - ಸಾಧಾರಣ)**

39. " ಸಾವಿರ ಮೂರ್ಖರಿಗಿಂತಲೂ ಒಬ್ಬ ಪಂಡಿತ ಲೇಸು. "

40. "ಆತ ಈ ವ್ಯಕ್ತಿಗಳ ಕುತಂತ್ರದಿಂದಲೇ ವಿಪತ್ತಿನಲ್ಲಿ ಸಿಕ್ಕಿಕೊಳ್ಳಬಹುದು. "

41. " ದೂತನು ಕಾರ್ಯ ಸಮರ್ಥನೂ, ಪ್ರತಿಭಾಶಾಲಿಯೂ ಆಗಿರಬೇಕು."

42. "ನಿನ್ನ ಆದಾಯವು ವ್ಯಯಕ್ಕಿಂತ ಹೆಚ್ಚಿದೆ ತಾನೆ?."

43. "ಪೂರ್ವಿಕರ ಅತ್ಯುತ್ತಮ ಅಂಶಗಳನ್ನು ರಾಜನು ಅಳವಡಿಸಿಕೊಳ್ಳಬೇಕು."

VIII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. (ಅಭಿವ್ಯಕ್ತಿ -ಕಠಿಣ)

44. ರಾಜ್ಯಾಡಳಿತದ ವಿಷಯದಲ್ಲಿ ರಾಮನ ಉಪದೇಶವನ್ನು ಸಂಗ್ರಹವಾಗಿ ಬರೆಯಿರಿ.

45. ರಾಜನಲ್ಲಿ ತಲೆದೋರಬಹುದಾದ ಹದಿನಾಲ್ಕು ದೋಷಗಳನ್ನು ವಿವರಿಸಿ.

****

4: ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. (ಸ್ಮರಣೆ-ಸುಲಭ)

1. ಸವರ್ಣ ದೀರ್ಘಸಂಧಿ ಸಂಧಿಗೆ ಉದಾಹರಣೆಯಾದ ಪದವಿದು.
   (ಎ) ವಿದ್ಯಾಭ್ಯಾಸ (ಬಿ) ಮಹೇಶ (ಸಿ) ಮೈದೋರು (ಡಿ) ಮಹರ್ಷಿ
2. ಗುಣ ಸಂಧಿಗೆ ಉದಾಹರಣೆಯಾದ ಪದವಿದು.
   (ಎ) ದೇವಾಲಯ (ಬಿ) ಏಕೈಕ (ಸಿ) ವಾಗ್ದೇವಿ (ಡಿ) ಗಿರೀಶ
3. ವೃದ್ಧಿಸಂಧಿಗೆ ಉದಾಹರಣೆಯಾದ ಪದವಿದು.
   (ಎ) ಏಕೈಕ (ಬಿ) ಮಹರ್ಷಿ (ಸಿ) ದೇವಾಲಯ (ಡಿ) ದೇವೇಂದ್ರ
4. ಸವರ್ಣ ಸ್ವರಗಳು ಕೂಡಿಯಾಗುವ ಸಂಧಿ.
   (ಎ) ವೃದ್ಧಿ ಸಂಧಿ (ಬಿ) ಗುಣ ಸಂಧಿ (ಸಿ) ಸವರ್ಣದೀರ್ಘ ಸಂಧಿ (ಡಿ) ಯಣ್ ಸಂಧಿ
5. 'ಜನೈಕ್ಯ' ಈ ಪದವು
   (ಎ) ವೃದ್ಧಿಸಂಧಿ (ಬಿ) ಗುಣಸಂಧಿ (ಸಿ) ಸವರ್ಣದೀರ್ಘ (ಡಿ) ಯಣ್‌ಸಂಧಿ
6. 'ಪಿತ್ರಾರ್ಜಿತ' ಪದವು
   (ಎ) ಲೋಪ ಸಂಧಿ (ಬಿ) ಆಗಮ ಸಂಧಿ (ಸಿ) ಯಣ್‌ಸಂಧಿ (ಡಿ)ಗುಣ ಸಂಧಿ

II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ. **(ಗ್ರಹಿಕೆ – ಸಾಧಾರಣ)**

7. ವಿದ್ಯಾಭ್ಯಾಸ : ಸವರ್ಣದೀರ್ಘ ಸಂಧಿ : : ದೇವೇಂದ್ರ : ________
8. ಜನೈಕ್ಯ : ವೃದ್ಧಿ ಸಂಧಿ : : ಮನ್ವಂತರ : ________
9. ಜಾತ್ಯತೀತ : ಯಣ್ ಸಂಧಿ : : ಜಲೌಘ : ________
10. ಸುರೇಂದ್ರ : ಗುಣ ಸಂಧಿ : : ಲೋಕೈಕ : ________

III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. (ಸ್ಮರಣೆ – ಸುಲಭ)

11. ರಾಧಾಕೃಷ್ಣನ್ ಅವರ ತಂದೆ ತಾಯಿಯ ಹೆಸರೇನು ?
12. ರಾಧಾಕೃಷ್ಣನ್ ಅವರ ತಂದೆಯ ಅಪೇಕ್ಷೆ ಏನಾಗಿತ್ತು ?
13. ರಾಷ್ಟ್ರಪತಿಗಳಾಗಿ ಪಡೆಯುತ್ತಿದ್ದ ವೇತನವನ್ನು ರಾಧಾಕೃಷ್ಣನ್ ಅವರು ಹೇಗೆ ಸದುಪಯೋಗ ಪಡಿಸಿಕೊಂಡರು ?
14. ರಾಧಾಕೃಷ್ಣನ್ ಅವರ ಜನ್ಮದಿನವನ್ನು ಯಾವ ಹೆಸರಿನಿಂದ ಆಚರಿಸಲಾಗುತ್ತಿದೆ ?
15. ಮಾನವತೆಯೇ ವಿಶ್ವ ಅನುಸರಿಸಬೇಕಾದ ಮಾರ್ಗ ಎಂದು ಹೇಳಿದವರು ಯಾರು ?
16. ಭಾರತೀಯ ವಿದ್ಯಾ ಭವನ ರಾಧಾಕೃಷ್ಣನ್ ಅವರಿಗೆ ನೀಡಿದ ಬಿರುದು ಯಾವುದು ?
17. ಭಾರತ ಸರ್ಕಾರ ರಾಧಾಕೃಷ್ಣನ್ ಅವರಿಗೆ ನೀಡಿದ ಅತ್ಯುನ್ನತ ಪ್ರಶಸ್ತಿ ಯಾವುದು ?
18. ರಾಧಾಕೃಷ್ಣನ್ ಅವರ ಸಾಧನೆಗೆ ವಿಶೇಷ ಸಹಕಾರ ನೀಡಿದವರು ಯಾರು ?
19. ರಾಧಾಕೃಷ್ಣನ್ ಅಲಂಕರಿಸಿದ ಅತ್ಯುನ್ನತ ಹುದ್ದೆ ಯಾವುದು ?
20. ರಾಧಾಕೃಷ್ಣನ್ ಅವರು ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದ ವಿಶ್ವವಿದ್ಯಾನಿಲಯ ಯಾವುದು ?

IV. ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. (ಗ್ರಹಿಕೆ – ಸಾಧಾರಣ)

21. ಸ್ಟಾಲಿನವರು ರಾಧಾಕೃಷ್ಣನ್ ಅವರ ಬೀಳ್ಕೊಡುಗೆ ಸಮಾರಂಭದಲ್ಲಿ ಏನು ಹೇಳಿದರು ?
22. ರಾಧಾಕೃಷ್ಣನ್ ಅವರ ವಿದ್ಯಾಭ್ಯಾಸ ಎಲ್ಲೆಲ್ಲಿ ನಡೆಯಿತು ?
23. ರಾಧಾಕೃಷ್ಣನ್ ಅವರ ವೇಷಭೂಷಣಗಳ ಬಗ್ಗೆ ಬರೆಯಿರಿ .
24. ಶಿಕ್ಷಣದ ಮಹತ್ವವನ್ನು ಕುರಿತು ರಾಧಾಕೃಷ್ಣನ್ ಅವರು ಏನು ಹೇಳಿದ್ದಾರೆ ?.
25. ರಾಧಾಕೃಷ್ಣನ್ ಅವರಿಗೆ ಸಂದ ಪ್ರಶಸ್ತಿ ಪುರಸ್ಕಾರಗಳು ಯಾವುವು ?

V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. (ಅಭಿವ್ಯಕ್ತಿ - ಸಾಧಾರಣ)

26. " ನೀವೊಬ್ಬರೇ ನನ್ನನ್ನು ಒಬ್ಬ ಮನುಷ್ಯನಂತೆ ಕಂಡು ವರ್ತಿಸಿದವರು "
27. " ಆರ್ಥಿಕ ಪರಿಸ್ಥಿತಿ ತಮ್ಮ ಸಾಧನೆಯಲ್ಲಿ ನಿವಾರಿಸಲಾಗದ ತೊಡಕೆಂದು ಭಾವಿಸಲಿಲ್ಲ "
28. " ಏರು ಜೀವ್ವನದ ಯುವಕರಂತೆ ಹಾಸ್ಯ ವಿನೋದಗಳಲ್ಲಿ ತೊಡಗುತ್ತಿದ್ದರು "
29. " ಅಶೋಕನು ಕಳಿಂಗ ಯುದ್ಧದ ನಂತರ ಶ್ರೇಷ್ಠ ಮನುಷ್ಯನಾದಂತೆ ನೀವೂ ಆಗುವಿರಿ "
30. " ಮಾನವತೆಯೇ ವಿಶ್ವ ಅನುಸರಿಸಬೇಕಾದ ಮಾರ್ಗ "

VI. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. (ಅಭಿವ್ಯಕ್ತಿ – ಕಠಿಣ)

31. ರಾಧಾಕೃಷ್ಣನ್ ಅವರು ಅಧ್ಯಾಪಕರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ವಿವರಿಸಿ.
32. ರಾಧಾಕೃಷ್ಣನ್ ಅವರಿಗೆ ಮೈಸೂರಿನಲ್ಲಿ ನಡೆದ ಬೀಳ್ಕೊಡುಗೆಯ ವಿಶೇಷತೆಯನ್ನು ಕುರಿತು ವಿವರಿಸಿ.
33. ಹಿಂದೂಧರ್ಮ ಮತ್ತು ತತ್ವಶಾಸ್ತ್ರದ ಬಗ್ಗೆ ರಾಧಾಕೃಷ್ಣನ್ ಅಭಿಪ್ರಾಯವೇನು? ವಿವರಿಸಿ.

VII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ. (ಅಭಿವ್ಯಕ್ತಿ – ಕಠಿಣ)

34. ಹಿತ್ತಲ ಗಿಡ ಮದ್ದಲ್ಲ.

ಅಥವಾ

ದೂರದ ಬೆಟ್ಟ ನುಣ್ಣಗೆ

****

5: ಜನಪದ ಕಲೆಗಳ ವೈಭವ

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. (ಸ್ಮರಣೆ – ಸುಲಭ)

1. ಜಶ್ತ್ವಸಂಧಿಗೆ ಉದಾಹರಣೆಯಾದ ಪದವಿದು.
   (ಎ) ಷಡಾನನ (ಬಿ) ಜಗಜ್ಯೋತಿ (ಸಿ) ಷಣ್ಮುಖ (ಡಿ) ಯಾವುದೂ ಅಲ್ಲ
2. ವಾಙ್ಮಯ ಪದವು ಈ ಸಂಧಿಗೆ ಉದಾಹರಣೆಯಾಗಿದೆ
   (ಎ) ಜಶ್ತ್ವ ಸಂಧಿ (ಬಿ) ಶ್ಚುತ್ವಸಂಧಿ (ಸಿ) ಅನುನಾಸಿಕ ಸಂಧಿ (ಡಿ) ಯಣ್ ಸಂಧಿ
3. ಶ್ಚುತ್ವಸಂಧಿಯ ಪದವಿದು.
   (ಎ) ಶರಶ್ಚಂದ್ರ (ಬಿ) ಸನ್ಮಾನ (ಸಿ) ಅಬ್ದಿ (ಡಿ) ಚಿದಾನಂದ
4. ಅಜಂತ ಪದದ ಸಂಧಿ
   (ಎ) ಜಸ್ತ್ವಸಂಧಿ. (ಬಿ) ಶ್ಚುತ್ವಸಂಧಿ (ಸಿ) ಅನುನಾಸಿಕ (ಡಿ) ಗುಣಸಂಧಿ
5. ಮನಃಶುದ್ಧಿ ಪದವು ಈ ಸಂಧಿಯ ಪದವಾಗಿದೆ
   (ಎ) ಜಶ್ತ್ವಸಂಧಿ (ಬಿ) ಶ್ಚುತ್ವಸಂಧಿ (ಸಿ) ಅನುನಾಸಿಕ ಸಂಧಿ (ಡಿ) ಸವರ್ಣದೀರ್ಘಸಂಧಿ
6. ಸನ್ಮಾನ ಪದವು ಈ ಸಂಧಿಗೆ ಉದಾಹರಣೆಯಾಗಿದೆ
   (ಎ) ಜಶ್ತ್ವಸಂಧಿ (ಬಿ) ಶ್ಚುತ್ವಸಂಧಿ (ಸಿ) ಅನುನಾಸಿಕ ಸಂಧಿ (ಡಿ) ಸವರ್ಣದೀರ್ಘಸಂಧಿ

II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ. (ಗ್ರಹಿಕೆ – ಸಾಧಾರಣ)

7. ಕಂಸಾಳೆ : ದೇವರಗುಡ್ಡ :: ವೀರಗಾಸೆ : ....
8. ವಾಡಿಕೆ : ರೂಢಿ :: ವೈಖರಿ : ....
9. ಕೂಸು : ಅಕರ್ಮಕ ಧಾತು :: ಬಿಡು : ....
10. ಡೊಳ್ಳು : ವಾದ್ಯ ಪ್ರಕಾರ ಕಲೆ :: ಯಕ್ಷಗಾನ : ....

III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. (ಸ್ಮರಣೆ – ಸುಲಭ)

11. ವೀರಗಾಸೆ ಯಾವ ಸಂಪ್ರದಾಯಕ್ಕೆ ಸೇರಿದ ನೃತ್ಯ?
12. ವೀರಗಾಸೆಯಲ್ಲಿ ಬಳಸುವ ವಾದ್ಯಗಳು ಯಾವುವು?
13. ವೀರಭದ್ರನ ಕುಣಿತಕ್ಕೆ ವೀರಗಾಸೆ ನೃತ್ಯಕ್ಕೆ ಇರುವ ವ್ಯತ್ಯಾಸವೇನು?
14. ವೀರಗಾಸೆ ನೃತ್ಯವನ್ನು ಯಾವ ಸಂದರ್ಭದಲ್ಲಿ ಏರ್ಪಡಿಸಲಾಗುತ್ತದೆ?
15. ಕಂಸಾಳೆ ಗುಡ್ಡರು ಕಂಸಾಳೆಯನ್ನು ಕೈಗೆತ್ತಿಕೊಳ್ಳುವ ಮೊದಲು ಯಾವ ದೇವರನ್ನು ಸ್ಮರಿಸುತ್ತಾರೆ?
16. ಕಂಸಾಳೆ ಎಂಬ ಹೆಸರು ಹೇಗೆ ಬಂದಿತು?
17. ಡೊಳ್ಳು ಕುಣಿತ ಯಾವ ಸಂಪ್ರದಾಯಕ್ಕೆ ಸೇರಿದ ಕುಣಿತವಾಗಿದೆ?
18. ಭರಮದೇವರ ಗುಡಿಯ ಮುಂದೆ ಡೊಳ್ಳಿನ ಹಾಡುಗಳ ಕಾರ್ಯಕ್ರಮ ಯಾವಾಗ ನಡೆಯುತ್ತದೆ?
19. ಯಕ್ಷಗಾನದ 3 ಶೈಲಿಗಳಾವುವು?
20. ಯಕ್ಷಗಾನಕ್ಕೆಇರುವ ಇತರೆ ಹೆಸರುಗಳಾವುವು?
21. ಯಕ್ಷಗಾನದ ಪಂಚ ಅಂಗಗಳು ಯಾವುವು?
22. ಯಕ್ಷಗಾನ ರಂಗಸ್ಥಳದ ಸಮೀಪವಿರುವ ನೇಪಥ್ಯವನ್ನು ಏನೆಂದು ಕರೆಯುತ್ತಾರೆ?
23. ಯಕ್ಷಗಾನ ರಚನೆಯಲ್ಲಿ ಯಾವ ತತ್ವಗಳನ್ನು ಪ್ರಸಂಗದಲ್ಲಿ ಅಳವಡಿಸುತ್ತಾರೆ?
24. ಯಕ್ಷಗಾನದಲ್ಲಿ ಕಂಡು ಬರುವ ಪ್ರಮುಖ ಹಾಸ್ಯ ಪಾತ್ರಗಳು ಯಾವುವು?
25. ಯಕ್ಷಗಾನದಲ್ಲಿ ಭಾಗವತ ಎಂದರೆ ಯಾರು?

IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. (ಗ್ರಹಿಕೆ – ಸಾಧಾರಣ)

26. ವೀರಗಾಸೆ ಕುಣಿತದ ವೇಷಭೂಷಣಗಳು ಹೇಗಿರುತ್ತದೆ? ವಿವರಿಸಿ.
27. ದೇವರಗುಡ್ಡರಿಗೆ ಕಂಸಾಳೆಯ ಬಗ್ಗೆ ಇರುವ ಗೌರವ ಭಾವನೆ ಹೇಗೆ ವ್ಯಕ್ತಗೊಂಡಿದೆ?
28. ಭರಮ ದೇವರ ಗುಡಿಯ ಮುಂದೆ ಡೊಳ್ಳಿನ ಹಾಡುಗಳ ಕಾರ್ಯಕ್ರಮ ಹೇಗೆ ನಡೆಯುತ್ತದೆ?
29. ಯಕ್ಷಗಾನದಲ್ಲಿ ತೆಂಕುತಿಟ್ಟು ಮತ್ತು ಬಡಗುತಿಟ್ಟುಗಳ ವೈಶಿಷ್ಟ್ಯವೇನು? ವಿವರಿಸಿ.
30. ಚೌಕಿಯಲ್ಲಿ ನಡೆಯುವ ವಿಶೇಷತೆಗಳೇನು? ವಿವರಿಸಿ.
31. ಯಕ್ಷಗಾನದಲ್ಲಿ ವೀರರಸ ಹಾಗೂ ಶೃಂಗಾರ ರಸ ಪ್ರಧಾನವಾದ ಪ್ರಮುಖ ಪ್ರಸಂಗಗಳನ್ನು ಹೆಸರಿಸಿ.

V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.
(ಅಭಿವ್ಯಕ್ತಿ - ಸಾಧಾರಣ)

32. "ಅಹಹಾ ರುದ್ರ ಅಹಹಾ ದೇವಾ"
33. "ಭಲರೇ ವೀರ ಅಹಹಾ ವೀರಾ"
34. "ಏಳುಮಲೆ ಹೆತ್ತಯ್ಯ ನಮ್ಮಪ್ಪಾಜಿ"
35. "ಸ್ವಾಮಿ ನಮ್ಮಯ್ಯ ದೇವರು ಬಂದಾನ ಬನ್ನಿರೇ"
36. "ದುಷ್ಟ ನಿಗ್ರಹ ಶಿಷ್ಟ ಪರಿಪಾಲನೆ"

VI. ಕೆಳಗಿನ ಪ್ರಶ್ನೆಗಳಿಗೆ 8 ಅಥವಾ 10 ವಾಕ್ಯಗಳಲ್ಲಿ ಉತ್ತರ ಬರೆಯಿರಿ. (ಅಭಿವ್ಯಕ್ತಿ - ಕಠಿಣ)

37. ವೀರಗಾಸೆ ನರ್ತಕನ ಒಡಪಿನೊಂದಿಗೆ ಕುಣಿತ ಹೇಗಿರುತ್ತದೆ?
38. ಬೀಸು ಕಂಸಾಳೆಯ ವೈಶಿಷ್ಟ್ಯತೆಯನ್ನು ವಿವರಿಸಿ.
39. ಡೊಳ್ಳು ಬಾರಿಸುವ ಕಲಾವಿದರ ವೇಶಷಭೂಷಣಗಳು ಹೇಗಿರುತ್ತದೆ?
40. ಯಕ್ಷಗಾನದ ವೈಶಿಷ್ಟ್ಯ ಹಾಗೂ ಪೂರ್ವರಂಗದ ಉದ್ದೇಶವೇನು?

VII. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. (ಅಭಿವ್ಯಕ್ತಿ - ಕಠಿಣ)

41. ಸಾವಯವಕೃಷಿ
42. ಮಳೆಕೊಯ್ಲು

****

6. ಅಧಿಕಾರ – ಗಿರೀಶ್ ಕಾರ್ನಾಡ್

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿಕ್ರ ಮಾಕ್ಷರದೊಂದಿಗೆ ಬರೆಯಿರಿ. (ಸ್ಮರಣೆ – ಸುಲಭ)

1. ಪೂರ್ವೋತ್ತರ ಪದಗಳು ಅಂಶಾಂಶಿ ಭಾವ ಸಂಬಂಧ ಹೊಂದಿರುವ ಸಮಾಸ
(ಎ) ತತ್ಪುರುಷ **(ಬಿ)** ಅಂಶಿಸಮಾಸ **(ಸಿ)** ಬಹುವ್ರೀಹಿ **(ಡಿ)** ದ್ವಂ**ದ್ವ**

2. ಪೂರ್ವೋತ್ತರ ಪದಗಳೆಲ್ಲವೂ ನಾಮಪದಗಳಾಗಿದ್ದು, ಎಲ್ಲಾ ಪದಗಳ ಅರ್ಥ ಪ್ರಧಾನವಾಗಿರುವ ಸಮಾಸ.....
(ಎ) ತತ್ಪುರುಷ **(ಬಿ)** ಅಂಶಿಸಮಾಸ **(ಸಿ)** ಬಹುವ್ರೀಹಿ **(ಡಿ)** ದ್ವಂ**ದ್ವ**

3. ಎರಡು ಅಥವಾ ಅನೇಕ ಪದಗಳು ಸೇರಿ ಸಮಾಸವಾಗುವಾಗ ಅನ್ಯಪದದ ಅರ್ಥ ಪ್ರಧಾನವುಳ್ಳ ಸಮಾಸ.......
(ಎ) ಕರ್ಮಧಾರೆಯ **(ಬಿ)**ಅಂಶಿ **(ಸಿ)** ಬಹುವ್ರೀಹಿ **(ಡಿ)**ದ್ವಂದ್ವಸಮಾಸ.

4. 'ಅಂಗೈ' ಈ ಸಮಾಸಕ್ಕೆ ಉದಾಹರಣೆಯಾಗಿದೆ.........
(ಎ) ಕರ್ಮಧಾರೆಯ **(ಬಿ)**ಅಂಶಿ **(ಸಿ)** ಬಹುವ್ರೀಹಿ **(ಡಿ)**ದ್ವಂದ್ವಸಮಾಸ.

5. 'ಮುಂಬಾಗಿಲು' **ಪದದ** ಸಮಾಸ
(ಎ) ತತ್ಪುರುಷ **(ಬಿ)** ಅಂಶಿಸಮಾಸ **(ಸಿ)** ದ್ವಂದ್ವಸಮಾಸ **(ಡಿ)** ಬಹುವ್ರೀಹಿಸಮಾಸ.

6. ದ್ವಂದ್ವಸಮಾಸಕ್ಕೆ ಉದಾಹರಣೆಯಾಗಿರುವ ಪದ
(ಎ) **ಕುಡಿ**ಹುಬ್ಬು **(ಬಿ)** ನಾಲ್ಮೊಗ **(ಸಿ)** ಅರಮನೆ **(ಡಿ)**ಗಿಡಮರಬಳ್ಳಿಗಳು.

7. 'ಮುಕ್ಕಣ್ಣ' **ಪದವು** ಈ ಸಮಾಸ**ವಾಗಿದೆ**
(ಎ) ತತ್ಪುರುಷಸಮಾಸ **(ಬಿ)** ಅಂಶಿಸಮಾಸ **(ಸಿ)** ಬಹುವ್ರೀಹಿಸಮಾಸ **(ಡಿ)**ದ್ವಿಗುಸಮಾಸ.

8. ಬಹುವ್ರೀಹಿ ಸಮಾಸಕ್ಕೆ ಉದಾಹರಣೆಯಾದ ಪದ..........
(ಎ) ಹಿಂದಲೆ **(ಬಿ)** ಗಿರಿವನದುರ್ಗಗಳು **(ಸಿ)** ಚಕ್ರಪಾಣಿ **(ಡಿ)** ಒಗ್ಗಟ್ಟು.

9. 'ಕರಿತುರಗರಥಗಳು' ಈ ಸಮಾಸಕ್ಕೆ ಉದಾಹರಣೆಯಾಗಿದೆ.............
(ಎ) ದ್ವಿಗುಸಮಾಸ **(ಬಿ)** ದ್ವಂದ್ವಸಮಾಸ **(ಸಿ)** ಅಂಶಿಸಮಾಸ **(ಡಿ)**ಬಹುವ್ರೀಹಿಸಮಾಸ.

10. 'ರಾಜಾಧಿರಾಜ' ಈ ಸಂಧಿಗೆ ಉದಾಹರಣೆಯಾಗಿದೆ..........
(ಎ) ಆಗಮಸಂಧಿ **(ಬಿ)** ಸವರ್ಣದೀರ್ಘಸಂಧಿ **(ಸಿ)** ಗುಣಸಂಧಿ **(ಡಿ)** ಯ**ಣ್ ಸಂ**ಧಿ.

11. ಸವರ್ಣದೀರ್ಘ ಸಂಧಿ**ಯ** ಪದ...........
(ಎ) ದಿಗಂತ **(ಬಿ)** ಬಿರುದಾವಳಿ **(ಸಿ)** ಮಳೆಗಾಲ **(ಡಿ)** ಶಿವಾಲಯ.

12. 'ಅನಸತ್ತೈತಿ' ಪದದ ಗ್ರಾಂಥಿಕ ರೂಪ
(ಎ)ಅನಿಸುತ್ತಿದೆ **(ಬಿ)** ಅನಸತ್ತೆ **(ಸಿ)**ಅನಸ ಐತಿ **(ಡಿ)** ಅನಸತದ.

13. 'ಸಂಸ್ಕೃತ' ಪದದ ತದ್ಭವ ರೂಪ
(ಎ) ಸಂಸುತ **(ಬಿ)** ಸಂಕುತ **(ಸಿ)** ಸಕ್ಕದ **(ಡಿ)**ಸಂಸ್ಕಾರ.

14. 'ಕೈಯಾಗ' ಪದದ ಗ್ರಾಂಥಿಕ ರೂ**ಪ**
(ಎ) ಕೈಯಲ್ಲಿ **(ಬಿ)** ಕೈ ಆಗ **(ಸಿ)** ಕೈದಾಗ **(ಡಿ)** ಕೈನಾಗ.

II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ. (ಗ್ರಹಿಕೆ – ಸಾಧಾರಣ)

15. ಸಂಗಾಟ : ಸಂಗಡ :: ಖರೆ : ....
16. ಮನಿ : ಮನೆ :: ಅರಕಳಿ : ....
17. ಹಲುಬು : ವೇದನೆ :: ಒಜ್ಜೆ : ....
18. ರಾಜ : ರಾಯ :: ಅಕ್ಷರ : ....
19. ಯುದ್ಧ : ಜುದ್ದ :: ವರ್ಷ : ....
20. ದಿಗಂತ : ಕ್ಷಿತಿಜ :: ಭಾಸ್ಕರ : ....
21. **ಧ್ವ**ಜ : ಬಾವುಟ :: ಸುವರ್ಣ : ....

22. ಹಣೆಗಣ್ಣು : ಬಹುವ್ರೀಹಿ :: ಅಂಗಾಲು : ....
23. ಮುಂಗಾಲು : ಅಂಶಿ :: ಚಕ್ರಪಾಣಿ : ....
24. ದಿಗಂತ : ಜಶ್ತ್ವ :: ಸಣ್ಣಾಕಿ : ....

III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. (ಸ್ಮರಣೆ – ಸುಲಭ)
25. ಗುಡ್ಡೆವ್ವಗೆ ಸೊಸೆಯ ಬಗ್ಗೆ ಬಸವಣ್ಣನವರು ಏನೆಂದು ಹೇಳಿದರು**?**
26. ಗುಡ್ಡೆವ್ವ ಯಾರ ಗೀತೆಯನ್ನು ಚೆನ್ನಾಗಿ ಹಾಡುತ್ತಾಳೆ**?**
27. ಒಂದೆರಡು ದಿನದ ಮಟ್ಟಿಗೆ ಮನೆಯ ಜವಾಬ್ದಾರಿಯನ್ನು ಯಾರಿಗೆ ಕೊಡಲು ಬಸವಣ್ಣ ಹೇಳಿದರು**?**
28. ಬಸವಣ್ಣನು ಗುಡ್ಡೆವ್ವಳನ್ನು ಎಲ್ಲಿಗೆ ಬಂದು ಹಾಡಲು ಹೇಳಿದರು**?**
29. ಬಿಜ್ಜಳನ ಬಿರುದಾವಳಿಗಳನ್ನು ರಚಿಸಿದವರು ಯಾರು**?**
30. ಮಂಚ್ಯಣಕ್ರಮಿತನು ಯಾವ ಭಾಷೆಗೆ ಪ್ರಾಧ್ಯಾನತೆ ನೀಡಿದ್ದನು**?**
31. ಬಿಜ್ಜಳನು ತನ್ನ ಮಗನ ಬಗ್ಗೆ ಏನೆಂದು ಹೇಳಿದನು**?**
32. ಬಸವಣ್ಣನವರ ಪ್ರಕಾರ ರಾಜ್ಯಭಾರ ಎಂದ**ರೇ**ನು**?**
33. ಬಿಜ್ಜಳನು ಯಾರ ಸಾಮಂತ ದೊರೆಯಾಗಿದ್ದನು**?**
34. ಬಿಜ್ಜಳನೊಂದಿಗೆ ಬಂದ ಬ್ರಾಹ್ಮಣನ ಹೆಸರೇನು**?**
35. ಗುಡ್ಡೆವ್ವ ಮುದುಕಿಯು ನಾಚಿಕೊಂಡಿದ್ದೇಕೆ**?**
36. ಬಿಜ್ಜಳನ ಪತ್ನಿಯ ಹೆಸರೇನು**?**
37. ಬಿರುದಾವಳಿಗಳುಬೆ ಳೆಯುತ್ತಾ ಹೋದರೆ ಏನಾಗುವುದೆಂದು ಬಸವಣ್ಣನವರು ಹೇಳಿದರು**?**
38. ಮಂಚ್ಯಣಕ್ರಮಿತರ ಯಾವ ಮಾತಿಗೆ ಬಸವಣ್ಣನವರು ಕನಲಿದರು**?**
39. ಬಿಜ್ಜಳನು ನೇರವಾದ ಉತ್ತರವನ್ನು ಬಯಸಿ ಬಸವಣ್ಣನವರಿಗೆ ಕೇಳಿದ ಪ್ರಶ್ನೆ ಯಾವುದು**?**
40. ಮಂಚ್ಯಣಕ್ರಮಿತರ ಪ್ರಕಾರ ಪ್ರಜೆಗಳ ಕರ್ತವ್ಯವೇನು**?**
41. ಅಧಿಕಾರಿಗಳ ಕರ್ತವ್ಯ ಯಾವುದೆಂದು ಬಸವಣ್ಣನವರು ಹೇಳಿದರು**?**
42. ಬಿಜ್ಜಳನು ಕೀಲಿಕೈಯನ್ನು ತೆಗೆದುಕೊಳ್ಳುವುದಿಲ್ಲ **ಎಂ**ದರೆ ಏನು ಮಾಡುವೆನೆಂದು ಬಸವಣ್ಣನವರು ಹೇಳಿದರು**?**

IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. (ಗ್ರಹಿಕೆ-ಸಾಧಾರಣ)
43. ಶಾಸನಗಳ ರಚನೆ ಬಗ್ಗೆ ಮಂಚ್ಯಣಕ್ರಮಿತನು ಏನೆಂದು ಹೇಳಿದನು**?**
44. ಬಿಜ್ಜಳನು ಬಸವಣ್ಣನ ಕೆಲಸದ ಬಗ್ಗೆ ಏನೆಂದು ಹೇಳಿದನು**?**
45. ಬಸವಣ್ಣನು ತನ್ನ ಕರ್ತವ್ಯದ ವಿಚಾರವಾಗಿ ಬಿಜ್ಜಳನಿಗೆ ಏನೆಂದು ಹೇಳಿದನು**?**
46. ಬಿಜ್ಜಳನು ಬಿರುದಾವಳಿಗಳನ್ನು ಏಕೆ ಬರೆಸಿದನು**?**
47. ಬಿಜ್ಜಳನನ್ನು ಕುರಿತು ವಂದಿಮಾಗಧರು ಏನೆಂದು ಪರಾಕು ಮಾಡಿದರು**?**
48. ಹದಿನೈದು ವರ್ಷಗಳ ಹಿಂದೆಯೇ ಬಸವಣ್ಣನವರು ಬಿಜ್ಜಳನಿಗೆ ಏನೆಂದು ಹೇಳಿದ್ದರು**?**
49. ಶಾಸನಗಳನ್ನು ಹಾಕಿಸುವುದರ ಬಗ್ಗೆ ಬಸವಣ್ಣನವರ ಅಭಿಪ್ರಾಯವೇನು**?**

V. ಕೆಳಗಿನ ಕವಿಯ / ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. (ಸ್ಮರಣೆ – ಸುಲಭ)
50. ಗಿರೀಶ್ ಕಾರ್ನಾಡ್.

VI. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ. (ಅಭಿವ್ಯಕ್ತಿ-ಕಠಿಣ)
51. ಆರೋಗ್ಯವೇ ಭಾಗ್ಯ**.**
52. ಕೊಟ್ಟಿದ್ದುತನಗೆ **;** ಬಚ್ಚಿಟ್ಟಿದ್ದು ಪರರಿಗೆ**.**

VII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. (ಅಭಿವ್ಯಕ್ತಿ – ಸಾಧಾರಣ)

53. " ನಿನ್ನ ಮಾತು ಯಾರು ತೆಗೆದು ಹಾಕುತಾರಪಾ, ಬಸಣ್ಣ**?"**

54. " ಆಮ್ಯಾಲೆ ನಿನಗೇನನಸತದ ಹೇಳು ಆತ**?"**

55. " ಸಂಸ್ಕೃತಕ್ಕಿರೋ ಘನತೆ **–** ಗಾಂಭೀರ್ಯ ಕನ್ನಡಕ್ಕೆ ಹ್ಯಾಂಗ ಬಂದೀತು**?"**

56. " ನಾ ಭಂಡಾರದಲ್ಲಿ ದುಡಿಯೋದು ಬಿಜ್ಜಳ ಮಹಾರಾಜರ ಅನುಕೂಲತೆಗಾಗಿ ಅಲ್ಲ**."**

57. " ಹೊಸ ಪದ್ದತಿ ಇದ್ದೀತು**,** ಮಹಾಸ್ವಾಮಿ**.** ನಾನಿನ್ನು ಕಲಿತಿಲ್ಲ**."**

58. " ರಾಜ್ಯಭಾರ ಅಂದರ ಕಾಯಕ ಅದಕ್ಕ ವಂಶಾ ಇದ್ದರ ಸಾಲದು**."**

59. " ಮಹಾರಾಜರು ರಾಜಕುಮಾರರಿಗೆ ಯುವರಾಜ ಪಟ್ಟಕಟ್ಟಿದ್ದು ನನಗಂತೂ ಗೊತ್ತಿದ್ದಿಲ್ಲ**."**

VIII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. (ಅಭಿವ್ಯಕ್ತಿ – ಕಠಿಣ)

60. ಬಿಜ್ಜಳ ಮತ್ತು ಬಸವಣ್ಣನವರ ನಡುವೆ ನಡೆದ ಸಂಭಾಷಣೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ**.**

61. ' ಅಧಿಕಾರ ಎನ್ನುವುದು ಕಾಯಕ' ಎನ್ನುವ ಭಾವನೆ 'ಅಧಿಕಾರ' ನಾಟಕದಲ್ಲಿ ಹೇಗೆ ಮೂಡಿಬಂದಿದೆ**?**

62. ಬಸವಣ್ಣ ಮತ್ತು ಮಂಚ್ಯಣ ಕ್ರಮಿತರವರ ವ್ಯಕ್ತಿತ್ವವನ್ನು ವರ್ಣಿಸಿರಿ**.**

****

7.ನಾ ಕಂಡಂತೆ ಬಿ.ಜಿ.ಎಲ್.ಸ್ವಾಮಿ - ಎಸ್.ಎಲ್. ಭೈರಪ್ಪ

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. (ಸ್ಮರಣೆ – ಸುಲಭ)

1) ಪ್ರಥಮಾ ವಿಭಕ್ತಿ ಪ್ರತ್ಯಯವು ಈ ಕಾರಕಾರ್ಥದಲ್ಲಿದೆ.
(ಎ) ಕರ್ತೃರ್ಥ (ಬಿ) ಕರ್ಮಾರ್ಥ (ಸಿ) ಕರಣಾರ್ಥ (ಡಿ) ಸಂಪ್ರದಾನ
2) ಸಜಾತೀಯ ಸಂಯುಕ್ತಾಕ್ಷರಕ್ಕೆ ಉದಾರಣೆಯಾದ ಪದವಿದು:
(ಎ) ಸ್ಥಳ (ಬಿ) ಜ್ಞಾನ (ಸಿ) ಉತ್ತರ (ಡಿ) ಮಾತ್ರ
3)' ಪ್ರಾಧ್ಯಾಪಕರು ' ಪದವು ಈ ನಾಮಪದಕ್ಕೆಉದಾಹರಣೆ.
(ಎ) ರೂಢನಾಮ (ಬಿ) ಭಾವನಾಮ (ಸಿ) ಅಂಕಿತನಾಮ (ಡಿ) ಅನ್ವರ್ಥನಾಮ
4) ಆತ್ಮಾರ್ಥಕ ಸರ್ವನಾಮಕ್ಕೆ ಉದಾಹರಣೆ :
(ಎ) ನೀನು (ಬಿ) ನೀವು (ಸಿ) ತಾನು (ಡಿ) ನಾವು
5) 'ಮಾಡ್ತಾವೆ ' ಪದದ ಗ್ರಾಂಥಿಕ ರೂಪ.
(ಎ) ಮಾಡಿದರು (ಬಿ) ಮಾಡುತ್ತವೆ (ಸಿ) ಮಾಡುವರು (ಡಿ) ಮಾಡಲಿಲ್ಲ
6) 'ಅಷ್ಟು ' ಪದವು
(ಎ) ಸಂಖ್ಯಾವಾಚಕ (ಬಿ) ಗುಣವಾಚಕ (ಸಿ) ಪರಿಮಾಣ ವಾಚಕ (ಡಿ) ಪ್ರಕಾರ ವಾಚಕ
7) ದ್ವಿತೀಯಾ ವಿಭಕ್ತಿ ಪ್ರತ್ಯಯವು ಈ ಕಾರಕಾರ್ಥದಲ್ಲಿದೆ.
(ಎ) ಕರ್ತೃರ್ಥ (ಬಿ) ಕರಣಾರ್ಥ (ಸಿ) ಕರ್ಮಾರ್ಥ (ಡಿ) ಅಪಾದಾನ
8) ತೃತೀಯಾ ವಿಭಕ್ತಿಪ್ರತ್ಯಯವು ಈ ಕಾರಕಾರ್ಥದಲ್ಲಿದೆ.
(ಎ) ಕರ್ತೃರ್ಥ (ಬಿ) ಕರ್ಮಾರ್ಥ (ಸಿ) ಸಂಪ್ರದಾನ (ಡಿ) ಕರಣಾರ್ಥ
9) ಚತುರ್ಥಿ ವಿಭಕ್ತಿ ಪ್ರತ್ಯಯದ ಕಾರಕಾರ್ಥ
(ಎ) ಸಂಪ್ರದಾನ (ಬಿ) ಅಪಾದಾನ (ಸಿ) ಸಂಬಂಧ (ಡಿ) ಅಧಿಕರಣ
10) ಪಂಚಮೀ ವಿಭಕ್ತಿಪ್ರತ್ಯಯವು ಈ ಕಾರಕಾರ್ಥದಲ್ಲಿದೆ.
(ಎ) ಅಪಾದಾನ (ಬಿ)ಸಂಬಂಧ (ಸಿ) ಅಧಿಕರಣ (ಡಿ) ಕರ್ತೃರ್ಥ
11) ಷಷ್ಠೀ ವಿಭಕ್ತಿಪ್ರತ್ಯಯವು ಈ ಕಾರಕಾರ್ಥದಲ್ಲಿದೆ.
(ಎ) ಸಂಬಂಧ (ಬಿ) ಅಧಿಕರಣ (ಸಿ)ಕರ್ತೃರ್ಥ (ಡಿ) ಕರ್ಮಾರ್ಥ
12) ಸಪ್ತಮೀ ವಿಭಕ್ತಿಪ್ರತ್ಯಯವು ಈ ಕಾರಕಾರ್ಥದಲ್ಲಿದೆ.
(ಎ) ಸಂಬಂಧ (ಬಿ) ಕರ್ತೃರ್ಥ (ಸಿ) ಕರ್ಮಾರ್ಥ (ಡಿ) ಅಧಿಕರಣ
13) ಇದು ಪ್ರಥಮಾ ವಿಭಕ್ತಿಪ್ರತ್ಯಯ
(ಎ) ಇಂದ (ಬಿ) ಅನ್ನು. (ಸಿ) ಉ (ಡಿ) ಗೆ,ಇಗೆ, ಕೆ,ಕ್ಕೆ
14) ದ್ವಿತೀಯಾ ವಿಭಕ್ತಿ ಪ್ರತ್ಯಯ
(ಎ) ಉ (ಬಿ) ಇಂದ (ಸಿ) ಅನ್ನು (ಡಿ) ಗೆ,ಇಗೆ, ಕೆ,ಕ್ಕೆ
15) ತೃತೀಯಾ ವಿಭಕ್ತಿ ಪ್ರತ್ಯಯದ ಹೊಸಗನ್ನಡ ರೂಪ
(ಎ) ಅನ್ನು (ಬಿ) ಇಂದ (ಸಿ) ಗೆ,ಇಗೆ, ಕೆ,ಕ್ಕೆ ಡಿ) ದೆಸೆಯಿಂದ
16) ಚತುರ್ಥಿ ವಿಭಕ್ತಿಪ್ರತ್ಯಯದ ಹೊಸಗನ್ನಡ ರೂಪ
(ಎ) ಗೆ,ಇಗೆ, ಕೆ,ಕ್ಕೆ (ಬಿ) ದೆಸೆಯಿಂದ ಸಿ) ಅ (ಡಿ) ಅಲ್ಲಿ
17) ಪಂಚಮೀವಿಭಕ್ತಿಪ್ರತ್ಯಯದಹೊಸಗನ್ನಡರೂಪ
(ಎ) ಉ ಬಿ)ಅ ಸಿ) ಅಲ್ಲಿ ಡಿ) ದೆಸೆಯಿಂದ
18) ಷಷ್ಠೀ ವಿಭಕ್ತಿ ಪ್ರತ್ಯಯ
(ಎ) ಅನ್ನು. (ಬಿ) ಅಲ್ಲಿ (ಸಿ)ಉ (ಡಿ) ಅ
19) ಹೊಸಗನ್ನಡ ಸಪ್ತಮೀ ವಿಭಕ್ತಿ ಪ್ರತ್ಯಯ
(ಎ) ಅಲ್ಲಿ (ಬಿ) ಉ (ಸಿ) ಅನ್ನು ಡಿ) ಇಂದ

II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ. (ಗ್ರಹಿಕೆ – ಸಾಧಾರಣ)

20) ಪ್ರಥಮಾ: ಶರಣನು :: ದ್ವಿತೀಯಾ: -----------
21) ತೃತೀಯಾ: ಶರಣನಿಂದ :: ಚತುರ್ಥಿ: ---------
22)ಪಂಚಮೀ: ಶರಣನ ದೆಸೆಯಿಂದ:: ಷಷ್ಠೀ: ---
23) ವರ್ಷ : ವರುಷ :: ರಾಯ :______
24) ಭಕ್ತಿ : ಬಕುತ :: ದೆಸೆ : _______
25) ಸೊದೆ : ಸುಧೆ : : ಶ್ರೀ :_____
26) ವೀರ : ಬೀರ :: ಬಿನ್ನಹ : ________

III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. (ಸ್ಮರಣೆ – ಸುಲಭ)

27) ಸ್ವಾಮಿಯವರಿಗೂ ಲೇಖಕರಿಗೂ ಪರಿಚಯವಾಗಿದ್ದು ಎಲ್ಲಿ?
28) ಸ್ವಾಮಿಯವರು ನುಡಿಸುತ್ತಿದ್ದ ಸಂಗೀತ ವಾದ್ಯ ಯಾವುದು?
29) ಸ್ವಾಮಿಯವರು ವಿಜ್ಞಾನದ ಯಾವ ವಿಭಾಗದಲ್ಲಿ ಪರಿಣಿತರಾಗಿದ್ದರು?
30) ಸ್ವಾಮಿಯವರಿಗೆ ಯಾರ ಪಿಟೀಲು ವಾದನವೆಂದರೆ ಇಷ್ಟ?
31) ಲೇಖಕರಿಗೂ ಬಿ,ಜಿ,ಎಲ್ ,ಸ್ವಾಮಿಯವರಿಗೂ ಸಮಾನ ಪ್ರೀತಿಯಿದ್ದ ಚಿತ್ರಕಲಾ ಪ್ರದರ್ಶನ ಶಾಲೆ ಯಾವುದು?
32) ಬಿ,ಜಿ,ಎಲ್, ಸ್ವಾಮಿಯವರು ವಾಸವಾಗಿದ್ದುದು ಎಲ್ಲಿ ?

IV . ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. (ಗ್ರಹಿಕೆ – ಸಾಧಾರಣ)

33) ಲೇಖಕರು ಮತ್ತು ಸ್ವಾಮಿಯವರು ಯಾವ ವಿಷಯದ ಕುರಿತು ಚರ್ಚೆ ಮಾಡುತ್ತಿದ್ದರು?
34)ಸ್ವಾಮಿಯವರ ಸಂಶೋಧನೆಯ ಆಸಕ್ತಿ ಹೇಗಿತ್ತು?
35) ಸ್ವಾಮಿಯವರ ಸಾವು ಲೇಖಕರನ್ನು ಏಕೆ ಕಾಡಿತು?
36) ಲೇಖಕರಿಗೆ ಬಿ,ಜಿ,ಎಲ್, ಸ್ವಾಮಿಯವರ ಬಗ್ಗೆ ಸ್ಪಷ್ಟಭಾವ ಅಭಿಪ್ರಾಯ ಬೆಳೆದದ್ದು ಹೇಗೆ?
37) ವ್ಯಕ್ತಿ ಅದ್ಭುತರಾಗಲು ಏನು ಮಾಡಬೇಕು?
38) ಲೇಖಕರು ಮತ್ತು ಬಿ,ಜಿ,ಎಲ್, ಸ್ವಾಮಿಯವರ ಯೋಜನೆಗಳು ಏನಾಗಿದ್ದವು?
39) ಬಿ,ಜಿ,ಎಲ್ ,ಸ್ವಾಮಿಯವರ ಸಂಶೋಧನೆಯ ಕ್ಷೇತ್ರಗಳು ಯಾವವು?
40) ಬೋಧನಾಕ್ರಮದ ಪರಿಣಿತರೆಲ್ಲ ನಿಬ್ಬೆರಗಾಗಲು ಕಾರಣವೇನು?
41) ಬಿ,ಜಿ,ಎಲ್. ಸ್ವಾಮಿಯವರು ಸಂಶೋಧನೆಗೆ ವಿದಾಯ ಹೇಳದಿರಲು ಕಾರಣವೇನು?
42) ಬಿ,ಜಿ,ಎಲ್, ಸ್ವಾಮಿಯವರ ದಿನನಿತ್ಯದ ಅಭ್ಯಾಸಗಳು ಯಾವುವು?
43) ಮೇಧಾಶಕ್ತಿ ಇರುವ ಅನೇಕರಿಗೆ ಇರುವ ರೋಗಗಳು ಯಾವುವು?
44) ಸ್ವಾಮಿಯವರು ಲೇಖಕರಿಗೆ ಏನು ಹೇಳಿದರು?
45)) ಸ್ವಾಮಿಯವರ ಸಹೋದ್ಯೋಗಿಗಳು ಲೇಖಕರಿಗೆ ಏನು ಹೇಳಿದರು?

V. ಕೆಳಗಿನ ಕವಿಗಳ/ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. (ಸ್ಮರಣೆ – ಸುಲಭ)

46) ಎಸ್, ಎಲ್ ,ಭೈರಪ್ಪ

VI. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ.

(ಅಭಿವ್ಯಕ್ತಿ – ಕಠಿಣ)

47) ಮಿಂಚಿ ಹೋದ ಕಾರ್ಯಕ್ಕೆ ಚಿಂತಿಸಿ ಫಲವೇನು?

ಅಥವಾ

ಇರುಳು ಕಂಡ ಬಾವಿಗೆ ಹಗಲು ಬಿದ್ದಂತೆ.

VI. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. (ಅಭಿವ್ಯಕ್ತಿ – ಸಾಧಾರಣ)

48) " ಒಳಗೆ ಬಂದಿದ್ದರೆ ನೀವು ನುಡಿಸುತ್ತಿರಲಿಲ್ಲ"

49) " ಎಂತಹ ಅದ್ಭುತ ರಚನಾ ವೈಖರಿ ಕಾಣುತ್ತೆ ಗೊತ್ತೆ!"

50) " ಒಂದು ಭಾಷಣಕ್ಕೆ ಬರುವಂತೆ ಒಪ್ಪಿಸಿ"

VII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. (ಅಭಿವ್ಯಕ್ತಿ – ಕಠಿಣ)

51) ಸ್ವಾಮಿಯವರ ಸಂಗೀತಾಸಕ್ತಿಯನ್ನು ಕುರಿತು ವಿವರಿಸಿರಿ.

52) ಸ್ವಾಮಿಯವರ ಸಂಶೋಧಕ ಬುದ್ಧಿ ಹೇಗಿತ್ತು ಎಂಬುದನ್ನು ನಿದರ್ಶನಗಳ ಮೂಲಕ ಸಮರ್ಥಿಸಿ.

****

8. ಹರಲೀಲೆ - ಹರಿಹರ

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ ಅವುಗಳಿಗೆ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರ ದೊಂದಿಗೆ ಬರೆಯಿರಿ : (ಸ್ಮರಣೆ – ಸುಲಭ)

1. ಕನ್ನಡದಲ್ಲಿ ಸಾಮಾನ್ಯವಾಗಿ ಬಳಕೆಯಲ್ಲಿರುವ ರಗಳೆಗಳ ಸಂಖ್ಯೆ

(ಎ) ೦೧ (ಬಿ) ೦೨ (ಸಿ)೦೩ (ಡಿ) ೦೪

2. 'ರಘಟಾ' ಎಂಬ ಪದದ ತದ್ಭವ ರೂಪ.

(ಎ)ಪಗರ (ಬಿ)ರಗಳೆ (ಸಿ)ಸಗಟಾ (ಡಿ)ರಗಟಾ

3.'ದಡದಡ' ಪದ ಈ ವ್ಯಾಕರಣಾಂಶಕ್ಕೆ ಸೇರಿದೆ.

(ಎ) ದ್ವಿರುಕ್ತಿ (ಬಿ)ಅನುಕರಣಾವ್ಯಯ (ಸಿ) ಜೋಡುನುಡಿ (ಡಿ)ನುಡಿಗಟ್ಟು

4. 'ಶುಕ' ಪದದ ಅರ್ಥ.

(ಎ)ಶುಕ್ರ (ಬಿ)ಸಖ (ಸಿ)ಗಿಳಿ (ಡಿ)ಆನೆ

5. ರಗಳೆ ಈ ಛಂದೋ ಪ್ರಕಾರಕ್ಕೆ ಸೇರಿದೆ.

(ಎ)ಅಂಶಗಣ (ಬಿ)ಅಕ್ಷರಗಣ (ಸಿ)ಮಾತ್ರಾಗಣ (ಡಿ) ಮೇಲಿನ ಯಾವುದು ಅಲ್ಲ

6. 'ಕಮಲಜ' ದ ಈ ಸಮಾಸಕ್ಕೆ ಸೇರಿದೆ.

(ಎ) ತತ್ಪುರುಷ (ಬಿ)ಕರ್ಮಧಾರೆಯ (ಸಿ)ಬಹುವ್ರೀಹಿ (ಡಿ) ದ್ವಂದ್ವ

7. ಕಾರಣಿಕ ಪದದ ಅರ್ಥ.

(ಎ) ಜ್ಯೋತಿಷಿ (ಬಿ)ಜೋಯಿಸ (ಸಿ)ಸೇವಕ (ಡಿ)ಅವತಾರ ಪುರುಷ

II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಹ ಸಂಬಂಧಿ ಪದವನ್ನು ಬರೆಯಿರಿ : (ಗ್ರಹಿಕೆ – ಸಾಧಾರಣ)

8. ವನ: ಬನ ::ವಿ ಜ್ಞಾಪನೆ : ________________

9. ಪುಷ್ಪದತ್ತಂ: ದ್ವಿತೀಯಾ :: ನರಕದೊಳ್ :___________

10. ದಡದಡ :ಅನುಕರಣಾವ್ಯಯ :: ಮೆಲ್ಲಮೆಲ್ಲನೆ :_________

11. ಲಲಿತರಗಳೆ : ಮೂರುಮಾತ್ರೆ :: ಮಂದಾನಿಲರಗಳೆ :_________

12. ವೇಷ್ಟಿ: ಪಂಚೆ :: ಯಷ್ಟಿ :___________

13. ಸರ್ವಾಂಗ : ಸರ್ವ+ಅಂಗ : : ಘಳಿಗೆವಟ್ಟಲು:_________

14. ಚರಿತ್ರಂ : ಕೆಲಸ : : ತಂಡುಲ:___________

15. ಗೊಹೆಗೊಹೆಗುಟ್ಟು : ಗೊರಗೊರ ಶಬ್ದ :: ಶಿಥಿಲಾಕ್ಷರ : ___________

16. ಬೆಂಬಳಿಗೊಂಡು : ಹಿಂಬಾಲಿಸಿ :: ಮಲ್ಲಳಿಗೊಂಡು: ___________

17. ಘಳಿಗೆವಟ್ಟಲು : ಆದೇಶ :: ಒಮ್ಮೊಮ್ಮೆ : _________

III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. (ಸ್ಮರಣೆ – ಸುಲಭ)

18. ನಂಬಿಯಣ್ಣನ ಪೂರ್ವಜನ್ಮದ ಹೆಸರೇನು?
19. ಹರಲೀಲೆ ಪಾಠದ ಮೂಲ ಕೃತಿ ಯಾವುದು?
20.ಹರಲೀಲೆ ಪಾಠದ ಕವಿಯ ಹೆಸರೇನು?
21. ಗಿರಿಜೆ ಎಲ್ಲಿ ಇರಬೇಕೆಂದು ಶಿವನು ತಿಳಿಸಿದನು?
22. ಹರಿಹರ ಬರೆದಿರುವ ಎರಡು ಕೃತಿಗಳನ್ನು ಹೆಸರಿಸಿ.
23. ವೃದ್ಧ ಮಾಹೇಶ್ವರನು ಯಾವ ಕೊಡದ ಮೇಲೆ ಬಿದ್ದನು?
24. ವೃದ್ಧ ಮಹೇಶ್ವರನು ಕೈಲಾಸದಿಂದ ಎಲ್ಲಿಗೆ ಬಂದನು?
25. ನಂಬಿಯಣ್ಣನ ಮದುವೆಯನ್ನು ಯಾವ ಊರಿನಲ್ಲಿ ಏರ್ಪಾಡು ಮಾಡಲಾಗಿತ್ತು?
26. ರಸಫಲಗಳನ್ನು ಅರಸುತ್ತಿದ್ದ ಪಕ್ಷಿ ಸಮೂಹ ಯಾವುದು?
27. ವೃದ್ಧ ಮಾಹೇಶ್ವರನು ಪಠಿಸುತ್ತಿದ್ದ ಮಂತ್ರ ಯಾವುದು?
28. ಶಿವನ ಕೊರಳ ಆಭರಣದ ಒಂದು ಸರ್ಪವು ಏನಾಗಿ ಬದಲಾಯಿತು?
29. ಶಿವನ ಕೈಯ ತ್ರಿಶೂಲ ಏನಾಗಿ ಬದಲಾಯಿತು?
30. ವೃದ್ಧ ಮಾಹೇಶ್ವರನನ್ನು ಜನರು ಮದುವೆ ಮಂಟಪದಿಂದ ಹೇಗೆ ಹೊರಗಿಟ್ಟರು?
31. ವನದೊಳಗಿನ ಮಧುಕರ ಸಮೂಹವು ಏನನ್ನು ಅರಸುತ್ತಿದ್ದವು?
32. ಕೈಲಾಸದ ರುದ್ರಕನ್ನಿಕೆಯರು ಭೂಲೋಕದಲ್ಲಿ ಯಾವ ಹೆಸರಿನಿಂದ ಜನಿಸಿದರು?

IV.ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. (ಗ್ರಹಿಕೆ – ಸಾಧಾರಣ)

33. ವಿರೂಪಾಕ್ಷನ್ನು ಗಿರಿಜೆಗೆ ಏನೆಂದು ಹೇಳಿದನು?
34. ಚೋಳ ದೇಶದಲ್ಲಿದ್ದ ಮೂರು ಗ್ರಾಮಗಳನ್ನು ಹೆಸರಿಸಿ.
35. ವೃದ್ಧಮಾಹೇಶ್ವರನು ಶಿವಮಂತ್ರವನ್ನು ಹೇಳುತ್ತಿದ್ದ ರೀತಿಯನ್ನು ತಿಳಿಸಿ.
36. ಕೆಳಗೆ ಬಿದ್ದ ವೃದ್ಧನನ್ನು ನೋಡಿ ನೆರೆದಿದ್ದ ಜನ ಏನೆಂದು ಮಾತನಾಡಿಕೊಂಡರು?
37. ನಂಬಿಯಣ್ಣನ ಕಾತರತೆಯನ್ನು ಕವಿ ಹೇಗೆ ವರ್ಣಿಸಿದ್ದಾನೆ?

V. ಈ ಕೆಳಗಿನ ಕವಿ/ ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳ ಕುರಿತು ವಾಕ್ಯರೂಪದಲ್ಲಿ ಬರೆಯಿರಿ. (ಸ್ಮರಣೆ – ಸುಲಭ)

38. ಹರಿಹರ.

VI. ಈ ಕೆಳಗಿನ ಪದ್ಯಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ತಿಳಿಸಿ. (ಗ್ರಹಿಕೆ - ಸಾಧಾರಣ)

39. ರಸಫಳಂಗಳನಱಸುತಿರ್ಪಶುಕನಿಕರಮಂ
ಪೊಸಪೊವನೆಳಸಿರ್ಪಮಧುಕರಪ್ರಕರಮಂ.

VII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. (ಅಭಿವ್ಯಕ್ತಿ – ಸಾಧಾರಣ)

40. 'ಸಕಲ ಸುಖಮಂ ಪೂಜೆಯಾಗಿ ಕೈಕೊಂಡು ಬರ್ಪನು'
41.'ನೀನತ್ಯಂತ ಕರುಣಿ'
42. 'ಪುಣ್ಯಂ ಪಣ್ತಾದಂತೆ'
43. 'ಈ ವೃದ್ಧಂ ಕಿಱುಕುಳನಲ್ಲ'
44.'ಸಂಸಾರದಿಂ ಕೆಟ್ಟು ಪೋಗಲನುವಾಗಿರ್ದಪಂ'

VIII . ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. (ಅಭಿವ್ಯಕ್ತಿ – ಕಠಿಣ)

45. ಶಿವನು ವೃದ್ಧಮಾಹೇಶ್ವರನಾಗಿ ವೇಷಧರಿಸಲು ಕಾರಣವೇನು?
46. ವೃದ್ಧಮಾಹೇಶ್ವರನನ್ನು ಕವಿ ಹೇಗೆ ವರ್ಣಿಸಿದ್ದಾರೆ?

47. ಮದುವೆಯ ಮಂಟಪದಲ್ಲಿ ವೃದ್ಧನು ಮಾಡಿದ ಅವಾಂತರಗಳಾವುವು?

IX . ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ. (ಅಭಿವ್ಯಕ್ತಿ – ಕಠಿಣ)

48. ರಾಷ್ಟ್ರೀಯ ಹಬ್ಬಗಳ ಮಹತ್ವ.

49. ರಾಷ್ಟ್ರೀಯ ಭಾವೈಕ್ಯ.

****

ಪದ್ಯ ಭಾಗ

1. ಪಾರಿವಾಳ – ಸು. ರಂ ಎಕ್ಕುಂಡಿ

I. ಕೆಳಗಿನ ಪ್ರಶ್ನೆಗಳಿಗೆಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ ಅವುಗಳಿಗೆ ಹೆಚ್ಚು ಸೂಕ್ತವಾದ ಉತ್ತರವನ್ನುಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. (ಸ್ಮರಣೆ – ಸುಲಭ)

1. ಉಪಮೇಯ, ಉಪಮಾನ, ಸಮಾನಧರ್ಮ ಉಪಮಾವಾಚಕ ಈ ನಾಲ್ಕು ಅಂಶಗಳು ಇರುವ ಅಲಂಕಾರ
   (ಎ) ಲುಪ್ತೋಪಮಾಲಂಕಾರ (ಬಿ) ಪೂರ್ಣೋಪಮಾಲಂಕಾರ (ಸಿ) ರೂಪಕಾಲಂಕಾರ (ಡಿ) ಶಬ್ದಾಲಂಕಾರ
2. ಮಾತು ಬಲ್ಲವನಿಗೆ ಜಗಳವಿಲ್ಲ: ಊಟ ಬಲ್ಲವನಿಗೆ ರೋಗವಿಲ್ಲ.
   (ಎ) ರೂಪಕಾಲಂಕಾರ (ಬಿ) ದೃಷ್ಟಾಂತಾಲಂಕಾರ (ಸಿ) ಉಪಮಾಲಂಕಾರ (ಡಿ) ಉತ್ಪ್ರೇಕ್ಷಾಲಂಕಾರ
3. ಗೀಜಗನ ಗೂಡುಗಳು ತೊಟ್ಟಿಲಿನಂತೆ ತೂಗಾಡುತ್ತಿದ್ದವು ವಾಕ್ಯದಲ್ಲಿರುವ ಉಪಮಾನ
   (ಎ) ಗೀಜಗನ ಗೂಡು (ಬಿ)ಅಂತೆ (ಸಿ) ತೊಟ್ಟಿಲು (ಡಿ) ತೂಗಾಡುವುದು
4. ಬಾನಿನಲ್ಲಿ ಗಾಳಿಪಟಗಳು ಹಕ್ಕಿಗಳಂತೆ ಹಾರಾಡುತ್ತಿದ್ದವು ವಾಕ್ಯದಲ್ಲಿರುವ ಸಮಾನ ಧರ್ಮ
   (ಎ) ಹಕ್ಕಿಗಳು (ಬಿ)ಗಾಳಿಪಟಗಳು (ಸಿ) ಅಂತೆ (ಡಿ) ಹಾರಾಡುವುದು
5. ಉಪಮೇಯ ಉಪಮಾನಗಳು ಎರಡೂ ಒಂದೇ ಎಂದು ಭೇದವಿಲ್ಲದಂತೆ ಹೇಳುವ ಅಲಂಕಾರ
   (ಎ) ರೂಪಕಾಲಂಕಾರ (ಬಿ) ರೂಪಕಾಲಂಕಾರ (ಸಿ) ಶಬ್ದಾಲಂಕಾರ (ಡಿ) ಅರ್ಥಾಂತರನ್ಯಾಸಾಲಂಕಾರ
6. ಶಾಲೆಗೆ ಈ ವಿದ್ಯಾರ್ಥಿಯೊಂದು ರತ್ನ ಈ ವಾಕ್ಯದಲ್ಲಿರುವ ಉಪಮೇಯ
   (ಎ) ಶಾಲೆ (ಬಿ) ವಿದ್ಯಾರ್ಥಿ (ಸಿ) ರತ್ನ (ಡಿ) ಯಾವುದು ಅಲ್ಲ
7. ಎರಡು ವಸ್ತುಗಳಲ್ಲಿ ಪರಸ್ಪರ ಇರುವ ಹೋಲಿಕೆಯನ್ನು ವರ್ಣಿಸುವ ಅಲಂಕಾರ
   (ಎ) ದೃಷ್ಟಾಂತಾಲಂಕಾರ (ಬಿ) ರೂಪಕಾಲಂಕಾರ (ಸಿ) ಅರ್ಥಾಲಂಕಾರ (ಡಿ) ಉಪಮಾಲಂಕಾರ

II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. (ಸ್ಮರಣೆ – ಸುಲಭ)

12. ಮುದ್ದು ಬಿಳಿ ಪಾರಿವಾಳಗಳ ಜೋಡಿ ಎಲ್ಲಿ ಸಂಸಾರ ಹೂಡಿದ್ದವು ?
13. ಜೋಡಿ ಪಾರಿವಾಳಗಳು ಹೇಗೆ ಬಾಳುತ್ತಿದ್ದವು ?
14. ಬಲೆಯಲ್ಲಿದ್ದ ಮರಿಗಳು ಹೊರಗೆ ಬರಲು ಏನು ಮಾಡಿದವು ?
15. ಏನನ್ನು ತೊರೆದು ಬಾಳಬೇಕು ?
16. ಪಾರಿವಾಳ ಪದ್ಯ ಬರೆದ ಕವಿಯ ಹೇಸರೇನು ?
17. 'ಪಾರಿವಾಳ' ಪದ್ಯವನ್ನು ಯಾವ ಕೃತಿಯಿಂದ ಆರಿಸಲಾಗಿದೆ ?
18. ಬೇಡನು ಏನನ್ನು ಹರಡಿದನು ?
19. ಬಲೆಯಲ್ಲಿದ್ದ ಮರಿಗಳನ್ನು ಕಂಡು ತಾಯಿ ಪಾರಿವಾಳ ಏನು ಮಾಡಿತು ?
20. ಕುರುಡು ವಾತ್ಸಲ್ಯದಿಂದ ಪಾರಿವಾಳದ ಹಿಂಡು ಏನು ಮಾಡಿತು ?
21. ಸರ್ವನಾಶದ ಸಿದ್ದಿ ಯಾವುದು ?

III. ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕುವಾಕ್ಯಗಳಲ್ಲಿ ಉತ್ತರಿಸಿ. (ಗ್ರಹಿಕೆ – ಸಾಧಾರಣ)

22. ಪಾರಿವಾಳಗಳ ಆನಂದಕ್ಕೆ ಕಾರಣವೇನು ?
23. ಬೇಡ ಏನು ಮಾಡಿದನು ?
24. ತಾಯಿ ಹಾಗೂ ತಂದೆ ಪಾರಿವಾಳಗಳು ಬಲೆಗೆ ಸಿಲಿಕಿದ ಮರಿಗಳನ್ನು ಕಂಡು ಏನು ಮಾಡಿದವು ?

IV. ಈ ಕೆಳಗಿನ ಕವಿಗಳ/ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ. (ಸ್ಮರಣೆ – ಸುಲಭ)

25. ಸು. ರಂ. ಎಕ್ಕುಂಡಿ

V. ಕೆಳಗೆ ಕೊಟ್ಟಿರುವ ವಾಕ್ಯಗಳಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ. (ಗ್ರಹಿಕೆ – ಸಾಧಾರಣ)

26. ಬಾನಿನಲ್ಲಿ ಗಾಳಿಪಟಗಳು ಹಕ್ಕಿಗಳಂತೆ ಹಾರಾಡುತ್ತಿದ್ದವು.
27. ಶಾಲೆಗೆ ಈ ವಿದ್ಯಾರ್ಥಿಯೊಂದು ರತ್ನ
28. ಮನೆಯೇ ಧರ್ಮಶಾಲೆ.
29. ಸೀತೆಯ ಮುಖ ಕಮಲ ಅರಳಿತು.
30. ಮಾತು ಬಲ್ಲವನಿಗೆ ಜಗಲವಿಲ್ಲ. ಊಟ ಬಲ್ಲವನಿಗೆ ರೋಗವಿಲ್ಲ.

VI. ಈ ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. (ಅಭಿವ್ಯಕ್ತಿ – ಸಾಧಾರಣ)

31. " ಒಳಗೆ ಬಂದಿತು ಬಳಿಗೆ ಬಿಕ್ಕಿ ಬಿಕ್ಕಿ "
32. "ಮೋಹ ಮುಸುಕಿದ ಬುದ್ದಿ ಸರ್ವನಾಶದ ಸಿದ್ದಿ "

VII. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. (ಸ್ಮರಣೆ – ಸುಲಭ)

33. ದಟ್ಟ ______________________________

____

______________________________ಜೋಡಿ

34. ಹಗಲಿರುಳು ______________________________

____

______________________________ಬಂದು

VIII. ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. (ಪ್ರಶಂಸೆ – ಕಠಿಣ)

35. ಕುರುಡು ವಾತ್ಸಲ್ಯದಲಿಕಳೆದುಕೊಂಡು ವಿವೇಕ
ಬಲೆಗೆ ನುಗ್ಗಿದ ಪಾರಿವಾಳ ಹಿಂಡು
ಹಸಿದ ಬೇಡನು ನಡೆದ ಹೊತ್ತುಕೊಂಡು

36. ಮೋಹ ಮುಸುಕಿದ ಬುದ್ದಿ ಸರ್ವನಾಶದ ಸಿದ್ದಿ
ವ್ಯಾಮೋಹವನು ತೊರೆದು ಬಾಳಬೇಕು
ಏನು ಬಂದರೂ ಕೂಡ ತಾಳಬೇಕು

IX. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. (ಅಭಿವ್ಯಕ್ತಿ – ಕಠಿಣ)

37. ಜೋಡಿ ಪಾರಿವಾಳಗಳ ದುಡುಕಿನ ನಿರ್ಧಾರದ ಬಗ್ಗೆ ನಿಮ್ಮ ಅಭಿಪ್ರಾಯವೇನು **?**
38. ಪಾರಿವಾಳ ಪದ್ಯದ ಕಥೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

****

2. ಹೊಸ ಹಾಡು - ಕೈಯಾರ ಕಿಞ್ಞಣ್ಣರೈ

I. ಕೆಳಗಿನ ಪ್ರಶ್ನೆಗಳಿಗೆಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ ಅವುಗಳಿಗೆ ಹೆಚ್ಚು ಸೂಕ್ತವಾದ ಉತ್ತರವನ್ನುಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. (ಸ್ಮರಣೆ- ಸುಲಭ)

1. 'ನಭ' ಪದದ ಅರ್ಥ.
(ಎ)ಆಕಾಶ (ಬಿ)ಭೂಮಿ (ಸಿ)ಮನೆ (ಡಿ)ಕಾಡು
2.'ಹೊಸ ಹಾಡು'ಪದ್ಯದ ಆಕರ ಗ್ರಂಥ.
ಎ)ಪುನರ್ನವ (ಬಿ)ಚೇತನ (ಸಿ)ಕೊರಗ (ಡಿ)ಶತಮಾನದ ಗಾನ
3. ಭವಿಷ್ಯತ್ ಕಾಲ ಸೂಚಕ ಪ್ರತ್ಯಯ.
(ಎ) ಉತ್ತ (ಬಿ)ದ (ಸಿ) ವ (ಡಿ)ಅಲಿ
4. ಭೂತಕಾಲ ಸೂಚಕ ಪ್ರತ್ಯಯ.
(ಎ) ಉತ್ತ (ಬಿ)ದ (ಸಿ) ವ (ಡಿ)ಅಲಿ
5. ವರ್ತಮಾನ ಕಾಲಸೂಚಕ ಪ್ರತ್ಯಯ.
(ಎ) ಉತ್ತ (ಬಿ)ದ (ಸಿ) ವ (ಡಿ)ಅಲಿ
6. ' ಹೋಗು' ಧಾತುವಿನ ವರ್ತಮಾನ ಕಾಲ ರೂಪ.
(ಎ)ಹೋಗುತ್ತಾನೆ (ಬಿ)ಹೋದನು (ಸಿ) ಹೋಗುವನು (ಡಿ) ಹೋಗಬೇಕು
7. ' ಹೋಗು' ಧಾತುವಿನ ಭೂತಕಾಲ ರೂಪ'
(ಎ)ಹೋಗುತ್ತಾನೆ (ಬಿ)ಹೋದನು (ಸಿ) ಹೋಗುವನು (ಡಿ) ಹೋಗಬೇಕು
8) ' ಹೋಗು' ಧಾತುವಿನ ಭವಿಷ್ಯತ್ಕಾಲ ರೂಪ.
(ಎ)ಹೋಗುತ್ತಾನೆ (ಬಿ)ಹೋದನು (ಸಿ) ಹೋಗುವನು (ಡಿ) ಹೋಗಬೇಕು

II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಹ ಸಂಬಂಧೀ ಪದವನ್ನು ಬರೆಯಿರಿ. (ಗ್ರಹಿಕೆ – ಸಾಧಾರಣ)

9. ಧ್ವನಿ: ದನಿ :: ಯುಗ:_____
10. ಬಾನು : ಆಕಾಶ :: ಭಾನು : ______
11. ಕ್ರಾಂತಿ: ಬದಲಾವಣೆ :: ತೆರೆ:____
12. ತಿನ್ನುತ್ತಾನೆ : ಭೂತಕಾಲ :: ತಿನ್ನುವನು :________

III! ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. (ಸ್ಮರಣೆ- ಸುಲಭ)

13. ಹೊಸ ಹಾಡು ಪದ್ಯಭಾಗದ ಕರ್ತೃ ಯಾರು?
14. ಕವಿ ಎಂತಹ ಹಾಡು ಹಾಡಬೇಕೆಂದು ಬಯಸುವರು?
15. ಕಡಿದೊಗೆಯ ಬೇಕಾದ ಪಾಶಗಳಾವುವು?
16. ಹಾಡು ನುಡಿಗುಂಡುಗಳು ಯಾವುದರ ಬೆನ್ನಟ್ಟಬೇಕು?
17. ಬಾನು ಭೂಮಿ ಯಾವುದರಿಂದ ಬೆಳಗಬೇಕು?
18. ಹೊಸ ಹಾಡು ಪದ್ಯದ ಆಕಾರ ಗ್ರಂಥ ಯಾವುದು?

IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. (ಗ್ರಹಿಕೆ – ಸಾಧಾರಣ)

19. ಕವಿ ಎಂತಹ ಹಾಡನ್ನು ಹಾಡಿದಾಗ ವೀರಧ್ವನಿಯೇರಬೇಕು ಎಂದು ಬಯಸುತ್ತಾರೆ?
20. ಕವಿ ಎಂತಹ ಹಾಡು ಗುಡುಗಬೇಕು ಎಂದು ಆಶಿಸುತ್ತಾರೆ?
21. ಈ ಹಾಡು ಹೊಸತು ಎಂದು ಕವಿ ಹೇಳಲು ಕಾರಣವೇನು?
22. ಹಾಡಿಗೆ ಯಾವ ಯಾವ ಶಕ್ತಿ ಇದೆ?

V. ಈ ಕೆಳಗಿನ ಕವಿಗಳ ಅಥವಾ ಸಾಹಿತಿಗಳ ಕಾಲ, ಸ್ಥಳ, ಕೃತಿಗಳನ್ನು, ಬಿರುದು/ ಪ್ರಶಸ್ತಿಗಳನ್ನು ವಾಕ್ಯ ರೂಪದಲ್ಲಿ ಬರೆಯಿರಿ. (ಸ್ಮರಣೆ- ಸುಲಭ)

23. ಕೈಯಾರ ಕಿಞ್ಞಣ್ಣರೈ

VI . **ಕೆಳಗಿನ ಅಲಂಕಾರವನ್ನು ಹೆಸರಿಸಿ ಲಕ್ಷಣ ಬರೆದು, ಸಮನ್ವಯಗೊಳಿಸಿ**. (ಗ್ರಹಿಕೆ – ಸಾಧಾರಣ)

24. ಗೀಜುಗನ ಗೂಡುಗಳು ತೊಟ್ಟಿಲಿನಂತೆ ತುಗಾಡುತ್ತಿದ್ದವು

VII. **ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** (ಅಭಿವ್ಯಕ್ತಿ – ಸಾಧಾರಣ)

25. "ತೀವ್ರತರ ಗಂಭೀರ ಭಾವನೆಯ ತೆರೆ ಮಸಗಿ ವೀರಧ್ವನಿಯೇರಬೇಕು"
26. "ಯುಗ ಯುಗಗಳ ಆಚೆಯಲಿ ಲೋಕಲೋಕಾಂತದಲಿ ಆ ಹಾಡು ಗುಡುಗ ಬೇಕು"
27. "ಜಡ ನಿದ್ರೆ ಸಿಡಿದೆದ್ದ ವೀರಾಟ್ಟಹಾಸದಲ್ಲಿ ಬಾನು ಭುವಿ ಬೆಳಗಬೇಕು"
28. "ನಡೆನುಡಿಗಳ ಎಡೆಯಲಿಪದ ತಾಳಗತಿಯಲ್ಲಿ ಕ್ರಾಂತಿಕಿಡಿ ಕೆರಳಬೇಕು"
29. "ಇದು ಮೊದಲು ಮುನಿಲ್ಲ ಮುಗಿದುದಂದಿನ ಪಾಡು ಹೊಸ ತಿಂದು ಹೊಸತು ಹಾಡು"

VIII. ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. (ಸ್ಮರಣೆ- ಸುಲಭ)

30. ನವಭಾವ________

____

_________ವೀರಧ್ವನಿಯೇರಬೇಕು

31. ಜಾತಿ ಕುಲ__________

____

____________________ಗುಡುಗಬೇಕು

IX. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥ ಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. (ಪ್ರಶಂಸೆ – ಕಠಿಣ)

32. ಉನ್ನತೋನ್ನತ ಘನ ಹಿಮಾದ್ರಿ ಶಿಖರವನೇರಿ
ಹಾಡಲ್ಲಿ ಹಾಡಬೇಕು
ನಾಡುನುಡಿ ಗುಂಡುಗಳು ಹಾರಿ
ದಶದಿಕ್ಕಿನಲ್ಲಿ ಭಯದ ಬೆನ್ನಟ್ಟಬೇಕು

33 . ಜಯಜನನಿ ಶಿರವೆತ್ತಿ ವೀರಭರವಸೆಯಿಂದ
ಹೊಸ ಹಾಡ ಕೇಳಿ ನೋಡು
ಇದೋ ಮೊದಲು ಮುನ್ನಿಲ್ಲ-ಮುಗಿದುದಂದಿನ ಪಾಡು
ಹೊಸತಿಂದು ಹೊಸತು ಹಾಡು

X. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. (ಅಭಿವ್ಯಕ್ತಿ – ಕಠಿಣ)

34. ಹೊಸ ಹಾಡು ಪದ್ಯದಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

****

3. ಚಕ್ರಗ್ರಹಣ - ದೇವಿದಾಸ

I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಉತ್ತರ ಬರೆಯಿರಿ. (ಸ್ಮರಣೆ – ಸುಲಭ)

1. ''ಪಾರ್ಥನಂ '' ಈ ಪದದಲ್ಲಿರುವ ವಿಭಕ್ತಿ
(ಎ) ಪ್ರಥಮಾ (ಬಿ) ತೃತೀಯಾ (ಸಿ) ಷಷ್ಠಿ (ಡಿ) ಪಂಚಮಿ
2. ಷಷ್ಠಿ ವಿಭಕ್ತಿಯ ಕಾರಕಾರ್ಥವಿದು.
(ಎ) ಸಂಬಂಧ (ಬಿ) ಕರಣಾರ್ಥ (ಸಿ) ಸಂಪ್ರದಾನ (ಡಿ) ಅಪಾದಾನ
3. ''ರಥದಿಂದ''ಎಂಬುದು ಈ ವಿಭಕ್ತಿಯಲ್ಲಿದೆ .
(ಎ) ಚತುರ್ಥಿ (ಬಿ) ಪಂಚಮೀ (ಸಿ) ತೃತೀಯಾ (ಡಿ)ಸಪ್ತಮೀ
4. ಈ ಕೆಳಗಿನ ಪದಗಳಲ್ಲಿ ಆದೇಶಸಂಧಿಗೆ ಸೇರಿದ ಪದವಿದು.
(ಎ) ಸಾಗರೋತ್ತರ (ಬಿ) ಜನಾನುರಾಗಿ (ಸಿ) ಕ್ರೋಧಗೊಂಡು (ಡಿ)ಒರ್ಮೊಮ್ಮೆ
5. '' ಮುರಾರಿ''ಪದ ಈ ಸಮಾಸಕ್ಕೆ ಉದಾಹರಣೆಯಾಗಿದೆ.
(ಎ) ತತ್ಪುರುಷ (ಬಿ) ಕರ್ಮಧಾರೆಯ (ಸಿ) ದ್ವಿಗು (ಡಿ)ಬಹುವ್ರೀಹಿ
6. ಕ್ರಿಯಾಸಮಾಸಕ್ಕೆ ಸೇರಿದ ಪದವಿದು.
(ಎ) ಕಂಠವನಿರಿ (ಬಿ) ಅರಮನೆ (ಸಿ) ದನುಜದಲ್ಲಣ (ಡಿ)ಕಿರೀಟಿ
7. ''ಚರಣದೆಡೆ'' ಪದವು
(ಎ) ಆಗಮ (ಬಿ) ಲೋಪ (ಸಿ) ಗುಣ (ಡಿ) ಅನುನಾಸಿಕ
8 ''ವಾಘ''ಪದದ ಅರ್ಥವಿದು.
(ಎ) ರಥ (ಬಿ) ಹುಲಿ (ಸಿ) ಸೈನ್ಯ (ಡಿ) ಕಡಿವಾಣ

II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ. (ಗ್ರಹಿಕೆ – ಸಾಧಾರಣ)

9. ಸ್ಯಂದನ : ರಥ : : ಅಳವ : -----
10. ಬಿಸಜಪೀಠ : ಬ್ರಹ್ಮ : : ಶಕ್ರ : -------
11. ಪರಿಕಿಸು : ಪರೀಕ್ಷಿಸು : : ಹರುಷ : --------
12. ಭಾಮಿನಿ : 3-4 ಮಾತ್ರೆ : : ವಾರ್ಧಕ : -----
13. ಪ್ರಥಮಾ : ಕರ್ತೃರ್ಥ : : ಪಂಚಮಿ : ------
14. ಗಂಗಾಜಾತ : ಭೀಷ್ಮ : : ತ್ರಿಣಯ : ------
15. ಚಿತ್ರಸೇನ ಕಾಳಗ : ದೇವಿದಾಸ : : ಗದುಗಿನ ಭಾರತ : -----------

II. **III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ.** (ಸ್ಮರಣೆ – ಸುಲಭ)

16. ಪಾರ್ಥನು ಬಾಣದಿಂದ ಯಾರಿಗೆ ವಂದಿಸಿದನು ?
17. ಭೀಷ್ಮರು ಎದುರಾದಾಗ ಪಾರ್ಥನು ಏನೆಂದು ಕೇಳಿದನು ?
18. ಪರಶುರಾಮರಿಂದ ಶರವನ್ನು ಪಡೆದವರು ಯಾರು ?
19. ಕೃಷ್ಣನು ಚಕ್ರವನ್ನು ಹಿಡಿದಾಗ ಏನಾಯಿತು ?
20. ಚಕ್ರಗ್ರಹಣ ಪದ್ಯದ ಪ್ರಮುಖ ಆಕರ ಗ್ರಂಥ ಯಾವುದು ?
21. ಚಕ್ರಗ್ರಹಣ ಪದ್ಯ ಕುರುಕ್ಷೇತ್ರ ಯುದ್ಧದ ಎಷ್ಟನೇ ದಿನದ ವಿದ್ಯಮಾನವನ್ನು ವರ್ಣಿಸುತ್ತದೆ ?
22. ಕುರುಕ್ಷೇತ್ರ ಯುದ್ಧದಲ್ಲಿ ಕೃಷ್ಣನು ಏನೆಂದು ಪ್ರತಿಜ್ಞೆ ಮಾಡಿದನು ?
23. ಅರ್ಜುನನು ಯುದ್ಧಕ್ಕೆ ಸಿದ್ಧನಾಗಿ ನಿಂತಾಗ ಕೃಷ್ಣನಿಗೆ ಏನೆಂದು ಹೇಳುತ್ತಾನೆ ?
24. ಭೀಷ್ಮನು ಅರ್ಜುನನಿಗೆ ಯಾವ ಬಾಣವನ್ನು ಪ್ರಯೋಗಿಸಲು ಹೇಳುತ್ತಾರೆ ?
25. ಭೀಷ್ಮರು ಕೃಷ್ಣನಿಗೆ ''ಎನಗೆ ನಗೆಯು ಬಂತು''ಎಂದು ಹೇಳಲು ಕಾರಣವೇನು ?

IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. (ಗ್ರಹಿಕೆ – ಸಾಧಾರಣ)

26. ಭೀಷ್ಮರು ಕ್ರೋಧಗೊಳ್ಳಲು ಕಾರಣವೇನು ?
27. ಭೂಮಿಯ ನಾಲ್ಕು ದಿಕ್ಕುಗಳಲ್ಲಿ ತಲ್ಲಣವುಂಟಾಯಿತು ಏಕೆ ?
28. ಕೃಷ್ಣನ ಕ್ರೋಧಕ್ಕೆ ಭೀಷ್ಮನು ಹೇಗೆ ಪ್ರತಿಕ್ರಿಯಿಸಿದನು ?
29. ಭೀಷ್ಮರು ಕೃಷ್ಣನ ಕೈಹಿಡಿದು ಏನೆಂದು ನಿವೇದಿಸಿಕೊಂಡನು ?
30. ತನ್ನೆಡೆಗೆ ಬಾಣವನ್ನು ಬಿಟ್ಟ ಭೀಷ್ಮರಿಗೆ ಅರ್ಜುನನು ಏನೆಂದು ಹೇಳಿದನು ?
31. ಭೀಷ್ಮರು ತಾವು ಪರಶುರಾಮರಿಂದ ಪಡೆದ ಬಾಣವನ್ನು ಪ್ರಯೋಗಿಸಿದ ಸನ್ನಿವೇಶವನ್ನು ತಿಳಿಸಿ.

III. **V. ಕೆಳಗಿನ ಕವಿಗಳ/ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** (ಸ್ಮರಣೆ – ಸುಲಭ)
32. ದೇವಿದಾಸ .

VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ. (ಗ್ರಹಿಕೆ – ಸಾಧಾರಣ)
33. ನೊಸಲೊಡೆದು ರಕ್ತಸೂಸಲು ದೃಗುದ್ವಯದಿ ಕಿಡಿ|
ಮಸಗಲೌಡಗಿದು ಘನರೋಷದಿಂ ಕುರುಬಲವ|
ನಸಿಯರೆದು ಭೀಷ್ಮನ ವಿಭಾಡಿಸುವನೀರೇಳು ಜಗವವೆರಸಿ ಶತಕೋಟಿಯ ||

34. ಎನಲು ಕಿರು ನಗೆಗೂಡಿ ಚಕ್ರವ |
ದನುಜ ದಲ್ಲಣ ಮುಚ್ಚಿವರಸ್ಯಂ |
ದನವನೇರಿ ಕಿರೀಟಿಗಭಯವನೀಯಲಚ್ಯುತನ ||

VII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. (ಅಭಿವ್ಯಕ್ತಿ – ಸಾಧಾರಣ)
35. "ಉಭಯ ಪಕ್ಷದಲ್ಲಿ ನಿಮಗೆ ಬೇಧವೇ "
36. "ಚತುರ್ದಶ ಭುವನ ತಲ್ಲಣಿಸಿತು "
37. "ಲೋಕವನ್ನು ರಕ್ಷಿಪ ದೇವ ಮಹಾನುಭಾವ "
38. "ತೃಣವಮುರಿವುದಕ್ಕೆ ಕೊಡಲಿಯು ಬೇಕೆ"
39. "ಎನಗೆ ನಿಮ್ಮೊಳಯ್ದೆ ಹಿರಿದುದಯವೊದುಗುಡವೊ "
40. "ಪ್ರೇಮದೊಳೆನ್ನಯ ಮಾತು ಲಾಲಿಸಬೇಕು "
41."ಇಂದೇ ಪೋಗಲಿ ತೀರ್ಚು ಚಕ್ರವನೆಚ್ಚು "
42. "ಕಾಯ ಎರವಿನೊಡವೆ ಜೀಯ "

VIII. ಕೆಳಗಿನ ಪ್ರಶ್ನೆಗಳಿಗೆ 8- 10 ವಾಕ್ಯಗಳಲ್ಲಿಉತ್ತರ ಬರೆಯಿರಿ . (ಅಭಿವ್ಯಕ್ತಿ – ಕಠಿಣ)
43. ಕುಪಿತನಾದ ಕೃಷ್ನನನ್ನು ಭೀಷ್ಮರು ಸಂತೈಸಿದ ಬಗೆಯನ್ನು ವಿವರಿಸಿ .
44. ಪಾರ್ಥ- ಭೀಷ್ಮರ ನಡುವೆ ನಡೆದ ಶರಸಂವಾದವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

IX. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು , ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. (ಪ್ರಶಂಸೆ – ಕಠಿಣ)
45. ಹರಿಯ ಖಾತಿಯ ತಡೆವರಾರೆಂ|
ದೆರಡು ಬಲ ಬೆರಗಾಗಿ ಕಣ್ ಮು |
ಚ್ಚಿರಲು ಭೀಷ್ಮನು ಬೆದರಿ ರಥದಿಂದಿಳಿದು ನಡೆತಂದು||
ದುರುತವನ ದಾವಾಗ್ನಿ ಲಕ್ಷ್ಮೀ |
ವರಮುಕುಂದಮುರಾರಿ ಜಯವೆನು |
ತೆರಗಿ ಮಗುಳೆದ್ದಚ್ಯುತನ ಮೃದುಕರವ ಪಿಡಿದೆಂದ ||

****

4. ಬಲಿಯನಿತ್ತೊಡೆ ಮುನಿಮೆಂ - ಜನ್ನ

I. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ. (ಗ್ರಹಿಕೆ – ಸಾಧಾರಣ)

1. ವ್ರಜ : ಸಮೂಹ : : ತಂಡುಲ : --------
2. ಷಟ್ಪದಿ : ಆರು ಸಾಲು : : ಕಂದಪದ್ಯ : ----------
3. ಯಶೋಧರ :ಅಮೃತಮತಿ : :ಯಶೋಮತಿ : : ---------------
4. ನೃಪೆಂದ್ರ : ಗುಣಸಂಧಿ : : ಪ್ರಜೆಯಲ್ಲಂ ----------
5. ಕಂದ ಪದ್ಯ : ಮಾತ್ರಾಗಣ : : ರಳ,ಕುಳ,ಕ್ಷ ಳ ----------
6. ಲೋಚನ : ಕಣ್ಣು : : ವಿಭು ------------
7. ಭಾಮಿನಿ ಷಟ್ಪದಿ : ೩/೪ ೩/೪ :: ಕಂದ ಪದ್ಯ ; -------------

II. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. (ಸ್ಮರಣೆ – ಸುಲಭ)

8. ಬಲಿಯನಿತ್ತೊಡೆ ಮುನಿವೆಂ' ಈ ಪದ್ಯದಲ್ಲಿ ಭಿಕ್ಷೆ ಬೇಡಲು ಬಂದ ಮಕ್ಕಳ ಹೆಸರೇನು?
9. ಅಭಯಮತಿ ಮತ್ತು ಅಭಯರುಚಿಯನ್ನು ಯಾವಾಗ ಸೆರೆ ಹಿಡಿಯಲಾಯಿತು?
10. ಅಭಯಮತಿ ಮತ್ತು ಅಭಯರುಚಿಯ ಸೋದರ ಮಾವನ ಹೆಸರೇನು?
11. ಅಭಯರುಚಿಯು ಮಾರಿದತ್ತನ ಪಾಪಗಳಿಗೆ ಎಲ್ಲಿ ಪರಿಹಾರ ಸಿಗುತ್ತದೆ ಎಂದು ಹೇಳಿದನು ?
12. ಚಂಡಮಾರಿಯು ಪ್ರತ್ಯಕ್ಷಳಾಗಿ ಅಭಯರುಚಿಗೆ ಎನೆಂದು ಸಂಬೋದಿಸಿದಳು ?
13. ಚಂಡಮಾರಿಯು ಜನರಿಗೆ ನಾನು ಯಾವಾಗ ಕೋಪಗೊಳ್ಳುತ್ತೇನೆ ಎಂದು ಹೇಳುತ್ತಾಳೆ ?
14. ಚಂಡಮಾರಿಯು ಜನಸಮೂಹಕ್ಕೆ ನನ್ನನ್ನು ಯಾವುದರಿಂದ ಪೂಜಿಸಬೇಕೆಂದು ಎಂದು ಹೇಳುತ್ತಾಳೆ ?
16. ಮಾರಿದತ್ತನು ತನ್ನ ತಂಗಿಯ ಮಕ್ಕಳನ್ನು ಹೇಗೆ ಲಾಲಿಸಿದನು ?
17. ಮಾರಿದತ್ತನು ಯಾವುದಕ್ಕೆ ಭಯಪಟ್ಟು ದೀಕ್ಷೆ ಕೈಗೊಂಡನು ?
18. ಮಾರಿದತ್ತನಿಗೆ ತಪದ ಫಲವಾಗಿ ಎಷ್ಟನೆ ಸ್ವರ್ಗ ಪ್ರಾಪ್ತಿಯಾಯಿತು ?

III. ಕೆಳಗಿನ ಪ್ರಶ್ನೆಗಳಿಗೆ ಮೂರು –ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. (ಗ್ರಹಿಕೆ – ಸಾಧಾರಣ)

19. ಅಭಯರುಚಿಯು ಮಾರಿದತ್ತನನ್ನು ನೋಡಿದಾಗ ಏನೆಂದು ಹೇಳಿದನು ?
20. ಅಭಯರುಚಿಯು ತಲ್ಲಣಗೊಳ್ಳಲು ಕಾರಣವೇನು ?
21. ಬಲಿ ಕೊಡುವುದನ್ನು ನೋಡಿದಾಗ ಅಭಯರುಚಿಯು ಮಾರಿದತ್ತನಿಗೆ ಏನೆಂದು ಹೇಳಿದನು ?
23. ಮಾರಿದತ್ತನು ಏಕೆ ಉದ್ವಿಗ್ನನಾದನು?
24. ಚಂಡಮಾರಿಯು ಜನರನ್ನು ಕುರಿತು ಏನಂದು ಹೇಳಿದಳು ?
25. ಮಾರಿದತ್ತನು ದೀಕ್ಷೆ ಕೈಗೊಳ್ಳಲು ಕಾರಣವೇನು ?
26. ಬಲಿಯನ್ನು ಕೊಡುವುದರಿಂದ ಆಗುವ ಪರಿಣಾಮವೇನು ?
27. ಮಾರಿದತ್ತನು ಹೇಗೆ ದೇವನಾದನು ?

IV. ಕೆಳಗಿನ ಕವಿಗಳ/ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. (ಸ್ಮರಣೆ – ಸುಲಭ)

28. ಜನ್ನ

V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. (ಅಭಿವ್ಯಕ್ತಿ – ಸಾಧಾರಣ)

29. "ಕರುಣದಿಂದ ತಲ್ಲಣಿಸಿದೆಪೆಂ"
30. "ನರಕದೊಳ್ ನಿವಾರಣೆಪಡೆವಯ್"
31. "ನೀನ್ ಆಚಾರ್ಯನು "
32. "ಬಲಿಯನಿತ್ತೊಡೆ ಮುನಿವೆಂ "
33. " ಭಯದಿಂ ಪುರುಳಿಲ್ಲ"
34. "ಭವದ ದುಃಖಮುಂಡೆಂ

35. " ದೇವನೇ ಆದಂ"

VI. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. (ಸ್ಮರಣೆ – ಸುಲಭ)

36. ಸಂಕಲ್ಪ ಹಿಂಸೆ -------------

____

____

-----------ನಿವಾರಣೆವಡೆವಯ್

ಅಥವಾ

ಪ್ರಜೆಯಲ್ಲಂ -----------

____

____

____________ಮುನಿವೆಂ

VII. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥ ಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. (ಪ್ರಶಂಸೆ – ಕಠಿಣ)

37. ಸಂಕಲ್ಪ ಹಿಂಸೆ ಯೊಂದರೊ

ಳಾಂ ಕಂಡೆಂ ಭವದ ದು:ಖಮುಂಡೆ ನೀನ್ ನಿಃ

ಕತೆಯಿನಿತು ದೇಹಿಗ-

ಕೊಂದಪೆ ನರಕದೊಳ್ ನಿವಾರಣೆವಡೆವಯ್

VIII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. (ಅಭಿವ್ಯಕ್ತಿ – ಕಠಿಣ)

38. ಅಭಯರುಚಿಯುಮಾರಿದತ್ತನ್ನು ಭೇಟಿಯಾದ ಸಂದರ್ಭ ವಿವರಿಸಿ ?

39. ಮಾರಿದತ್ತನು ರಾಜ್ಯವನ್ನು ತ್ಯಜಿಸಲು ಕಾರಣವೇನು ?

40. ಅಭಯರುಚಿಯ ಮಾತುಗಳು ಮಾರಿದತ್ತನ ಮೇಲೆ ಬೀರಿದ ಪರಿಣಾಮವನ್ನು ತಿಳಿಸಿ?

41. ಅಭಯರುಚಿ ಮತ್ತು ಮಾರಿದತ್ತರಲ್ಲಿ ಯಾರನ್ನು ಮೆಚ್ಚುವಿರಿ? ಏಕೆ?

5. ಹೇಮಂತ - ಎಸ್. ವಿ. ಪರಮೇಶ್ವರಭಟ್ಟ

I. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಹ ಸಂಬಂಧಿ ಪದವನ್ನು ಬರೆಯಿರಿ. (ಸ್ಮರಣೆ – ಸುಲಭ)

1. ಸಿಂಗರ : ಸಿಂಗಾರ :: ಮರುತ :......................
2. ಮೌನ: ಮಾತು:: ಜಡ:..............................
3. ಬನ : ವನ :: ಮೊಗ :........................
4. ಚಿಗುರಲೆ : ಲೋಪಸಂಧಿ :: ತಲೆವಾಗು :....................
5. ಸುಯ್ಯನೆ: ಅನುಕರಣಾವ್ಯಯ :: ಬೇಗನೆ :................................
6. ಗಂಧ : ಪರಿಮಳ :: ಜವನಿಕೆ:.................
7. ವರೂಥ: ತೇರು :: ಮರುತ : ....
8. ನಳನಳಿಸು : ದ್ವಿರುಕ್ತಿ :: ಕೆನೆಮೊಸರು :................

II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. (ಸ್ಮರಣೆ – ಸುಲಭ)

9. ಹೇಮಂತ ರಾಜನು ಇಳೆಗೆ ಬಂದಾಗ ಮರಗಳು ಹೇಗಿರುತ್ತವೆ?
10. ಮಂಜು ಮುಸುಕನು ಒದ್ದು ಮಲಗಿರುವವರು ಯಾರು?
11. ಕಾನನದ ಹಕ್ಕಿ ಏನು ಮಾಡುತ್ತಿದೆ?
12. ಎತ್ತಲು ಕಾಣುತ್ತಿರುವ ದೃಶ್ಯ ಯಾವುದು?
13. ಹೇಮಂತ ಋತುವಿನಲ್ಲಿ ತುಂಗೆಯ ತೊರೆ ಹೇಗೆ ಹರಿಯುತ್ತದೆ?
14.ಯಾವುದಕ್ಕೆ ತಲೆಬಾಗಬೇಕೆಂದು ಕವಿ ಹೇಳುತ್ತಾರೆ?
15. ಜೀವಿಗಳ ಧರ್ಮ ಯಾವುದು?

III. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. (ಗ್ರಹಿಕೆ – ಸಾಧಾರಣ)

16. ಆರು ಋತುಗಳನ್ನು ಹೆಸರಿಸಿ.
17. ಹೇಮಂತನು ಬಂದಿಳಿದಾಗ ಲೋಕದ ಪರಿಸ್ಥಿತಿ ಹೇಗಿದೆ?
18. ಹೊಲಗದ್ದೆಗಳು ಮತ್ತು ನದಿಗಳ ಮೇಲೆ ಹೇಮಂತನ ಪ್ರಭಾವವೇನು?
19. ಹೇಮಂತನ ಕಠಿಣ ಶಾಸನವನ್ನು ಹೇಗೆ ಸ್ವೀಕರಿಸಬೇಕು?
20.ಹೇಮಂತ ಋತುವಿನಲ್ಲಿ ಮರಗಳ ಸ್ಥಿತಿ ಹೇಗಿರುತ್ತದೆ?

IV. ಕೆಳಗಿನ ಕವಿಗಳ/ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ. (ಸ್ಮರಣೆ – ಸುಲಭ)

21 . ಎಸ್. ವಿ. ಪರಮೇಶ್ವರ ಭಟ್ಟ

V. ಕೆಳಗಿನ ವಾಕ್ಯಗಳಿಗೆ / ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯವನ್ನು ವಿವರಿಸಿರಿ. (ಅಭಿವ್ಯಕ್ತಿ – ಸಾಧಾರಣ)

22. "ಸುಯ್ಯೆಲ್ಲರ ಸೂಸುತಿವೆ ನಿನ್ನ ಹಳಿದು "
23. "ಕಣ್ಣೀರ ಸುರಿಸುತ್ತಿದೆ ಕಾನನದ ಹಕ್ಕಿ"
24. "ಎತ್ತಲುಮ್ ನಡುಗುತಿಹ ನೀರವಾಲೋಕ "
25. "ಚಂಗುಡಿಯ ಸಿಂಗಾರದ ವರವರೂಥಗಳೆನಿಸಿ "
26. "ಅದಕ್ಕೆ ತಲೆವಾಗುವುದೆ ಸೃಷ್ಟಿಯೊಳಮರ್ಮ"

VI . ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. (ಸ್ಮರಣೆ – ಸುಲಭ)

27. ಹೇಮಂತ ಋತುರಾಜ—--------------
—---------------------------------
—-----------------------------------
—------------------------- ಮರುತನಿಲ್ಲ

28 . ಹೇಮಂತನಾಳಿಕೆಯ____________________

____

____

______________________ಜೀವಗಳ ಧರ್ಮ

VII. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥ ಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. (ಪ್ರಶಂಸೆ – ಕಠಿಣ)

29. ಹಣ್ಣೆಲೆಗಳು ಉದಿರುತಿಹ ಬರಲು ಮರಗಳನೇರಿ
ಕಣ್ಣೀರು ಸುರಿಸುತ್ತಿದೆ ಕಾನನದ ಹಕ್ಕಿ.
ತಣ್ಣನೆಯ ಗಾಳಿಯಲಿ ಹಿಮದೊಂದು ಸೋನೆಯಲ್ಲಿ
ಮಿಣನಿದೆ ಮಾನವನ ಜೀವ ಸೆರೆಸಿಕ್ಕಿ .

VIII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. (ಅಭಿವ್ಯಕ್ತಿ – ಕಠಿಣ)

30. ಹೇಮಂತ ಋತುವಿನಲ್ಲಿ ಪ್ರಕೃತಿಯು ಹೇಗಿರುತ್ತದೆ ಎಂಬುದನ್ನು ವರ್ಣಿಸಿ.

31. ಹೇಮಂತ ಋತು ಪ್ರಕೃತಿಯಲ್ಲಿ ಅಗತ್ಯವೇ ನಿಮ್ಮ ಮಾತುಗಳಲ್ಲಿ ವಿವರಿಸಿ.

****

6. ತತ್ವಪದಗಳು – ಕಡಕೋಳ ಮಡಿವಾಳಪ್ಪ
– ಸಂತ ಶಿಶುನಾಳ ಶರೀಫರು

I. ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. (ಸ್ಮರಣೆ – ಸುಲಭ)

1. 'ಅಶನ' ಪದದ ಅರ್ಥ
(ಎ) ಅನ್ನ (ಬಿ) ಆಸೆ (ಸಿ) ಬಟ್ಟೆ (ಡಿ) ನೀರು
2. 'ಬೆತ್ತ' ಪದದ ತತ್ಸಮ ರೂಪ
(ಎ) ವೆತ್ತ (ಬಿ) ವೇತ (ಸಿ) ಬೆತ್ತಲೆ (ಡಿ) ಪೆತ್ತ
3. 'ಕರುಣೆ' ಪದದ ವಿರುದ್ಧಾರ್ಥಕ ಪದ
(ಎ) ಅನುಕರಣೆ (ಬಿ) ಕರುಣ (ಸಿ) ನಿಷ್ಕರಣೆ (ಡಿ) ಅಪಕರುಣೆ
4 'ಅಂಬಿಗ' ಎಂದರೆ
(ಎ) ರೈತ (ಬಿ) ಗಾಡಿ ಹೊಡೆಯುವ (ಸಿ) ಗುರು (ಡಿ) ದೋಣಿ ನಡೆಸುವ
5. 'ಅಕ್ಕ-ತಂಗಿ' ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ
(ಎ) ದ್ವಿರುಕ್ತಿ (ಬಿ) ಜೋಡಿ ನೋಡಿ (ಸಿ) ಅನುಕರಣಾವ್ಯಯ (ಡಿ) ನುಡಿಗಟ್ಟು
6. ನಿತ್ಯ ಕಾಲದಲ್ಲಿ - ಪದದಲ್ಲಿರುವ ವಿಭಕ್ತಿಯ ಹೆಸರು
(ಎ) ಚತುರ್ಥಿ (ಬಿ) ಪಂಚಮಿ (ಸಿ) ಷಷ್ಠಿ (ಡಿ) ಸಪ್ತಮಿ
7 'ಮಹಾತ್ಮ' ಪದದ ಸಂಧಿ
(ಎ) ಸವರ್ಣದೀರ್ಘ ಸಂಧಿ (ಬಿ) ಗುಣ ಸಂಧಿ (ಸಿ) ವೃದ್ಧಿ ಸಂಧಿ (ಡಿ) ಲೋಪ ಸಂಧಿ
8. ನಾನಾದೆ, ತಾನಾದೆ, ಕೋಲಾದೆ, ಈ ಪದಗಳು ಈ ಸಂಧಿಗೆ ಉದಾಹರಣೆಯಾಗಿವೆ.
(ಎ). ಆಗಮ (ಬಿ) ಆದೇಶ (ಸಿ) ಗುಣ (ಡಿ) ಲೋಪ
9. 'ನೆರಳಿಗೆ' ಈ ಪದದಲ್ಲಿ ಬಂದಿರುವ ವಿಭಕ್ತಿ
(ಎ) ಚತುರ್ಥಿ (ಬಿ) ಪ್ರಥಮ (ಸಿ) ತೃತೀಯ (ಡಿ) ಷಷ್ಠಿ
10. 'ಬಿದಿರಿನ' ಈ ಪದದಲ್ಲಿರುವ ವಿಭಕ್ತಿ ಪ್ರತ್ಯಯ
(ಎ) ಅನ್ನು (ಬಿ) ಅಲ್ಲಿ (ಸಿ) ಅ (ಡಿ) ಇ
11. 'ಜನ್ಮ' ಪದದ ತದ್ಭವ ರೂಪ
(ಎ) ಜನ್ನ (ಬಿ) ಜನುಮ (ಸಿ) ಜನ (ಡಿ) ರನ್ನ
12. `ನಿತ್ಯ' ಪದದ ತದ್ಭವ ರೂಪ
(ಎ) ಪ್ರತಿದಿನ (ಬಿ) ಕರ್ಮ (ಸಿ) ನಿಜ (ಡಿ) ನಿಚ್ಚ

II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ. (ಗ್ರಹಿಕೆ – ಸಾಧಾರಣ)

13. ಹಿಂದೂ: ಮುಂದು :: ಹಿರಿದು: ______
14. ಮಾತಿಲ್ಲದವನ: ಲೋಪ ಸಂಧಿ :: ಕರುಣವಿಲ್ಲದವನ :______
15. ಮನುಷ್ಯನ: ಷಷ್ಠಿ ವಿಭಕ್ತಿ :: ಮುದುಕರಿಗೆ:____
16. ಪತ್ರ : ಎಲೆ ::ಚಕ್ಕಡಿ: ______
17. ಹುಟ್ಟು : ಸಾವು :: ಮಿತ್ರ: ______
18. ಬಹುಪಾಡ : ಬಹಳ ಕಷ್ಟ ::ದಿವಿನಾಗು: ___
19. ಮೊರ :ಕೇರುವ ಸಾಧನ :: ಕೂಡಿಗೆ: ______
20. ಸಾಧು ಸತ್ಪುರುಷ : ಜೋಡಿ ನುಡಿ :: ಬೆಳೆಬೆಳೆ:____
21. ನಿತ್ಯ :ಅನಿತ್ಯ :: ಸತ್ಯ: _____

III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. (ಸ್ಮರಣೆ – ಸುಲಭ)

22. ಯಾರ ಸ್ನೇಹವೂ ಸಾಯುವ ತನಕ ಬೇಡ ಎಂದಿದ್ದಾರೆ?

23. ಯಾರ ಸ್ನೇಹವನ್ನು ಮಾಡಿ ಕೆಡಬಾರದು?
24. ತತ್ವಪದಕಾರರು ಯಾರ ಸೇವೆ ಮಾಡಬೇಕು ಎಂದಿದ್ದಾರೆ?
25. ಬಿದಿರು ಹೇಗೆ ಬೆಳೆಯುತ್ತದೆ?
26. ಬಿದಿರಿನ ಚಪ್ಪರವು ಏನನ್ನು ಕೊಡುತ್ತದೆ?
27. ಬಿದಿರು ಶಿಶುನಾಳಧೀಶನಿಗೆ ಏನಾಗುತ್ತದೆ?
28. ಕರ್ನಾಟಕದ ಕಬೀರರೆಂದು ಹೆಸರು ಗಳಿಸಿದವರು ಯಾರು?
29. ಕಡಕೋಳ ಮಡಿವಾಳಪ್ಪ ಅವರ ಅಂಕಿತನಾಮವೇನು?
30. ಮಡಿವಾಳಪ್ಪ ಅವರ ತಂದೆ ತಾಯಿಯ ಹೆಸರೇನು?
31. ಶಿಶುನಾಳ ಶರೀಫರ ಬಾಲ್ಯದ ಹೆಸರೇನು?

IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. (ಗ್ರಹಿಕೆ – ಸಾಧಾರಣ)

32. ಬಿದಿರು ಮಕ್ಕಳಿಗೆ ರೈತರಿಗೆ ಮಹಾತ್ಮರಿಗೆ ಯಾವ ರೀತಿಯಲ್ಲಿ ಉಪಯೋಗವಾಗುತ್ತದೆ?
33. ಧಾನ್ಯಗಳನ್ನು ಕುಟ್ಟಲು, ಬೀಸಲು, ಕೇರಲು ಬಿದಿರು ಹೇಗೆ ಸಹಾಯಕವಾಗಿರುತ್ತದೆ?
34. ತತ್ವಪದಕಾರರು ಸ್ನೇಹ ಮಾಡುವ ಬಗೆಗೆ ಏನೆಂದು ತಿಳಿಸಿದ್ದಾರೆ?
35. 'ಗುರುಕರುಣೆ' ಪದ್ಯದ ಮೂರು, ನಾಲ್ಕನೆಯ ಚರಣದಲ್ಲಿ ಏನನ್ನು ಮಾಡಬಾರದೆಂದು ತತ್ವ ಸಾರಿದ್ದಾರೆ?

V. ಕೆಳಗಿನ ಕವಿಗಳ/ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. (ಸ್ಮರಣೆ – ಸುಲಭ)

36. ಕಡಕೋಳ ಮಡಿವಾಳಪ್ಪ
37. ಸಂತ ಶಿಶುನಾಳ ಶರೀಫ

VI. ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. (ಅಭಿವ್ಯಕ್ತಿ – ಸಾಧಾರಣ)

36. ಹೀನ ಮನುಷ್ಯರ ಸ್ನೇಹ ಮಾಡಿ ನೀನು ಕೆಡಲಿ ಬೇಡ.
37. ನಿತ್ಯ ಕಾಲದಲ್ಲಿ ಅಶನವ ಉಂಡು ಹೊತ್ತು ಬೆಳೆಯಬೇಡ.
38. ಮಹಾತ್ಮನ ಕೈಗೆ ಬೆತ್ತ ನಾನಾದೆ.
39. ಬೆಳೆ ಬೆಳೆಯುತ್ತ ದಿವಿನಾದೆ.

VII. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. (ಸ್ಮರಣೆ – ಸುಲಭ)

40. ಬೀಸುವ----------------

--------------------- ಬೆತ್ತವಾದೆ.

ಅಥವಾ

ಮಾತಿನೊಳಗ----------

---------------ಕೆಡಲಿಬೇಡ

VIII. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥ ಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. (ಪ್ರಶಂಸೆ – ಕಠಿಣ)

41. ಮಾತಿನೊಳಗೆ ಮಾತಿಲ್ಲದವನ ಸ್ನೇಹ
ಜಾತಿ ಜನ್ಮಕ ಬೇಡ
ಹೀನ ಮನುಷ್ಯರ ಸ್ನೇಹ ಮಾಡಿ
ನೀನು ಕೆಡಲಿಬೇಡ.

XI. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. (ಅಭಿವ್ಯಕ್ತಿ – ಕಠಿಣ)

43. ಗುರು ಕರುಣೆ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.
44. ಬಿದಿರು ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.
45. ಬಿದಿರಿನ ಉಪಯೋಗಗಳನ್ನು ಪಟ್ಟಿ ಮಾಡಿ.

7. ನಿನ್ನ ಮುತ್ತಿನ ಸತ್ತಿಗೆಯನಿತ್ತು ಸಲಹು - ರಾಘವಾಂಕ

I. ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. (ಸ್ಮರಣೆ – ಸುಲಭ)

1. ಷಟ್ಪದಿ ಪದ್ಯದಲ್ಲಿರುವ ಸಾಲುಗಳು
   (ಎ) ಮೂರು (ಬಿ) ನಾಲ್ಕು (ಸಿ) ಆರು (ಡಿ) ಹದಿನಾಲ್ಕು
2. ಷಟ್ಪದಿ ಪದ್ಯದ ಗಣಪ್ರಕಾರ
   (ಎ) ಮಾತ್ರಾ (ಬಿ) ಅಕ್ಷರ (ಸಿ) ಅಂಶ (ಡಿ) ಅಂಕ
3. ಷಟ್ಪದಿ ಪದ್ಯದಲ್ಲಿರುವ ವಿಧಗಳು
   (ಎ) ಐದು (ಬಿ) ಆರು (ಸಿ) ಏಳು (ಡಿ) ಎಂಟು
4. ಷಟ್ಪದಿಯಲ್ಲಿ ಈ ಪ್ರಾಸವು ನಿಯಮಿತವಾಗಿರುತ್ತದೆ.
   (ಎ) ಆದಿ (ಬಿ) ಒಳ (ಸಿ) ಮಧ್ಯ (ಡಿ) ಅಂತ್ಯ
5. ಷಟ್ಪದಿಯ ಮೂರು ಮತ್ತು ಆರನೇ ಸಾಲಿನ ಕೊನೆಯ ಅಕ್ಷರ
   (ಎ) ಲಘು (ಬಿ) ಗುರು (ಸಿ) ಯತಿ (ಡಿ) ಪ್ರಾಸ
6. ಷಟ್ಪದಿಯ ಒಂದು ಮತ್ತುಎರಡನೇ ಸಾಲುಗಳಿಗೆ ಸಮನಾಗಿರುವ ಸಾಲುಗಳು
   (ಎ) 2 ಮತ್ತು 3 (ಬಿ) 3 ಮತ್ತು 4 (ಸಿ) 4 ಮತ್ತು 5 (ಡಿ) 5 ಮತ್ತು 6

II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ. (ಗ್ರಹಿಕೆ – ಸಾಧಾರಣ)

7. ಷಟ್ಪದಿಯ ಮೊದಲ ಮೂರು ಸಾಲುಗಳು : ಪೂರ್ವಾರ್ಧ : : ಕೊನೆಯ ಮೂರು ಸಾಲುಗಳು : ________
8. ಭಾಮಿನಿ ಷಟ್ಪದಿ : 3, 4 ಮಾತ್ರೆಗಳು : : ವಾರ್ಧಕ ಷಟ್ಪದಿ : ________
9. ವರದ : UUU : : ಕನ್ನಡ : ________
10. ಹರವು : ಮೂರು ಮಾತ್ರೆಗಳು : ವರಕಾ : ________

III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. (ಸ್ಮರಣೆ – ಸುಲಭ)

11. ಹರಿಶ್ಚಂದ್ರನು ಕಾಡು ಹಂದಿಯನ್ನು ಹಿಂಬಾಲಿಸುತ್ತಾ ಯಾರ ಬನಕ್ಕೆ ಬಂದನು ?
12. ಹರಿಶ್ಚಂದ್ರನ ಗುರು ಯಾರು ?
13. ಗಾನರಾಣಿಯರು ಅವನೀಶನನ್ನು ನೋಡಲು ಬಂದದ್ದನ್ನು ಕವಿಯು ಯಾವುದಕ್ಕೆ ಹೋಲಿಸಿದ್ದಾನೆ ?
14. ಹರಿಶ್ಚಂದ್ರನು ಯಾರ ಆಜ್ಞೆಯನ್ನು ಮೀರಿದ ದುಃಖವನ್ನು ಮರೆತನು ?
15. ಗಾನರಾಣಿಯರಿಗೆ ಹರಿಶ್ಚಂದ್ರನು ಯಾವ ಬಹುಮಾನವನ್ನು ಕೊಟ್ಟನು ?
16. ಗಾನರಾಣಿಯರು ಹರಿಶ್ಚಂದ್ರನನ್ನು ಏನನ್ನು ಕೊಡು ಎಂದು ಕೇಳಿದರು ?
17. ಯುದ್ಧರಂಗದಲ್ಲಿ ಏನನ್ನು ನೋಡಿದರೆ ಶತ್ರುಗಳು ನಿಲ್ಲುವುದಿಲ್ಲ ?
18. ಸತ್ತಿಗೆಯ ನೆರಳಿನಲ್ಲಿ ಇರುವವನಿಗೆ ಯಾವುದೆಲ್ಲವು ಕಳೆದು ಹೋಗುತ್ತದೆ ಎಂದು ಹರಿಶ್ಚಂದ್ರನು ಹೇಳಿದನು?
19. ಹರಿಶ್ಚಂದ್ರನು ಯಾವುದಿಲ್ಲದೆ ತಂದೆತಾಯಿಯರು ಇಲ್ಲ ಎಂದನು ?
20. ಸತ್ತಿಗೆಯು ಯಾವಾಗ ದೈವಸ್ವರೂಪ ಎಂದು ಹರಿಶ್ಚಂದ್ರನು ಹೇಳುತ್ತಾನೆ ?

IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. (ಗ್ರಹಿಕೆ – ಸಾಧಾರಣ)

21. ವಿಶ್ವಾಮಿತ್ರನ ತಪೋಬಲದಿಂದ ಜನಿಸಿದ ಕನ್ಯೆಯರ ರೂಪ ಲಾವಣ್ಯ ಹೇಗಿತ್ತು ?
22. ಗಾನರಾಣಿಯರು ಏನೆಂದು ಹರಿಶ್ಚಂದ್ರನನ್ನು ಕೀರ್ತಿಸಿ ಹಾಡಿದರು ವಿವರಿಸಿ.
23. ಯಾವ ಸಮಯದಲ್ಲಿ ದೊರೆಯುವ ವಸ್ತುಗಳಿಂದ ಫಲವಿಲ್ಲ ಎಂದು ಗಾನರಾಣಿಯರು ಹೇಳುತ್ತಾರೆ ?
24. ಗಾನರಾಣಿಯರು ಯಾವ ಸಂದರ್ಭದಲ್ಲಿ ದೊರೆಯುವ ವಸ್ತುಗಳು ಸಂತೋಷವನ್ನು ತರುತ್ತವೆಂದು ಹೇಳುತ್ತಾರೆ?.
25. ಹರಿಶ್ಚಂದ್ರನು ಮುತ್ತಿನ ಸತ್ತಿಗೆಯನ್ನು ಏಕೆ ಕೊಡಲು ಸಾಧ್ಯವಿಲ್ಲ ಎಂದು ಹೇಳಿದನು ?
26. ಹರಿಶ್ಚಂದ್ರನು ಯಾವುದೆಲ್ಲವನ್ನು ಕೊಡುವ ಅತಿಶೂರರು ಈ ಜನರಲ್ಲಿ ಜನಿಸರು ಎಂದು ಗಾನರಾಣಿಯರಿಗೆ ಹೇಳುತ್ತಾನೆ ?
27. ಮುತ್ತಿನ ಸತ್ತಿಗೆಯ ವಿಶೇಷತೆ ಕುರಿತು ಹರಿಶ್ಚಂದ್ರನು ಏನು ಹೇಳಿದನು ?

V. ಕೆಳಗಿನ ಕವಿಗಳ/ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. (ಸ್ಮರಣೆ – ಸುಲಭ)

28. ರಾಘವಾಂಕ

VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ. (ಗ್ರಹಿಕೆ – ಸಾಧಾರಣ)

29. ಅನುನಯದೊಳೆಲ್ಲವಂ ಕೊಡಬಹುದು ಬಿಡಬಹುದು
ಜನನಿಯಂ ಜನಕನಂ ನಲ್ಲಳಂ ದೈವವಂ
ಮನವಾರೆ ನಂಬಿನಚ್ಚಿರ್ದ ಪರಿವಾರಮಂ ಕೊಡುವ ಬಿಡುವತಿಕಲಿಗಳು

30. ನೊಂದು ಮಾನಿಸರಾದರೋ ಕಮಲಜಂ ನೀಲ
ದಿಂದ ಮಾಡಿದ ಸಾಲಭಂಜಿಕೆಗಳೊದವಿ ಜೀ
ವಂದಳೆದವೋ ಎನಿಪ್ಪಂದದಿಂ ಬಂದರಂಗನೆಯರವನೀಶನೆಡೆಗೆ

VII . ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. (ಅಭಿವ್ಯಕ್ತಿ – ಸಾಧಾರಣ)

31. " ಸಂದ ಕಾರಿರುಳು ಕನ್ಯೆಯರು ಹಗಲಂ ನೋಡಲೆಂದು ಬಂದರೊ "
32. "ರಾಯಕಂಟಕ ರಾಯಜಗಜಟ್ಟಿ ರಾಯದಲ್ಲಣ ರಾಯಕೋಳಾಹಳ "
33. " ಸರ್ವಾಭರಣಮಂ ಗಾಣರಾಣಿಯರಿಗಿತ್ತನು ಹರಿಶ್ಚಂದ್ರನು "
34. " ಬಡತನದ ಹೊತ್ತಾನೆ ದೊರಕಿ ಫಲವೇನು "
35. " ನಿನ್ನ ಮುತ್ತಿನ ಸತ್ತಿಗೆಯನಿತ್ತು ಸಲಹು ಭೂಭುಜಯೆಂದರು "
36. " ಅನುನಯದೊಳೆಲ್ಲವಂ ಕೊಡಬಹುದು ಬಿಡಬಹದು "

VIII. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. (ಸ್ಮರಣೆ – ಸುಲಭ)

37. ಸಂದಕಾರಿರುಳು ________________________
____
____
____
____
______________________________ವನೀಶನೆಡೆಗೆ

38. ಬಡತನದ ________________________
____
____
____
____
______________________________ಮತ್ತಿಂತೆಂದರು

IX. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥ ಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. (ಪ್ರಶಂಸೆ – ಕಠಿಣ)

39. ರವಿಕುಲದ ಪೀಳಿಗೆಯೊಳೊಗೆದ ರಾಯರ್ಗೆ ಪ
ಟ್ಟವ ಕಟ್ಟುವಂದಿದಿಲ್ಲದಡರಸುತನ ಸಲ್ಲ
ದವನಿಯೊಳು ಯುದ್ಧರಂಗದೊಳಿದಂ ಕಂಡ ಹಗೆಗಳು ನಿಲ್ಲರಿದರ ಕೆಳಗೆ
ಕವಿವ ನೆಳಲೊಳಗಾವನಿರ್ದನಾತಂಗೆ ತಾಂ
ತವಿಲೆಡರು ಬಡತನಂ ರೋಗವಪಕೀರ್ತಿ ಪರಿ
ಭವ ಭಯಂ ಹರೆವುದಿದನರಿದರಿದು ಸತ್ತಿಗೆಯ ಕೊಡಬಹುದೆ ಹೇಳೆಂದನು

X. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. (ಅಭಿವ್ಯಕ್ತಿ – ಕಠಿಣ)

40. ಹರಿಶ್ಚಂದ್ರನು ನೀಡಿದ ಬಹುಮಾನವನ್ನು ತಿರಸ್ಕರಿಸಿ ಗಾನರಾಣಿಯರು ಹೇಳಿದ ಮಾತುಗಳನ್ನು ತಿಳಿಸಿ
41. ಹರಿಶ್ಚಂದ್ರ ಮತ್ತು ಗಾನರಾಣಿಯರ ನಡುವೆ ನಡೆದ ಸಂವಾದವನ್ನು ಸಂಗ್ರಹಿಸಿ ಬರೆಯಿರಿ.

8. ಕನ್ನಡ ನಾಡು ನುಡಿ - ಶ್ರೀ ವಿಜಯ, ನಯಸೇನ, ನೇಮಿಚಂದ್ರ, ಮಹಲಿಂಗರಂಗ, ಆಂಡಯ್ಯ

I. ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. (ಸ್ಮರಣೆ – ಸುಲಭ)

1. 'ಚದುರ' ಪದದ ತತ್ಸಮ ರೂಪ ಇದಾಗಿದೆ.

(ಎ) ಚದರ (ಬಿ) ಚದೂರ (ಸಿ) ಚತುರ (ಡಿ) ಚಧುರ

2. ಅಕ್ಷರ ಗಣದಲ್ಲಿರುವ ಒಟ್ಟು ಗಣಗಳ ಸಂಖ್ಯೆ

(ಎ) ನಾಲ್ಕು (ಬಿ) ಐದು (ಸಿ) ಏಳು (ಡಿ) ಎಂಟು

3. ಖ್ಯಾತ ಕರ್ನಾಟಕ ವೃತ್ತಗಳ ಸಂಖ್ಯೆ

(ಎ) ಐದು (ಬಿ) ಆರು (ಸಿ) ಮೂರು (ಡಿ) ಎಂಟು

4. 'ಉತ್ಪಲ ಮಾಲಾ ವೃತ್ತ'ದ ಒಂದು ಸಾಲಿನ ಅಕ್ಷರಗಳ ಸಂಖ್ಯೆ

(ಎ) ೨೧ (ಬಿ) ೨೨ (ಸಿ) ೨೦ (ಡಿ) ೧೮

5.' ಆರಯ' ಪದದ ಅರ್ಥ

(ಎ) ಪಾಲನೆ (ಬಿ) ಆಲಯ (ಸಿ) ಆದೇಶ (ಡಿ) ಗುಣ

6.'ಅಗ್ಗಳ' ಪದದ ಅರ್ಥ

(ಎ) ಕಡಿಮೆ (ಬಿ) ಶ್ರೇಷ್ಠ (ಸಿ) ಬಿದಿರು (ಡಿ) ಗಡಿಗೆ

7.'ಸಂಸ್ಕೃತ ಪದದ ತದ್ಭವ ರೂಪ

(ಎ) ಸಂಸದ (ಬಿ) ಸಂಸ್ಕೃತಿ (ಸಿ) ಸಕ್ಕದ (ಡಿ) ಸಂಸ್ಕಾರ

8. 'ಕಂದ' ಪದ್ಯದ ಒಟ್ಟು ಮಾತ್ರೆಗಳ ಸಂಖ್ಯೆ

(ಎ) ೪೬ (ಬಿ) ೬೪ (ಸಿ) ೧೦೨ (ಡಿ) ೧೪೪

9. 'ಚಂಪಕ ಮಾಲಾ ವೃತ್ತ'ದ ಒಂದು ಸಾಲಿನ ಅಕ್ಷರಗಳ ಸಂಖ್ಯೆ

(ಎ) ೨೧ (ಬಿ) ೨೨ (ಸಿ) ೨೦ (ಡಿ) ೧೮

10. 'ಲಲಿತ' ಪದದ ಅರ್ಥ

(ಎ) ಸುಂದರ (ಬಿ) ಹಾಡು (ಸಿ) ಬಳ್ಳಿ (ಡಿ) ಹೂ

II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂದದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ. (ಗ್ರಹಿಕೆ – ಸಾಧಾರಣ)

11. ತೈಲ : ಎಣ್ಣೆ :: ಘೃತ : __________

12. ಅ ಆ ಇ ಈ : ಸ್ವರಗಳು :: ಪ ಫ ಬ ಭ : __________

13. ಷಟ್ಪದಿಗಳು : ಮಾತ್ರಾಗಣ :: ವೃತ್ತಗಳು : __________

14. ಭಾಮಿನಿ ಷಟ್ಪದಿ : ೩, ೪, ೩, ೪ :: ಕಂದ : __________

III.ಈ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. (ಸ್ಮರಣೆ–ಸುಲಭ)

15. ತುಪ್ಪದೊಡನೆ ಯಾವುದನ್ನು ಬೆರೆಸಬಾರದು?

16. ಸುಲಿದ ಬಾಳೆಯ ಹಣ್ಣಿನಂತೆ ಸುಲಭವಾದ ಭಾಷೆ ಯಾವುದು?

17. 'ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣಿತ ಮತಿಗಳ್' ಎಂದವರು ಯಾರು?

18. 'ಶುದ್ಧ ಕನ್ನಡದೊಳ್ ಸಂಸ್ಕೃತವನ್ನು ಬೆರೆಸಬಾರದು' ಎಂದವರು ಯಾರು?

19. ಕನ್ನಡನಾಡಿನ ಪರಿಸರದಲ್ಲಿ ಏನೆಲ್ಲಾ ಬೆಳೆಯುತ್ತದೆ ಎಂದು ಆಂಡಯ್ಯ ಕವಿ ಹೇಳಿದ್ದಾರೆ?

IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. (ಗ್ರಹಿಕೆ – ಸಾಧಾರಣ)

20. ಕನ್ನಡಿಗರ ವಿಶೇಷತೆಯನ್ನು ಶ್ರೀ ವಿಜಯ ಹೇಗೆ ಸಾರಿದ್ದಾನೆ?

21.ಕನ್ನಡ ಮತ್ತು ಸಂಸ್ಕೃತ ಭಾಷಾ ಬಳಕೆಯ ಬಗ್ಗೆ ನಯಸೇನಾ ಏನು ಹೇಳುತ್ತಾನೆ?

22.-ಕನ್ನಡ ನುಡಿಯಲ್ಲೇ ಮೋಕ್ಷ ಸಾಧನೆ ಎಂದು ಕವಿ ಮಹಲಿಂಗರAಗ ಹೇಗೆ ಸಾಧಿಸುತ್ತಾನೆ?

V. ಕೆಳಗಿನ ಕವಿಗಳ/ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. (ಸ್ಮರಣೆ – ಸುಲಭ)

23. ಶ್ರೀ ವಿಜಯ
24. ನಯಸೇನ
25. ನೇಮಿಚಂದ್ರ
26. ಆಂಡಯ್ಯ
27. ಮಹಲಿಂಗರಂಗ

VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ. (ಗ್ರಹಿಕೆ – ಸಾಧಾರಣ)

28. ಮಲ್ಲಿಗೆಯಲ್ಲದೆ ಸಂಪಗೆ
ಯಲ್ಲದೆ ದಾಳಿಂಬಮಲ್ಲದೊಪ್ಪುವ ಚೆಂದಂ |

29. ಮುಟ್ಟುಗೆ ಮುಟ್ಟದಿರ್ಕೆ ಮುಗಿಲಂ ಹರನಂ ನರನೊತ್ತಿ ಗಂಟಲಂ |

VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ. (ಗ್ರಹಿಕೆ – ಸಾಧಾರಣ)

30. ಸುಲಿದ ಬಾಳೆಯ ಹಣ್ಣಿನಂದದಿ

VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯವನ್ನು ಬರೆಯಿರಿ. (ಅಭಿವ್ಯಕ್ತಿ – ಸಾಧಾರಣ)

31. ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿ ಸಂತತಿ
32. ಕಳಿದ ಸಿಗುರಿನ ಕಬ್ಬಿನಂದದಿ
33. ದಾಳಿಂಬಮಲ್ಲದೊಪ್ಪುವ ಚೆಂದಂ |

IX. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. (ಸ್ಮರಣೆ – ಸುಲಭ)

34. ಪದನರಿದು ______________
____
____
______________________ ಮತಿಗಳ್

(ಅಥವಾ)

ಮಲ್ಲಿಗೆ ______________
____
____
______________________ ನಾಡೊಳ್

X. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥ ಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. (ಪ್ರಶಂಸೆ – ಕಠಿಣ)

36. ಪದನರಿದು ನುಡಿಯಲುಂ ನುಡಿ
ದುದನರಿದಾರಯಲುಮಾರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುರಿತೋ
ದದೆಯಂ ಕಾವ್ಯ ಪ್ರಯೋಗ ಪರಿಣಿತ ಮತಿಗಳ್ ||

37.ಮಲ್ಲಿಗೆಯಲ್ಲದೆ ಸಂಪಗೆ
ಯಲ್ಲದೆ ದಾಳಿಂಬಮಲ್ಲದೊಪ್ಪುವ ಚೆಂದೆ||
ಗಲ್ಲದೆ ಮಾವಲ್ಲದೆ ಕೌಂ
ಗಲ್ಲದೆ ಗಿಡಮರಗಳೆಂಬುವಿಲ್ಲಾ ನಾಡೊಳ್ ||

XI. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. (ಅಭಿವ್ಯಕ್ತಿ – ಕಠಿಣ)

38. ಕನ್ನಡ ನಾಡಿನ ವಿಸ್ತಾರ, ಪ್ರಾಕೃತಿಕ ಸಂಪತ್ತಿನ ಬಗ್ಗೆ ಕವಿಗಳು ಹೇಗೆ ವರ್ಣಿಸಿದ್ದಾರೆ?
(ಅಥವಾ)
ಕನ್ನಡ ಭಾಷೆ ಹಾಗೂ ಸಾಹಿತ್ಯದ ಬಗ್ಗೆ ಕವಿಗಳಿಗಿರುವ ಅಭಿಮಾನ ಹೇಗೆ ವ್ಯಕ್ತವಾಗಿದೆ?

****

ಪಠ್ಯ ಪೋಷಕ ಅಧ್ಯಯನ

1. ಪುಟ್ಟ ಹಕ್ಕಿ - ಜಂಬಣ್ಣಅಮರಚಿಂತ

ಅ) ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. ಪುಟ್ಟಹಕ್ಕಿ ಹೇಗೆ ಗೂಡು ಕಟ್ಟುತ್ತದೆ **?**
2. ಪುಟ್ಟಹಕ್ಕಿ ಯಾವುದರ ವಿರುದ್ಧ ಯುದ್ಧ ಸಾರಿದೆ**?**
3. ಪುಟ್ಟಹಕ್ಕಿ ಹೇಗೆ ಜಳಕ ಮಾಡುತ್ತದೆ **?**
4. ಪುಟ್ಟಹಕ್ಕಿ ಸೂರ್ಯನನ್ನು ಹೇಗೆ ಸ್ವಾಗತಿಸುತ್ತದೆ **?**
5. ಪುಟ್ಟಹಕ್ಕಿ ಯಾರ ನಯನಾಂಬರದಲ್ಲಿ ಹಾರಲು ಸಾಧ್ಯವಿಲ್ಲ ಎಂದು ಕವಿ ಹೇಳಿದ್ದಾರೆ**?**
6. ಪುಟ್ಟಹಕ್ಕಿಗೆ ಭೂಮಿಯಲ್ಲಿ ಹಾರಲು ಯಾರ ಭಯವಿದೆ **?**
7. ಪುಟ್ಟಹಕ್ಕಿ ಜಗದಂಗಳದಲ್ಲಿ ಹೇಗೆ ಹಾರುತ್ತದೆ **?**

****

2. ಚೆನ್ನಾಭೈರಾದೇವಿ- ಗಜಾನನ ಶರ್ಮ

ಅ) ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. ಚೆನ್ನಾಭೈರಾದೇವಿಯ ಆಡಳಿತವಿದ್ದ ಪ್ರಾಂತ್ಯಗಳು ಯಾವುವು?
2. ಚೆನ್ನಾಭೈರಾದೇವಿಗೆ ಉದ್ಧಟತನದ ಪತ್ರ ಬರೆದವನು ಯಾರು?
3. ಪೋರ್ಚುಗೀಸರು ಚೆನ್ನಾಭೈರಾದೇವಿಗೆ ನೀಡಿದ ಬಿರುದು ಯಾವುದು?
4. ಪೋರ್ಚುಗೀಸರು ಹಡಗಿನ ಮೂಲಕ ಎಲ್ಲಿಗೆ ದಾಳಿ ಮಾಡಲು ಸಜ್ಜಾಗಿದ್ದರು?
5. ಚೆನ್ನಾಭೈರಾದೇವಿಯ ರಾಯಭಾರಿಯ ಹೆಸರೇನು?
6. ಚೆನ್ನಾಭೈರಾದೇವಿಯು ಕಾಡಿನ ಮಧ್ಯೆ ಕಟ್ಟಿದ ಕೋಟೆಯ ಹೆಸರೇನು?
7. ಸಮುದ್ರಯುದ್ಧದಲ್ಲಿ ಪೋರ್ಚುಗೀಸರನ್ನು ಗೆಲ್ಲುವುದು ಯಾಕೆ ಕಷ್ಟ ಸಾಧ್ಯ?
8. ಚೆನ್ನಾಭೈರಾದೇವಿಗೆ ಬುದ್ಧಿ ಕಲಿಸಬೇಕೆಂದು ಪೋರ್ಚುಗೀಸರು ಹೊನ್ನಾವರವನ್ನು ಏನು ಮಾಡಲು ಹೊರಟಿದ್ದರು?
9. ಚೆನ್ನಾಭೈರಾದೇವಿ ದಟ್ಟಕಾಡಿನ ಮಧ್ಯೆ ಏಕೆ ಕೋಟೆ ಕಟ್ಟಿಕೊಂಡಿದ್ದಳು?

10. ಪೋರ್ಚುಗೀಸರು ಯುದ್ಧಕ್ಕೆ ಸಿದ್ಧವಾಗಿದ್ದ ಎರಡು ಉದ್ದೇಶಗಳು ಯಾವುವು?

11. ಲೂಯಿಸ್ ಅಟಾಯಿಡೆ ಪತ್ರದಲ್ಲಿ ಚೆನ್ನಾಭೈರಾದೇವಿಗೆ ಏನೆಂದು ಬರೆದಿದ್ದನು?

****

3. ಸಿರಿಯನಿನ್ನೇನ ಬಣ್ಣಿಪೆನು - ರತ್ನಾಕರ ವರ್ಣಿ

I. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. ಭರತೇಶ ವೈಭವ ಕಾವ್ಯದ ಕರ್ತೃ ಯಾರು ?

2. ಭರತನನ್ನು ಹೊಗಳುತ್ತಿದ್ದ ಮೂರು ಲೋಕಗಳು ಯಾವುವು?

3. ಭರತ ಚಕ್ರವರ್ತಿ ಓಲಗಕ್ಕೆ ಹೇಗೆ ಬರುತ್ತಾನೆ?

4.ಆಸ್ಥಾನ ಭವನದೊಳಗೆ ರಾಜನು ಹೇಗೆ ಶೋಭಿಸುವನು?

5. ತುಂಬಿದ ಸಭೆಯು ಮೈಮರೆತು ಕಾತುರರಾಗಿದ್ದಕ್ಕೆ ಕಾರಣವೇನು?

6. ಧ್ಯಾನ ಬೇಸರಾದಾಗ ಏನು ಮಾಡುತ್ತೇನೆಂದು ಕವಿ ಹೇಳುತ್ತಾರೆ?

7. ಬೇರೆಬೇರೆ ಭಾಷಿಕರು ತನ್ನ ಕೃತಿಯನ್ನು ಹೇಗೆ ಹೋಗಳಬೇಕೆಂದು ಕವಿ ಬಯಸುವರು?

8. ಭರತಚಕ್ರವರ್ತಿ ಓಲಗಮಂಟಪವನ್ನೇರಿದ ಸಂದರ್ಭವನ್ನು ಬಣ್ಣಿಸಿ.

****

4. ನನ್ನಾಸೆ - ಇಂದುಮತಿ ಲಮಾಣಿ

ಅ) ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. ಅಜ್ಞಾನ ತೊಲಗಿಸಲು ಕವಯಿತ್ರಿ ಏನಾಗ ಬಯಸಿದ್ದಾರೆ**?**
2. ಸದಾ ಚಿಮ್ಮುವ ಚಿಲುಮೆಯಾಗಬೇಕು ಏಕೆ**?**
3. ಕವಯತ್ರಿ ಯಾರಿಗೆ ನೆರಳಾಗ ಬಯಸಿದ್ದಾರೆ **?**
4. ಅಳುವ ಕಂದನ ನಗಿಸಲು ಕವಯತ್ರಿ ಏನಾಗ ಬಯಸಿದ್ದಾರೆ **?**
5. ಕವಯತ್ರಿ ದಾಹಗೊಂಡವರ ತನುವ ತಣಿಸಲು ಏನಾಗ ಬೇಕೆಂದಿದ್ದಾರೆ **?**
6. ಕವಯತ್ರಿಯು ಹೇಗೆ ತನ್ನ ಅಂತ್ಯವಾಗ ಬಯಸಿದ್ದಾರೆ **?**
7. ನನ್ನಾಸೆ ಕವನದಲ್ಲಿ ಕವಯತ್ರಿಯ ಆಸೆಗಳೇನು**?**

****

5. ಉರಿದ ಬದುಕು - ಶಾಂತರಸ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ತಿಪ್ಪಣ್ಣನು ಏಕೆ ಸಿಟ್ಟುಗೊಂಡನು**?**
2. ತಿಪ್ಪಣ್ಣನು ಯಾರನ್ನು ಕೊಲ್ಲಲು ನಿರ್ಧರಿಸಿದ್ದನು**?**
3. ತಿಪ್ಪಣ್ಣ ತನ್ನ ತಂಗಿಯ ಮನೆಯಲ್ಲಿ ಎಷ್ಟು ತಾಸು ಇರುತ್ತೇನೆಂದು ಹೇಳಿದನು**?**
4. ಅನ್ನವ್ವ ತನ್ನ ಅಣ್ಣನಿಗೆ ತಿನ್ನಲು ಏನನ್ನು ತಂದು ಕೊಟ್ಟಳು**?**
5. ಬಾಗಿಲು ತೆರೆದ ವ್ಯಕ್ತಿಯ ಹೆಸರೇನು**?**
6. ಪೊಲೀಸರೂ**,** ರಜಾಕಾರರೂ ಹೆದರುವಷ್ಟು ಸಾಹಸ ಮಾಡಿದ ವ್ಯಕ್ತಿಗಳು ಯಾರು**?**
7. ಶಂಕ್ರಣ್ಣನ ವೃತ್ತಿ ಯಾವುದು**?**
8. ಶಂಕ್ರಣ್ಣ ಯಾರ ಜೊತೆ ತಿರುಗಾಡಲು ಪ್ರಾರಂಭಿಸಿದ್ದನು**?**
9. ಶಂಕ್ರಣ್ಣನನ್ನು ರಕ್ಷಿಸಿದವರು ಯಾರು**?**
10. ಶಂಕ್ರಣ್ಣ ಮತ್ತು ಆತನ ಜೊತೆಗಾರರ ಆಶ್ರಯ ತಾಣ ಯಾವುದು**?**
11. ತಿಪ್ಪಣ್ಣನನ್ನು ಗಪ್ಪನೆ ಬಲವಾಗಿ ಹಿಡಿದುಕೊಂಡವರು ಯಾರು**?**
12. ದುರ್ಗಪ್ಪ ಯಾರು**?**
13. ದುರ್ಗಪ್ಪನು ಯಾರ ಒಂದೆರಡು ವಚನಗಳನ್ನು ಹೇಳಿದನು**?**

14. ದುರ್ಗಪ್ಪನು ಶಂಕ್ರಣ್ಣನಿಗೆ ತಿನ್ನಲು ಏನನ್ನು ತಂದುಕೊಟ್ಟನು**?**

II **ಈ ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ**?

15. ಅನ್ನವ್ವ ತನ್ನ ಅಣ್ಣನನ್ನು ಮನೆಯ ಒಳಗೆ ಸೇರಿಸಿಕೊಳ್ಳಲಿಲ್ಲ ಏಕೆ**?**
16. ಅನ್ನವ್ವ ತನ್ನ ಅಣ್ಣನಿಗೆ ಗಂಡನ ಬಗ್ಗೆ ಏನೆಂದು ಹೇಳಿದಳು**?**
17. ತಿಪ್ಪಣ್ಣ ತನ್ನ ತಂಗಿಯ ಮನೆಯಿಂದ ಹೊರಟಾಗ ಆತನ ಮನದಲ್ಲಿ ಮೂಡಿದ ಭಾವನೆಗಳೇನು**?**
18. ಶಂಕ್ರಣ್ಣನು ತಿಪ್ಪಣ್ಣನ ಹೆಗಲ ಮೇಲೆ ಕೈ ಹಾಕಿ ಕರೆತಂದಾಗ ಆತನ ಮನದಲ್ಲಿ ಮೂಡಿದ ಭಾವನೆಗಳೇನು**?**
19. ಬಾಗಿಲು ತೆರೆದ ವ್ಯಕ್ತಿ ನೋಡಲು ಹೇಗೆ ಕಾಣುತ್ತಿದ್ದನು **?**
20. ಕೋಣೆ ನೋಡಿದ ತಿಪ್ಪಣ್ಣನ ಮನದಲ್ಲಿ ಉಂಟಾದ ಪ್ರಶ್ನೆಗಳಿಗೆ ಶಂಕ್ರಣ್ಣ ಹೇಗೆ ಉತ್ತರಿಸಿದನು**?**
21. ಬೆಟ್ಟೂರ ಗೌಡ್ರು ಯಾವ ರೀತಿಯ ಹೆಸರು ಮಾಡಿದ್ದರು**?**
22. ಶಂಕ್ರಣ್ಣನಿಗೆ ರಜಾಕಾರರು ಹೇಗೆ ಶಿಕ್ಷಿಸಿದರು**?**
23. ಶಂಕ್ರಣ್ಣನಿಗೆ ಸಹಾಯಮಾಡಲು ಯಾರೂ ಬರಲಿಲ್ಲ.ಏಕೆ**?**
24. ದುರ್ಗಪ್ಪನ ದೈನಂದಿನ ಕೆಲಸಗಳೇನು**?**
25. ಅರ್ಧ ಬಾಗಿಲು ತೆಗೆದು ಅನ್ನವ್ವ ತಿಪ್ಪಣ್ಣನಿಗೆ ಏನೆಂದು ಹೇಳಿದಳು.**?**
26. ದುರ್ಗಪ್ಪನು ಶಂಕ್ರಣ್ಣನಿಗೆ ಕುಲದ ಬಗೆಗೆ ಹೇಳಿದ ನೀತಿ ಮಾತುಗಳಾವುವು**?**
27. ದುರ್ಗಪ್ಪನ ಯಾವ ಮಾತುಗಳು ಹೋರಾಟಗಾರರ ಕೈಕಾಲು ಉಕ್ಕಿನಂಗೆ ಆಗುವಂತೆ ಮಾಡುತ್ತಿದ್ದವು?

****

6. ಗುಣಸಾಗರಿ ಪಂಢರಿಬಾಯಿ - ಡಾ. ಜಯಮಾಲ.

I. ಈ ಕೆಳಗಿನಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

1. ಪಂಢರಿಬಾಯಿಯವರು ಎಲ್ಲಿ ಜನಿಸಿದರು**?**
2. ಪಂಢರಿಬಾಯಿಯವರ ತಂದೆತಾಯಿಯ ಹೆಸರೇನು**?**
3. ಪಂಢರಿಬಾಯಿಯವರ ಬಾಲ್ಯದಹೆ ಸರೇನು**?**
4. ಪಂಡರಿಬಾಯಿಯವರ ಕುಟುಂಬವು ಭಟ್ಕಳದಿಂದ ಎಲ್ಲಿಗೆ ಸ್ಥಳಾಂತರಗೊಂಡಿತು?
5. ವಿಮಲಾನಂದರು ಸ್ಥಾಪಿಸಿದ್ದ ನಾಟಕ ಕಂಪನಿ ಯಾವುದು**?**
6. ಪಂಢರಿಬಾಯಿಯವರು ಮೊದಲು ಬಣ್ಣ ಹಚ್ಚಿದ ನಾಟಕ ಯಾವುದು**?**
7. ಪಂಢರಿಬಾಯಿಯವರು ನಟಿಸಿದ ಮೊದಲ ಚಿತ್ರದ ಹೆಸರೇನು**?**
8. 'ವಾಣಿ' ಚಿತ್ರದಲ್ಲಿ ನಟಿಸಲು ಅವಕಾಶ ನೀಡಿದವರು ಯಾರು**?**
9. ವಿಮಲಾನಂದರ ಗೆಳೆಯ ಯಾರು**?**
10. ಎ.ವಿ.ಎಂ. ಸ್ಟುಡಿಯೋದ ಮಾಲೀಕರು ಯಾರು**?**
11. 'ಗುಣಸಾಗರಿ' ಸಿನಿಮಾದ ನಾಯಕ ನಟಯಾರು**?**
12. ಜನರ ಮನಸ್ಸಿನಲ್ಲಿ ಪಂಢರಿಬಾಯಿಯವರು ಯಾವ ಹೆಸರಿನಿಂದ ಉಳಿದುಕೊಂಡಿದ್ದಾರೆ**?**
13. ಪಂಢರಿಬಾಯಿಯವರು ಸ್ಥಾಪಿಸಿದ ನಾಟಕ ಕಂಪನಿಯ ಹೆಸರೇನು**?**
14. ಪಂಢರಿಬಾಯಿ ಅವರ ಪತಿಯ ಹೆಸರೇನು**?**
15. ಪಂಢರಿಬಾಯಿಯವರ ಬಹುದೊಡ್ಡ ಗೌರವ ಯಾವುದು**?**
16. ಪಂಢರಿಬಾಯಿಯವರು ಯಾವಾಗ ನಿಧನರಾದರು**?**

II. ಈ ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

17. ಗುಣಸಾಗರಿ ಪಂಢರಿಬಾಯಿಯ ವ್ಯಕ್ತಿತ್ವವನ್ನು ತಿಳಿಸಿ.
18. ಪಂಢರಿಬಾಯಿಯವರ ಹೆಸರು ಬದಲಾವಣೆಗೆ ಕಾರಣವೇನು**?**
19. ಪಂಢರಿಬಾಯಿಯವರು ನಾಟಕದಲ್ಲಿ ಬಣ್ಣಹಚ್ಚಲು ಕಾರಣವೇನು**?**
20. ಪಂಢರಿಬಾಯಿಯವರು ಕಲಾವಿದೆಯಾಗಿ ರೂಪುಗೊಳ್ಳಲು ಸಹಕರಿಸಿದ ಅಂಶಗಳು ಯಾವುವು**?**
21. ರಂಗಭೂಮಿಯಲ್ಲಿನ ಪಂಢರಿಬಾಯಿಯವರ ಸಾಧನೆಯನ್ನು ತಿಳಿಸಿ.
22. ಚಿತ್ರರಂಗದಲ್ಲಿ ಪಂಢರಿಬಾಯಿಯವರ ಸಾಧನೆಯನ್ನು ತಿಳಿಸಿ.

23. ಪಂಢರಿಬಾಯಿಯವರು ನಟಿಸಿರುವ ಪ್ರಮುಖ ಚಲನಚಿತ್ರಗಳು ಯಾವುವು**?**
24. ಪಂಢರಿಬಾಯಿಯವರಿಗೆ ದೊರಕಿರುವ ಪ್ರಮುಖ ಪ್ರಶಸ್ತಿಗಳು ಯಾವುವು**?**
25. ಪಂಢರಿಬಾಯಿಯವರು ಕಲಾರಸಿಕರ ಮನಸಿನಲ್ಲಿ ಹೇಗೆ ಅಮರರಾಗಿ ಉಳಿದಿದ್ದಾರೆ**?**

****

ಅಪಠಿತ ಗದ್ಯ.1

ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, **ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ**.
೧. ಇಂದು ಯುರೋಪ್, ಅಮೆರಿಕಾ, ಆಸ್ಟ್ರೇಲಿಯಾ, ಜಪಾನ್‌ಗಳಲ್ಲಿ ಹಿಂದೆಂದಿಗಿಂತ ಹೆಚ್ಚಿನ ಜನಜಾಗೃತಿಯ ಕಾರ್ಯಕ್ರಮಗಳು ನಡೆಯುತ್ತಿವೆ. ಜೂನ್೫ರ ವಿಶ್ವಪರಿಸರ ದಿನಾಚರಣೆಯ ಜೊತೆಗೆ ಅವರ ಏಪ್ರಿಲ್ ೨೨ರಂದು ಭೂದಿನ ಆಚರಿಸುತ್ತಾರೆ. ಏಪ್ರಿಲ್ ೨೬ರಂದು 'ಚರ್ನೋಬಿಲ್ಲಿನ ದಿನ' ಆಗಸ್ಟ್ ೬ರಂದು 'ಹಿರೋಶಿಮಾ ದಿನ' , ಡಿಸೆಂಬರ್ ೩ರಂದು 'ಭೂಪಾಲ ದಿನ' ... ಹೀಗೆ ಭೂಮಿಗೆ ಆಪತ್ತು ಬಂದ ದಿನಗಳನ್ನೆಲ್ಲಾ ನೆನೆಪಿಸುವ ಹಾಗೂ ಜನರನ್ನು ಜಾಗೃತರನ್ನಾಗಿ ಮಾಡುವ ಕಾರ್ಯಕ್ರಮಗಳಲ್ಲಿ ಎಂದಿಗಿಂತ ಹೆಚ್ಚಿನ ಸಂಖ್ಯೆಯ ಜನ ಭಾಗವಹಿಸುತ್ತಾರೆ. ಎಷ್ಟೋ ಬಾರಿ ಇಂಥ 'ದಿನಾಚರಣೆಗಳಿಗಾಗಿ ಕಾಯದೇ, ಅವಕಾಶ ಬಂದಾಗಲೆಲ್ಲ ಒಂದು ಗೂಡುತ್ತಾರೆ. ಮತ್ತೆ ಅಲ್ಲಿನವರು ಹಾಕಿಕೊಳ್ಳುವ ಕಾರ್ಯಕ್ರಮಗಳು ತೀರ ವಿಶಿಷ್ಟವಾಗಿರುತ್ತದೆ. 'ಗ್ರೀನ್ಪೀಸ್' ನಂತಹ ಪೃಥ್ವಿರಕ್ಷಣಾ ಯೋಧರ ಕೆಚ್ಚೆದೆಯ ಸಾಹಸಗಳನ್ನಂತೂ ಬಿಡಿ; ದಟ್ಟಹೊಗೆ ಕಾರುವ ಕಾರ್ಖಾನೆಗಳ ಚಿಮಣಿಗಳ ಮೇಲೆ ಹತ್ತಿ 'ಶುದ್ಧ ಗಾಳಿ ನಮ್ಮೆಲ್ಲರ ಹಕ್ಕು' ಎಂದು ಘೋಷಣೆ ಬರೆಯುತ್ತಾರೆ. ಹೆಮ್ಮರಗಳನ್ನು ಕಡಿದು ಸಾಗಿಸುವ ಕಾಡಿನ ರಸ್ತೆಯಲ್ಲಿ ಹೊಂಡ ತೋಡಿ, ತಮಗೆ ತಾವೇ ಆನೆ ಸರಪಳಿ ಬಿಗಿದು, ಬೀಗ ಹಾಕಿ ಕೂತು ಬಿಡುತ್ತಾರೆ. ಅಂದದ ತುಪ್ಪಳಕ್ಕೆಂದು ಮುದ್ದು ಸೀಲ್ಪ್ರಾಣಿಗಳ ನೆತ್ತಿಯ ಮೇಲೆ ದೊಣ್ಣೆಯಿಂದ ಠಪ್ಪೆಂದು ಕುಟ್ಟಿಕೊಲ್ಲುವ ದುಷ್ಟರ ವಿರುದ್ಧ ಈ ಯೋಧರ ಉಪಾಯವೇನು ಗೊತ್ತೆ? ಅವರಿಗಿಂತ ಮೊದಲೇ ಇವರು ಹಿಮ ಪ್ರಾಂತ್ಯಕ್ಕೆ ಹೋಗಿ, ಸೀಲ್ಪ್ರಾಣಿಗಳ ಮೇಲೆ ಎನಾಮಲ್ಬಣ್ಣ ಸುರಿದು ಅವುಗಳ ಚರ್ಮದ ಅಂದಗೆಡಿಸಿ ಬರುತ್ತಾರೆ. ಕಾರ್ಖಾನೆಗಳು ಕೊಳವೆಯ ಮೂಲಕ ಕೊಳೆಯನ್ನುಆಳ ಸಮುದ್ರಕ್ಕೆ ಹರಿಬಿಡುತ್ತಿದ್ದರೆ ಗ್ರೀನ್ಪೀಸ್‌ನ ಮುಳುಗುವೀರರು ಆ ಕೊಳವೆಯ ಬಾಯಿಯನ್ನು ನೀರಿನೊಳಗೆ ಕಟ್ಟಿ ಬರುತ್ತಾರೆ. ಹೀಗೆ ಜೀವವನ್ನೇ ಪಣಕ್ಕಿಟ್ಟು ಗಾಂಧೀಜಿಯವರ ಮಾದರಿಯ ಅಹಿಂಸಾತ್ಮಕ ಸೆಣಸಾಟ ನಡೆಸುತ್ತಾರೆ.
ಪ್ರಶ್ನೆಗಳು :
(ಅ) **ಪರಿಸರ ಸಂರಕ್ಷಣೆಯಲ್ಲಿ ಗ್ರೀನ್ಪೀಸ್ ಯೋಧರು ಹೇಗೆ ಸೆಣಸಾಟ ನಡೆಸುತ್ತಾರೆ**?
(ಬ) **ಯುರೋಪ್**, **ಅಮೆರಿಕಾಗಳಲ್ಲಿ ಆಚರಿಸುವ ದಿನಾಚರಣೆಗಳ ಕುರಿತು ಬರೆಯಿರಿ**.

2. ಬಸಯ್ಯ ಕಡು ಬಡತನದ ಯುವಕ. ಅವನಿಗೆ ರೈತನಾಗಬೇಕೆಂಬ ಬಯಕೆ. ತಂದೆಯಿಂದ ಬಂದ ಎರಡು ಎಕರೆ ಭೂಮಿಯಿತ್ತು. ಅದೂ ಬಂಜರು, ಗುಡ್ಡಗಳಿಂದ ಕೂಡಿದ ಭೂಮಿ. ನೀರಾವರಿ ಸೌಲಭ್ಯಗಳಿಲ್ಲ. ಆದರೂ ಸಾಧಿಸುವ ಛಲವಿತ್ತು. ತನ್ನ ಭೂಮಿಯಲ್ಲಿದ್ದ ಗಿಡಗಂಟಿಗಳನ್ನು ತೆಗೆದ. ಅಲ್ಲಲ್ಲಿ ಇದ್ದ ಸಣ್ಣ ಪುಟ್ಟ ಬಂಡೆಗಲ್ಲುಗಳನ್ನು ಒಡೆಸಿ ಹೊರಹಾಕಿದ. ನೇಗಿಲಿನಿಂದ ಉಳುಮೆ ಮಾಡಿದ. ಕೊಟ್ಟಿಗೆ ಗೊಬ್ಬರ ಹಾಕಿ ಭೂಮಿಯನ್ನು ಹದ ಮಾಡಿದನು.
ಮಳೆಗಾಲದಲ್ಲಿ ತನ್ನ ಭೂಮಿಯ ಪಕ್ಕದಲ್ಲಿ ವ್ಯರ್ಥವಾಗಿ ಹರಿದು ಹೋಗುವ ನೀರನ್ನು ಕಂಡನು. ಸರ್ಕಾರದಿಂದ ಹಣ ಸಹಾಯ ಪಡೆದು ಹೊಂಡ ತೆಗೆಸಿದ. ಮಳೆನೀರನ್ನು ಸಂಗ್ರಹಿಸಿದ. ಕೃಷಿ ಅಧಿಕಾರಿಗಳ ಜೊತೆ ಚರ್ಚಿಸಿದ. ಸಂಗ್ರಹಿಸಿದ ಮಳೆ ನೀರಿಗೆ ಹನಿ ನೀರಾವರಿ ಅಳವಡಿಸಿದನು. ವಿವಿಧ ಬೆಳೆ ಪದ್ಧತಿ ಅಳವಡಿಸಿಕೊಂಡನು. ದಾಳಿಂಬೆ, ಸಪೋಟ, ತೆಂಗು, ಹೂಬೆಳೆಗಳನ್ನು ಬೆಳೆದನು. ಅಧಿಕ ಇಳುವರಿ ಪಡೆದನು. ಸುತ್ತಮುತ್ತಲಿನ ರೈತರು ಇವನ ಸಾಹಸ ಕಂಡು ಬೆರಗಾದರು. ಬಸಯ್ಯನ ಸಾಧನೆ ಕಂಡು ಸರ್ಕಾರ 'ಕೃಷಿ ಪಂಡಿತ' ಪ್ರಶಸ್ತಿ ನೀಡಿ ಗೌರವಿಸಿತು.
ಪ್ರಶ್ನೆಗಳು :
ಅ) ಬಸಯ್ಯ ಭೂಮಿಯನ್ನು ಹೇಗೆ ಹದಗೊಳಿಸಿದನು?
ಆ) ಬಸಯ್ಯ ಹೇಗೆ ಅಧಿಕ ಇಳುವರಿ ಪಡೆದನು?

3. ಕೆಲವು ದಿನಗಳ ತರುವಾಯ ರಂಗಣ್ಣ ಸ್ಕೂಲುಗಳ ಭೇಟಿಗೆಂದು ಹೊರಟ. ತಿಪ್ಪೇನಹಳ್ಳಿಯ ಮೇಷ್ಟ್ರು ನಿಜವಾಗಿಯೂ ರೂಲ್ಸಿಗೆ ವಿರುದ್ಧವಾಗಿ ನಡೆಯುತ್ತಿದ್ದಾನೆಯೇ? ಇನ್ನೂ ಇತರರು ಯಾರು ಹಾಗೆ ದಾಖಲೆಯಿಲ್ಲದ ಮಕ್ಕಳನ್ನು ಸೇರಿಸಿಕೊಂಡಿದ್ದಾರೆ? ನೋಡೋಣ ಎಂದು ಆಲೋಚಿಸುತ್ತ ತಿಪ್ಪೇನಹಳ್ಳಿಗೆ ಸುಮಾರು ಒಂಬತ್ತು ಗಂಟೆ ಹೊತ್ತಿಗೆ ಹೋದ. ರಂಗಣ್ಣ ಬೈಸ್ಕಲ್ಲಿಂದ ಇಳಿದು, ಅದನ್ನು ಗೋಡೆಗೆ ಒರಗಿಸಿದನು. ಮೇಷ್ಟ್ರು ವೆಂಕಣ್ಣ ಭಯದಿಂದ ನಡುಗುತ್ತ ಹೊರಕ್ಕೆ ಬಂದು ನಮಸ್ಕಾರ ಮಾಡಿದನು. ಪಾಠ ಶಾಲೆಯ ಗೋಡೆಗೆ ನೋಟಿಸ್ ಬೋರ್ಡ್ ಒಂದನ್ನು ತಗಲು ಹಾಕಿತ್ತು. ನೋಟಿಸು ಬೋರ್ಡ್ನ ಮೇಲೆ (೧) ಮಕ್ಕಳು ಸರಿಯಾದ ಹೊತ್ತಿಗೆ ಬರಬೇಕು. (೨) ಪಾಠಕಾಲದಲ್ಲಿ ಗ್ರಾಮಸ್ಥರು ಒಳಕ್ಕೆ ಬರಬಾರದು. (೩) ದಾಖಲೆಯಿಲ್ಲದ ಮಕ್ಕಳನ್ನು ಒಳಕ್ಕೆ ಸೇರಿಸುವುದಿಲ್ಲ. (೪) ಸ್ಕೂಲಿನ ಒಪ್ಪಾರದಲ್ಲಿ ಗ್ರಾಮಸ್ಥರು ಕುಳಿತು ಗಲಾಟೆ ಮಾಡಕೂಡದು ಎಂದು ದಪ್ಪಕ್ಷರಗಳಲ್ಲಿ ಬರೆದಿತ್ತು. ರಂಗಣ್ಣ ಅವುಗಳನ್ನೆಲ್ಲಾ ನೋಡಿ ತೃಪ್ತಿ ಪಟ್ಟುಕೊಂಡನು."ಮೇಷ್ಟ್ರೇ! ಹಿಂದೆ ಸಾಹೇಬರು ಬಂದಾಗ ಈ ನೋಟೀಸ್ಬೋರ್ಡ್ನ ಹಾಕಿರಲಿಲ್ಲವೇ?" ಎಂದು ಕೇಳಿದನು. ಹಾಕಿದ್ದೆ ಸ್ವಾಮಿ! ಎಲ್ಲವನ್ನೂ ಹಾಕಿದ್ದೆ! ಏನು ಹಾಕಿದ್ದರೆ ಏನು! ನನ್ನ ಗ್ರಹಚಾರ! ತಮ್ಮ ಜುಲ್ಮಾನೆ ನಿನ್ನೆ ನನ್ನ ಕೈಗೆ ತಲುಪಿತು ಸ್ವಾಮಿ! ಅದನ್ನು ನೋಡಿ ಎದೆಯೊಡೆದು ಹೋಯಿತು. ಅನ್ನ ನೀರು ಮಟ್ಟಿದ್ದರೆ ಕೇಳಿ! ಆ ಸೂರ್ಯನಾರಾಯಣನ ಆಣೆ! ಎಂದನು.

ಪ್ರಶ್ನೆಗಳು:

ಅ) ತಿಪ್ಪೇನಹಳ್ಳಿಯ ಪಾಠಶಾಲೆಯ ನೋಟಿಸ್ಬೋರ್ಡಿನ ಮೇಲೆ ಏನೆಂದು ಬರೆಯಲಾಗಿತ್ತು ?

ಆ) ರಂಗಣ್ಣ ಶಾಲೆಗೆ ಭೇಟಿ ನೀಡಲು ಕಾರಣವೇನು?

4. ಆಲೂರು ವೆಂಕಟರಾಯರು ಅಖಂಡ ಕರ್ನಾಟಕದ ಕನಸನ್ನು ನನಸಾಗಿಸಲು ಹೋರಾಟ ನಡೆಸುತ್ತಾ ಸ್ವತಂತ್ರ ಭಾರತದ ಹೋರಾಟದಲ್ಲಿಯೂ ಭಾಗವಹಿಸಿದರು. "ಭಾರತವನ್ನು ಬಿಟ್ಟು ಕರ್ನಾಟಕವಿಲ್ಲ; ಕರ್ನಾಟಕವನ್ನು ಬಿಟ್ಟು ಭಾರತವಿಲ್ಲ" ಎಂಬುದು ಅವರ ಸ್ಪಷ್ಟ ನಿಲುವಾಗಿತ್ತು. ಅಂದು ವಿದೇಶಿ ವಸ್ತುಗಳ ಮಾರಾಟದಿಂದ ಸ್ವದೇಶಿ ವಸ್ತುಗಳ ಮಾರಾಟ ಕಡಿಮೆಯಾಗಿ ನಮ್ಮ ಅನೇಕ ಕೈಗಾರಿಕೆಗಳು ಮೂಲೆ ಸೇರುತ್ತಾ ಬಂದವು. ಇದನ್ನು ಪ್ರತಿಭಟಿಸಲು ತಲೆ ಎತ್ತಿದ ವಿದೇಶಿ ವಸ್ತುಗಳ ಬಹಿಷ್ಕಾರ, ಸ್ವದೇಶಿ ವಸ್ತುಗಳ ಪುರಸ್ಕಾರ ಚಳುವಳಿಯಲ್ಲಿ ದುಮುಕಿ ಮಂಗಳೂರು ಹೆಂಚು ಮತ್ತು ಸೀಸದ ಕಡ್ಡಿ ತಯಾರಿಸುವ ಕಾರ್ಖಾನೆಗಳ ಸ್ಥಾಪನೆಗೆ ಜನರನ್ನು ಹುರಿದುಂಬಿಸಿದರಲ್ಲದೆ ತಾವೂ ಸ್ಥಾಪಿಸಿ ಅವರಿಗೆ ಮಾದರಿಯಾದರು. ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವುದರಲ್ಲಿ ಶಿಕ್ಷಣದ ಪಾತ್ರ ಬಹಳ ದೊಡ್ಡದು. ಆದರೆ ಭಾರತೀಯರು ಪಡೆಯುತ್ತಿದ್ದ ಶಿಕ್ಷಣ ಅವರಿಗೆ ಸ್ವದೇಶವನ್ನೂ, ಸ್ವದೇಶ ಸಂಸ್ಕೃತಿಯನ್ನು ಮರೆಸುತ್ತಲಿದ್ದಿತು. ಈ ಅಪಾಯವನ್ನು ತಪ್ಪಿಸಲು ನಮ್ಮ ದೇಶ-ನಮ್ಮ ಸಂಸ್ಕೃತಿಯನ್ನು ಪೋಷಿಸುವ "ರಾಷ್ಟ್ರೀಯ ಶಿಕ್ಷಣ ಚಳುವಳಿ"ಯು ಆಗ ಭಾರತದಲ್ಲೆಲ್ಲಾ ವ್ಯಾಪಿಸಿದ್ದಿತು. ವೆಂಕಟರಾಯರು ಈ ಚಳುವಳಿಯಲ್ಲಿಯೂ ದುಮುಕಿ ಧಾರವಾಡದಲ್ಲಿ"ಕರ್ನಾಟಕ ನೂತನ ವಿದ್ಯಾಲಯ" ಎಂಬ ರಾಷ್ಟ್ರೀಯ ವಿದ್ಯಾಲಯವನ್ನು ಸ್ಥಾಪಿಸಿದರು.

ಪ್ರಶ್ನೆಗಳು:

ಅ} ಆಲೂರು ವೆಂಕಟರಾಯರು ಸ್ವದೇಶಿ ಚಳುವಳಿಯ ಮೂಲಕ ಹೇಗೆ ಮಾದರಿ ಎನಿಸಿದರು?

ಆ} ಆಲೂರು ವೆಂಕಟರಾಯರು ರಾಷ್ಟ್ರೀಯ ವಿದ್ಯಾಲಯವನ್ನು ಸ್ಥಾಪಿಸಲು ಕಾರಣವೇನು?

★★★★★★★★★

ಮಾದರಿ ಉತ್ತರಗಳು

1. ಪ್ರಜಾನಿಷ್ಠೆ - ಸಾ ಶಿ ಮರುಳಯ್ಯ

1 ಕ) ಗುಣಸಂಧಿ
2 ಅ) ಕ್ರಿಯಾ ಸಮಾಸ
3 ಬ) ದ್ವಿತೀಯಾ
4 ಕ) ವಿದ್ಯರ್ಥಕ
5 ಬ) ಪ್ರಶ್ನಾರ್ಥಕ
6 ಕ) ಕೆಂಪು ಬಣ್ಣ
7 ಅ) ಮೂಡಣ
8 ಬ) ಭೂತಕಾಲ
9 ಕ) ಸರ್ವನಾಮ
10 ಬ) ದ್ವಂದ್ವ ಸಮಾಸ

II..

11 ರೂಢನಾಮ
12 ಸಂಖೇಯ ವಾಚಕ
13 ಪ್ರಥಮ ಪುರುಷ
14 ವಿಚಾರ
15 ಅಕರ್ಮಕ ಧಾತು
16 ನಿಷೇದಾರ್ಥಕ
17 ದ್ವಿರುಕ್ತಿ
18 ವರುಷ

III

19 . ವಿಷ್ಣುವರ್ಧನ ಭೂಪಾಲನ ಮೇಲೆ ಯುದ್ದ ಮಾಡಲು ಆದಿಯಮನಿಗೆ ಪ್ರಚೋಧಿಸಿದ ಚೋಳರ ದೊರೆ ಕುಲೋತ್ತುಂಗ.
20. ಚೋಳರು ಮತ್ತು ಹೊಯ್ಸಳರ ನಡುವೆ ಮಳವಳ್ಳಿ ಮತ್ತು ಮುಡುಕು ತೊರೆಗಳ ಬಳಿಯಲ್ಲಿ ಯುದ್ದ ನಡೆಯಿತು.
21. ತಲಕಾಡು ಕೋಟೆಯನ್ನು ಗೆದ್ದ ವಿಷ್ಣುವರ್ಧನ ಭೂಪಾಲನಿಗೆ ತಲಕಾಡು ಗೊಂಡ ಎಂಬ ಬಿರುದು ಸಂದಿತು.
22. ಸಾಮ್ರಾಜ್ಯ ಸಂರಕ್ಷಣೆಯಲ್ಲಿ ಮಹಾರಾಣಿ ಶಾಂತಲಾ ದೇವಿಯ ನೆರವಿಗೆ ನಿಂತಿದ್ದವರು ಉದಯಾದಿತ್ಯ.
23. ಸಾಮ್ರಾಟನು ರಾಜಧಾನಿಯಲ್ಲಿ ಇಲ್ಲದಿದ್ದಾಗ ರಾಜ್ಯದ ಸಂರಕ್ಷಕರಾಗಿ ರಾಣಿ ಶಾಂತಲಾದೇವಿ ನಿಂತಿದ್ದರು.
24. ಬನದಮ್ಮನಹಳ್ಳಿಯ ಜನರು ಬನಶಂಕರಿ ದೇವಾಲಯದ ಮುಂಭಾಗದ ಕಟ್ಟೆಯ ಮೇಲೆ ಪಂಚಾಯಿತಿ ಸೇರಿದ್ದರು.
25. ಬನದಮ್ಮನಹಳ್ಳಿಯ ಪಂಚಾಯಿತಿಯಲ್ಲಿ ಈರಣ್ಣ ಮತ್ತು ಬೀರಣ್ಣರ ನಡುವಿನ ನ್ಯಾಯ ತೀರ್ಮಾನವಾಗುತ್ತಿತ್ತು.
26. ಬೀರಣ್ಣಈರಣ್ಣನಿಗೆ ತನ್ನ ಹೊಲವನ್ನು ನೂರಾ ಎಂಟು ಹೊನ್ನಿಗೆ ಮಾರಿದ್ದನು.
27. ಇಬ್ಬರಿಗೂ ಬೇಡವಾದ ಹೊನ್ನು ರಾಜ್ಯದ ಬೊಕ್ಕಸ ಸೇರಲಿ ಎಂದು ಕೇತುಮಲ್ಲ ಹೇಳಿದನು.
28. ದೊರೆಯ ಹಣ ಧರೆಯ ಕ್ಷೇಮಕ್ಕೆ ಮೀಸಲಾಗಿರಬೇಕು.
29. ಅವಳಿ ದೇಗುಲಗಳ ಹೆಸರುಗಳೆಂದರೆ ಹೊಯ್ಸಳೇಶ್ವರ ಮತ್ತು ಶಾಂತಲೇಶ್ವರ.
30. ದ್ವಾರಸಮುದ್ರದಲ್ಲಿ ಕಟ್ಟಲ್ಪಡುವ ದೇವಾಲಯಗಳು ಗಾವುಂಡ ಕೇತುಮಲ್ಲ ನಾಯಕನ ಹೆಸರಿನಲ್ಲಿ ಕಟ್ಟಲ್ಪಟ್ಟವು.

IV

31. ಹಲವು ಸೈನಿಕರು ತಲಕಾಡಿನ ಲೂಟಿಯ ಬಗ್ಗೆ ಕೇಳಿದಾಗ ವಿಷ್ಣುವರ್ಧನನು 'ಸೆರ ಸಿಕ್ಕ ಸೈನಿಕರ ಮೇಲೆ ದೌರ್ಜನ್ಯ ನಡೆಸುವುದು ಯೋಧ ಧರ್ಮವಲ್ಲ; ಸೋತ ಸಾಮ್ರಾಜ್ಯವನ್ನು ಲೂಟಿ ಮಾಡುವುದು ಯುದ್ಧ ಧರ್ಮವಲ್ಲ.... ಆ ಕಾರಣ ನೀವೆಲ್ಲರೂ ತಲಕಾಡವರನ್ನು ತಮ್ಮವರೆಂದೇ ತಿಳಿದು ನಡೆಸಿಕೊಳ್ಳಿ. ಅವರ ಮನೋಭೀತಿಯನ್ನು ದೂರಮಾಡಿ ಶಾಂತಿ ಸ್ಥಾಪನೆ ಮಾಡಿ, ನಾಲ್ಕು ದಿನಗಳಾದ ಮೇಲೆ ರಾಜಧಾನಿಗೆ ಹಿಂದಿರುಗೋಣ." ಎಂದು ಹೇಳಿದನು.

32. ರಾಜನಿಲ್ಲದ ವೇಳೆಯಲ್ಲಿ ಮಹಾರಾಣಿಯು ದಂಡವನ್ನು ಹಿಡಿದು ಕುಳಿತಳು. ಮಹಾರಾಣಿಯು ರಾಜ್ಯದ ಪರಿಸ್ಥಿತಿಯನ್ನು ಗೂಢಾಚಾರರಿಂದ ತಿಳಿಯುತ್ತಿದ್ದಳು. ಆಗಾಗ ತಾನು ವೇಷಮರೆಸಿಕೊಂಡು ದೇಶದ ಒಳಭಾಗಗಳಲ್ಲಿ ಸಂಚರಿಸಿ ಬರುತ್ತಿದ್ದಳು. ಹೀಗೆ ಉದಯಾದಿತ್ಯನ ನೆರವಿನಿಂದ ಸಾಮ್ರಾಜ್ಯವನ್ನು ರಕ್ಷಣೆ ಮಾಡುತ್ತಿದ್ದಳು.

33. ಬೀರಣ್ಣ ತನ್ನ ಹೊಲವನ್ನು ನೂರಾ ಎಂಟು ಹೊನ್ನಿಗೆ ಈರಣ್ಣನಿಗೆ ಮಾರಿದ್ದನು. ಈರಣ್ಣ ಹೊಲ ಉಳುತ್ತಿದ್ದಾಗ ಆ ಹೊಲದಲ್ಲಿ ಒಂದು ಕೊಪ್ಪರಿಗೆಯಷ್ಟು ಹೊನ್ನು ಸಿಕ್ಕಿತು. ಅವನು ಅದನ್ನು ಪೂಜೆಮಾಡಿ ಬೀರಣ್ಣನ ಮನೆಗೆ ತೆಗೆದು ಕೊಂಡು ಹೋಗಿ "ಈ ಹೊನ್ನು ನಿನ್ನದು ತೆಗೆದುಕೋ ಎಂದನು. ಆದರೆ ಬೀರಣ್ಣ ನಿನಗೆ ಹೊಲ ಮಾರಿದ ಮೇಲೆ ಅದು ನಿನಗೆ ಸೇರಬೇಕು. ಅದು ನನ್ನದಲ್ಲ" ಎಂದು ನಿರಾಕರಿಸಿದನು. ಆ ವಿಚಾರವಾಗಿ ಬನದಮ್ಮನಹಳ್ಳಿಯ ದೇವಾಲಯದ ಮುಂದೆ ಚರ್ಚೆ ನಡೆದಿತ್ತು.

34. ಈರಣ್ಣನು ತಾನು ಹಣ ಕೊಟ್ಟಿದ್ದು ಮಣ್ಣಿಗೆ ಹೊರೆತು ಅದರಲ್ಲಿ ಸಿಕ್ಕ ಹೊನ್ನಿಗಲ್ಲ. ಈ ಹೊನ್ನು ಬೀರಣ್ಣನದೇ ಏಕೆಂದರೆ ಅದು ಅವನ ಪಿತ್ರಾರ್ಜಿತ ಆಸ್ತಿ ಏನೋ ಕಷ್ಟ ಬಂತು ಅಂತ ನನಗೆ ಮಾರಿದ. ಮಾರುವಾಗ ಅದರಲ್ಲಿರುವ ಹೊನ್ನು ನನ್ನದು ಎಂದು ಹೇಳಿರಲಿಲ್ಲ. ಅಂದ ಮೇಲೆ ಈ ಹೊನ್ನು ಅವನಿಗೆ ಸೇರಬೇಕು ಎಂದು ನಿರ್ಧರಿಸಿ ಈರಣ್ಣ ಬೀರಣ್ಣನಿಗೆ ಹೊನ್ನನ್ನು ಕೊಡಬೇಕೆಂದುನಿರ್ಧರಿಸಿದನು.
35. ದೈವದವರ ತೀರ್ಪುನ್ನು ಕೇಳಿದ ಶಾಂತಲೆ "ಈ ಹೊನ್ನು ಬೊಕ್ಕಸಕ್ಕೆ ಸೇರಲು ಇದು ಸಾಮ್ರಾಟರ ದುಡಿಮೆಯಲ್ಲ.... ಅವರ ಬೆವರಿನ ಫಲ ಅಲ್ಲ.... ಅದು ಪ್ರಜೆಗಳ ಬೆವರಿನ ಫಲ! ಆದ್ದರಿಂದ ಅದು ಪ್ರಜೆಗಳಿಗೇ ಸೇರಬೇಕು" ಪ್ರಜೆಗಳ ದುಡ್ಡು ಪ್ರಜಾ ಕಲ್ಯಾಣಕ್ಕೆ ವಿನಿಯೋಗವಾಗಬೇಕು ಎಂದು ಅಭಿಪ್ರಾಯಪಟ್ಟಳು.

36. " ಇದು ದೈವದ ದುಡ್ಡು ದೇವರ ಕಾರ್ಯಕ್ಕೆ ವಿನಿಯೋಗವಾಗಬೇಕಾದ್ದು ಧರ್ಮ... ನಮ್ಮ ಸಂಸ್ಕೃತಿಯ ಶ್ರೀಮಂತಿಕೆಗೆ ಸಾಕ್ಷಿಯಾಗಿ ಒಂದು ಕಲಾದೇಗುಲವನ್ನು ರಾಜಧಾನಿ ದ್ವಾರಸಮುದ್ರದಲ್ಲಿ ನಿರ್ಮಿಸಬೇಕು. ಅವಳಿ ದೇಗುಲಗಳ ಶಿಲ್ಪಕಲೆ ಹೊಯ್ಸಳರ ಶೈಲಿಗೆ ಮಾದರಿಯಾಗಿರಬೇಕು. ಒಂದು ಕಲಾಪೂರ್ಣ ದೇವಾಲಯಕ್ಕಾಗಿ ಈ ಹೊನ್ನು ವಿನಿಯೋಗವಾಗಲಿ, ಆ ದೇವಾಲಯಗಳನ್ನು ಕೇತುಮಲ್ಲ ನಾಯಕರ ಹೆಸರಿನಲ್ಲಿ ಕಟ್ಟಬೇಕು ಎಂದು ಶಾಂತಲೆ ತೀರ್ಪನ್ನು ನೀಡಿದಳು.

37 ಅವಳಿ ದೇಗುಲಗಳು ನಮ್ಮ ಸಂಸ್ಕೃತಿಯ ಶ್ರೀಮಂತಿಕೆಗೆ ಸಾಕ್ಷಿಯಾಗಿರಬೇಕು. ಆ ದೇಗುಲಗಳ ಶಿಲ್ಪಕಲೆ ಹೊಯ್ಸಳರ ಶೈಲಿಗೆ ಮಾದರಿಯಾಗಿರಬೇಕು. ವೇಲಾಪುರಿಯ ಚೆನ್ನಕೇಶವ ದೇವಾಲಯದಲ್ಲಿ ಲಾಲಿತ್ಯವಿದ್ದರೆ, ದ್ವಾರಸಮುದ್ರದ ದೇಗುಲದಲ್ಲಿ ಭವ್ಯತೆ ನೆಲೆಗೊಂಡಿರಬೇಕು. ಅಂತಹ ಒಂದು ಕಲಾಪೂರ್ಣ ದೇವಾಲಯಗಳ ನಿರ್ಮಾಣವಾಗಬೇಕು ಎಂಬುದು ಶಾಂತಲೆಯ ಬಯಕೆ.

38. ಗಂಡುಡುಗೆಯಲ್ಲಿರುವುದು ರಾಣಿ ಶಾಂತಲಾದೇವಿ ಎಂದು ತಿಳಿದಾಗ ಬನದಮ್ಮನಹಳ್ಳಿಯ ಜನರಿಗೆ ಸ್ವರ್ಗ ಒಂದೇ ಮೆಟ್ಟಿಲಲ್ಲಿ ಉಳಿಯಿತು. ಅವರ ಆನಂದಕ್ಕೆ ಪಾರವೇ ಇಲ್ಲವಾಯಿತು. ಎಲ್ಲರೂ ಕಟ್ಟೆಯಿಂದ ಧುಮುಕಿ ಅವರ ಕಾಲಿಗೆ ಅಡ್ಡಬಿದ್ದರು. ಹೆಂಗಳೆಯರೆಲ್ಲರೂ ಶಾಂತಲೆಯನ್ನು ಸುತ್ತುವರಿದರು. ಅವಳನ್ನು ಮುಟ್ಟಿ ಮಾತನಾಡಿಸಿದರು. ಅವಳ ಪಾದಗಳನ್ನು ಮುಟ್ಟಿ ಕಣ್ಣುಗಳಿಗೆ ಒತ್ತಿಕೊಂಡರು. ಅವಳು ಹೆಜ್ಜೆ ಇಟ್ಟ ಸ್ಥಳದ ಧೂಳನ್ನು ತೆಗೆದು ನೆತ್ತಿಯಲ್ಲಿ ಧರಿಸಿದರು. ಈ ರೀತಿಯ ಭಕ್ತಿಪ್ರದರ್ಶನ ಮುಂದುವರಿಯಿತು.

VI ಕೃತಿಕಾರರ ಪರಿಚಯ

39. ಲೇಖಕರಾದ ಸಾ.ಶಿ. ಮರುಳಯ್ಯ ಅವರು ಸಾ.ಶ. 1931ರಲ್ಲಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಸಾಸಲು ಎಂಬ ಗ್ರಾಮದಲ್ಲಿ ಜನಿಸಿದರು. ಇವರು ಕೆಳದಿಯ ಅರಸರು ಮತ್ತು ಕನ್ನಡ ಸಾಹಿತ್ಯ ಎಂಬ ಮಹಾಪ್ರಬಂಧವನ್ನು ರಚಿಸಿದ್ದಾರೆ. ಶಿವತಾಂಡವ, ಕೆಂಗನಕಲ್ಲು, ವಚನವೈಭವ, ನೆಲದ ಸೊಗಡು, ನಾಟ್ಯ ಮಯೂರಿ, ವಿಜಯ ವಾತಾಪಿ ಮೊದಲಾದ 90ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ದೇವರಾಜ ಬಹದ್ದೂರ್ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

V ಸಂದರ್ಭ ಸಹಿತ ಸ್ವಾರಸ್ಯ

40. ಆಯ್ಕೆ,: ಈ ವಾಕ್ಯವನ್ನು ಸಾ.ಶಿ.ಮರುಳಯ್ಯ ಅವರು ರಚಿಸಿರುವ ನಾಟ್ಯ ಮಯೂರಿ ಎಂಬ ಕೃತಿಯಿಂದ ಆಯ್ದ ಪ್ರಜಾನಿಷ್ಠೆ ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ: ವಿಷ್ಣುವರ್ಧನನು ಕುಲೋತ್ತುಂಗ ಚೋಳನ ದಂಡನಾಯಕನಾದ ಆದಿಯಮನನ್ನು ಯುದ್ಧದಲ್ಲಿ ಸೋಲಿಸಿ ತಲಕಾಡನ್ನು ವಶಪಡಿಸಿಕೊಂಡ ಸಂದರ್ಭದಲ್ಲಿ ಸಮಸ್ತಸೈನ್ಯವು ವಿಷ್ಣುವರ್ಧನನಿಗೆ ತಲಕಾಡಗೊಂಡನಿಗೆ ಜಯವಾಗಲಿ ಎಂಬ ಬಿರುದನ್ನು ನೀಡಿ ಜೈಕಾರವನ್ನು ಹಾಕುವಾಗ ಮೇಲ್ಕಂಡ ಮಾತು ಬಂದಿದೆ.
ಸ್ವಾರಸ್ಯ: ಇಲ್ಲಿ ವಿಷ್ಣುವರ್ಧನ ತಲಕಾಡನ್ನು ವಶಪಡಿಸಿಕೊಂಡ ನಂತರ ಸೈನಿಕರ ವಿಜಯೋತ್ಸಾಹ ಸ್ವಾರಸ್ಯಕರವಾಗಿ ವ್ಯಕ್ತವಾಗಿದೆ.

41. ಸಂದರ್ಭ: ವಿಷ್ಣುವರ್ಧನನು ಕುಲೋತ್ತುಂಗ ಚೋಳನ ದಂಡನಾಯಕ ಆದಿಯಮನನ್ನು ಯುದ್ಧದಲ್ಲಿ ಸೋಲಿಸಿ ತಲಕಾಡನ್ನು ವಶಪಡಿಸಿಕೊಂಡ ಸಂದರ್ಭದಲ್ಲಿ ಹಲವು ಸೈನಿಕರು ತಲಕಾಡು ನಗರವನ್ನು ಲೂಟಿ ಮಾಡಬೇಕೆಂದು ಇಚ್ಛಿಸಿದ ಸಂದರ್ಭದಲ್ಲಿ ಪ್ರಜಾಪಾಲಕನಾದ ವಿಷ್ಣುವರ್ಧನನು ತನ್ನ ಸೈನಿಕರಿಗೆ ಸೆರೆಸಿಕ್ಕ ಸೈನಿಕರ ಮೇಲೆ ದೌರ್ಜನ್ಯ ನಡೆಸುವುದು ಯೋಧಧರ್ಮ ಅಲ್ಲ: ಸೋತ ಸಾಮ್ರಾಜ್ಯವನ್ನು ಲೂಟಿ ಮಾಡುವುದು ಯುದ್ಧ ಧರ್ಮವಲ್ಲ ಎಂದು ಮೇಲ್ಕಂಡಂತೆ ಹೇಳುತ್ತಾನೆ.
ಸ್ವಾರಸ್ಯ:ಇಲ್ಲಿ ವಿಷ್ಣುವರ್ಧನನಲ್ಲಿದ್ದ ಮಾನವೀಯ ಗುಣ ಹಾಗೂ ಪ್ರಜಾಹಿತ ಚಿಂತನೆ ಸ್ವಾರಸ್ಯಕರವಾಗಿ ವ್ಯಕ್ತವಾಗಿದೆ.

42. ಸಂದರ್ಭ: ಬನದಮ್ಮನಹಳ್ಳಿಯ ಬನಶಂಕರಿ ದೇವಾಲಯದ ಮುಂದೆ ಕಟ್ಟೆಯ ಹತ್ತಿರ ಊರಿನ ಸಮಸ್ತ ಪ್ರಜೆಗಳು ಈರಣ್ಣ ಮತ್ತು ಬೀರಣ್ಣನ ವಿಚಾರವಾಗಿ ನ್ಯಾಯ ಪಂಚಾಯಿತಿ ಸೇರಿರುವ ಸಂದರ್ಭದಲ್ಲಿ ಗಾವುಂಡ ಕೇತುಮಲ್ಲನಾಯಕ ಕಟ್ಟೆಯ ಮೇಲೆ ಕುಳಿತಿದ್ದ ಹತ್ತೂ ಜನಮುಖಂಡರನ್ನು ಕುರಿತು ಮೇಲಿನಂತೆ ಏನಪ್ಪಾ... ದೈವದವರು ಏನು ಹೇಳ್ತೀರಾ ಹೇಳ್ರಿ...ಎಂದು ಕೇಳಿದನು.
ಸ್ವಾರಸ್ಯ: ಹಳ್ಳಿಗಳಲ್ಲಿನ ನ್ಯಾಯ ಪಂಚಾಯಿತಿ ವಿಧಾನ ಹಾಗೂ ಪ್ರಜೆಗಳು ಮುಖಂಡರಿಗೆ ನೀಡುವ ಗೌರವ ಇಲ್ಲಿ ಮೆಚ್ಚ ತಕ್ಕದ್ದು.

43. ಸಂದರ್ಭ: ಈರಣ್ಣ ಬೀರಣ್ಣನಿಂದ ಕೊಂಡು ಕೊಂಡ ಹೊಲದಲ್ಲಿ ಉಳುತ್ತಿದ್ದಾಗ ಅಲ್ಲಿ ಒಂದು ಕೊಪ್ಪರಿಗೆಯಷ್ಟು ಹೊನ್ನು ಸಿಕ್ಕಿತು. ಅವನು ಅದನ್ನು ಪೂಜೆಮಾಡಿ ಬೀರಣ್ಣನ ಮನೆಗೆ ತೆಗೆದುಕೊಂಡು ಹೋಗಿ ಈ ಹೊನ್ನು ನಿನ್ನದು ತೆಗೆದುಕೊ ಎಂದನು. ಆ ಸಂದರ್ಭದಲ್ಲಿ ಬೀರಣ್ಣ ನಿನಗೆ ಹೊಲ ಮಾರಿದ ಮೇಲೆ ಅದು ನಿನಗೇ ಸೇರಬೇಕು ಅದು ನನ್ನದಲ್ಲ. ತಂಬುಲ ಉಗದ ಮೇಲೆ ಮತ್ತೆ ಎತ್ತಿ ಬಾಯಿಗೆ ಹಾಕಿಕೊಳ್ಳೋ ಕೆಟ್ಟತನ ಬೇಡ ಎಂದು ನಿರಾಕರಿಸುವಾಗ ಈ ಮಾತನ್ನುಹೇಳುತ್ತಾನೆ.
ಸ್ವಾರಸ್ಯ:ಇಲ್ಲಿ ಈರಣ್ಣ ಮತ್ತು ಬೀರಣ್ಣ ಇವರಿಬ್ಬರಲ್ಲಿದ್ದ ನಿಸ್ವಾರ್ಥತೆ, ದುರಾಸೆ ಇಲ್ಲದ ಧರ್ಮಪರತೆ ಸ್ವಾರಸ್ಯಕರವಾಗಿ ಮೂಡಿ ಬಂದಿದೆ.

44. ಸಂದರ್ಭ: ಈರಣ್ಣ ಮತ್ತು ಬೀರಣ್ಣ ಇಬ್ಬರೂ ಸಹ ಹೊನ್ನನ್ನು ನನಗೆ ಬೇಡ ಎಂದು ವಾದ ಮಾಡುತ್ತಿದ್ದಾಗ ದೈವದವರು ಏನು ತೋಚದ ಸ್ಥಿತಿಯಲ್ಲಿ ಇದ್ದಂತಹ ಸಂದರ್ಭದಲ್ಲಿ ಕೊನೆಗೆ ಮುಖ್ಯಸ್ಥನಾದ ಕೇತುಮಲ ನಾಯಕ ಮೇಲಿನಂತೆ ಇಬ್ಬರಿಗೂ ಬೇಡವಾದ ಹೊನ್ನು ರಾಜ್ಯದ ಬೊಕ್ಕಸಕ್ಕೆ ಸೇರಲಿ ಎಂದು ಹೇಳುತ್ತಾನೆ.

ಸ್ವಾರಸ್ಯ: ಈ ಗ್ರಾಮದ ಜನರಿಗೆ ಯಾವುದೇ ಸ್ವಾರ್ಥ, ದುರಾಸೆ ಇಲ್ಲ ಎಂಬುದರ ಜೊತೆಗೆ ರಾಜ್ಯದ ಬೊಕ್ಕಸ ತುಂಬಿದರೆ ನಾಡಿಗೆ ಒಳಿತು ಎಂಬ ಇವರ ಮನಸ್ಥಿತಿ ಇಲ್ಲಿ ಅರ್ಥವಾಗುತ್ತದೆ.

45. ಸಂದರ್ಭ: ಹೊಲದಲ್ಲಿ ಸಿಕ್ಕ ಹೊನ್ನನ್ನು ಈರಣ್ಣ ಮತ್ತು ಬೀರಣ್ಣ ಇಬ್ಬರೂ ಬೇಡವೆಂದಾಗ ಕೇತುಮಲ್ಲನಾಯಕನು ಈ ಹೊನ್ನು ರಾಜ್ಯದ ಬೊಕ್ಕಸ ಸೇರಲಿ ಎಂಬ ತೀರ್ಮಾನಕ್ಕೆ ಬಂದಂತಹ ಸಂದರ್ಭದಲ್ಲಿ ಶಾಂತಲಾದೇವಿಯು ಬೇಡಬೇಡ ಇದು ಪ್ರಜೆಗಳ ದುಡ್ಡು ಪ್ರಜೆಗಳಿಗೇ ಸೇರಲಿ, ನಿಮ್ಮ ಊರಿನ ಹಣ ನಿಮ್ಮ ಊರಿನ ಏಳಿಗೆಗಾಗಿಯೇ ವಿನಿಯೋಗವಾಗಲಿ ಎಂಬ ಸಲಹೆಯನ್ನು ನೀಡುತ್ತಾಳೆ.
ಸ್ವಾರಸ್ಯ: ಪ್ರಜೆಗಳ ಸಂಪತ್ತು ಪ್ರಜೆಗಳ ಕಲ್ಯಾಣಕ್ಕೆ ವಿನಿಯೋಗವಾಗಲಿ ಎಂಬ ಮಹಾರಾಣಿ ಶಾಂತಲೆಯ ವಿಶಾಲ ಮನೋಭಾವನೆ ಹಾಗೂ ಗ್ರಾಮ ಕಲ್ಯಾಣ ಇಲ್ಲಿ ಸ್ವಾರಸ್ಯಕರವಾಗಿ ಮೂಡಿಬಂದಿದೆ.

VII. ಎಂಟು_ಹತ್ತು ವಾಕ್ಯಗಳ ಪ್ರಶ್ನೆಗಳು

46. ದಿನೇದಿನೇ ಪ್ರವರ್ಧಮಾನಕ್ಕೆ ಬರುತ್ತಿರುವ ವಿಷ್ಣುವರ್ಧನನನ್ನು ಸದೆಬಡಿಯಬೇಕೆಂದು ಶತ್ರುರಾಜರುಗಳು ಅನೇಕರು ಹವಣಿಸುತ್ತಿದ್ದರು. ಅವರಲ್ಲಿ ಚೋಳಮಂಡಳದ ಕುಲೋತ್ತುಂಗ ಪ್ರಮುಖನಾದವನು. ಕುಲೋತ್ತುಂಗ ಪ್ರಚಂಡ ಆಶಾವಾದಿ, ಅಖಂಡ ಭರತ ಖಂಡದ ಒಡೆತನವನ್ನು ಬಯಸುತ್ತಿದ್ದ ದುರಾಶಾ ಪಿಶಾಚಿ. ಗಂಗ ಸಾಮ್ರಾಜ್ಯವನ್ನು ತನ್ನ ಕೈವಶ ಮಾಡಿಕೊಳ್ಳಲೆಂದು ಆಶಿಸಿ ಆದಿಯಮನನ್ನು ಪ್ರಚೋದಿಸಿ ದ್ವಾರಸಮುದ್ರದ ಮೇಲೆ ಯುದ್ಧಕ್ಕೆ ಕಳುಹಿಸಿದ. ಇದನ್ನು ಗುಪ್ತಚರರಿಂದ ತಿಳಿದು ಹೊಯ್ಸಳೇಶ್ವರನು ಸಕಲ ಸೇನಾಸಮೇತನಾಗಿ ಯುದ್ಧಕ್ಕೆ ಸನ್ನದ್ಧನಾದನು. ದ್ವಾರಸಮುದ್ರದ ಸೇನೆ ತಲಕಾಡಿನ ಕಡೆಗೆ ಜೈತ್ರ ಯಾತ್ರೆ ಹೊರಟಿತು. ಮಳವಳ್ಳಿ ಮತ್ತು ಮುಡುಕುತೊರೆಗಳ ಬಳಿಯಲ್ಲಿ ಘನಘೋರ ಯುದ್ಧ ನಡೆದು ಹೊಯ್ಸಳರ ಕೈಮೇಲಾಗಿ ಚೋಳಸೇನೆ ಕಂಗಾಲಾಯಿತು. ಆದಿಯಮ ಯುದ್ಧದಲ್ಲಿ ಮಡಿದ. ಅವನ ಸತ್ತ ಸುದ್ದಿ ತಿಳಿಯುತ್ತಲೇ ಚೋಳಸೇನೆ ದಿಕ್ಕಾಪಾಲಾಗಿ ಓಡಿತು. ತಲಕಾಡು ಕೋಟೆ ಸುಲಭವಾಗಿ ವಿಷ್ಣುವರ್ಧನ ಭೂಪಾಲನ ಕೈವಶವಾಯಿತು. ಸಮಸ್ತ ಸೈನ್ಯವೂ ತಲಕಾಡುಗೊಂಡನಿಗೆ ಜಯವಾಗಲಿ ಎಂದು ವಿಷ್ಣುವರ್ಧನನ ಗುಣಗಾನ ಮಾಡಿತು.

47. ಪಂಚಾಯಿತಿಯಲ್ಲಿ ವೀರಣ್ಣ ಮತ್ತು ಈರಣ್ಣ ಒಬ್ಬರಿಗೊಬ್ಬರು ಹೊನ್ನು ತಮ್ಮದಲ್ಲ ಎಂದಾಗ ಊರಿನ ಮುಖಂಡ ಕೇತುಮಲ್ಲ ನಾಯಕನು ಇವರಿಬ್ಬರಿಗೂ ಬೇಡವಾದ ಮೇಲೆ ಈ ಹೊನ್ನು ರಾಜ್ಯದ ಬೊಕ್ಕಸಕ್ಕೆ ಸೇರಲಿ ಎಂದನು. ಇದನ್ನೆಲ್ಲಾ ಉದಯಾದಿತ್ಯನೊಡನೆ ಮರೆಯಲಿ ನಿಂತು ನೋಡುತ್ತಿದ್ದ ಮಹಾರಾಣಿ ಶಾಂತಲೆ ಕೂಡದು ಕೂಡದು ಎಂದಾಗ ಎಲ್ಲರ ಗಮನ ಅತ್ತ ಹೋಯಿತು.

ಕೇತುಮಲ್ಲನು ಗಂಡುಡುಗೆಯಲ್ಲಿದ್ದ ಶಾಂತಲೆಯನ್ನು ಗುರುತಿಸದೇ ನೀವು ಈ ಹೊನ್ನು ರಾಜ್ಯದ ಬೊಕ್ಕಸಕ್ಕೆ ಸೇರಬಾರದು ಅಂದಿರಲ್ಲ ಯಾಕೆ ? ಎಂದನು. ಅದಕ್ಕೆ ಅವಳು ಬೊಕ್ಕಸಕ್ಕೆ ಸೇರಲು ಇದು ಸಾಮ್ರಾಟರ ದುಡಿಮೆಯಲ್ಲ. ಅದು ಪ್ರಜೆಗಳ ಬೆವರಿನ ಫಲ. ಆದ್ದರಿಂದ ಅದು ಪ್ರಜೆಗಳಿಗೆ ಸೇರಬೇಕು ಎಂದಳು. ಆ ಮಾತಿಗೆ ಕೇತುಮಲ್ಲನು ಹಾಗಾದರೆ ಪ್ರಜೆಗಳು ಯಾರವರು ? ಹೊಯ್ಸಳೇಶ್ವರನ ಮಕ್ಕಳಲ್ಲವೇ? ಮಕ್ಕಳ ದುಡಿಮೆ ತಂದೆಯದಲ್ಲವೇ? ಎಂದನು.

ಅವನ ವಾದವನ್ನು ಕೇಳಿದ ಶಾಂತಲೆ ನಿಮ್ಮ ಊರಿನ ಹಣ ನಿಮ್ಮ ಊರಿಗೆ ವಿನಿಯೋಗವಾಗಲಿ ಎಂದಳು. ನಂತರ ಉದಯಾದಿತ್ಯ ಅವರು ಗಂಡುಡುಗೆಯಲ್ಲಿರುವವರು ಶಾಂತಲಾದೇವಿ ಎಂದು ತಿಳಿಸಿದ ನಂತರ ಎಲ್ಲರೂ ಅವರಿಗೆ ತಮ್ಮ ಭಕ್ತಿ ಸಮರ್ಪಿಸಿದರು. ನಂತರ ಊರಿನ ಜನ ತಮಗೆ ಆ ಹೊನ್ನಿನ ಅವಶ್ಯಕತೆ ಇಲ್ಲ ಅದು ರಾಜ್ಯದ ಕ್ಷೇಮಕ್ಕೆ ಮೀಸಲು ಎಂದಾಗ ಇದು ದೈವದ ದುಡ್ಡು ದೇವರ ಕಾರ್ಯಕ್ಕೆ ವಿನಿಯೋಗವಾಗ ಬೇಕಾದ್ದು ಧರ್ಮ. ಹಾಗಾಗಿ ರಾಜಧಾನಿ ದ್ವಾರಸಮುದ್ರದಲ್ಲಿ ಹೊಯ್ಸಳರ ಶೈಲಿಯ ಮಾದರಿಯಲ್ಲಿ ಅವಳಿ ದೇವಾಲಯಗಳ ನಿರ್ಮಾಣಕ್ಕಾಗಿ ಈ ಹೊನ್ನು ವಿನಯೋಗವಾಗಲಿ ಎಂಬ ತೀರ್ಪನ್ನು ಶಾಂತಲೆ ನೀಡಿದಳು.

****

2. ಬೆಡಗಿನ ತಾಣ ಜಯಪುರ

ಮಾದರಿ ಉತ್ತರಗಳು

I.

1. ಉಂಟು ಮಾಡಲಿ
2. ತಿನ್ನನು
3. ಉಪಮಾ
4. ಸುತ್ತುವರೆದಿರುವ
5. ಗುಣಸಂಧಿ
6. ದ್ವಿರುಕ್ತಿ
7. ದ್ವಿತೀಯ
8. ಅಂಶಿ ಸಮಾಸ

II.

9. ಸಂಭವನಾರ್ಥಕ
10. ಸಿಂಗಾರ
11. ಪೇಟ
12. ಮೂಕಜ್ಜಿಯ ಕನಸುಗಳು

III. ಒಂದು ಅಂಕದ ಪ್ರಶ್ನೆಗಳ ಉತ್ತರಗಳು.

13. ಹೊರಗಡೆ ನಾಲ್ಕು ಸುತ್ತಲೂ ಉಸುಬು ಹರಡಿದ್ದ ಮರುಭೂಮಿಯಲ್ಲಿ ರೈಗಳ ಮನೆ ಇತ್ತು.
14. ಜಯಪುರದಲ್ಲಿನ ಒಂದೊಂದು ಮನೆಯು ಒಂದೊಂದು ಶೈಲಿಯದ್ದೂ, ಒಂದೊಂದು ದೇಶದ್ದೂ ಆಗಿ ಕಾಣಿಸುವುದಿಲ್ಲ ಆದುದರಿಂದಲೇ ಲೇಖಕರಿಗೆ ಅವುಗಳ ಮೇಲೆ ಮೋಹವಿತ್ತು.
15. ಜಯಪುರದ ಜನರಿಗೆ ಕೆಂಪು,ಕಿತ್ತಳೆ,ಹಳದಿ ಬಣ್ಣಗಳು ಇಷ್ಟ.
16. ಜಯಪುರದ ಪೂರ್ವದ ರಾಜಧಾನಿ ಅಂಬೇರ.
17. ಲೇಖಕರಿಗೆ ಜಯಪುರದಲ್ಲಿನ ಜಾನಪದ ನೃತ್ಯ ನೋಡಬೇಕೆಂಬ ಹಂಬಲವಿತ್ತು.
18. ಲೇಖಕರ ಜಯಪುರದ ಈ ಭೇಟಿ ಎರಡನೆಯದಾಗಿತ್ತು.
19. ತಣ್ಣೀರು ಮೀಯುವ ಅಭ್ಯಾಸ ಶ್ರೀಪತಿಯವರದಾಗಿತ್ತು.
20. ಮಿತ್ರ ರೈಗಳಿಗೆ ಅಂಬೇರ ಮತ್ತು ಜಯಪುರಗಳ ನಡುವೆ ಸಿಟಿ ಬಸ್ಸಡೆಯುತ್ತಿತ್ತು ಎಂಬುದರ ಅರಿವು ಇರಲಿಲ್ಲ.
21. ಜಯಪುರ ಬಣ್ಣಗಾರರ ತವರೂರು.
22. ಲೇಖಕರ ಮೊದಲ ಭೇಟಿಯಲ್ಲಿ ಅಂಬೇರದ ಗುಡಿಗೋಪುರಗಳು ಗೂಬೆಗಳ ಮನೆಗಳಾಗಿದ್ದವು.
23. ಅಂಬೇರದ ಅರಮನೆಯ ಒಳಾಂಗಣ ಹಾಲುಗಲ್ಲಿನಿಂದ ರಚಿತವಾಗಿದೆ.
24. ಮೀರಾಬಾಯಿಯು ಗಿರಿಧರನಾಗನನ್ನು ಪೂಜಿಸುತ್ತಿದ್ದಳು.
25. ರಜಪೂತನ ಸ್ತ್ರೀಯರಿಗೆ ಬಣ್ಣದ ಬಗೆಗೆ ಪ್ರೇರಣೆ ಉಂಟಾಗಲು ಕಾರಣವಾದ ಪಕ್ಷಿ ನವಿಲು.
26. ಪುರಾತನ ಖಗೋಳ ವಿಜ್ಞಾನ ಪರಿಶೀಲನಾಲಯ ಜಂತ್ರಮಂತ್ರ.
27. ಲೇಖಕರಿಗೆ ಜಯಪುರದ ಜಾನಪದ ನೃತ್ಯ ನೋಡಲು ವ್ಯವಸ್ಥೆ ಮಾಡಿದ್ದವರು ಚೀಫ್ ಇಂಜಿನಿಯರ್ ಗೋಪಿನಾಥರಾಯರು.
28. ಬೆಳಿಗ್ಗೆ ಮತ್ತು ಸಂಜೆಯ ಸಮಯದಲ್ಲಿ ಅಂಬೇರದ ಬೆಟ್ಟ, ಗುಡ್ಡ, ಕಣಿವೆಗಳು ಮೋಹಕತೆಯನ್ನು ತಾಳುತ್ತವೆ.

IV ಮೂರು ನಾಲ್ಕು ವಾಕ್ಯದ ಪ್ರಶ್ನೆಗಳ ಉತ್ತರಗಳು.

29. ಜಯಪುರದ ಬೀದಿಗಳು ಬಹಳ ಅಗಲವಾಗಿಯೂ ನೇರವಾಗಿಯೂ ಇವೆ. ಬಹುದೂರದಿಂದ ಕಾಣಿಸುವ ಅಂಗಡಿ ಮನೆಗಳ ದೇಶೀ ವಾಸ್ತುರಚನೆ ಚೆನ್ನಾಗಿ ಶೋಭಿಸುತ್ತದೆ. ಅಲ್ಲಿನ ಒಂದೊಂದು ಮನೆಯು ಒಂದೊಂದು

ಶೈಲಿಯದ್ದೂ ಒಂದೊಂದು ದೇಶದ್ದೂಆಗಿ ಕಾಣಿಸುವುದಿಲ್ಲ. ಅಲ್ಲಿನ ಮುಖ್ಯಬೀದಿಗಳು ಸಂಧಿಸುವಲ್ಲಿ ಸುಂದರವಾದ ಚೌಕಗಳಿವೆ. ಕೆಲವೊಂದು ಕಡೆಗಳಲ್ಲಿ ಭವ್ಯವಾದ ಮಹದ್ವಾರಗಳಿವೆ.

30. ಶಿವರಾಮ ಕಾರಂತರು ಈ ಹಿಂದೆ ಅಂಬೇರಕ್ಕೆ ಹೋಗಿದ್ದಾಗ ಅಲ್ಲಿ ಜನವಸತಿ ಇದ್ದಿರಲಿಲ್ಲ. ಅಲ್ಲಿನ ಹಲವಾರು ಪ್ರಾಚೀನ ಗುಡಿಗೋಪುರಗಳು ಗೂಬೆಗಳ ಮನೆಗಳಾಗಿದ್ದವು. ಆದರೆ ಈಗ ಹಾಗಿಲ್ಲ; ನೂರಾರು ಸಿಂಧೀ ಕುಟುಂಬಗಳು ಅಲ್ಲಿ ಮನೆ ಮಾಡಿಕೊಂಡಿವೆ.

31. ಅಂಬೇರ ಅರಮನೆಯ ಆವರಣದ ಹಿಂದುಗಡೆ ತಗ್ಗಿನಲ್ಲಿ ಮೀರಭಾಯಿ ದೇವಾಲಯವಿದೆ. ಮೀರಾಬಾಯಿ ಗಿರಿಧರನಾಗನನ್ನು ಪೂಜಿಸಿದ ಸ್ಥಳವಿದು. ನಕ್ಷತ್ರಾಕೃತಿಯನ್ನು ತುಂಬಿಕೊಂಡ ಗರ್ಭಗೃಹ, ನವರಂಗಗಳಿವೆ. ಗುಡಿಯು ಸೊಬಗಿನಿಂದ ಕೂಡಿದೆ.

32. ಜಯಪುರದ ಜಾನಪದ ನೃತ್ಯ ಅಲ್ಲಿನ ಜನಸಾಮಾನ್ಯರ ನೃತ್ಯವಾಗಿತ್ತು. ಇಬ್ಬರು ಯೌವನಸ್ಥರು ಸ್ತ್ರೀಯರ ಉಡುಗೆ ಉಟ್ಟಿದ್ದರು. ಮಾರವಾಡಿ ಸ್ತ್ರೀಯರಂತೆ ತಲೆಗೆ ಸೆರಗು ಹಾಕಿಕೊಂಡು, ಮುಖತೋರಿಸದೆ ಕುಣಿಯ ತೊಡಗಿದರು. ಅವರ ಕಾಲಿನ ನಡಿಗೆಯಲ್ಲೂ ಕೈಗಳ ಚಲನೆಯಲ್ಲೂ ಜಾಣ್ಮೆ ಚೆಲುವುಗಳೆರಡೂ ಇದ್ದವು.

33. ಮಿತ್ರ ರೈಗಳ ಮನೆಯ ಪ್ರದೇಶವು ಸುತ್ತಲೂ ಉಸುಬಿನಿಂದ ಕೂಡಿದ್ದು ಮಧ್ಯಾಹ್ನದ ವೇಳೆ ನೆಲ್ಲಿಯ ನೀರು ಕಾದು ಬಿಸಿ ನೀರಾಗಿರುತ್ತಿತ್ತು. ಕಾರಂತರು ಬಿಸಿ ನೀರಿನ ಸ್ನಾನ ಮಾಡುವ ಅಭ್ಯಾಸವುಳ್ಳವರಾಗಿದ್ದರು. ಅವರ ಮಿತ್ರರಾದ ಶ್ರೀಪತಿಯವರು ತಣ್ಣೀರಿನ ಸ್ನಾನದ ಅಭ್ಯಾಸದವರು. ಹಾಗಾಗಿ ಅವರು ಬಿಸಿಯಾದ ನೀರನ್ನು ಆರಿಸಿ ಸ್ನಾನ ಮಾಡಬೇಕಾಗಿ ಬಂತು.

34. ಜಯಪುರದ ಜನರು ಬಣ್ಣದ ಬಗೆಗೆ ಬಹಳ ಮೋಹ ಉಳ್ಳವರು. ಇಲ್ಲಿನ ಹೆಂಗಸರು ರಂಗುರಂಗಿನ ಲಂಗ, ಪಾಯಿಜಾಮ, ಸೀರೆ, ರವಿಕೆ, ಮೇಲುದೆ ತೊಡುವ ಅಭ್ಯಾಸದವರು. ನಿತ್ಯವೂ ಅವರ ಬಟ್ಟೆಗಳು ಹೋಳಿ ಹುಣ್ಣಿಮೆ ಆಚರಣೆ ಮಾಡಿದವರಂತೆ ಕಾಣುತ್ತವೆ. ಗಂಡಸರು ರಂಗುರಾಯರೇ. ಅವರ ಪಂಚೆ, ಅಂಗಿಗಳಲ್ಲಿ ರಂಗು ಕಾಣಿಸದಿದ್ದರೂ ಮುಂಡಾಸಿನ ಮೂವತ್ತು ಮೊಳಗಳಲ್ಲಿ ಮುನ್ನೂರು ಬಣ್ಣ ಮೆರೆಯಿಸುವುದುಂಟು.

35. ಅಂಬೇರದ ಬುಡದಲ್ಲಿ ಒಂದು ಪುಟ್ಟಕೆರೆ. ಕೆರೆಯ ನೋಟ ಸುಂದರವಾಗಿದ್ದು ಸುತ್ತಲಿನ ಮರಗಳಲ್ಲಿ ಎಳೆ ಹಸುರು ತಳಿರುಗಳು ಚಿಗುರಿದ್ದು. ಮರಗಳು, ಹಚ್ಚಗೆ ಕಾಣಿಸುತ್ತಿದ್ದವು. ಮುಂದೆ ಸುಂದರ ಉದ್ಯಾನವನವಿದ್ದು ಕೆಂಪು ಕಲ್ಲಿನ ಹಳೆಯ ಕಾಲದ ಸುಂದರ ಪ್ರತಿಮೆಗಳಿವೆ. ರಜಪೂತ ಕೆತ್ತನೆಯ ಸರಳತೆ, ವೈಖರಿ, ಭವ್ಯತೆ ಕಾಣಬಹುದು.

36. ಅಂಬೇರ ಅರಮನೆಯ ಮೊದಲ ಅಂತಸ್ತಿನಲ್ಲಿ ಕನ್ನಡಿಯ ಚೂರುಗಳನ್ನು ಸುಣ್ಣದ ಗಾರೆಯಲ್ಲಿ ಅಂಟಿಸಿ, ಚಿತ್ರ ವಿಚಿತ್ರ ಪ್ರತಿರೂಪಗಳನ್ನು ನಿರ್ಮಿಸಿ ಅಲಂಕರಿಸಿದಂತಹ ಕಂಬ, ಮುಚ್ಚಿಕೆಗಳ್ಳ ರಚನೆಯಾಗಿದೆ. ಕತ್ತಲೆಯಲ್ಲಿ ದೀವಿಗೆ ಹೊತ್ತಿಸಿದಾಗ ಪ್ರತಿಬಿಂಬದಿಂದಾಗಿ ಚಾವಡಿಗೆ ನಕ್ಷತ್ರಲೋಕದ ಸೊಬಗು ಬರುತ್ತದೆ.

37. ಬೆಟ್ಟದಿಂದ ಇಳಿದು ಬಾಯಾರಿದ ಲೇಖಕರು ಬಣ್ಣಬಣ್ಣದ ಸೋಡಾ, ಲೆಮನೇಡ್ ಕುಡಿದರು. ಬಣ್ಣದ ಅಪಾರ ಮೋಹವಿರುವ ಅಲ್ಲಿನ ಜನ ಸೋಡಾ, ಲೆಮನೇಡ್ಗಳಿಗೂ ಕಡುಪಿನ ರಂಗನ್ನು ಕೊಟ್ಟಿದ್ದಾರೆ. ಅದನ್ನು ಕಂಡ ಲೇಖಕರಿಗೆ ಇದು ಪಾನೀಯವೋ ಶಾಹಿಯೋ ಎಂಬ ಭ್ರಮೆ ಉಂಟಾಯಿತು.

38. ಅಂಬೇರದಿಂದ ಗೋಧೂಳಿ ಸಮಯದಲ್ಲಿ ಮನೆಗೆ ಹಿಂದಿರುಗಿದ ಲೇಖಕರಿಗೆ ಅಲ್ಲಿನ ಹೊಲಗದ್ದೆಗಳಲ್ಲಿ ಕೋಳಿ, ಕಾಗೆಗಳಿಗಿಂತ ಅಗ್ಗವಾಗಿ ನವಿಲಿನ ಹಿಂಡು ಕಾಣಿಸಿತು. ಜಯಪುರದ ಜನರಿಗೆ ಬಣ್ಣದ ಕಣ್ಣು ಹುಟ್ಟಲು ಈ ನವಿಲುಗಳೇ ಪ್ರೇರಣೆ ಎಂದಿದ್ದಾರೆ.

V ಲೇಖಕರ ಪರಿಚಯ.

39. ಶಿವರಾಮ ಕಾರಂತರು 1902ರಲ್ಲಿ ಉಡುಪಿ ಜಿಲ್ಲೆಯ ಕೋಟದಲ್ಲಿ ಜನಿಸಿದರು. ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿರುವ ಇವರು ಚೋಮನದುಡಿ, ಮರಳಿಮಣ್ಣಿಗೆ, ಬೆಟ್ಟದ ಜೀವ, ಅಳಿದ ಮೇಲೆ, ಹಸಿವು, ಹಾವು, ಮೂಕಜ್ಜಿಯ ಕನಸುಗಳು ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಇವರ ಈ ಸಾಹಿತ್ಯ ಸಾಧನೆಗೆ ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮುಂತಾದ ಪ್ರಶಸ್ತಿಗಳು ಲಭಿಸಿವೆ.

VI ಸಂದರ್ಭ ಸಹಿತ ಸ್ವಾರಸ್ಯದ ಉತ್ತರಗಳು.

40. ಆಯ್ಕೆ : ಈ ವಾಕ್ಯವನ್ನು ಶಿವರಾಮ ಕಾರಂತರು ಬರೆದಿರುವ 'ಅಬುವಿನಿಂದ ಬರಾಮಕ್ಕೆ' ಪ್ರವಾಸ ಕಥನದ ಬೆಡಗಿನ ತಾಣ ಜಯಪುರ ಗದ್ಯದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಕಾರಂತರು ಜಯಪುರದ ಸ್ನೇಹಿತರಾದ ರೈಗಳ ಮನೆಗೆ ಬಂದಾಗ ಆ ಮನೆ ಸುತ್ತಲು ಮರಳಿನ ಉಸುಬಿನಿಂದ ಕೂಡಿದ್ದಾಗಿದ್ದು ಬಿಸಿಲಿಗೆ ನಲ್ಲಿಯ ನೀರು ಕಾದು ಬಿಸಿಯಾಗಿರುತ್ತಿತ್ತು ಎಂದು ಹೇಳಿದ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ:ಮರುಭೂಮಿಯಲ್ಲಿನ ವಾತಾವರಣದ ಪರಿಸ್ಥಿತಿ ಹೇಳುತ್ತಾ ನಲ್ಲಿಯ ನೀರು ಕಾಯಿಸದೆಯೇ ಬಿಸಿಯಾಗುತ್ತಿತ್ತು ಎಂದು ತಿಳಿಸುವುದು ಇದರ ಸ್ವಾರಸ್ಯವಾಗಿದೆ.

41. ಸಂದರ್ಭ: ಶಿವರಾಮಕಾರಂತರು 15 ವರ್ಷಗಳ ಹಿಂದೆ ಜಯಪುರದ ಅಂಬೇರಕ್ಕೆ ಭೇಟಿ ನೀಡಿದಾಗ ಅಲ್ಲಿನ ಪ್ರಾಚೀನ ಗುಡಿಗೋಪುರಗಳು ಗೂಬೆಗಳ ಮನೆಗಳಾಗಿದ್ದವು. ಆದರೆ ಈಗ ಅಲ್ಲಿ ನೂರಾರು ಸಿಂಧೀ ಕುಟುಂಬಗಳು ಮನೆ ಮಾಡಿಕೊಂಡಿವೆ ಎಂದು ಹೇಳಿದ ಸಂದರ್ಭದಲ್ಲಿ ಮಾತು ಬಂದಿದೆ.

ಸ್ವಾರಸ್ಯ:ಜಯಪುರ ಪ್ರವಾಸಿ ಕೇಂದ್ರವಾಗಿ ಬದಲಾದಂತೆ ಅಲ್ಲಿ ನೂರಾರು ಸಿಂಧಿ ಕುಟುಂಬಗಳಿಗೆ ಬದುಕಿಗೆ ದಾರಿಯನ್ನು ಕಲ್ಪಿಸಿದೆ ಎಂಬುದು ಇದರ ಸ್ವಾರಸ್ಯವಾಗಿದೆ.

42. ಸಂದರ್ಭ:ಅಂಬೇರ ಅರಮನೆಯ ಮೂರನೇ ಅಂತಸ್ತಿನ ಒಂದು ಚಾವಡಿಯಲ್ಲಿ ಕನ್ನಡಿಯ ಚೂರನ್ನು ಸುಣ್ಣದ ಗಾರೆಯಲ್ಲಿ ಗೋಡೆಗಳಿಗೆ ಅಂಟಿಸಲಾಗಿದೆ. ಇದು ಚಿತ್ರ ವಿಚಿತ್ರ ಪ್ರತಿರೂಪ ನೀಡುವ ಜೊತೆಗೆ ಕತ್ತಲೆಯಲ್ಲಿ ದೀಪ ಹಚ್ಚಿದಾಗ ಹೇಗೆ ಕಾಣುತ್ತಿತ್ತು ಎಂದು ಕಾರಂತರು ತಿಳಿಸಿದ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ:ದೀಪದ ಬೆಳಕು ಕತ್ತಲೆಯಲ್ಲಿ ಪ್ರತಿರೂಪ ತಾಳಿ ಆ ಕೊಠಡಿ ನಕ್ಷತ್ರ ಲೋಕದಂತೆ ಕಾಣುತ್ತಿತ್ತು ಎಂಬುದು ಇದರ ಸ್ವಾರಸ್ಯ.

43. ಸಂಧರ್ಭ:ಜಯಪುರದ ಜನರು ಬಣ್ಣದ ಬಗೆಗೆ ಅಪಾರ ಮೋಹ ಉಳ್ಳವರು. ಬಣ್ಣ ಹಾಕುವ ಕುಶಲಿಗರು ಈ ಊರಲ್ಲಿ ಬಹಳ ಮಂದಿ ಇದ್ದಾರೆ ಎಂದು ಕಾರಂತರು ಹೇಳಿದ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ:- ಜಯಪುರದ ಜನರ ಬಣ್ಣದ ವ್ಯಾಮೋಹ ಆ ಊರನ್ನ ಬಣ್ಣದ ತವರೂರನ್ನಾಗಿ ಮಾಡಿದೆ ಎಂಬುದು ಈ ಮಾತಿನ ಸ್ವಾರಸ್ಯ.

44. ಸಂಧರ್ಭ: ಅಂಬೇರದ ಬೆಟ್ಟ ಇಳಿದ ಶಿವರಾಮ ಕಾರಂತರು ದಾಹದಿಂದಾಗಿ ಅಲ್ಲಿನ ಸೋಡಾ, ಲೆಮನೆಡ್ಕುಡಿದರೂ ಅದರ ಬಣ್ಣ ಕಂಡು ಭ್ರಾಂತರಾದ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ:- ಸೋಡಾ ಲೆಮನೇಡ್ಗಳು ಪಾನೀಯಕ್ಕಿಂತ ಶಾಯಿಯಂತೆ ಕಾಣುತ್ತಿದ್ದವು. ಮತ್ತು ಅದು ಮಾತ್ರವೇ ಕುಡಿಯಲು ಲಭ್ಯವಾಗಿದ್ದು ಎಂದು ಲೇಖಕರು ಹೇಳಿದ್ದು ಇದರ ಸ್ವಾರಸ್ಯವಾಗಿದೆ.

45. ಸಂದರ್ಭ: ಕಾರಂತರು ಅಂಬೇರದ ಅರಮನೆ ವೀಕ್ಷಿಸಿ ಮನೆಗೆ ಹೊರಡುವಾಗ, ಹೊಲಗದ್ದೆಗಳಲ್ಲಿ ಕಾಗೆ, ಕೋಳಿಗಳಿಗಿಂತ ನವಿಲನ್ನು ಹೆಚ್ಚಾಗಿ ಕಂಡರು. ಜಯಪುರದ ಜನರಿಗೆ ಬಣ್ಣದ ಕಣ್ಣು ಹುಟ್ಟಲು ಇದೇ ಕಾರಣ ಎಂದು ಹೇಳಿದ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ:ಹೇರಳವಾಗಿ ಕಂಡು ಬರುವ ನವಿಲು ಅಲ್ಲಿನ ಸ್ತ್ರೀಯರಿಗೆ ಬಣ್ಣದ ಬಗೆಗಿನ ವ್ಯಾಮೋಹಕ್ಕೆ ಪ್ರೇರಣೆಯಾಗಿದೆ ಎಂಬುದು ಸ್ವಾರಸ್ಯ.

46. ಸಂಧರ್ಭ:ಊರಿನ ಜನಸಾಮಾನ್ಯರ ನೃತ್ಯವಾದ ಜಯಪುರದ ಜಾನಪದ ನೃತ್ಯದಲ್ಲಿ ಇಬ್ಬರು ಯೌವನಸ್ಥರು ಸ್ತ್ರೀಯರ ಉಡುಗೆ ತೊಟ್ಟು, ತಲೆಗೆ ಸೆರಗು ಹಾಕಿಕೊಂಡು, ಮುಖತೋರಿಸದೆ ಕುಣಿಯುತ್ತಿದ್ದರು. ಹಿಮ್ಮೇಳಕ್ಕೆ ಡೋಲು ತಮಟೆಗಳಿದ್ದವು ಎಂದು ಲೇಖಕರು ವಿವರಿಸಿದ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ: ಜಯಪುರದ ಜನರ ಜಾನಪದ ನೃತ್ಯದಲ್ಲಿ ಕಾಲಿನ ನಡಿಗೆ ಮತ್ತು ಕೈಗಳ ಚಲನೆಯಲ್ಲಿ ಜಾಣ್ಮೆ ಚೆಲುವು ಎರಡೂ ಇದೆ ಎಂಬುದು ಇದರ ಸ್ವಾರಸ್ಯವಾಗಿದೆ.

47. ಸಂದರ್ಭ: ಜಯಪುರದ ಸ್ತ್ರೀಯರು ರಂಗುರಂಗಿನ ಲಂಗ, ಪಾಯಿಜಾಮ, ಸೀರೆ, ರವಿಕೆ, ಮೇಲುದೆ ತೊಡುವ ಅಭ್ಯಾಸದವರು. ಅಂತೆಯೇ ಆಲ್ಲಿನ ಗಂಡಸರೂ ಸಹ ಬಣ್ಣದ ವ್ಯಾಮೋಹ ಉಳ್ಳವರು ಎಂದು ಕಾರಂತರು ಹೇಳಿದಾಗ ಈ ಮಾತು ಬಂದಿದೆ.

ಸ್ವಾರಸ್ಯ: ಜೈಪುರದಲ್ಲಿ ಬಣ್ಣದ ಬಗೆಗೆ ಕೇವಲ ಹೆಂಗಸರಿಗೆ ಮಾತ್ರವಲ್ಲ ಗಂಡಸರಿಗೂ ಮೋಹವಿದೆ ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ.

VII. ಎಂಟು ಹತ್ತು ವಾಕ್ಯದ ಪ್ರಶ್ನೆಗಳ ಉತ್ತರಗಳು.

48. ಜಯಪುರ ಬಣ್ಣಗಾರರ ತವರೂರು. ಬಣ್ಣ ಹಾಕುವ ಕುಶಲಿಗರು ಆ ಊರಿನಲ್ಲಿ ಬಹಳ ಮಂದಿ ಇದ್ದಾರೆ. ಬಣ್ಣದ ಮೋಹವಿರುವ ಜನರು ಬಹಳ ಇದ್ದಾರೆ. ಗಿಡಮರಗಳಿಲ್ಲದ ಸ್ಥಳದಲ್ಲಿ ವಾಸಿಸುವ ಜನರಿಗೆ ಕಣ್ಣಿನ ತಣಿವು ಹೇಗೆ ಬರಬೇಕು? ಹಾಗೆಂದೇ ಇಲ್ಲಿನ ಜನರು ಅದರಲ್ಲೂ ಹೆಂಗಸರು ರಂಗುರಂಗಿನ ಲಂಗ, ಪಾಯಿಜಾಮಾ ,ಸೀರೆ, ರವಿಕೆ, ಮೇಲುದೆ ತೊಡುವ ಅಭ್ಯಾಸದವರು. ಅವರಿಗೆ ಕೆಂಪು, ಕಿತ್ತಳೆ ,ಹಳದಿ ಎಂದರೆ ಪ್ರಾಣ ನಿತ್ಯವೂ ಹೋಳಿ ಹುಣ್ಣಿಮೆ ಮಾಡುವವರಂತೆ ಬಣ್ಣದ ಚೆಲ್ಲಾಟ ಅವರ ಬಟ್ಟೆಗಳಲ್ಲಿ ಕಾಣಬಹುದು. ಗಂಡಸರು ರಂಗುರಾಯರೇ ಅವರ ಪಂಚೆ ಅಂಗಿಗಳಲ್ಲಿ ಬಣ್ಣ ಕಾಣಿಸದಿದ್ದರೂ ಮುಂಡಾಸಿನ ಮೂವತ್ತು ಮೊಳಗಳಲ್ಲಿ ಮುನ್ನೂರು ಬಣ್ಣಗಳನ್ನು ಮೆರೆಯಿಸುವುದುಂಟು. ಸುತ್ತುಸುತ್ತಿನ ಅವರ ದೇಶಿಮುಂಡಾಸನ್ನು ಚೆನ್ನಾಗಿ ಬಿಗಿದು ಕೊಂಡಾಗ ಬಲುಗಂಭೀರವಾಗಿಯೇ ಕಾಣಿಸುತ್ತದೆ.

49. ಅಂಬೇರದ ಅರಮನೆಯ ಮೊದಲ ಅಂತಸ್ತಿನಲ್ಲಿ ಚಿತ್ರಕೆಲಸಗಳಿಂದ ಕೂಡಿದ ಹಾಲುಗಲ್ಲಿನ ರಚನೆಯ ಪುಟ್ಟ ದೇವಾಲಯವಿದೆ. ಅದರ ಗೋಡೆ, ನೆಲ, ಸ್ತಂಭಗಳು ಹಾಲುಗಲ್ಲಿನವೇ. ಮೇಲಿನ ಅಂಗಳವನ್ನೇರಿ ಹೋದರೆ ಅಲ್ಲಿ ದೊಡ್ಡದಾದ ಹಾಲುಗಲ್ಲಿನ ಸಭಾಂಗಣ ಕಂಡು ಬರುತ್ತದೆ. ಅದರ ಛಾವಣಿ ರಜಪುತಾನ ಶೈಲಿಯ ಕಮಾನು ಮತ್ತು ಕಂಬಗಳು ತುಂಬಾ ಲಲಿತವಾಗಿದ್ದು ಪರಸ್ಪರ ಹೊಂದಿಕೊಂಡು ಸುಂದರವಾಗಿಕಾ ಣುತ್ತದೆ. ಎದುರಿನ ಅಂಗಳ ಸಾಕಷ್ಟು ವಿಶಾಲವಾಗಿದೆ. ಅಲ್ಲಿಂದ ಮೂರನೆಯ ಅಂತಸ್ತಿಗೆ ಹೋದರೆ ರಾಜರ ಅಂತಃಪುರವಿದ್ದು ಅಲ್ಲಿನ ಕೆಲವು ಭಾಗಗಳಲ್ಲಿ ಚಂದ್ರಕಾಂತ ಶಿಲೆಯ ಸುಂದರ ಮಂಟಪಗಳಿವೆ. ಎಲೆಯನ್ನು ಕೆತ್ತಿ ಬಣ್ಣದ ಕಲ್ಲುಗಳಿಂದ ಕೊರೆದು ತುಂಬಿಸಿದ ಲತಾ ಪುಷ್ಪಗಳ ಚಿತ್ರಾವಳಿಗಳೂ ಇವೆ. ಇನ್ನೊಂದೆರಡು ಚಾವಡಿಗಳು ಕನ್ನಡಿಯ ಚೂರುಗಳನ್ನು ಸುಣ್ಣದ ಗಾರೆಯಲ್ಲಿ ಅಂಟಿಸಿ ಚಿತ್ರವಿಚಿತ್ರ ಪ್ರತಿರೂಪ ನಿರ್ಮಿಸಿ ಅಲಂಕರಿಸಲ್ಪಟ್ಟಿವೆ. ಕತ್ತಲಿನಲ್ಲಿ ದೀಪ ಹಚ್ಚಿದರೆ ಗಾಜಿನ ತುಣುಕುಗಳು ಚಾವಡಿಗೆ ನಕ್ಷತ್ರ ಲೋಕದ ಸೊಬಗನ್ನು ನೀಡುತ್ತದೆ.

50. ಜಂತ್ರಮಂತ್ರ ಹಳೆಯ ಕಾಲದ ಖಗೋಳ ವಿಜ್ಞಾನ ಪರಿಶೀಲನಾಲಯ. 400 -500 ವರ್ಷಗಳ ಪೂರ್ವದಲ್ಲಿ ಖಗೋಳಶಾಸ್ತ್ರಜ್ಞರು ಗ್ರಹ, ಸೂರ್ಯ, ಚಂದ್ರ, ತಾರಾಮಂಡಲಗಳನ್ನು ಅಳೆದು ಪರಿಶೀಲಿಸಿ ನೋಡುವ ಸಲುವಾಗಿ ಅಲ್ಲಿ ಚಿತ್ರವಿಚಿತ್ರವಾದ ಸಾಧನಗಳನ್ನು ನೆಟ್ಟಿದ್ದಾರೆ. ಅಂತಹ ಹತ್ತಾರು ವಿವಿಧ ಸಾಧನಗಳ ವಿಚಿತ್ರ ರಚನೆಗಳಿವೆ. ಗಳಿಗೆ ಅಳೆಯುವುದಕ್ಕೆ , ಪ್ರತಿಯೊಂದು ತಿಂಗಳಿನಲ್ಲೂ ಸೂರ್ಯ ನಕ್ಷತ್ರಗಳ ಗತಿ ಪರಿಶೀದಿಸುವುದಕ್ಕೆ ಏನೇನೋ ಏರ್ಪಾಟುಗಳಿವೆ. ಪ್ರತಿಯೊಂದು ಸಾಧನದ ಮೇಲು ಅವುಗಳ ಉಪಯೋಗ ಮತ್ತು ಕಾಲವನ್ನು ಅಳೆಯುವ ರೀತಿ ಮೊದಲಾದವನ್ನು ನಮೂದಿಸಿದೆ. ದೂರದರ್ಶಕ ಯಂತ್ರದ ಸಹಾಯವಿಲ್ಲದೆ ಬರಿಗಣ್ಣಿನಿಂದಲೇ ಖಗೋಳದ ಗ್ರಹಗಳ ಗತಿಯನ್ನು ಅಳೆಯಲು ಮಾಡಿದ ಈ ಸಾಧನಗಳು ಗಣಿತಕ್ಕೂ ಸೂಕ್ಷ್ಮಪರಿಶೀಲನೆಗೆ ಹಿರಿಯರು ಸಲ್ಲಿಸಿದ ಕಾಣಿಕೆ.

VIII. ಗಾದೆ ವಿಸ್ತರಿಸಿ ಬರೆಯುವುದು.

51. "ದೇಶ ಸುತ್ತಿ ನೋಡು ಕೋಶ ಓದಿನೋಡು"
ಗಾದೆಯ ಮಹತ್ವದ ವಿವರಣೆ
ಅರ್ಥದ ವಿವರಣೆ
ಭಾಷಾ ಶೈಲಿ

IX. ಪತ್ರಲೇಖನ.

52. ಖಾಸಗಿಪತ್ರ/ಗೆಳೆಯಅಥವಾಗೆಳತಿಗೆಪತ್ರ
ಇಂದವಿಳಾಸ,
ದಿನಾಂಕ,
ಸಂಬೋಧನೆ,
ಕ್ಷೇಮವಿಚಾರ
ಪತ್ರದಒಡಲು,
ವಿಷಯನಿರೂಪಣೆ.
ಮುಕ್ತಾಯ,

ಇಂತಿ,
ಸಹಿ,
ಹೊರವಿಳಾಸ.
ಭಾಷಾಶೈಲಿ, ಪದಬಳಕೆವಿನ್ಯಾಸ

X ಪ್ರಬಂಧ ರಚನೆ

53. ಪ್ರಸ್ತಾವನೆ /ಪೀಠಿಕೆ /ವಿಷಯಪ್ರವೇಶ
ಒಡಲು /ಸಮರ್ಥ ವಿವರಣೆಯೊಂದಿಗೆ ವಿಷಯ
ಉಪಸಂಹಾರ /ಮುಕ್ತಾಯ /ವಿಷಯ ಸಮಾಪ್ತಿ
ಭಾಷಾಶೈಲಿ.

3. ರಾಮರಾಜ್ಯ

I.

1. ಸಿ)ಆದೇಶಸಂಧಿ

2. ಬಿ)ಕರ್ಮಧಾರೆಯ ಸಮಾಸ

3. ಡಿ) ದ್ವಿಗುಸಮಾಸ

4. ಸಿ) ಕಣ್ಣಿಟ್ಟರು

5.ಎ) ಮಾಡಿದುದು + ಅಡುಗೆ

6.ಎ) ತತ್ಪುರುಷಸಮಾಸ

7.ಬಿ) ಆಗಮಸಂಧಿ

8.ಬಿ) ದ್ವಿಗುಸಮಾಸ

9.ಸಿ)ಆದೇಶಸಂಧಿ

10.ಬಿ) ಜಾವದಲ್ಲಿ + ಎದ್ದು

II)

11. ಗಮಕ ಸಮಾಸ

12. ಬುದ್ಧಿವಂತ

13. ಕ್ರಿಯಾ ಸಮಾಸ

14. ತತ್ಪುರುಷ ಸಮಾಸ

15. ಆದೇಶಸಂಧಿ

III)

16. ತೇಜಸ್ವಿಯಾದ ಭರತನು ಪ್ರಳಯ ಕಾಲದಲ್ಲಿ ಕೆಳಗೆ ಬಿದ್ದ ಸೂರ್ಯನಂತೆ ಕಾಣಿಸಿದನು.

17. ಅಮಾತ್ಯರು ರಾಜ್ಯಶಾಸ್ತ್ರ ವಿಷಯದಲ್ಲಿನಿ ಪುಣರಾಗಿರಬೇಕು.

18. ರಾಜನು ಮಂತ್ರಾಲೋಚನೆ ಕಾರ್ಯವನ್ನು ಕೂಡಲೇ ಆಚರಣೆಗೆ ತರಬೇಕು.

19. ಸಾವಿರ ಮೂರ್ಖರಿಗಿಂತಲೂ ಒಬ್ಬ ಪಂಡಿತನೆ ಲೇಸೆಂದು ರಾಮನು ಹೇಳುತ್ತಾನೆ.

20. ಕಷ್ಟಕಾಲದಲ್ಲಿ ಸಹಾಯಕ್ಕೆ ನಿಲ್ಲುವವನು ಪಂಡಿತ.

21. ರಾಜನಿಗೆ ಮಹತ್ತರವಾದ ಶ್ರೇಯಸ್ಸನ್ನು ಸಚಿವನು ತಂದು ಕೊಡಬಲ್ಲನು.

22. ಉತ್ತಮರಾದ ಅಧಿಕಾರಿಗಳನ್ನು ಮೇಲ್ಮಟ್ಟದ ಕಾರ್ಯದಲ್ಲಿ ನೇಮಿಸಬೇಕು.

23. ಉಪಾಯದಿಂದ ಹಣ ಕೀಳುವ ವೈದ್ಯನನ್ನು ರಾಜನು ತ್ಯಜಿಸಬೇಕು.

24. ದೇಶಭ್ರಷ್ಟಗೊಳಿಸಿದ ಶತ್ರುಗಳು ದೇಶಕ್ಕೆ ದೊಡ್ಡ ಗಂಡಾಂತರವನ್ನು ತರಬಲ್ಲರು.

25. ಅನುಭವವಿಲ್ಲದ ಅವಿವೇಕಿಗಳೊಡನೆ ಸಮಾಲೋಚಿಸುವುದು ರಾಜದೋಷವೆಂದು ರಾಮನು ಹೇಳುತ್ತಾನೆ.

26. ಬುದ್ಧಿಶಾಲಿಯಾದ ರಾಜನು ದಂಡಾಧಿಕಾರಿಯಾಗಿ ಧರ್ಮದಿಂದ ಪ್ರಜೆಗಳನ್ನು ಪಾಲಿಸಬೇಕು.

27. ರಾಜನಾದವನು ಪ್ರಮುಖ ನಿರ್ಣಯಕ್ಕೆ ಬರುವ ಮುನ್ನ ನಾಲ್ವರು ಪ್ರಾಜ್ಞ ಮಂತ್ರಿಗಳೊಡನೆ ಸಮಾಲೋಚಿಸಬೇಕು.

IV)

28. ರಾಜ್ಯಶಾಸ್ತ್ರ ನಿಪುಣರಾದ ಅಮಾತ್ಯರೊಂದಿಗೆ ಮಂತ್ರಾಲೋಚನೆಯನ್ನು ಗೌಪ್ಯವಾಗಿ ನಡೆಸಬೇಕು. ಮಂತ್ರಾಲೋಚನೆಗೆ ಅಗತ್ಯಕ್ಕಿಂತ ಹೆಚ್ಚಿನ ಮಂದಿಯನ್ನು ಸೇರಿಸಿಕೊಳ್ಳಬಾರದು. ಮಂತ್ರಾಲೋಚನೆಯ ವಿಷಯವು ಕಾರ್ಯರೂಪಕ್ಕೆ ಬರುವುದರೊಳಗೆ ರಾಷ್ಟ್ರದಲ್ಲಿ ಬಹಿರಂಗವಾಗಬಾರದು . ಮೊದಲೇ ಸಾಮಂತ ರಾಜರಿಗೆ ತಿಳಿಯಬಾರದು. ಅದು ಸಾಮಂತರಿಗೆ ಗೊತ್ತಾಗುವಷ್ಟರಲ್ಲಿ ಪೂರ್ಣವಾಗಿ ನಡೆದು ಹೋಗಿರಬೇಕು ಇಲ್ಲವೇ ಅರ್ಧದಷ್ಟು ಆದರೂ ಆಚರಣೆಯಲ್ಲಿ ಬಂದಿರಬೇಕು.
29. ಸಾವಿರ ಮೂರ್ಖರಿಗಿಂತ ಒಬ್ಬ ಪಂಡಿತನೇ ಲೇಸು. ಏಕೆಂದರೆ ಕಷ್ಟಕಾಲದಲ್ಲಿ ಪಂಡಿತನೊಬ್ಬನೇ ಸರಿಯಾದ ಉಪಾಯವನ್ನು ಬೋಧಿಸಿ ಕಾರ್ಯವನ್ನು ನಿರ್ವಹಿಸಬಲ್ಲ. ಮೂರ್ಖರ ಸಂಖ್ಯೆ ಸಾವಿರವಿರಲಿ, ಹತ್ತು ಸಾವಿರವೇ ಇರಲಿ, ರಾಜನಿಗೆ ಅದರಿಂದ ಯಾವ ಸಹಾಯವು ಆಗುವುದಿಲ್ಲ.
30. ಅಮಾತ್ಯನು ರಾಜ್ಯಶಾಸ್ತ್ರ ನಿಪುಣನಾಗಿರಬೇಕು. ಮಂತ್ರಾಲೋಚನೆಯನ್ನು ಗೌಪ್ಯವಾಗಿ ಇಡುವವ ನಾಗಿರ ಬೇಕು. ಮೇಧಾವಿಯೂ ಶೂರನೂ ಕರ್ಯದಕ್ಷನೂ ಆಗಿರಬೇಕು. ಲಂಚವನ್ನು ಮುಟ್ಟದವನೂ ಪ್ರಾಮಾಣಿಕನೂ ಆಗಿರಬೇಕು. ರಾಜ್ಯದ ಆಡಳಿತವನ್ನು ಸರಿಯಾಗಿ ನಿರ್ವಹಿಸಿ ರಾಜನಿಗೆ ಶ್ರೇಯಸ್ಸನ್ನು ತಂದು ಕೊಡಬಲ್ಲವನಾಗಿರಬೇಕು.
31. ಉಪಾಯದಿಂದ ಹಣ ಕೀಳುವ ವೈದ್ಯನನ್ನೂ, ಒಡೆಯನನ್ನು ದೂಷಿಸುವ ಸೇವಕನನ್ನೂ, ಖಜಾನೆಯ ಐಶ್ವರ್ಯದ ಮೇಲೆ ಕಣ್ಣಿಟ್ಟಿರುವ ಸೈನಿಕನನ್ನೂ ರಾಜನು ತ್ಯಜಿಸಬೇಕು. ಏಕೆಂದರೆ ಈ ವ್ಯಕ್ತಿಗಳ ಕುತಂತ್ರದಿಂದಲೇ ರಾಜನು ವಿಪತ್ತಿನಲ್ಲಿ ಸಿಕ್ಕಿಕೊಳ್ಳಬಹುದು. ಆದ್ದರಿಂದ ಇವರಿಗೆ ಉಗ್ರಶಿಕ್ಷೆಯನ್ನು ನೀಡಿ ರಾಜನು ತನ್ನಿಂದ ಇಂಥವರನ್ನು ದೂರವಿಡಬೇಕು .
32. ದೇಶದಿಂದ ಹೊರಗೆ ಓಡಿಸಿದ ಶತ್ರುಗಳು ಕಾಲಾನಂತರದಲ್ಲಿ ಪುನಃ ದೇಶದೊಳಗೆ ಬಂದು ಸೇರಿಕೊಂಡರೆ, ಅವರು ಕೈಲಾಗದ ದುರ್ಬಲರು ಎಂದು ಉಪೇಕ್ಷೆ ಮಾಡಬಾರದು. ಏಕೆಂದರೆ ದೇಶಭ್ರಷ್ಟಗೊಳಿಸಿದ ಶತ್ರುಗಳು ಮರಳಿ ದೇಶದೊಳಗೆ ಸೇರಿಕೊಂಡರೆಂದರೆ ಅವರು ಮುಂದೆ ಒಂದು ದಿನ ದೇಶಕ್ಕೆ ದೊಡ್ಡ ಗಂಡಾಂತರವನ್ನು ತರುವ ಸಾಧ್ಯತೆ ಹೆಚ್ಚಾಗಿರುತ್ತದೆ.
33. ನಮ್ಮ ದೇಶದಲ್ಲಿ ಹುಟ್ಟಿ ಬೆಳೆದ ವಿದ್ವಾಂಸನವನ್ನು ದೂತನನ್ನಾಗಿ ನೇಮಿಸಿಕೊಳ್ಳಬೇಕು. ದೂತನು ಕಾರ್ಯ ಸಮರ್ಥನೂ ಪ್ರತಿಭಾಶಾಲಿಯೂ ಆಗಿರಬೇಕು. ಹೇಳಿ ಕಳಿಸಿದ ಸಂದೇಶವನ್ನಷ್ಟೇ ತಿಳಿಸುವ ಸತ್ಯವಂತನಾಗಿರಬೇಕು. ವ್ಯಕ್ತಿ, ವಸ್ತುಗಳ ಮೌಲ್ಯವನ್ನೂ ಯೋಗ್ಯತೆಯನ್ನೂ ಸರಿಯಾಗಿ ಗುರುತಿಸಬಲ್ಲ ನಿಷ್ಣಾತನಾಗಿರಬೇಕು.
34. ಸೇವಕರು ನಿರ್ಭಯರಾಗಿ ಬಂದು ಎದುರಿಗೆ ನಿಲ್ಲುವಷ್ಟು ಸಲಿಗೆಯನ್ನು ಕೊಡಬಾರದು. ಅಥವಾ ಹತ್ತಿರವೇ ಸುಳಿಯದೆ ದೂರಕ್ಕೆ ಸರಿಯುವಂತೆ ಅಂಜಿಸಲೂ ಬಾರದು. ಅವರ ವಿಷಯದಲ್ಲಿ ಹೆಚ್ಚು ಸಲಿಗೆಯೂ ಸಲ್ಲದು ಹೆಚ್ಚು ಅಂಜಿಸುವುದೂ ಸಲ್ಲದು. ಇವೆರಡರ ನಡುದಾರಿಯನ್ನು ರಾಜನು ಕಾಯ್ದುಕೊಳ್ಳಬೇಕು ಎಂದು ರಾಮನು ಹೇಳುತ್ತಾನೆ.
35. ಆದಾಯವು ವ್ಯಯಕ್ಕಿಂತ ಹೆಚ್ಚಿರಬೇಕು. ರಾಜ್ಯದ ಬೊಕ್ಕಸದಲ್ಲಿ ಸಂಗ್ರಹಿಸುವ ಸಂಪತ್ತು ರಾಜ್ಯದ ಅಭಿವೃದ್ಧಿಯ ಕೆಲಸ ಕಾರ್ಯಗಳಿಗೆ ವಿನಿಯೋಗವಾಗಬೇಕು. ಖಜಾನೆಯನ್ನು ಬರಿದು ಗೊಳಿಸಬಾರದು . ಹಾಗೆಂದು ಅದನ್ನು ತುಳುಕುವಷ್ಟು ತುಂಬಿಸಿಕೊಳ್ಳಲು ಅನರ್ಥ ಅನ್ಯಾಯಗಳ ಮಾರ್ಗವನ್ನು ಹಿಡಿಯಬಾರದು ಎಂದು ರಾಮನು ಖಜಾನೆಯನ್ನು ನಿಭಾಯಿಸುವ ಬಗ್ಗೆ ಹೇಳುತ್ತಾನೆ.

V)

36. ಎನ್. ರಂಗನಾಥಶರ್ಮಾ

ಎನ್. ರಂಗನಾಥಶರ್ಮಾರವರು ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ನಡಹಳ್ಳಿ ಎಂಬ ಗ್ರಾಮದಲ್ಲಿ 1916 ರಂದು ಜನಿಸಿದರು. ಕನ್ನಡ ಮತ್ತು ಸಂಸ್ಕೃತ ಎರಡು ಭಾಷೆಗಳಲ್ಲಿ ಪ್ರಾವೀಣ್ಯತೆಯನ್ನು ಪಡೆದ ಇವರು ಏಕಚಕ್ರಂ, ಬಾಹುಬಲಿ ವಿಜಯಂ, ಗುರುಪಾರ ಮಿತ್ರ ಚರಿತಂ, ಭಾಷಾಂತರ ಪಥ, ಲೌಕಿಕ ನ್ಯಾಯಗಳು, ಉಪನಿಷತ್ತಿನ ಕಥೆಗಳು, ವಾಲ್ಮೀಕಿ ರಾಮಾಯಣ, ಅಮರಕೋಶ, ವಿದುರನೀತಿ, ವಾಲ್ಮೀಕಿಮುನಿಗಳ ಹಾಸ್ಯ ಪ್ರವೃತ್ತಿ, ವಿದ್ಯಾರಣ್ಯರ ಪಂಚದಶಿ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ರಾಜ್ಯೋತ್ಸವ ಪ್ರಶಸ್ತಿ, ಮಹಾಮಹೋಪಾಧ್ಯಾಯ ಪ್ರಶಸ್ತಿ, ಚುಂಚಶ್ರೀ ಪ್ರಶಸ್ತಿ, ಗೌರವ ಡಾಕ್ಟರೇಟ್ ಪದವಿ ಮೊದಲಾದ
ಪ್ರಶಸ್ತಿಗಳು ಲಭಿಸಿವೆ.

37. ತುಂಬಿದ ಕೊಡ ತುಳುಕುವುದಿಲ್ಲ

ಗಾದೆ ವೇದಕ್ಕೆ ಸಮಾನ ವೇದ ಸುಳ್ಳಾದರೂ ಗಾದೆ ಸುಳ್ಳಾಗದು. ಗಾದೆಯು ಹಿರಿಯರು ಬಿಟ್ಟುಹೋದ ಅನುಭವದ ಸಾರ. ಗಾದೆಗಳು ಒಳ ಅರ್ಥವನ್ನು ಹೊಂದಿರುತ್ತದೆ.

ತುಂಬಿದ ಕೊಡ ತುಳುಕುವುದಿಲ್ಲ ಎಂದರೆ ಕೊಡದಲ್ಲಿ ನೀರುಪೂರ್ತಿಯಾಗಿ ತುಂಬಿದ್ದರೆ ಚೆಲ್ಲುವುದಿಲ್ಲ ಎಂದರ್ಥ. ಆದರೆ ಅದೇ ಕೊಡದಲ್ಲಿ ನೀರು ಅರ್ಧ ತುಂಬಿದ್ದರೆ ಅದು ತುಳುಕುತ್ತದೆ. ಇದರ ಒಳ ಅರ್ಥ ಏನೆಂದರೆ ತುಂಬಿದ ಕೊಡಚೆಲ್ಲದ ರೀತಿಯಲ್ಲೇ ಒಬ್ಬ ಜ್ಞಾನಿಯು ತನ್ನ ಹೆಸರು, ಕೀರ್ತಿ ಸಾಹಸ, ಸಾಧನೆಗಳನ್ನು ತಾನೇ ಪ್ರಚಾರ ಮಾಡುವುದಿಲ್ಲ. ಅವನು ಪ್ರಚಾರಪ್ರಿಯನಲ್ಲ . ಆದರೆ ತನ್ನ ಸಾಧನೆಗಳಿಂದ ಜನರೇ ತನ್ನನ್ನು ಗುರುತಿಸುವಂತೆ ಮಾಡುತ್ತಾನೆ. ಅವನಲ್ಲಿ ಸ್ವಾರ್ಥವಾಗಲಿ, ಅಹಂಕಾರವಾಗಲೀ ಇರುವುದಿಲ್ಲ.

ಅರೆಬರೆ ತಿಳಿದವನು ತನಗೆ ಅರ್ಧಂಬರ್ಧ ತಿಳಿದ ವಿಷಯಗಳು ಸಂಪೂರ್ಣವಾಗಿ ಗೊತ್ತಿದೆ ಎಂಬಂತೆ ನಟಿಸುತ್ತಾನೆ. ತಾನೇ ಜ್ಞಾನಿ ಎಂಬ ಅಜ್ಞಾನದಲ್ಲೇ ಇರುತ್ತಾನೆ. ಇವರು ಪ್ರಚಾರ ಪ್ರಿಯರಾಗಿರುತ್ತಾರೆ. ಅಹಂಕಾರಿಗಳು ಮತ್ತು ಸ್ವಾರ್ಥಿಗಳಾಗಿ ಬದುಕುತ್ತಾರೆ. ಸದಾಸದ್ದು ಮಾಡುತ್ತಾ ಇರುತ್ತಾರೆ. ಸಂಪೂರ್ಣ ಜ್ಞಾನವನ್ನು ಪಡೆದವನು ತನ್ನನ್ನು ತಾನು ಬಣ್ಣಿಸದೆ ಮೌನಿಯಾಗಿದ್ದು ಪರರಿಗೆ ಉಪಕಾರಿಯಾಗಿ ಬದುಕುತ್ತಾನೆ ಎಂಬುವುದು ಈ ಗಾದೆ ಮಾತಿನ ತಾತ್ಪರ್ಯ.

38. ಬೆಳ್ಳಗಿರುವುದೆಲ್ಲ ಹಾಲಲ್ಲ

ಗಾದೆ ವೇದಕ್ಕೆ ಸಮಾನ. ವೇದ ಸುಳ್ಳಾದರು ಗಾದೆ ಸುಳ್ಳಾಗದು. ಗಾದೆಗಳು ನಮ್ಮ ಹಿರಿಯರ ಅನುಭವದ ನುಡಿಮುತ್ತುಗಳಾಗಿವೆ.

ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ ಎಂಬ ಮಾತಿದೆ. ಕೇವಲ ಹೊರಗಿನ ಬಣ್ಣ ಅಥವಾ ಬಾಹ್ಯರೂಪವನ್ನು ನೋಡಿ ಒಂದು ವಸ್ತು ಅಥವಾ ವ್ಯಕ್ತಿಯ ಬಗ್ಗೆ ನಿರ್ಧಾರ ಮಾಡಬಾರದು. ಹಾಲು ಮತ್ತು ಸುಣ್ಣ ನೋಡಲು ಎರಡು ಬಿಳಿಯಾಗಿರುತ್ತದೆ. ಸುಣ್ಣಬಿಳಿಯಾಗಿರುವುದೆಂದ ಮಾತ್ರಕ್ಕೆ ಹಾಲಿನ ಗುಣ ಅದಕ್ಕೆ ಬರಲು ಸಾಧ್ಯವಿಲ್ಲ. ಸುಣ್ಣವನ್ನು ಹಾಲೆಂದು ಭಾವಿಸಿ ಕುಡಿದರೆ ಮುಂದೆ ಆಗುವ ಅನಾಹುತಕ್ಕೆ ನಾವೇ ಆಹ್ವಾನ ಕೊಟ್ಟಂತೆ. ಆದ್ದರಿಂದ ಎದುರಿಗೆ ಇರುವ ವಸ್ತು ಅಥವಾ ವ್ಯಕ್ತಿಯ ಗುಣನಡತೆಯಿಂದ ಅವರೊಂದಿಗಿನ ಒಡನಾಟದಿಂದ ಅವರು ಎಂತಹವರು ಎಂಬ ತೀರ್ಮಾನಕ್ಕೆ ಬರಬೇಕು. ಹೊಳೆಯುವುದೆಲ್ಲ ಚಿನ್ನವಲ್ಲ ಎಂಬ ಮಾತು ಸದಾ ನಮ್ಮ ನೆನಪಿನಲ್ಲಿರಬೇಕು ಎಂಬುದನ್ನು ಮೇಲಿನ ಗಾದೆ ಮಾತು ತಿಳಿಸುತ್ತದೆ.

VI)

. ಆಯ್ಕೆ: ಈ ವಾಕ್ಯವನ್ನು ಎನ್. ರಂಗನಾಥ ಶರ್ಮಾರವರ 'ಶ್ರೀಮದ್ವಾಲ್ಮೀಕಿ ರಾಮಾಯಣಮ್' ಕೃತಿಯ ಅಯೋಧ್ಯಕಾಂಡ ಸಂಪುಟದಿಂದ ಆಯ್ದ 'ರಾಮರಾಜ್ಯ' ಎಂಬ ಗದ್ಯದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಶ್ರೀರಾಮನು ಭರತನಿಗೆ ಸಾವಿರ ಮೂರ್ಖರಿಗಿಂತ ಒಬ್ಬ ಪಂಡಿತ ಲೇಸು. ಏಕೆಂದರೆ ಕಷ್ಟಕಾಲದಲ್ಲಿ ಪಂಡಿತನೊಬ್ಬನೇ ಸರಿಯಾದ ಉಪಾಯವನ್ನು ಬೋಧಿಸಿಕಾರ್ಯವನ್ನು ನಿರ್ವಹಿಸಬಲ್ಲ. ಮೂರ್ಖರ ಸಂಖ್ಯೆ ಸಾವಿರವಿರಲಿ, ಹತ್ತು ಸಾವಿರವಿರಲಿ ಅವರಿಂದ ರಾಜನಿಗೆ ಯಾವ ಪ್ರಯೋಜನವೂ ಇಲ್ಲ. ಎಂದು ಹೇಳುವ ಸಂದರ್ಭವಾಗಿದೆ.

ಸ್ವಾರಸ್ಯ: ಇಲ್ಲಿ ಪಂಡಿತರ ಪ್ರಾಮಾಣಿಕತೆ ಮತ್ತು ಕಾರ್ಯದಕ್ಷತೆಯನ್ನು ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

40. ಆಯ್ಕೆ: ಈ ವಾಕ್ಯವನ್ನುಎನ್. ರಂಗನಾಥ ಶರ್ಮಾರವರ 'ಶ್ರೀಮದ್ವಾಲ್ಮೀಕಿ ರಾಮಾಯಣಮ್' ಕೃತಿಯ ಅಯೋಧ್ಯಕಾಂಡ ಸಂಪುಟದಿಂದ ಆಯ್ದ 'ರಾಮರಾಜ್ಯ' ಎಂಬ ಗದ್ಯದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಶ್ರೀರಾಮನು ಭರತನಿಗೆ ಉಪಾಯದಿಂದ ಹಣ ಕೀಳುವ ವೈದ್ಯನನ್ನು, ಒಡೆಯನನ್ನು ದೂಷಿಸುವ ಸೇವಕನನ್ನು, ಖಜಾನೆ ಐಶ್ವರ್ಯದ ಮೇಲೆ ಕಣ್ಣಿಟ್ಟಿರುವ ಸೈನಿಕನನ್ನು ರಾಜನು ತ್ಯಜಿಸಬೇಕು. ಅವರಿಗೆ ಉಗ್ರಶಿಕ್ಷೆಯನ್ನು ಕೊಡಬೇಕು. ಇಲ್ಲದಿದ್ದರೆ ಈ ವ್ಯಕ್ತಿಗಳ ಕುತಂತ್ರದಿಂದಲೇ ರಾಜನು ವಿಪತ್ತಿನಲ್ಲಿಸಿಕ್ಕಿಕೊಳ್ಳಬಹುದು ಎಂದು ಹೇಳುವ ಸಂದರ್ಭವಾಗಿದೆ.

ಸ್ವಾರಸ್ಯ: ರಾಜನಾದವನು ವಿಪತ್ತಿಗೆ ಸಿಕ್ಕಿಸುವ ವ್ಯಕ್ತಿಗಳಿಂದ ದೂರವಾಗಿರಬೇಕೆಂದು ಹೇಳಿರುವ ಮಾತು ಸ್ವಾರಸ್ಯ ಪೂರ್ಣವಾಗಿದೆ.

41.ಆಯ್ಕೆ:ಈ ವಾಕ್ಯವನ್ನು ಎನ್. ರಂಗನಾಥಶರ್ಮಾರವರ 'ಶ್ರೀಮದ್ವಾಲ್ಮೀಕಿ ರಾಮಾಯಣಮ್' ಕೃತಿಯ ಅಯೋಧ್ಯಕಾಂಡ ಸಂಪುಟದಿಂದ ಆಯ್ದ 'ರಾಮರಾಜ್ಯ' ಎಂಬ ಗದ್ಯದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ರಾಮನು ಭರತನಿಗೆ ನಮ್ಮ ದೇಶದಲ್ಲಿ ಹುಟ್ಟಿಬೆಳೆದ ವಿದ್ವಾಂಸನನ್ನು ದೂತನನ್ನಾಗಿ ನೇಮಿಸಿಕೊಳ್ಳಬೇಕು. ಆ ದೂತನು ಕಾರ್ಯಸಮರ್ಥನು ಮತ್ತು ಪ್ರತಿಭಾಶಾಲಿಯು ಆಗಿರಬೇಕು. ಹೇಳಿ ಕಳಿಸಿದ ಸಂದೇಶವನ್ನು ಅಷ್ಟೇ ತಿಳಿಸುವ ಸತ್ಯವಂತನಾಗಿ ಇರಬೇಕೆಂದು ಹೇಳುವ ಸಂದರ್ಭವಾಗಿದೆ.

ಸ್ವಾರಸ್ಯ: ಇಲ್ಲಿ ದೂತನಲ್ಲಿ ಇರಬೇಕಾದ ಗುಣಗಳನ್ನು ಸ್ವಾರಸ್ಯಪೂರ್ಣವಾಗಿ ತಿಳಿಸಲಾಗಿದೆ.

42.ಆಯ್ಕೆ:ಈ ವಾಕ್ಯವನ್ನು ಎನ್. ರಂಗನಾಥಶರ್ಮಾರವರ 'ಶ್ರೀಮದ್ವಾಲ್ಮೀಕಿ ರಾಮಾಯಣಮ್' ಕೃತಿಯ ಅಯೋಧ್ಯಕಾಂಡ ಸಂಪುಟದಿಂದ ಆಯ್ದ 'ರಾಮರಾಜ್ಯ' ಎಂಬ ಗದ್ಯದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ರಾಮನು ಭರತನಿಗೆ ನಿನ್ನ ಆದಾಯವು ವ್ಯಯಕ್ಕಿಂತ ಹೆಚ್ಚಾಗಿರಬೇಕು. ರಾಜ್ಯದ ಬೊಕ್ಕಸದಲ್ಲಿರುವ ಸಂಪತ್ತನ್ನು ರಾಜ್ಯದ ಅಭಿವೃದ್ಧಿಕೆ ಲಸಗಳಿಗೆ ವಿನಿಯೋಗಿಸಬೇಕು. ಖಜಾನೆಯನ್ನು ಬರಿದುಗೊಳಿಸಬಾರದು. ಹಾಗೆಂದು ಅದನ್ನು ತುಂಬಿಸಲು ಅನರ್ಥ, ಅನ್ಯಾಯಗಳ ಮಾರ್ಗಗಳನ್ನು ಹಿಡಿಯಬಾರದು ಎಂದು ಹೇಳುವ ಸಂದರ್ಭವಾಗಿದೆ.

ಸ್ವಾರಸ್ಯ: ರಾಜನಾದವನು ರಾಜ್ಯದ ಬೊಕ್ಕಸವನ್ನು ಹೇಗೆ ನಿರ್ವಹಿಸಬೇಕೆಂದು ಹೇಳಿರುವುದು ಇಲ್ಲಿ ಸ್ವಾರಸ್ಯ ಪೂರ್ಣವಾಗಿದೆ.

43.ಆಯ್ಕೆ :ಈ ವಾಕ್ಯವನ್ನು ಎನ್. ರಂಗನಾಥಶರ್ಮಾರವರ 'ಶ್ರೀಮದ್ವಾಲ್ಮೀಕಿ ರಾಮಾಯಣಮ್' ಕೃತಿಯ ಅಯೋಧ್ಯಕಾಂಡ ಸಂಪುಟದಿಂದ ಆಯ್ದ 'ರಾಮರಾಜ್ಯ' ಎಂಬ ಗದ್ಯದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಶ್ರೀರಾಮನು ಭರತನೊಂದಿಗೆ ರಾಜದೋಷಗಳ ಬಗ್ಗೆ ಚರ್ಚಿಸುತ್ತಾ, ರಾಜನಾದವನು ಯಾವ ಸದ್ಗುಣಗಳನ್ನು ಹೊಂದಿರಬೇಕು ಎಂದು ತಿಳಿಸಿಪೂರ್ವಿಕರ ವ್ಯಕ್ತಿತ್ವದ ಅತ್ಯುತ್ತಮ ಅಂಶಗಳನ್ನು ರಾಜನು ಅಳವಡಿಸಿಕೊಳ್ಳಬೇಕು. ಬುದ್ಧಿಶಾಲಿಯಾದ ರಾಜನು ದಂಡಾಧಿಕಾರಿಯಾಗಿ ಧರ್ಮದಿಂದ ಪ್ರಜೆಗಳನ್ನು ಪಾಲಿಸಬೇಕು ಎಂದು ಹೇಳುವ ಸಂದರ್ಭವಾಗಿದೆ.

ಸ್ವಾರಸ್ಯ: ಇಲ್ಲಿ ಬುದ್ಧಿಶಾಲಿಯಾದ ರಾಜನು ಹೇಗೆ ಆಳ್ವಿಕೆಯನ್ನು ಮಾಡಬೇಕೆಂಬುದನ್ನು ಸ್ವಾರಸ್ಯಪೂರ್ಣವಾಗಿ ತಿಳಿಸಲಾಗಿದೆ.

VII)

44.ರಾಜ್ಯವನ್ನು ಆಳತಕ್ಕವರಿಗೆ ಮಂತ್ರಾಲೋಚನೆಯು ಮುಖ್ಯವಾದದ್ದು. ಅದನ್ನು ಗೌಪ್ಯವಾಗಿ ಇಟ್ಟಿರಬೇಕು. ಮೇಧಾವಿಯೂ ಶೂರನೂ, ಕಾರ್ಯದಕ್ಷನೂ ,ರಾಜ್ಯಶಾಸ್ತ್ರ ವಿಶಾರದನೂ ಆದ ಸಚಿವನನ್ನು ರಾಜನು ಹೊಂದಿರಬೇಕು. ಅವನು ಆಡಳಿತದಲ್ಲಿ ರಾಜನಿಗೆ ಶ್ರೇಯಸ್ಸನ್ನು ತಂದು ಕೊಡುವನು ಅಧಿಕಾರಿಗಳನ್ನು ಅವರ ಕುಶಲತೆಗೆ ಯೋಗ್ಯತೆಗೆ ತಕ್ಕಂತೆ ನೇಮಿಸಿಕೊಳ್ಳಬೇಕು . ಸೇನಾನಾಯಕರನ್ನು ಸೈನಿಕರನ್ನು ರಾಜನು ಚೆನ್ನಾಗಿ ನೋಡಿಕೊಳ್ಳಬೇಕು. ದೇಶದಲ್ಲಿಯೇ ಹುಟ್ಟಿ ಬೆಳೆದ ವಿದ್ವಾಂಸನನ್ನು ದೂತನನ್ನಾಗಿ ನೇಮಿಸಿಕೊಳ್ಳಬೇಕು. ಶತ್ರು ಪಕ್ಷದಲ್ಲಿನ ಇಲಾಖೆಗಳನ್ನು ಗಮನಿಸಲು ಗೂಢಚಾರರನ್ನು ನೇಮಿಸಬೇಕು. ರಾಜ್ಯದ ಬೊಕ್ಕಸದಲ್ಲಿನ ಸಂಪತ್ತನ್ನು ಅಭಿವೃದ್ಧಿಯ ಕೆಲಸಕಾರ್ಯಗಳಿಗೆ ಉಪಯೋಗಿಸಬೇಕು. ವ್ಯಯಕ್ಕಿಂತ ಆದಾಯವು ಹೆಚ್ಚಿರುವ ಹಾಗೆ ರಾಜನು ನೋಡಿಕೊಳ್ಳಬೇಕು. ರಾಜನು ಯಂತ್ರಜ್ಞರನ್ನು, ಶಿಲ್ಪಿಗಳನ್ನು ,ಆಯುಧಗಳನ್ನು ಧನುರ್ಧಾರಿಗಳಾದ ಸೈನಿಕರನ್ನು ಹೊಂದಿರಬೇಕು. ರಾಜನಲ್ಲಿ ಸಂಭವಿಸಬಹುದಾದ ಹದಿನಾಲ್ಕು ದೋಷಗಳಿಂದ ದೂರವಿರಬೇಕು. ಪ್ರಮುಖ ನಿರ್ಣಯಕ್ಕೆ ಮೊದಲು ನಾಲ್ವರು ಪ್ರಾಜ್ಞಮಂತ್ರಿಗಳೊಡನೆ ಸಮಾಲೋಚಿಸಬೇಕು. ಪೂರ್ವಿಕರ ವ್ಯಕ್ತಿತ್ವದ ಅತ್ಯುತ್ತಮ ಅಂಶಗಳನ್ನು ಅಳವಡಿಸಿಕೊಳ್ಳಬೇಕು. ಬುದ್ಧಿವಂತನಾದ ರಾಜನು ದಂಡಾಧಿಕಾರಿಯಾಗಿ ಧರ್ಮದಿಂದ ಪ್ರಜೆಗಳನ್ನು ಪಾಲಿಸಬೇಕು.

45. ರಾಜನಲ್ಲಿ ಸಂಭವಿಸಬಹುದಾದ ದೋಷಗಳು ಹದಿನಾಲ್ಕು : ಅವು ನಾಸ್ತಿಕ ಬುದ್ಧಿ, ಸುಳ್ಳು, ಸಿಟ್ಟು, ಅನವಧಾನ, ಚಟುವಟಿಕೆಯಿಲ್ಲದೆ ಕೆಲಸವನ್ನು ತಡ ಮಾಡುವುದು, ಪ್ರಾಜ್ಞರಾದ ಸಜ್ಜನರೊಡನೆ ಸೇರದಿರುವುದು, ಸೋಮಾರಿತನ, ಪಂಚೇಂದ್ರಿಯಗಳಿಗೆ ಅಧೀನನಾಗಿ ಇಂದ್ರಿಯ ಚಾಪಲ್ಯದಲ್ಲಿ ಮುಳುಗುವುದು, ಮಂತ್ರಿಗಳೊಡನೆ ಸಮಾಲೋಚಿಸದೆ ರಾಜ್ಯಕಾರ್ಯಗಳಲ್ಲಿ ತಾನೊಬ್ಬನೇ ನಿರ್ಧಾರವನ್ನು ತೆಗೆದುಕೊಳ್ಳುವುದು. ಅನುಭವವಿಲ್ಲದ ಅವಿವೇಕಿಗಳೊಡನೆ ಸಮಾಲೋಚಿಸುವುದು, ನಿಶ್ಚಯಿಸಿದ ಕಾರ್ಯಗಳನ್ನು ಆರಂಭಿಸದಿರುವುದು , ಮಂತ್ರಾಲೋಚನೆಯನ್ನು ರಹಸ್ಯವಾಗಿಡದೆ ಬಹಿರಂಗ ಪಡಿಸುವುದು, ಮಂಗಳಕರವಾದ ಶುಭಕಾರ್ಯವನ್ನು ಮಾಡದಿರುವುದು ಹಾಗೂ ಎಲ್ಲ ಶತ್ರುಗಳ ಮೇಲೂ ಏಕಕಾಲದಲ್ಲಿ ಯುದ್ಧಾರಂಭ – ಇವು ಹದಿನಾಲ್ಕು ರಾಜನಲ್ಲಿ ಸಂಭವಿಸಬಹುದಾದ ರಾಜದೋಷಗಳಾಗಿವೆ.

****

ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್

I.

1) ಎ) ವಿದ್ಯಾಭ್ಯಾಸ
2) ಡಿ) ಮಹೇಶ
3) ಎ) ಏಕೈಕ
4) ಸಿ) ಸವರ್ಣದೀರ್ಘಸಂಧಿ
5) ಎ) ವೃದ್ಧಿಸಂಧಿ
6) ಸಿ) ಯಣ್ ಸಂಧಿ

II.

7) ಗುಣಸಂಧಿ
8) ಯಣ್ ಸಂಧಿ
9) ವೃದ್ಧಿಸಂಧಿ
10) ವೃದ್ಧಿಸಂಧಿ

III.

11). ರಾಧಾಕೃಷ್ಣನ್ ಅವರ ತಂದೆಯ ಹೆಸರು ವೀರಸ್ವಾಮಿ, ತಾಯಿಯ ಹೆಸರು ಸೀತಮ್ಮ
12). ರಾಧಾಕೃಷ್ಣನ್ ಅವರು ದೇಶಿಭಾಷೆಯಾಗಿದ್ದ ಸಂಸ್ಕೃತವನ್ನು ಕಲಿಯಬೇಕೆಂಬುದು ಅವರ ತಂದೆಯ ಅಪೇಕ್ಷೆಯಾಗಿತ್ತು.
13). ರಾಧಾಕೃಷ್ಣನ್ ಅವರು ತಮಗೆ ಬರುತ್ತಿದ್ದ ಹತ್ತು ಸಾವಿರ ರೂಪಾಯಿಗಳ ವೇತನದಲ್ಲಿ ಎರಡು ಸಾವಿರ ರೂಪಾಯಿಯನ್ನು ಮಾತ್ರ ಪಡೆದು ಉಳಿದ ಹಣವನ್ನು ಪ್ರಧಾನಮಂತ್ರಿಗಳ ಪರಿಹಾರ ನಿದಿಗೆವಂತಿಕೆಯಾಗಿ ನೀಡುತ್ತಿದ್ದರು
14) ರಾಧಾಕೃಷ್ಣನ್ ಅವರ ಜನ್ಮದಿನವನ್ನು 'ರಾಷ್ಟ್ರೀಯ ಶಿಕ್ಷಕರ ದಿನಾಚರಣೆ' ಎಂದು ಆಚರಿಸಲಾಗುತ್ತದೆ
15). ರಾಧಾಕೃಷ್ಣನ್
16) ಬ್ರಹ್ಮ ವಿದ್ಯಾಭಾಸ್ಕರ.
17)ಭಾರತ ರತ್ನ
18) ಅವರ ಪತ್ನಿ
19) ರಾಷ್ಟ್ರಪತಿ
20) ಆಕ್ಸಫರ್ಡ್

IV.

21) ಸ್ಟಾಲಿನ್ ಅವರು ರಾಧಾಕೃಷ್ಣನ್ ಅವರ ಬೀಳ್ಕೊಡುಗೆ ಸಮಾರಂಭದಲ್ಲಿ "ನೀವೊಬ್ಬರೇ ನನ್ನನ್ನು ಒಬ್ಬ ಮನುಷ್ಯನಂತೆ ಕಂಡು ವರ್ತಿಸಿದವರು. ನೀವು ನಮ್ಮನ್ನು ಬಿಟ್ಟು ಹೋಗುತ್ತಿರುವಿರಿ ನನಗೆ ಇದು ದುಃಖ ನೀಡಿದೆ. ನೀವು ಹೆಚ್ಚುಕಾಲ ಬಾಳಬೇಕೆಂಬುದೇ ನನ್ನಾಸೆ. ನಾನು ಹೆಚ್ಚು ಕಾಲ ಬಾಳುವುದಿಲ್ಲ" ಎಂದು ಹೇಳಿದರು.

22) ರಾಧಾಕೃಷ್ಣನ್ ಅವರ ಪ್ರಾಥಮಿಕ ವಿದ್ಯಾಭ್ಯಾಸ ತಿರುತ್ತಣಿಯಲ್ಲಿ ಆಯಿತು. ಪ್ರೌಢಶಾಲಾ ಶಿಕ್ಷಣ ತಿರುಪತಿಯ ಹರ್ಮರ್ನ್ಸ್ ಬರ್ಗ್‌ನ ಮಿಷನರಿ ಶಾಲೆಯಲ್ಲಿ ನಡೆಯಿತು. ನಂತರ ವೆಲ್ಲೂರಿನ ವೂರ್ಸ್ ಕಾಲೇಜಿನಲ್ಲಿ ಬಿ.ಎ. ಪೂರ್ವದ ಎರಡು ವರ್ಷಗಳ ಕಾಲ ಪದವಿಯ ಶಿಕ್ಷಣ ನಡೆಯಿತು. ನಂತರ ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಬಿ.ಎ. ಮತ್ತು ಎಂ.ಎ. ಪದವಿಯನ್ನು ಪಡೆದರು.

23) ಬಾಹ್ಯರೂಪ ಎತ್ತರವಾದ ನಿಲುವು, ಬಿಸ್ಕೆಟ್ಬಣ್ಣದ ರೇಷ್ಮೆಯ ನಿಲುವಂಗಿ, ಶುಭ್ರವೂ ನಿರಾಡಂಬರವೂ ಆದ ಬಿಳಿಯ ಪಂಚೆ ಮತ್ತು ರುಮಾಲು, ಕೋಪ ಸೂಚಕವಲ್ಲದ ಹುಬ್ಬು, ಯಾವುದೋ ಸಮಸ್ಯೆಯ ಒಳಹೋಗುವಂತಿರುವ ಕಣ್ಣನೋಟ, ಮುಗುಳುನಗೆಯ ಸುಳಿವು ಇವು ರಾಧಾಕೃಷ್ಣನ್ ಅವರ ವೇಷಭೂಷಣಗಳು. ಪ್ರಪಂಚದ ಫ್ಯಾಷನ್ ಎಷ್ಟೇ ಬದಲಾಯಿಸಿದರೂ ಅವರು ತಮ್ಮ ವೇಷಭೂಷಣಗಳನ್ನು ಕೊನೆಯವರೆಗೂ ಜತನವಾಗಿ ಉಳಿಸಿಕೊಂಡಿದ್ದರು

24) ಶಿಕ್ಷಣದ ಮಹತ್ವವನ್ನು ಮನಗಂಡ ರಾಧಾಕೃಷ್ಣನ್ ಅವರು “ಶಿಕ್ಷಣ ಜೀವನದ ಅವಿಭಾಜ್ಯ ಅಂಗ, ಅದು ಮಾನವನನ್ನು ಪೂರ್ಣತೆ ಹಾಗೂ ಸುಸಂಸ್ಕೃತಿಯತ್ತ ಒಯ್ಯುವ ಸಾಧನ ಮಾರ್ಗ” ಎಂದು ಹೇಳಿದ್ದಾರೆ

25) ರಾಧಾಕೃಷ್ಣನ್ ಅವರ ಸ್ಮರಣೀಯ ಸೇವೆಯನ್ನು ಗುರುತಿಸಿ ಭಾರತದ ಅತ್ಯುನ್ನತ ಪ್ರಶಸ್ತಿಯಾದ ‘ಭಾರತ ರತ್ನ’ವನ್ನು ನೀಡಿ ಗೌರವಿಸಲಾಯಿತು. ಬ್ರುಸೆಲ್ಸ್ನ ಫ್ರಿ ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ಪದವಿಯನ್ನು ಪ್ರದಾನ ಮಾಡಿತು. ಭಾರತೀಯ ವಿದ್ಯಾ
ಭವನದ ‘ಬ್ರಹ್ಮ ವಿದ್ಯಾಭಾಸ್ಕರ’ ಬಿರುದಿಗೂ ಪಾತ್ರರಾದರು. ಹೀಗೆ ಇವರಿಗೆ ದೇಶವಿದೇಶಗಳ ಹಲವಾರು ಗೌರವ ಪದವಿ ದೊರಕಿತ್ತು. ಭಾರತ ಸರ್ಕಾರ ಸೆಪ್ಟೆಂಬರ್ ೫ ರಂದು ಡಾ. ರಾಧಾಕೃಷ್ಣನ್ ಅವರ ಜನ್ಮದಿನಾಚರಣೆಯನ್ನು ರಾಷ್ಟ್ರೀಯ ಶಿಕ್ಷಕರ ದಿನಾಚರಣೆ’ ಎಂದು ಘೋಷಿಸಿ ಪ್ರತಿವರ್ಷವೂ ಆಚರಿಸಲು ನಿರ್ಧರಿಸಿತು

ಸಂದರ್ಭ ಮತ್ತು ಸ್ವಾರಸ್ಯ ಬರೆಯಿರಿ

26) ಆಯ್ಕೆ:ಪ್ರಸ್ತುತ ವಾಕ್ಯವನ್ನು ‘ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್’ ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ: ರಷ್ಯಾ ದೇಶದ ಮಾಸ್ಕೋದಲ್ಲಿ ನಡೆದ ರಾಧಾಕೃಷ್ಣನ್ ಅವರ ಬೀಳ್ಕೊಡುಗೆ ಸಮಾರಂಭದ ಸಂದರ್ಭದಲ್ಲಿ ಈ ಮಾತು ಬಂದಿದೆ. ರಷ್ಯಾ ದೇಶದ ಅಧ್ಯಕ್ಷ ಸ್ಟಾಲಿನ್ ಅವರು ರಾಧಾಕೃಷ್ಣನ್ ಅವರಿಗೆ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ: ಸ್ಟಾಲಿನ್ ಅವರಿಗಾದ ಅಗಲಿಕೆಯ ದುಃಖ ಮತ್ತು ರಾಧಾಕೃಷ್ಣನ್ ಅವರ ವ್ಯಕ್ತಿತ್ವದ ಪರಿಚಯ ಈ ಮಾತುಗಳಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

27) ಆಯ್ಕೆ:ಪ್ರಸ್ತುತ ವಾಕ್ಯವನ್ನು ‘ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್’ ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ : ಮದ್ರಾಸಿನ ಕ್ರಿಶ್ಚಿಯನ್ಕಾಲೇಜಿನಲ್ಲಿ ಬಿ.ಎ. ಪದವಿಯನ್ನು ಮಾಡುತ್ತಾ ಜೊತೆಗೆ ಮನೆ ಪಾಠ ಹೇಳಿ
ರಾಧಾಕೃಷ್ಣನ್ ಅವರು ಹಣಗಳಿಸುತ್ತಿದ್ದರು ಮತ್ತು ತತ್ವಶಾಸ್ತ್ರದ ಉತ್ತಮ ವಿದ್ಯಾರ್ಥಿ ಎನಿಸಿದರು ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ: ರಾಧಾಕೃಷ್ಣನ್ ಅವರು ಮನೆಯ ಆರ್ಥಿಕ ಪರಿಸ್ಥಿತಿ ಸರಿಯಿಲ್ಲದಿದ್ದರೂ ಧೃತಿಗೆಡದೆ ತಮ್ಮ ಸಾಧನೆಯ ಕಡೆಗೆ ಹೆಚ್ಚು ಗಮನ ಹರಿಸಿದರು ಎಂಬುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

28) ಆಯ್ಕೆ: ಪ್ರಸ್ತುತ ವಾಕ್ಯವನ್ನು ‘ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್’ ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ: ರಾಧಾಕೃಷ್ಣನ್ ಅವರ ಬೋಧನಾ ಶೈಲಿ, ನಿರರ್ಗಳತೆ, ವಿಷಯದ ಮೇಲಿನ ಪ್ರಭುತ್ವ ವಿದ್ಯಾರ್ಥಿಗಳನ್ನು ಬಹುಬೇಗ ಆಕರ್ಷಿಸಿತು ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ. ಲೇಖಕರು ಈ ಮಾತನ್ನು ಹೇಳಿತ್ತಾರೆ.

ಸ್ವಾರಸ್ಯ: ರಾಧಾಕೃಷ್ಣನ್ ಅವರ ವ್ಯಕ್ತಿತ್ವದ ಹಾಸ್ಯಪ್ರವೃತ್ತಿ. ಸೌಜನ್ಯ, ಸ್ನೇಹ ಶೀಲತೆಗಳು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ

29) ಆಯ್ಕೆ:ಪ್ರಸ್ತುತ ವಾಕ್ಯವನ್ನು 'ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಸಂದರ್ಭ : ರಾಧಾಕೃಷ್ಣನ್ ಅವರ ಪ್ರಥಮ ರಷ್ಯಾ ಭೇಟಿಯ ಸಂದರ್ಭದಲ್ಲಿ ಈ ಮಾತು ಬಂದಿದೆ. ಈ ಮಾತನ್ನು ರಾಧಾಕೃಷ್ಣನ್ ಅವರು ರಷ್ಯಾದ ಅಧ್ಯಕ್ಷ ಸ್ಟಾಲಿನ್ ಅವರಿಗೆ ಹೇಳುತ್ತಾರೆ

ಸ್ವಾರಸ್ಯ: ರಾಧಾಕೃಷ್ಣನ್ ಅವರು 'ಸ್ಟಾಲಿನ್ ಅವರಲ್ಲಿದ್ದ ಮಾನವೀಯ ಗುಣಗಳನ್ನು ಪ್ರಥಮ ಭೇಟಿಯಲ್ಲೇ ಗುರುತಿಸಿದರು' ಎಂಬುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

30. ಆಯ್ಕೆ: ಪ್ರಸ್ತುತ ವಾಕ್ಯವನ್ನು 'ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಸ0ದರ್ಭ : ರಾಧಾಕೃಷ್ಣನ್ ಅವರು ಕೆನಡಾ ದೇಶದ ರೇಡಿಯೋ ಪ್ರಸಾರ ಭಾಷಣ ಮಾಡಿದ ಸಂದರ್ಭದಲ್ಲಿ ಈ ಮಾತು ಬಂದಿದೆ. ಈ ಮಾತನ್ನು ರಾಧಾಕೃಷ್ಣನ್ ಅವರು ಕೆನಡಾ ದೇಶದ ರೇಡಿಯೋ ಪ್ರಸಾರ ಭಾಷಣದಲ್ಲಿ ಹೇಳುತ್ತಾರೆ.

ಸ್ವಾರಸ್ಯ: ರಾಧಾಕೃಷ್ಣನ್ ಅವರಲ್ಲಿ ಇದ್ದ ಮಾನವತೆಯ ಪ್ರೇಮ ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

V. ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ.

31. ರಾಧಾಕೃಷ್ಣನ್ ಅವರು ಶಿಕ್ಷಣ ಇಲಾಖೆಯ ಉಪಸಹಾಯಕ ಇನ್‌ಸ್ಪೆಕ್ಟರಾಗಿ ಮದ್ರಾಸಿನಲ್ಲಿ ಮೊದಲ ಸೇವೆಯನ್ನು ಆರಂಭಿಸಿದರು. ನಂತರ ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜು, ಸಯ್ಯದ್ ಪೇಟೆಯ ಟ್ರೈನೀಂಗ್ ಕಾಲೇಜು, ಆಂಧ್ರದ ಅನಂತಪುರ ಹಾಗೂ ರಾಜಮಂಡ್ರಿಯ ಸರ್ಕಾರಿ ಕಲಾ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತತ್ವಶಾಸ್ತ್ರದ ಉಪಪ್ರಾಧ್ಯಾಪಕರಾಗಿ ಹಾಗೂ ಕೋಲ್ಕತ್ತಾದಲ್ಲಿ ಪ್ರಾಧ್ಯಾಪಕರಾಗಿ ಸ್ಮರಣೀಯ ಸೇವೆ ಸಲ್ಲಿಸಿದರು. ಇದಲ್ಲದೆ ಆಂಧ್ರ, ದೆಹಲಿ, ಬನಾರಸ್
ವಿಶ್ವವಿದ್ಯಾನಿಲಯಗಳಲ್ಲಿ ಕುಲಪತಿಯಾಗಿ ಸೇವೆಸಲ್ಲಿಸಿ, ಅವುಗಳ ಪುರೋಭಿವೃದ್ಧಿಗೆ ಶ್ರಮಿಸಿದರು. ಆಕ್ಸ್ ಫರ್ಡ್ ವಿಶ್ವವಿದ್ಯಾನಿಲಯದಲ್ಲೂ
ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದರು. ರಾಧಾಕೃಷ್ಣನ್ ಅವರ ಬೋಧನಾ ಶೈಲಿ, ನಿರರ್ಗಳತೆ ವಿಷಯದ ಮೇಲಿನ ಪ್ರಭುತ್ವ ವಿದ್ಯಾರ್ಥಿಗಳನ್ನು ಬಹುಬೇಗ ಆಕರ್ಷಿಸಿತು. ತಮ್ಮ ಪ್ರಾಧ್ಯಾಪಕತ್ವವನ್ನು ಯಾವಾಗಲೆಂದರೆ ಆವಾಗ ಕಳಚಿ ಅವರು ಏರುಜವ್ವನದ ಯುವಕರಂತೆ ಹಾಸ್ಯವಿನೋದಗಳಲ್ಲಿ ತೊಡಗುತ್ತಿದ್ದರು.

32) ಕೊಲ್ಕತ್ತಾ ವಿಶ್ವವಿದ್ಯಾನಿಲಯದ ತತ್ವಶಾಸ್ತ್ರ ಪ್ರಾಧ್ಯಾಪಕರಾಗಿ ಮೈಸೂರಿನಿಂದ ಹೊರಟ ದಿನ ಅವರಿಗೆ ಕೊಟ್ಟಂಥ ವೈಭವದ ಬೀಳ್ಕೊಡುಗೆ ಯಾವ ಚಕ್ರವರ್ತಿಗೂ ದೊರೆತಿರಲಾರದು. ಅಂದಿನ ವಾತಾವರಣದಲ್ಲಿದ್ದುದ್ದು ವೈಭವಕ್ಕಿಂತ ಹೆಚ್ಚಾಗಿ ಹೃದಯದಿಂದ ನೇರವಾಗಿ ಹೊರಹೊಮ್ಮಿದ ಗುರು ಪ್ರೇಮ. ರೈಲು ನಿಲ್ದಾಣಕ್ಕೆ ಕರೆದೊಯ್ಯುವಾಗ ಸಾರೋಟಿಗೆ ಕುದುರೆಯನ್ನು ಕಟ್ಟಲಿಲ್ಲ. ಸ್ವತಃ ವಿದ್ಯಾರ್ಥಿಗಳೇ ಎಳದೊಯ್ದರು. ರಾಧಾಕೃಷ್ಣನ್ ಅವರಿಗಾಗಿ ಕಾದಿರಿಸಿದ್ದ ಕಂಪಾರ್ಟ್ ಮೆಂಟ್ ಒರಗು ದಿಂಬು ಹಾಗೂ ರತ್ನಗಂಬಳಿಯನ್ನು ಹಾಕಿ, ಮಲಗುವ ಸೀಟನ್ನು, ನೆಲವನ್ನು ಹೂವಿನಿಂದ ಸುಪ್ಪತ್ತಿಗೆಯಂತೆ ಮಾಡಿ, ದೈವ ಮಂದಿರವನ್ನು ಭಕ್ತರು ಅಲಂಕರಿಸುವಂತೆ ಅಲಂಕರಿಸಲಾಗಿತ್ತು. "ರಾಧಾಕೃಷ್ಣನ್ ಅವರಿಗೆ ಜಯವಾಗಲಿ" ಎಂಬ ಕೂಗು ರೈಲ್ವೆ ಸ್ಟೇಷನ್ನಿನ ಆವರಣದಲ್ಲೆಲ್ಲ ಮೊಳಗುತ್ತಿತ್ತು. ಆ ದಿನ ಭಾವೋದ್ರೇಕದಿಂದ ಅದೆಷ್ಟು ಜನ ಅತ್ತರೋ! ವಿದ್ಯಾರ್ಥಿಗಳು ತೋರಿದ ವಿಶ್ವಾಸ ರಾಧಾಕೃಷ್ಣನ್ ಅವರ ಕಣ್ಣಿನಲ್ಲೂ ನೀರು ತಂದಿತು.

33)ರಾಧಾಕೃಷ್ಣನ್ ಅವರು ಹಿಂದೂ ಧರ್ಮದ ತತ್ವಶಾಸ್ತ್ರದ ಮತ್ತು ಸಾಹಿತ್ಯವನ್ನೆಲ್ಲ ಅಧ್ಯಯನ ಮಾಡಿದರು. ಯುರೋಪಿಯನ್ ತತ್ವಶಾಸ್ತ್ರ ಮತ್ತು ಸಾಹಿತ್ಯದ ಅಭಿವ್ಯಕ್ತ ವಿಚಾರಗಳಿಂದ ಅವರ ವಿಶ್ವದೃಷ್ಟಿ ಮತ್ತು ತಾತ್ವಿಕ ದೃಷ್ಟಿಕೋನ ಪ್ರಭಾವಿತವಾಗಿತ್ತು. ಸ್ವಾಮಿ ವಿವೇಕಾನಂದರ ವಿಚಾರಧಾರೆ ಅವರ ಮನವನ್ನು ಆಕರ್ಷಿಸಿತು. ಅವರು "ಹಿಂದೂ ಧರ್ಮವು ಒಂದು ವೈಚಾರಿಕ ಜೀವನ ಮಾರ್ಗವಾಗಿದ್ದು, ನೈತಿಕ, ಗುಣಾತ್ಮಕ ವಿಷಯಗಳಿಂದ

ಕೂಡಿದ್ದು, ಮಾನವನ ಆಂತರಿಕ ಜೀವನದ ಬಗ್ಗೆ ಪ್ರಾಮುಖ್ಯವುಳ್ಳದ್ದಾಗಿದೆ. ಹಿಂದೂ ಧರ್ಮವಾಗಲಿ, ವೇದಾಂತವಾಗಲಿ ಅಸತ್ಯವನ್ನು ಹೇಳುವುದಿಲ್ಲ. ಆದ್ದರಿಂದ ಅದರಲ್ಲಿ ನೀತಿಶಾಸ್ತ್ರಕ್ಕೆ ಸ್ಥಾನವಿಲ್ಲ. ಭಾರತೀಯ ಚಿಂತನೆಗಳು ಯಾವುದೋ ವಿಚಿತ್ರ ಮತ್ತು ನಿಗೂಢ ಪರಿಕಲ್ಪನೆಗಳಾಗಿಲ್ಲ, ಜೀವನದ ನಾಡಿಮಿಡಿತಗಳನ್ನು ಸೂಕ್ಷ್ಮ ಮನಸ್ಸಿನ ಚಿಂತನೆಗಳನ್ನು ತಿಳಿಯಪಡಿಸುವುದಾಗಿದೆ" ಎಂದು ಸರಳವಾಗಿ ಹೇಳಿದರು.

ಗದ್ಯ-5 :-ಜನಪದ ಕಲೆಗಳ ವೈಭವ

ಉತ್ತರಗಳು:

I.

1.a ಷಡಾನನ

2.c. ಅನುನಾಸಿಕ

3.a. ಶರಚಂದ್ರ

4.a. ಜಸ್ತ್ವ ಸಂಧಿ

5.a.ಶ್ಚುತ್ತ್ವ ಸಂಧಿ

6.c. ಅನುನಾಸಿಕ

II.

7.ಶೈವಸಂಪ್ರದಾಯ

8. ರೀತಿ

9. ಸಕರ್ಮಕ ಧಾತು

10. ನೃತ್ಯ ಪ್ರಧಾನ

III.

11. ವೀರಗಾಸೆ ಶೈವ ಸಂಪ್ರದಾಯದ ಧಾರ್ಮಿಕ ನೃತ್ಯವಾಗಿದೆ.

12. ವೀರಗಾಸೆಯಲ್ಲಿ ಪಂಚ ವಾದ್ಯಗಳಾದ ತಳ, ಶ್ರುತಿ, ಚಮಾಳ, ಒಲಗ ಮತ್ತು ಕರಡೆಗಳನ್ನು ಬಳಸುತ್ತಾರೆ.

13. ವೀರಭದ್ರನ ಕುಣಿತ ಒಬ್ಬ ವ್ಯಕ್ತಿಯ ಕುಣಿತ ವೀರಗಾಸೆ ಸಾಮೂಹಿಕ ನೃತ್ಯ.

14. ಸಾಮಾನ್ಯವಾಗಿ ಮದುವೆ, ಗೃಹಪ್ರವೇಶ, ಜಾತ್ರೆ, ಉತ್ಸವ, ಹಬ್ಬ ಹರಿದಿನಗಳಲ್ಲಿ ವೀರಭದ್ರನ ಕುಣಿತ ಏರ್ಪಡಿಸುತ್ತಾರೆ ವೀರಗಾಸೆ ಸಾಮಾಜಿಕ ಸಂದರ್ಭಗಳಲ್ಲಿ ಮನರಂಜನೆಗಾಗಿಯೂ ಬಳಕೆ ಆಗುತ್ತದೆ.

15.ಕಂಸಾಳೆ ಗುಡ್ಡರು ಕಂಸಾಳೆಯನ್ನು ಕೈಗೆತ್ತಿಕೊಳ್ಳುವ ಮೊದಲು ಮಾದೇಶ್ವರ ದೇವರನ್ನು ಸ್ಮರಿಸುತ್ತಾರೆ

16. ಸಂಸ್ಕೃತದ ಕಾಂಸತಾಲ್ಯ ಯ ಪದದ ತದ್ಭವ ರೂಪವೇ ಕಂಸಾಳೆ ಎಂದಾಗಿದೆ.

17. ಡೊಳ್ಳು ಕುಣಿತ ಬೀರೇಶ್ವರ ಸಂಪ್ರದಾಯಕ್ಕೆ ಸೇರಿದ ಕುಣಿತವಾಗಿದೆ.

18. ಭರಮದೇವರ ಗುಡಿಯ ಮುಂದೆ ಡೊಳ್ಳಿನ ಹಾಡುಗಳ ಕಾರ್ಯ ಕ್ರಮವು ಶ್ರಾವಣ ಸೋಮವಾರ ಅಮಾವಾಸ್ಯೆ ದಿನ ಮತ್ತು ಯುಗಾದಿಯಂದು ಪಲ್ಲಕ್ಕಿ ಉತ್ಸವದ ತರುವಾಯ ನಡೆಯುತ್ತದೆ.

19. ಯಕ್ಷಗಾನದ 3 ಶೈಲಿಗಳು ತೆಂಕುತಿಟ್ಟು, ಬಡಗುತಿಟ್ಟು ಮತ್ತು ಬಡಬಡಗುತಿಟ್ಟು.

20. ಯಕ್ಷಗಾನಕ್ಕೆ ಇರುವ ಇತರೆ ಹೆಸರುಗಳೆಂದರೆ ದಶಾವತಾರ, ಬಯಲಾಟ, ಭಾಗವತರಾಟ.

21. ಯಕ್ಷಗಾನದ ಪಂಚ ಅಂಗಗಗಳು ಯಾವುವೆಂದರೆ ಗೀತಾ, ಕುಣಿತ, ವೇಷಭೂಷಣ, ಮಾತುಗಾರಿಕೆ, ವಾದ್ಯ.

22. ಯಕ್ಷಗಾನದಲ್ಲಿ ರಂಗಸ್ಥಳದ ಸಮೀಪ ಇರುವ ನೇಪಥ್ಯವನ್ನು ಚೌಕಿ ಅಥವಾ ಬಣ್ಣದ ಮನೆ ಎಂದು ಕರೆಯುವರು.

23. ಯಕ್ಷಗಾನ ಪ್ರಸಂಗ ರಚಿಸುವವರು ದುಷ್ಟ ನಿಗ್ರಹ ಶಿಷ್ಟ ಪರಿಪಾಲನೆ ತತ್ವಗಳನ್ನು ಪ್ರಸಂಗಗಳಲ್ಲಿ ಅಳವಡಿಸುತ್ತಾರೆ.

24. ಯಕ್ಷಗಾನದ ಪ್ರಸಂಗಗಳಲ್ಲಿ ಕಂಡು ಬರುವ ಪ್ರಮುಖ ಹಾಸ್ಯ ಪಾತ್ರಗಳೆಂದರೆ ಹನುಮನಾಯಕ, ಕುಬ್ಜ, ಚೌರಕ, ವನಪಾಲಕ.

25. ಯಕ್ಷಗಾನದಲ್ಲಿ ಭಾಗವತ ಎಂದರೆ ಯಕ್ಷಗಾನ ಕಲಿಸುವವನು.

IV. 26. ವೀರಗಾಸೆ ಕುಣಿತದವರ ವೇಷಭೂಷಣ ವಿಶೇಷವಾಗಿರುತ್ತದೆ. ಬಿಳಿಯ ಪಂಚೆಯ ವೀರಗಚ್ಚೆ, ತಲೆಗೆ ಅರಿಶಿಣ ಅಥವಾ ನೀಲಿ ಬಣ್ಣದ ರುಮಾಲು, ಕಾವಿ ಬಣ್ಣದ ಕಸೇ ಅಂಗಿ, ಕೊರಳಲ್ಲಿ ರುದ್ರಾಕ್ಷಿ, ಹಣೆಗೆ ವಿಭೂತಿ, ಕರ್ಣಕುಂಡಲ ಸೊಂಟ ಪಟ್ಟಿ ಬಿಚ್ಚುಗತ್ತಿ ಹಾಗೂ ಕಾಲ್ಗೆಜ್ಜೆ ಧರಿಸುತ್ತಾರೆ.

27. ಕಂಸಾಳೆಯ ಮಹಿಮೆ ಅಪಾರ ಎಂದು ಭಾವಿಸುವ ಗುಡ್ಡರು ಅದನ್ನು ಕೈಗೆತ್ತಿಕೊಳ್ಳುವ ಮೊದಲು ಏಳು ಮಲೆ ಹೆತ್ತಯ್ಯ ನಮ್ಮಪ್ಪಾಜಿ ಮಾಯ್ಕಾರ ಮಾದೇವ ನಿನ್ ಪಾದಕ್ಕೆ ಗತಿ ಕಣಪ್ಪ ಶರಣು ಶರಣಾರ್ಥಿ ಎಂದು ನಮಸ್ಕರಿಸಿ ಕಣ್ಣಿಗೊತ್ತಿಕೊಂಡು ಆನಂತರ ಬಾರಿಸಲು ಪ್ರಾರಂಭಿಸುವರು.

28. ಭರಮದೇವರ ಗುಡಿಯ ಮುಂದೆ ಡೊಳ್ಳಿನ ಹಾಡುಗಳ ಕಾರ್ಯಕ್ರಮ ನಡೆಯುತ್ತದೆ ಅದರಂತೆ ಭಕ್ತರು ದೇವರ ಮುಮ್ಮೇಳದವರಾಗಿ ಒಬ್ಬರು ಡೊಳ್ಳು ಬಾರಿಸುತ್ತ ಹಾಡು ಹೇಳುತ್ತಾರೆ ಹಿಮ್ಮೇಳ ದಲ್ಲಿ ಹಲವಾರು ತಾಳ ಮತ್ತು ಕೊಳಲು ಬಾರಿಸುತ್ತ ಮುಮ್ಮೇಳದವರು ಹೇಳಿಕೊಟ್ಟ ಹಾಡಿನ ಭಾಗವನ್ನು ಹೇಳುತ್ತಾರೆ "ಸ್ವಾಮಿ ನಮ್ಮಯ್ಯ ದೇವರು ಬಂದಾನ ಬನ್ನಿರೇ ಗುರುವೇ ನಮ್ಮಯ್ಯ ದೇವರು ಬಂದಾನ ಬನ್ನಿರಿ" ಎಂದು ಡೊಳ್ಳಿನ ಹಾಡು ಆರಂಭವಾಗುತ್ತದೆ.

29. ಯಕ್ಷಗಾನದಲ್ಲಿ ತೆಂಕುತಿಟ್ಟಿನ ಚಂಡೆ ವಾದ ವಾದಕನಿಗೆ ಹಾಸನ ವ್ಯವಸ್ಥೆ ಇರುವುದಿಲ್ಲ. ಪಾತ್ರಧಾರಿಗಳಿಗೆ ಒಂದು ಸಿಂಹಾಸನವಿರುತ್ತದೆ ಬಡಗುತ್ತಿಟ್ಟಿನಲ್ಲಿ ಇದರ ಬದಲಿಗೆ ರಥದ ಆಕೃತಿಯ ಆಸನವನ್ನು ಸಾಂಪ್ರದಾಯಿಕವಾಗಿ ಬಳಸುತ್ತಾರೆ. ಯಕ್ಷಗಾನದಲ್ಲಿ ಬಳಸುವ ವೇಷಭೂಷಣಗಳು ತಿಟ್ಟು ಮತ್ತು ಪಾತ್ರಕ್ಕನುಗುಣವಾಗಿ ವೈವಿಧ್ಯಮಯವಾಗಿರುತ್ತವೆ. ತೆಕ್ಕಿನಲ್ಲಿ ಅರ್ಥಗಾರಿಕೆಗೆ ಪ್ರಾಧಾನ್ಯತೆ ಇದ್ದು ದೊಡ್ಡ ದೊಡ್ಡ ಹೆಜ್ಜೆ ಹಾಕಿ ಗಿರಕಿ ಹೊಡೆಯುವುದು ಇದರ ವೈಶಿಷ್ಟ. ಬಡಗಿನಲ್ಲಿ ಕುಣಿತ ಹಾಗೂ ಅಭಿನಯಕ್ಕೆ ಪ್ರಾಧಾನ್ಯ ಇದ್ದು ಚಕ್ರಮಂಡಿ ಕುಣಿತ ವಿರುತ್ತದೆ.

30. ರಂಗಸ್ಥಳದ ಸಮೀಪವಿರುವ ನೇಪಥ್ಯ(ತೆರೆಯ ಹಿಂಭಾಗ) ಹಿಂಭಾಗವೇ ಚೌಕಿ ಅಥವಾ ಬಣ್ಣದ ಮನೆ ಭಾಗವತರು ಹಿಮ್ಮೇಳ ಹಾಗೂ ಪಾತ್ರಧಾರಿಗಳೊಂದಿಗೆ ಇಲ್ಲಿಗೆ ಆಗಮಿಸುತ್ತಾರೆ ಪಾತ್ರಧಾರಿಗಳ ತಮ್ಮ ಬಣ್ಣಗಳನ್ನು ತಾವೇ ಹಚ್ಚಿಕೊಳ್ಳುತ್ತಾರೆ ಮೊದಲು ಚೌಕಿಯಲ್ಲಿ ಗಣಪತಿ ಪೂಜೆ ನಡೆಯುತ್ತದೆ.

31. ಯಕ್ಷಗಾನದಲ್ಲಿ ಕೃಷ್ಣಾರ್ಜುನ ಕಾಳಗ,ಕರ್ಣಾರ್ಜುನ ಕಾಳಗ, ಬಬ್ರುವಾಹನ ಕಾಳಗ, ಸುಧನ್ ವರ್ಜುನ ಕಾಳಗ ಮೊದಲಾದವು ವೀರರಸಪ್ರಧಾನವಾದವು ಚಂದ್ರಾವಳಿ ವಿಲಾಸ, ರತಿ ಕಲ್ಯಾಣ, ರತ್ನಾವತಿ ಕಲ್ಯಾಣ ಮೊದಲಾದವು ಶೃಂಗಾರ ರಸಪ್ರಧಾನವಾದವು.

V.

32. ಆಯ್ಕೆ:ಈ ವಾಕ್ಯವನ್ನು ಜಾನಪದ ವಿಷಯ ಕೋಶ ಮತ್ತು ವಿಷಯ ಸಂಪಾದಿಕರಣ ಸಂಪನ್ಮೂಲ ಸಾಹಿತ್ಯ ಕನ್ನಡ ಭಾಷೆ ಕೃತಿಯಿಂದ ಆಯ್ದ ಜನಪದ ಕಲೆಗಳ ವೈಭವ ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ವೀರಗಾಸೆ ಶೈವಸಂಪ್ರದಾಯದ ಧಾರ್ಮಿಕ ವೀರ ನೃತ್ಯ ಸಾಮೂಹಿಕ ನೃತ್ಯವನ್ನು ಒಳಗೊಂಡ ಕರ್ನಾಟಕದ ಜನಪದ ಕಲೆ ವೀರಗಾಸೆ ಯಾವ ರೀತಿಯಲ್ಲಿ ಆರಂಭಗೊಳ್ಳುತ್ತದೆ ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳಲಾಗಿದೆ.

ಸ್ವಾರಸ್ಯ: ಈ ಮೇಲಿನ ಸಾಲುಗಳು ಒಡಪಿನ ಆರಂಭದಲ್ಲಿ ಬರುವ ದೈವ ಸ್ತುತಿಯನ್ನು ವ್ಯಕ್ತಪಡಿಸಿದೆ.

33. ಆಯ್ಕೆ ಈ ವಾಕ್ಯವನ್ನು ಜಾನಪದ ವಿಷಯ ಕೋಶ ಮತ್ತು ವಿಷಯ ಸಂಪಾದಿಕರಣ ಸಂಪನ್ಮೂಲ ಸಾಹಿತ್ಯ ಕನ್ನಡ ಭಾಷೆ ಕೃತಿಯಿಂದ ಆಯ್ದ ಜನಪದ ಕಲೆಗಳ ವೈಭವ ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ವೀರಭದ್ರನ ಕುಣಿತ ಒಬ್ಬ ವ್ಯಕ್ತಿಯ ಕುಣಿತ ವೀರಭದ್ರ ವೇಷದಾರಿ ದಕ್ಷಯಾಗ ವೀರಭದ್ರನ ಜನನ ಮತ್ತು ವೀರಭದ್ರನ ವಿಜಯ ಮುಂತಾದ ಒಡಪುಗಳನ್ನು ಹೇಳುತ್ತಾನೆ ಆಗ ಮತ್ತೊಬ್ಬ ವ್ಯಕ್ತಿ ಏನೆಂದು ಹೇಳುತ್ತಾ ನರ್ತನವನ್ನು ಮುಂದುವರಿಸುತ್ತಾನೆ ಎಂದು ಹೇಳುವ ಸಂದರ್ಭದಲ್ಲಿ ಈ ವಾಕ್ಯವನ್ನು ಹೇಳಲಾಗಿದೆ.

ಸ್ವಾರಸ್ಯ: ಈ ವಾಕ್ಯವು ವೀರಭದ್ರನ ವೀರತನದ ವರ್ಣನೆಯನ್ನು ಮಾಡಿದೆ.

34. ಆಯ್ಕೆ: ಈ ವಾಕ್ಯವನ್ನು ಜಾನಪದ ವಿಷಯ ಕೋಶ ಮತ್ತು ವಿಷಯ ಸಂಪಾದಿಕರಣ ಸಂಪನ್ಮೂಲ ಸಾಹಿತ್ಯ ಕನ್ನಡ ಭಾಷೆ ಕೃತಿಯಿಂದ ಆಯ್ದ ಜನಪದ ಕಲೆಗಳ ವೈಭವ ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ದೇವರು ಗುಡ್ಡರು ಕಾಣಿಕೆಯನ್ನು ಸ್ವೀಕರಿಸುವಾಗ ಕಂಸಳೆಯ ಬಟ್ಟಲನ್ನು ಮಾತ್ರ ಮುಂದೆ ಒಡ್ಡಿ ಪಡೆದು ಅನಂತರ ಜೋಳಗಿಗೆ ಸುರಿದು ಕೊಡುತ್ತಾರೆ ಇದೊಂದು ಪವಿತ್ರ ಸಾಧನವಾದುದರಿಂದ ಅರ್ಪಿಸುವ ಕಾಣಿಕೆ ಮಲೆಯ ಮಾದೇಶ್ವರನಿಗೆ ಸಮರ್ಪಿತ ವಾದಂತೆ ಎಂಬ ಭಾವನೆ ಗುಡ್ಡನಿಗೂ ದಾನಿಗೂ ಇರುತ್ತದೆ ಕಂಸಾಳೆಯ ಮಹಿಮೆ ಅಪಾರ ಎಂದು ಭಾವಿಸುವ ಗುಡ್ಡರು ಅದನ್ನು ಕೈಗೆತ್ತಿಕೊಳ್ಳುವ ಮೊದಲು ಏನೆಂದು ಹೇಳುತ್ತಾರೆ ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳಲಾಗಿದೆ.

ಸ್ವಾರಸ್ಯ: ಈ ವಾಕ್ಯದಲ್ಲಿ ಗುಡ್ಡರಿಗೆ ಮಲೆ ಮಾದೇಶ್ವರನ ಮೇಲಿರುವ ಭಕ್ತಿ ವ್ಯಕ್ತವಾಗಿದೆ.

35. ಆಯ್ಕೆ: ಈ ವಾಕ್ಯವನ್ನು ಜಾನಪದ ವಿಷಯ ಕೋಶ ಮತ್ತು ವಿಷಯ ಸಂಪಾದಿಕರಣ ಸಂಪನ್ಮೂಲ ಸಾಹಿತ್ಯ ಕನ್ನಡ ಭಾಷೆ ಕೃತಿಯಿಂದ ಆಯ್ದ ಜನಪದ ಕಲೆಗಳ ವೈಭವ ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಶ್ರಾವಣ ಸೋಮವಾರ ಅಮವಾಸ್ಯೆಯ ದಿನ ಮತ್ತು ಯುಗಾದಿಯಂದು ಪಲ್ಲಕ್ಕಿ ಉತ್ಸವದ ತರುವಾಯ ಭರಮದೇವರಗುಡಿಯ ಮುಂದೆ ಡೊಳ್ಳಿನ ಹಾಡುಗಳ ಕಾರ್ಯಕ್ರಮ ನಡೆಯುತ್ತದೆ ಡೊಳ್ಳಿನ ಹಾಡು ಈಗ ಆರಂಭವಾಗುತ್ತದೆ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಹೇಳಲಾಗಿದೆ .
ಸ್ವಾರಸ್ಯ: ಈ ಕವಿತೆಯ ಸಾಲುಗಳ ಮೂಲಕ ಭಕ್ತರನ್ನು ದೈವ ಸನ್ನಿಧಿಗೆ ಬರಲು ಆಹ್ವಾನಿಸುತ್ತಾರೆ.

36. ಆಯ್ಕೆ: ಈ ವಾಕ್ಯವನ್ನು ಜಾನಪದ ವಿಷಯ ಕೋಶ ಮತ್ತು ವಿಷಯ ಸಂಪಾದಿಕರಣ ಸಂಪನ್ಮೂಲ ಸಾಹಿತ್ಯ ಕನ್ನಡ ಭಾಷೆ ಕೃತಿಯಿಂದ ಆಯ್ದ ಜನಪದ ಕಲೆಗಳ ವೈಭವ ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ: ಯಕ್ಷಗಾನ ಜನರಲ್ಲಿ ಧಾರ್ಮಿಕ ಮತ್ತು ನೀತಿ ಪ್ರಜ್ಞೆಗಳನ್ನು ಬೆಳೆಸಲು ಸಹಕಾರಿಯಾಗಿದೆ ಯಕ್ಷಗಾನ ಪ್ರಸಂಗ ರಚಿಸಿದವರ ಉದ್ದೇಶ ಏನಾಗಿರುತ್ತದೆ ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳಲಾಗಿದೆ.
ಸ್ವಾರಸ್ಯ: ಪ್ರತಿಯೊಂದು ಯಕ್ಷಗಾನ ಪ್ರಸಂಗವು ನೋಡುಗರಲ್ಲಿ ಅಂತಿಮವಾಗಿ ದೈವ ಭಕ್ತರಿಗೆ ಜಯವಾಗುವುದು.

VI.

37. ವೀರಗಾಸೆ ಇದೊಂದು ಸಾಮೂಹಿಕ ನೃತ್ಯವಾಗಿದ್ದು ಇಬ್ಬರಿಂದ 30 ಮಂದಿ ಭಾಗವಹಿಸುತ್ತಾರೆ ಆಹಹಾ ರುದ್ರ ಆಹಹಾ ದೇವ ಎಂದು ವೀರಗಾಸೆಯ ನರ್ತಕ ಹೇಳುವ ಒಡಪಿನೊಂದಿಗೆ ಕುಣಿತ ಪ್ರಾರಂಭವಾಗುತ್ತದೆ ಈ ಕುಣಿತದಲ್ಲಿ ವೀರಭದ್ರ ಹುಟ್ಟಿದ ಸಂದರ್ಭದಲ್ಲಿ ವರ್ಣನೆ ಹೀಗಿದೆ ವೀರಭದ್ರ ದೇವರು ಹುಟ್ಟಿದ ರೂಪ ಎಂತು ಎಂದು ಹುಟ್ಟಿದಾಗಲೇ ಹೂವಿನಗಾಸೆ, ಮಂಜುಳಗಾಸೆ, ಬ್ರಹ್ಮಗಾಸೆ, ವಿಷ್ಣುಗಾಸೆ ರುದ್ರಗಾಸೆ, ಮೆಟ್ಟಿನ ಹೊನ್ನಾವಿಗೆ ಸಾವಿರ ಶಿರ, 3000 ನಯನ, 2000 ಭುಜ, ಕೆಕ್ಕರಿಸಿದ ಕಣ್ಣು, ಜುಂಜುಮಂಡೆ ಇಂಥಪ್ಪ ಶ್ರೀ ವೀರಭದ್ರ ದೇವರು ಹೋಮದ ಕುಂಡದ ಒಳಗೆ ಹೇಗೆ ಬರುತ್ತಾರೆಂದರೆ ಎನ್ನುವ ಒಡಪಿನೊಂದಿಗೆ ವೀರಭದ್ರನ ಕುಣಿತ ಸಾಗುತ್ತದೆ. ಚಮ್ಮಾಳ ಮತ್ತು ಕರಡೆಯ ಬಡಿತ ಇವರ ಕುಣಿತಕ್ಕೆ ಸ್ಫೂರ್ತಿ ನೀಡುತ್ತದೆ ನಾಲ್ಕೈದು ಗತಿಗಳಿರುವ ವೀರಗಾಸೆಯ ಕುಣಿತದಲ್ಲಿ ಒಂದೊಂದು ಗತಿಯ ಕುಣಿತದ ನಂತರ ಮತ್ತೊಬ್ಬ ನರ್ತಕ ಒಡಪು ಹೇಳುತ್ತಾನೆ ಒಡಪು ಮುಗಿಯುತಿದ್ದಂತೆ ವಾದ್ಯಗಳ ಬೋರ್ಗರಿತದೊಂದಿಗೆ ಮುಂದಿನ ಗತಿಯ ಕುಣಿತ ಪ್ರಾರಂಭವಾಗುತ್ತದೆ, ಗತಿಯಿಂದ ಗತಿಗೆ ಕುಣಿತ ಬಡಿತಗಳ ವೇಗ ಹೆಚ್ಚುತ್ತಾ ಹೋಗುತ್ತದೆ.

38. ಬೀಸು ಕಂಸಾಳೆ ದೇವರ ಗುಡ್ಡರ ವಿಶಿಷ್ಟ ನೃತ್ಯ ಕರ್ನಾಟಕದವನೇ ಭಾಗವತನಾದ್ದರಿಂದ ಭಾಗವತರಾಟ ಎಂಬ ಹೆಸರು ಬಂದಿದೆ ಯಕ್ಷಗಾನದಲ್ಲಿ ಆಟ ಆಡಿಸುವ ಸ್ಥಳವನ್ನು ರಂಗಸ್ಥಳ ಎಂದು ಕರೆಯುವರು. ಆರಂಭದ ಕಾಲದಲ್ಲಿ ಬಿದಿರು ಅಥವಾ ಕಂಬಗಳನ್ನು ಕಟ್ಟಿ ಮಾವಿನ ತೋರಣಗಳಿಂದ ಅಲಂಕರಿಸುತ್ತಾರೆ. ಜಾನಪದ ನೃತ್ಯಗಳಲ್ಲಿ ಅಪೂರ್ವವಾದದ್ದು ಇದರಲ್ಲಿ ತಾರ್ ಬಟ್ಟಲು ತಟ್ಟು ಬಟ್ಟಲು ಮುಂತಾದ ಬಗೆಗಳಿವೆ ನಾಲ್ಕು ಮಂದಿ ಗುಡ್ಡರು ಒಂದು ಕಡೆ ನಿಂತು ಲಿಂಗ ಬಾ ಮುದ್ದುಲಿಂಗಬಾ ನಮ್ಮ ಮುದ್ದು ಮಾದ ಮಾದಯ್ಯನ ಲಿಂಗ ಬಾ ಎಂದು ಆಡುತ್ತಾರೆ ಕಂಸಾಳೆ ಹಿಡಿದ ಗುಡ್ಡ ತಾಳಕ್ಕೆ ತಕ್ಕಂತೆ ವಿವಿಧ ವಿನ್ಯಾಸದಲ್ಲಿ ಬಾರಿಸುತ್ತಾ ಕುಣಿಯುತ್ತಾರೆ. ತಲೆಯ ಮೇಲೆ ಬೆನ್ನ ಹಿಂದೆ ಕಾಲ ಕೆಳಗೆ ನಿಂತು ಬಾಗಿ ಬಳಕಿ ತೀವ್ರ ಗತಿಯಲ್ಲಿ ನರ್ತಿಸುವ ಬಂಗಿ ಆಶ್ಚರ್ಯಕರ ಹಾಗೂ ಅದ್ಭುತ ಒಮ್ಮೊಮ್ಮೆ ಇಬ್ಬರು ಗುಡ್ಡರು ಕಲಿತು ನರ್ತಿಸುವುದುಂಟು ಒಬ್ಬರ ಕಂಸಾಳೆ ಮತ್ತೊಬ್ಬರು ಕುಟ್ಟುತ್ತಾ ಕುಣಿಯುವ ವೈಖರಿ ಆಕರ್ಷಕವಾಗಿರುತ್ತದೆ.

39. ಡೊಳ್ಳು ಕುಣಿತ ಜನಪದ ಕಲೆಗಳಲ್ಲಿ ವಿಶಿಷ್ಟವಾದುದು ಕುಣಿತದ ಕಾಲಕ್ಕೆ ವಾದ್ಯಗಾರರು ಹಸಿರು ಇಲ್ಲವೇ ಕೆಂಪು ಬಣ್ಣದ ಗಗ್ಗರಿ ಅಂಗಿ ಟೊಪ್ಪಿಗೆ ತೊಡುವರು ಎರಡು ಕೈಗಳಲ್ಲಿ ಅದೇ ಬಣ್ಣದ ಕರವಸ್ತ್ರ ಹಿಡಿದಿರುತ್ತಾರೆ ಸಾಮಾನ್ಯವಾಗಿ ಡೊಳ್ಳು ಬಾರಿಸುವವರು ದೇಹದ ಮೇಲು ಭಾಗಕ್ಕೆ ಕರಿಯ ಕಂಬಳಿಯನ್ನು ಸೊಂಟದ ಭಾಗಕ್ಕೆ ಮೊಣಕಾಲು ಮೇಲೆ ಬರುವಂತೆ ಕಚ್ಚೆ ಪಂಚೆಯನ್ನುಉಡುತ್ತಾರೆ. ಕೆಲವೊಮ್ಮೆ ಹುಲಿಯ ಚರ್ಮದ ರೀತಿಯ ಉಡುಪನ್ನು ಧರಿಸುತ್ತಾರೆ. ಕುಣಿತಕ್ಕೆ ಹಿನ್ನೆಲೆಯಾಗಿ ಡೊಳ್ಳು,ತಾಳ ಮತ್ತು ಕೊಳಲು ಇರುತ್ತದೆ.

40. ಯಕ್ಷಗಾನ ನೃತ್ಯ ಪ್ರಧಾನ ಕಲೆ ಪ್ರಾರಂಭದಲ್ಲಿ ದೇಸಿ ಕಲೆಯಾಗಿದ್ದು ಆನಂತರ ಶಾಸ್ತ್ರದ ಚೌಕಟ್ಟು ಒಳಪಟ್ಟಿದೆ. ಇದು ಪ್ರೇಕ್ಷಕರನ್ನು ಮಂತ್ರಮುಗ್ದರನ್ನಾಗಿಸುವ ಅಪೂರ್ವ ಶಕ್ತಿಯುಳ್ಳಕಲೆ ಯಕ್ಷಗಾನದಲ್ಲಿ ಪ್ರಾದೇಶಿಕ ಪ್ರಭೇದಗಳಿವೆ. ಅದರಲ್ಲಿ ಮುಖ್ಯವಾಗಿ ಮೂರು ಶೈಲಿಗಳಿವೆ. ತೆಂಕುತಿಟ್ಟು, ಬಡಗುತಿಟ್ಟು ಮತ್ತು ಬಡ ಬಡಗುತಿಟ್ಟು. ಯಕ್ಷಗಾನಕ್ಕೆ ದಶಾವತಾರ, ಬಯಲಾಟ ಎಂಬ ಹೆಸರಿದೆ. ಸಾಮಾನ್ಯವಾಗಿ ಬಯಲಾಟ ಪ್ರದರ್ಶಿತವಾಗುವುದು ಹಳ್ಳಿಯ ಬಯಲಿನಲ್ಲಿ ಆದ್ದರಿಂದ ಅದು ಬಯಲಾಟ ಯಕ್ಷಗಾನವಾಗಿದೆ.

VII.

41. ಸಾವಯವ ಕೃಷಿ

ಪೀಠಿಕೆ : ಸಾವಯವ ಎಂದರೆ ಕೊಳೆಯಬಹುದಾದ ವಸ್ತುಗಳ ಅಂದರೆ ನಾವು ಯಾವುದಾದರೂ ಒಂದು ವಸ್ತುವನ್ನು ಭೂಮಿಗೆ ಎಸೆದಾಗ ಅದು ಕೆಲವು ದಿನಗಳಲ್ಲಿ ಮಣ್ಣಿನೊಂದಿಗೆ ಬೆರೆತು ಗೊಬ್ಬರವಾಗುತ್ತದೆ ಉದಾಹರಣೆಗೆ ಸಸ್ಯಗಳ ಅವಶೇಷಗಳು ಬಟ್ಟೆ ಕಾಗದ ಕಬ್ಬಿಣ ಮೊದಲಾದವು ಇವು ಭೂಮಿಯಲ್ಲಿ ಕೊಳೆತಾಗ ಮಣ್ಣಿನ ಭಾಗವೇ ಆಗುತ್ತದೆ ಆ ಮಣ್ಣಿಗೆ ಹೆಚ್ಚಿನ ಫಲವತ್ತತೆ ತಂದುಕೊಡುತ್ತದೆ.

ವಿಷಯ ನಿರೂಪಣೆ : ಆಧುನಿಕ ಬೇಸಾಯ ಪದ್ಧತಿಯಲ್ಲಿ ಸಾವಯವ ಕೃಷಿಗೆ ಇತ್ತೀಚಿಗೆ ಹೆಚ್ಚಿನ ಆದ್ಯತೆ ದೊರೆಯುತ್ತಿದೆ ಪ್ರಾಣಿಗಳ ಮಲಮೂತ್ರ ತರಕಾರಿ ಸಸ್ಯಗಳ ತ್ಯಾಜ್ಯ ಮೊದಲಾದ ವಸ್ತುಗಳನ್ನು ಅದಕ್ಕಾಗಿಯೇ ಸಿದ್ಧಪಡಿಸಿದ ತೊಟ್ಟಿಗಳಲ್ಲಿ ವೈಜ್ಞಾನಿಕವಾಗಿ ಸಂಗ್ರಹಿಸಿ ಯಾವುದೇ ಬಗೆಯ ರಾಸಾಯನಿಕ ಪದಾರ್ಥಗಳನ್ನು ಸೇರಿಸದೆ ನೈಸರ್ಗಿಕವಾಗಿ ಕೊಳೆತ ಗೊಬ್ಬರ ತಯಾರಿಸುವುದು ಆಮೇಲೆ ಅದನ್ನು ಶುದ್ಧಿಗೊಳಿಸಿ ಬೆಳೆಗಳಿಗೆ ನೇರವಾಗಿ ನೀಡುವುದು ಇಂತಹ ಗೊಬ್ಬರವನ್ನು ವ್ಯವಸಾಯದಲ್ಲಿ ಬಳಕೆ ಮಾಡುವುದರಿಂದ ಮಣ್ಣಿನ ಫಲವತ್ತತೆ ಹೆಚ್ಚುತ್ತದೆ ನೀರನ್ನು ಹೆಚ್ಚುಕಾಲ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೆಚ್ಚುತ್ತದೆ ಅಲ್ಲದೆ ಸಾಮಾನ್ಯ ಕೀಟ ಬಾದೆಗಳಿಗೆ ಬೆಳೆ ಬೇಗ ಹಾನಿಯಾಗುವುದಿಲ್ಲ ಕೀಟ ಬಾದೆಗಳಿಗೆ ಸಾವಯವ ಪದ್ಧತಿಯಲ್ಲಿ ಬೇವಿನ ಹಿಂಡಿ ಹೊಂಗೆ ಇಂಡಿ ಮೊದಲಾದ ಔಷಧಗಳಿವೆ ಇವು ರೋಗಗಳನ್ನು ನಿವಾರಿಸುವುದಲ್ಲದೆ ಅಲ್ಲಿ ಉತ್ಪನ್ನವಾದ ತರಕಾರಿ ಹಣ್ಣು ಬೆಳೆಗಳನ್ನು ಸೇವಿಸುವುದರಿಂದ ಮನುಷ್ಯನ ಆರೋಗ್ಯದ ಮೇಲೆ ಯಾವುದೇ ರೀತಿಯ ಅಡ್ಡ ಪರಿಣಾಮಗಳು ಆಗುವುದಿಲ್ಲ.

ಉಪಸಂಹಾರ: ಒಟ್ಟಿನಲ್ಲಿ ಸಾವಯವ ಕೃಷಿ ಪದ್ಧತಿಯು ಇಂದಿನ ಆಧುನಿಕ ಯುಗದಲ್ಲಿ ಹೆಚ್ಚು ಉಪಕಾರಿಯಾದದ್ದು ಬೆಳೆಗಳಿಗೆ ಆಧುನಿಕ ರಾಸಾಯನಿಕ ಔಷಧಗಳ ಬಳಕೆಯನ್ನು ಕಡಿಮೆ ಮಾಡಿ ಅದರಿಂದ ಉಂಟಾಗುವ ದುಷ್ಪರಿಣಾಮಗಳನ್ನು ತಡೆಯಬಹುದು ಹಾಗಾಗಿ ಇಂದಿನ ದಿನಗಳಲ್ಲಿ ಸಾವಯವ ಕೃಷಿ ಪದ್ಧತಿ ರೈತ ಮಿತ್ರ ಪದ್ಧತಿ ಮತ್ತು ಪರಿಸರ ಸ್ನೇಹಿ ಕೃಷಿ ಪದ್ಧತಿ ಎನಿಸಿದೆ.

42. ಮಳೆ ಕೊಯ್ಲು :

ಪೀಠಿಕೆ: ನೀರು ಜೀವನದ ಅತ್ಯವಶ್ಯಕ ವಸ್ತು. ಸಕಾಲಕ್ಕೆ ಮಳೆಯಾಗದೆ ನೀರಿನ ಕ್ಷಾಮಾ ಉಂಟಾಗುತ್ತಿದೆ . ಇಂದು ಅಂತರ್ಜಲದ ಮಟ್ಟ ಕುಸಿಯುತ್ತಿದೆ. ಆದ್ದರಿಂದ ನೀರಿನ ಮೂಲಗಳನ್ನು ಸಂರಕ್ಷಿಸುವುದು ಇಂದಿನ ಅತ್ಯಗತ್ಯವಾದ ಕಾರ್ಯವಾಗಿದೆ .ಇಂತಹ ಕಾರ್ಯಗಳಲ್ಲಿ ಮಳೆ ಕೊಯ್ಲು ವಿಧಾನ ಸಹ ಒಂದಾಗಿದೆ.

ವಿಷಯ ನಿರೂಪಣೆ :ಮಳೆ ನೀರು ಕೊಯ್ಲು ಎಂಬುದು ಮಳೆ ನೀರನ್ನು ಒಟ್ಟುಗೂಡಿಸುವ ಅಥವಾ ಶೇಖರಿಸಿಟ್ಟುಕೊಳ್ಳುವ ವಿಧಾನ ಕುಡಿಯುವ ನೀರನ್ನು ಒದಗಿಸಲು ಜಾನುವಾರುಗಳಿಗೆ ನೀರುಣಿಸಲು ನೀರಾವರಿಗಾಗಿ ನೀರಿನ ವ್ಯವಸ್ಥೆ ಮಾಡಲು ಅಥವಾ ಅಂತರ್ಜಲ ಪುನರ್ಭರ್ತಿ ಕಾರ್ಯ ಎಂದು ಕರೆಯಲಾಗುವ ಪ್ರಕ್ರಿಯೆ ಒಂದರಲ್ಲಿ ನೀರು ಪೊಟರೆಯನ್ನು ಪುನಃ ತುಂಬಿಸಲು ಮಳೆ ನೀರು ಕೊಯ್ಲು ಪದ್ಧತಿಯನ್ನು ಬಳಸಿಕೊಂಡು ಬರಲಾಗಿದೆ ಮನೆಗಳು ಗುಡಾರಗಳು ಮತ್ತು ಸ್ಥಳೀಯ ಸಾರ್ವಜನಿಕ ಕಟ್ಟಡಗಳ ಚಾವಣಿಗಳಿಂದ ಸಂಗ್ರಹಿಸಲಾದ ಮಳೆ ನೀರು ಕುಡಿಯುವ ನೀರಿಗೆ ತನ್ನದೇ ಆದ ಪ್ರಮುಖ ಕೊಡುಗೆಯನ್ನು ನೀಡಬಲ್ಲದು. ಚಾವಣಿಯ ಮಳೆ ನೀರು ಸಾಮಾನ್ಯವಾಗಿ ಉತ್ತಮ ಗುಣಮಟ್ಟದ್ದಾಗಿರುತ್ತದೆ ಆದ್ದರಿಂದ ಬಳಕೆಗೆ ಮೊದಲು ಅದನ್ನು ಸಂಸ್ಕರಿಸುವ ಅಗತ್ಯ ಕಂಡುಬರುವುದಿಲ್ಲ ಸರಳವಾದ ವಿಧಾನದಿಂದ ಮೊದಲುಗೊಂಡು ಸಂಕೀರ್ಣವಾದ ಕೈಗಾರಿಕಾ ವ್ಯವಸ್ಥೆಗಳ ವರೆಗೆ ಮಳೆ ನೀರು ಕೊಯ್ಲನ್ನು ಮಾಡಲು ಹಲವಾರು ವೈವಿಧ್ಯ ವ್ಯವಸ್ಥೆಗಳಿವೆ ಸಾಮಾನ್ಯವಾಗಿ ಮಳೆ ನೀರನ್ನು ನೆಲದಿಂದ ಇಲ್ಲವೇ ಛಾವಣಿ ಒಂದರಿಂದ ಕೊಯ್ಲು ಮಾಡಲಾಗುತ್ತದೆ ಈ ಎರಡು ವ್ಯವಸ್ಥೆಗಳಾದ ನೀರನ್ನು ಸಂಗ್ರಹಿಸಬಹುದಾದ ವೇಗವು ಸದರಿ ವ್ಯವಸ್ಥೆಯ ಯೋಜನಾ ಪ್ರದೇಶ ಅದರ ಸಾಮರ್ಥ್ಯ ಮತ್ತು ಮಳೆ ಸುರಿದ ತೀವ್ರತೆಯನ್ನು ಅವಲಂಬಿಸಿರುತ್ತದೆ ಮಳೆ ನೀರನ್ನು ಅಂತರ್ಜಲ ಪುನರ್ಬತ್ತಿ ಕಾರ್ಯಕ್ಕೂ ಬಳಸಬಹುದಾಗಿತ್ತು ಇದರಲ್ಲಿ ನೆಲದ ಮೇಲೆ ಹರಿಯುವ ಹೆಚ್ಚುವರಿ ಪ್ರಮಾಣದ ನೀರು ಸಂಗ್ರಹಿಸಲ್ಪಡುತ್ತದೆ ಹಾಗೂ ನೀರು ಹೀರಿಕೆಗೆ ಒಳಗಾಗುವುದರ ಮೂಲಕ ಅಂತರ್ಜಲದ ಪ್ರಮಾಣದಲ್ಲಿ ಹೆಚ್ಚಳವಾಗಲು ಕಾರಣವಾಗುತ್ತದೆ.

ಉಪಸಂಹಾರ: ಸ್ಥಳೀಯವಾಗಿ ದೊರೆಯುವ ಹೆಚ್ಚು ದುಬಾರಿ ಅಲ್ಲದ ಸಾಮಗ್ರಿಗಳಿಂದ ಮಳೆ ನೀರು ಕೊಯ್ಲಿನ ವ್ಯವಸ್ಥೆಯನ್ನು ಸರಳವಾಗಿ ನಿರ್ಮಿಸಬಹುದು ಬಹುತೇಕ ವಾಸ ಯೋಗ್ಯ ತಾಣಗಳಲ್ಲಿ ಇದು ಯಶಸ್ವಿಯಾಗಿದೆ ಆದ್ದರಿಂದ ಜನರು ಈ ಬಗ್ಗೆ ಹೆಚ್ಚು ಗಮನ ಹರಿಸಿ ತಮ್ಮ ತಮ್ಮ ಮನೆಗಳಲ್ಲಿ ಹೊಲಗಳಲ್ಲಿ ಮಳೆ ನೀರುಕೊಯ್ಲಿನ ವ್ಯವಸ್ಥೆ ಮಾಡಿಕೊಂಡರೆ ನೀರಿನ ಸಮಸ್ಯೆಯನ್ನು ಬಹುಮಟ್ಟಿಗೆ ನಿವಾರಿಸಿಕೊಳ್ಳಬಹುದಾಗಿದೆ ಎಂಬುದು ನನ್ನ ಅಭಿಪ್ರಾಯವಾಗಿದೆ.

ಗದ್ಯಪಾಠ-6 ಅಧಿಕಾರ

I.

ಕೆಳಗಿನಪ್ರಶ್ನೆಗಳಿಗೆಅಥವಾಅಪೂರ್ಣಹೇಳಿಕೆಗಳಿಗೆನಾಲ್ಕುಆಯ್ಕೆಗಳನ್ನುನೀಡಲಾಗಿದೆಅವುಗಳಲ್ಲಿ ಸೂಕ್ತವಾದಉತ್ತರವನ್ನುಆರಿಸಿಕ್ರಮಾಕ್ಷರದೊಂದಿಗೆಬರೆಯಿರಿ.

1. ಅ) ಅಂಶಿಸಮಾಸ
2. ಈ) ದ್ವಂದ್ವಸಮಾಸ
3. ಇ) ಬಹುವ್ರೀಹಿಸಮಾಸ
4. ಈ) ಅಂಶಿಸಮಾಸ
5. ಆ) ಅಂಶಿಸಮಾಸ
6. ಈ) ಗಿಡಮರಬಳ್ಳಿಗಳು
7. ಇ) ಬಹುವ್ರೀಹಿಸಮಾಸ
8. ಇ) ಚಕ್ರಪಾಣಿ
9. ಆ) ದ್ವಂದ್ವಸಮಾಸ
10. ಆ) ಸುವರ್ಣದೀರ್ಘಸಂಧಿ
11. ಈ) ಶಿವಾಲಯ
12. ಅ) ಅನಿಸುತ್ತಿದೆ
13. ಇ) ಸಕ್ಕದ
14. ಅ) ಕೈಯಲ್ಲಿ

II.

15. ನಿಜ
16. ಕೊರತೆ
17. ಜವಾಬ್ದಾರಿ
18. ಅಕ್ಕರ
19. ವರುಷ
20. ಸೂರ್ಯ
21. ಬಂಗಾರ
22. ಅಂಶಿಸಮಾಸ
23. ಬಹುವ್ರೀಹಿಸಮಾಸ
24. ಲೋಪಸಂಧಿ

III.

25. ನಿನ್ನ ಸೊಸೆ ಇನ್ನು ಸಣ್ಣಾಕೆ, ಅಂದಹಾಗೆ ನೀನು ಸ್ವಲ್ಪ ಸಂಬಾಳಿಸಿಕೊಳ್ಳಬೇಕೆಂದು ಹೇಳಿದರು.
26. ಗುಡ್ಡೆವ್ವ ಮಾದರಚೆನ್ನಯ್ಯನ ಗೀತೆಯನ್ನು ಚೆನ್ನಾಗಿ ಹಾಡುತ್ತಾಳೆ.
27. ಒಂದೆರಡು ದಿನದಮಟ್ಟಿಗೆ ಮನೆಯ ಜವಾಬ್ದಾರಿಯನ್ನು ಸೊಸೆಗೆ ಕೊಡಲು ಬಸವಣ್ಣ ಹೇಳಿದರು.
28. ಬಸವಣ್ಣನು ಗುಡ್ಡೆವ್ವಳನ್ನು ಸಂಗಯ್ಯನ ಮಹಾಮನೆಗೆ ಬಂದು ಹಾಡಲು ಹೇಳಿದರು.
29. ಬಿಜ್ಜಳನ ಬಿರುದಾವಳಿಗಳನ್ನು ಮಂಚ್ಯಣಕ್ರಮಿತನು ರಚಿಸಿದನು.
30. ಮಂಚ್ಯಣಕ್ರಮಿತನು ಸಂಸ್ಕೃತ ಭಾಷೆಗೆ ಪ್ರಾಧ್ಯಾನತೆ ನೀಡಿದ್ದನು.
31. ಬಿಜ್ಜಳನು "ತನ್ನ ಮಗ ದಡ್ಡ, ಅರಿವಿಲ್ಲದವನೆಂದು' ಹೇಳಿದನು.
32. ಬಸವಣ್ಣನವರ ಪ್ರಕಾರ ರಾಜ್ಯಭಾರ ಎಂದರೆ ಅದೊಂದು ಕಾಯಕ.
33. ಬಿಜ್ಜಳನು ಚಾಳುಕ್ಯರ ಸಾಮಂತ ದೊರೆಯಾಗಿದ್ದನು.
34. ಬಿಜ್ಜಳನೊಂದಿಗೆ ಬಂದ ಬ್ರಾಹ್ಮಣ ಮಂಚ್ಯಣಕ್ರಮಿತ.

35. ಬಸವಣ್ಣನು 'ಗುಡ್ಡೆವ್ವ ನಿನ್ನ ಧ್ವನಿ ಬಹಳ ಚೆನ್ನಾಗಿದೆ ಎಂದು ಕೇಳಿದ್ದೇನೆ. ಮಾದರ ಚೆನ್ನಯ್ಯನಗೀತೆಯನ್ನು ಬಹಳ ಚೆನ್ನಾಗಿ ಹಾಡುತ್ತೀಯಂತೆ' ಎಂಬ ಮಾತನ್ನು ಕೇಳಿ ನಾಚಿಕೊಂಡಳು.

36. ಬಿಜ್ಜಳನ ಪತ್ನಿಯ ಹೆಸರು ರಂಭಾವತಿ.

37. 'ಬಿರುದಾವಳಿಗಳು ಬೆಳೆಯುತ್ತಾ ಹೋದರೆ ರಾಜ್ಯದಲ್ಲಿ ಸಿಗುವ ಅಷ್ಟುಕಲ್ಲುಗಳನ್ನು ಒಟ್ಟುಗೂಡಿಸಿದರೂ ಮಹಾರಾಜರ ಶಾಸನಗಳಿಗೆ ಸಾಕಾಗುವುದಿಲ್ಲ' ಎಂದರು.

38. ಮಂಚ್ಯಣಕ್ರಮಿತನು ಶಾಸನಗಳಿಂದ ಮಹಾರಾಜರ ಸಾಮ್ರಾಜ್ಯವನ್ನು ದಿಗಂತದ ಆಚೆಗೆ ಹಬ್ಬಿಸಲು ಇದೊಂದು ಒಳ್ಳೆಯಮಾರ್ಗ ಎಂದು ಹೇಳಿದ ಮಾತಿನಿಂದ ಬಸವಣ್ಣನವರು ಕನಲಿದರು.

39. ಬಿಜ್ಜಳನು ' ಬೇರೆ ಯಾವ ಅರಸನೇ ಆಗಿದ್ದರೆ ನನ್ನಷ್ಟು ಸಡಲು ಬಿಡುತ್ತಿದ್ದನೇ,' ಎಂಬ ಪ್ರಶ್ನೆ ಕೇಳಿದನು.

40. ಮಂಚ್ಯಣಕ್ರಮಿತರ ಪ್ರಕಾರ ಮಹಾರಾಜರ ಕೀರ್ತಿಗೋಸ್ಕರಗೋಳನ್ನು ಸಹಿಸಿಕೊಳ್ಳುವುದು ಪ್ರಜೆಗಳ ಕರ್ತವ್ಯ ಎಂದನು.

41. ನಾವು ಮಹಾರಾಜರ ಅಧಿಕಾರಿಗಳು. ಮಹಾರಾಜರ ಪ್ರಜೆಗಳ ಗೋಳನ್ನು ಮಹಾರಾಜರ ಕಿವಿಯ ಮೇಲೆ ಹಾಕುವುದು ನಮ್ಮ ಕರ್ತವ್ಯ ಎಂದರು.

42. ಬಿಜ್ಜಳನು ಕೀಲಿಕೈಯನ್ನು ತೆಗೆದುಕೊಳ್ಳುವುದಿಲ್ಲವೆಂದರೆ ಅರಮನೆಯ ಶಿವಾಲಯದ ಲಿಂಗಕ್ಕೆ ಅರ್ಪಿಸಿ ಹೋಗುತ್ತೇನೆಂದು ಬಸವಣ್ಣನವರು ಹೇಳಿದರು.

IV <u>ಕೆಳಗಿನಪ್ರಶ್ನೆಗಳಿಗೆಮೂರುಅಥವಾನಾಲ್ಕುವಾಕ್ಯಗಳಲ್ಲಿಉತ್ತರಬರೆಯಿರಿ.</u>

43. ಮಹಾರಾಜರು ತಮ್ಮ ಸಾಮ್ರಾಜ್ಯವನ್ನು ದಿಗಂತದಾಚೆಗೂ ವರ್ಧಿಸಲಿಕ್ಕ ಇದಕ್ಕಿಂತ ಒಳ್ಳೆಯ ಪ್ರಚೋದನೆ ಇನ್ಯಾವುದಿದೆ. ಚೋಳ - ಪಾಂಡ್ಯರ ರಾಜ್ಯ ಅಲ್ಲಿಯ ಸಂಸ್ಕೃತಿಗಿಂತ ಹೆಚ್ಚಾಗಿ ಅಲ್ಲಿಯ ಶಿಲೆಗಳ ಸಲುವಾಗಿ ಹೆಸರಾಗಿರುವುದು ನಮಗೆ ಅನುಕೂಲ ಎಂದು ಹೇಳಿದನು.

44. ಬಿಜ್ಜಳನು" ನಾಲ್ಕೈದು ವರ್ಷ ಆದವು. ಹಬ್ಬಹರಿದಿನ ಬಿಟ್ಟರೆ ನೀ ಅರಮನೆ ಹಂತ್ಯಾಕ ಹಾದಿಲ್ಲ. ನಾಯಾಕಂತ ಕೇಳಿಲ್ಲ. ಮಹಾರಾಜರಿಗೂ ಭಂಡಾರಿ ಬಸವಣ್ಣಗೂ ಮುರಗಡೆ ಆಗೇತಿ ಇಡೀ ರಾಜ್ಯ ಆಡಿಕೊಳ್ಳೋಕೆ ಹತ್ತೈತಿ. ಹಿಂಗಿದ್ದು ನಾ ಈ ಬಂಡಾರದ ಕೀಲಿಕೈ ಹೊಳ್ಳಿ ಇಸಕೊಳ್ಳಲಿಲ್ಲ. ನಮ್ಮ ಅರಸೊತ್ತಿಗೆಯನ್ನ ಹಂಗಿಸಿ ನೀನು ವಚನ ಬರೆದು ನಿಮ್ಮ ಅನುಭಾವಗೋಷ್ಠಿಯೊಳಗೆ ಹಾಡಿರುವುದು ನನಗೆ ಗೊತ್ತಿದೆ ಎಂದು ಹೇಳಿದನು.

45. ಬಸವಣ್ಣನು ತನ್ನ ಕರ್ತವ್ಯದ ವಿಚಾರವಾಗಿ " ನಾನು ಮೊದಲೇ ಹೇಳಿದ್ದೆ ಧಣಿ. ನಾನು ಭಂಡಾರದಲ್ಲಿ ದುಡಿಯೋದು ಬಿಜ್ಜಳ ಮಹಾರಾಜರ ಅನುಕೂಲತೆಗಾಗಿ ಅಲ್ಲ. ಆ ಸಂಪತ್ತು ರಾಜವಂಶದ ಸ್ವತ್ತಲ್ಲ. ಜನರ ಸೊತ್ತು. ಪ್ರಜೆಗಳ ಪಾಲಕ ಅಂತ ರಾಜನಿಗೆ ಅಲ್ಲಿ ಅಧಿಕಾರ ಅದ. ಆದರೆ ರಾಜನಮನೆಯವರಿಗೆ ಅಲ್ಲಿ ಪ್ರವೇಶ ಇಲ್ಲ" ಎಂದು ಬಿಜ್ಜಳನಿಗೆ ಹೇಳಿದನು.

46. ಬಿಜ್ಜಳನು, ಹೊಸ ಶಿಲಾಶಾಸನವನ್ನು ಬರೆಸುವ ಸಲುವಾಗಿ ಮಂಚ್ಯಣಕ್ರಮಿತರಿಂದ ಹೊಸ ಬಿರುದಾವಳಿಗಳನ್ನು ಬರೆಸಿದ್ದನು.

47. ಬಿಜ್ಜಳನನ್ನು ಕುರಿತು ವಂದಿ- ಮಾಗಧರು, ಮಹಾರಾಜಾಧಿರಾಜ ಕಾಳಂಜರ ಪುರಾದೀಶ್ವರ ಸುವರ್ಣ ವೃಷಭ ದ್ವಜ ಡಮರು ತೂರ್ಯ ನಿರ್ಘೋಷಣ ಕಲಚೂರ್ಯ ವಂಶ ಕಮಲ ಭಾಸ್ಕರ ತ್ರ್ಯಂಬಕಪಾದ ಪದ್ಮ ಮಧು ಪಶನಿವಾರ ಸಿದ್ದಿಭುಜ ಬಲಚಕ್ರವರ್ತಿ ಬಿಜ್ಜಳದೇವ ರಾಜಭೋಪರಾ! ಭೋಪರಾಕ್ ಎಂದು ಪರಾಕ್ ಮಾಡಿದರು.

48. ಹದಿನೈದು ವರ್ಷಗಳ ಹಿಂದೆಯೇ ಬಸವಣ್ಣನವರು ಬಿಜ್ಜಳನಿಗೆ ' ರಾಜ್ಯಭಾರ ಅನ್ನೋದು ಒಂದು ಕಾಯಕ. ಅದಕ್ಕೆ ವಂಶ ಇದ್ದರೆ ಸಾಲದು ಯೋಗ್ಯತೆ ಬೇಕು ಎಂಬುದಾಗಿ ಹೇಳಿದ್ದರು.

49. "ಒಂದೊಂದು ಹೊಸ ಶಾಸನ, ಅದರೊಳಗೆ ಮೆರಸಲಿಕ್ಕಂತ ಒಂದು ಹೊಸಯುದ್ಧ. ಯುದ್ಧದಲ್ಲಿ ಮಡಿದ ವೀರರಿಗಾಗಿ ಐನೂರು ಹೊಸ ವೀರಗಲ್ಲುಗಳು, ಸಾವಿರಾರು ಹಸಿವಿಧವೆಯರ ಗೋಳಾಟ ಮತ್ತು ಈ ಪರಾಕ್ರಮದ ವೆಚ್ಚಕ್ಕೆಂದು ಹೊಸ ತೆರಿಗೆ, ನಿರಾಶ್ರಿತರ ಗೋಳು, ಅವರಿಗೆ ಆಶ್ರಯ ನೀಡುವುದು," ಈ ರೀತಿ ಬಸವಣ್ಣನವರು ಶಾಸನಗಳನ್ನು ಹಾಕಿಸುವುದರ ಪರಿಣಾಮಗಳ ಬಗ್ಗೆ ತಿಳಿಸಿದರು.

V.

50. ಗಿರೀಶ್ ಕಾರ್ನಾಡ್.

ಬಹುಭಾಷಾ ಪಂಡಿತರಾದ ಗಿರೀಶ್ಕಾರ್ನಾಡ್ರುವರು ೧೯೩೮ ಮೇ ೧೯ ರಂದು ಮಹಾರಾಷ್ಟ್ರದ ಮಾಥೇರಾನದಲ್ಲಿ ಜನಿಸಿದರು. ಇವರು ಬರೆದಿರುವ ಪ್ರಸಿದ್ಧ ನಾಟಕಗಳೆಂದರೆ ಯಯಾತಿ, ತುಘಲಕ್, ಹಯವದನ, ಅಂಜುಮಲ್ಲಿಗೆ ನಾಗಮಂಡಲ ಟಿಪ್ಪುವಿನ ಕನಸುಗಳು, ಅಗ್ನಿ ಮತ್ತು ಮಳೆ, ತಲೆದಂಡ ಮುಂತಾದವು. 'ಆಡಾಡತ ಆಯುಷ್ಯ' ಇವರ ಆತ್ಮಕಥೆ. ಲೇಖಕರಿಗೆ 'ಜ್ಞಾನಪೀಠ ಪ್ರಶಸ್ತಿ' 'ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ' 'ಪದ್ಮಶ್ರೀ' 'ಪದ್ಮಭೂಷಣ' 'ಕೇಂದ್ರ ಸಂಗೀತನಾಟಕ ಅಕಾಡೆಮಿ ಪ್ರಶಸ್ತಿ' 'ರಾಜ್ಯೋತ್ಸವ ಪ್ರಶಸ್ತಿ' ಇನ್ನೂ ಮುಂತಾದ ಪ್ರಶಸ್ತಿಗಳನ್ನು ಪಡೆದಿದ್ದಾರೆ.

VI.

51. ಆರೋಗ್ಯವೇ ಭಾಗ್ಯ.

ಗಾದೆಗಳು ವೇದಕ್ಕೆ ಸಮ. ವೇದ ಸುಳ್ಳಾದರು ಗಾದೆ ಸುಳ್ಳಾಗದು. ಗಾದೆಗಳು ಹಿರಿಯರ ಅನುಭವದ ಮಾತಾಗಿವೆ. ನಮ್ಮ ಜನಪದರು ತಮ್ಮಬುದ್ಧಿಶಕ್ತಿಯಿಂದ ಸೃಷ್ಟಿಸಿರುವ ಸತ್ಯದನುಡಿಗಳಾಗಿವೆ. ಇದೊಂದು ಜನಪ್ರಿಯ ಗಾದೆಗಳಲ್ಲಿ ಒಂದಾಗಿದೆ. ಈ ಗಾದೆ ಮಾತಿನ ಅರ್ಥವೇನೆಂದರೆ, ಆರೋಗ್ಯವು ಒಬ್ಬ ವ್ಯಕ್ತಿಯು ಹೊಂದಬಹುದಾದ ಅತ್ಯಮೂಲ್ಯ ಆಸ್ತಿಯಾಗಿದೆ. ಉತ್ತಮ ಆರೋಗ್ಯವಿಲ್ಲದೆ ಶ್ರೀಮಂತ ವ್ಯಕ್ತಿಕೂಡ ತಮ್ಮ ಸಂಪತ್ತನ್ನು ಸಂಪೂರ್ಣವಾಗಿ ಆನಂದಿಸಲು ಸಾಧ್ಯವಿಲ್ಲ. ಆರೋಗ್ಯಕರ ದೇಹ ಮತ್ತು ಮನಸ್ಸು ಸಂತೋಷದ ಉತ್ಪಾದಕ ಮತ್ತು ಜೀವನಕ್ಕೆ ಅಡಿಪಾಯವನ್ನು ಒದಗಿಸುತ್ತದೆ. ಜನರು ಆರೋಗ್ಯವಾಗಿದ್ದಾಗ ಅವರು ಕಷ್ಟಪಟ್ಟು ಕೆಲಸ ಮಾಡಿ ತಮ್ಮ ಗುರಿಗಳನ್ನು ಸಾಧಿಸಬಹುದು ಮತ್ತು ಸಮಾಜಕ್ಕೆ ತಮ್ಮದೇ ಆದ ಕೊಡುಗೆಗಳನ್ನು ನೀಡಬಹುದು. ಇದಕ್ಕೆ ವ್ಯತಿರಿಕ್ತವಾಗಿ ಆರೋಗ್ಯವೇ ಇರದಿದ್ದರೆ ಒಬ್ಬರ ಸಾಮರ್ಥ್ಯಗಳನ್ನ ಮಿತಿಗೊಳಿಸುತ್ತದೆ ಮತ್ತು ಆಗಾಗ ಒತ್ತಡ ಸಂಕಟ ಮತ್ತು ಆರ್ಥಿಕ ಹೊರಗೆ ಕಾರಣವಾಗುತ್ತದೆ. ನಿಯಮಿತ ವ್ಯಾಯಾಮ ಸಮತೋಲಿತ ಆಹಾರ ಮತ್ತು ಸಾಕಷ್ಟು ವಿಶ್ರಾಂತಿಯ ಮೂಲಕ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳುವುದು. ದೀರ್ಘಾವಧಿಯ ಯೋಗಕ್ಷೇಮಕ್ಕೆ ಅವಶ್ಯಕವಾಗಿದೆ. ಆದ್ದರಿಂದ ಆರೋಗ್ಯಕರವಾದ ಸಮುದಾಯವು ಸಮೃದ್ಧ ರಾಷ್ಟ್ರದ ಅಭಿವೃದ್ಧಿಗೆ ಕಾರಣವಾಗುತ್ತದೆ. ಎಲ್ಲರೂ ಆರೋಗ್ಯವನ್ನು ನಿರ್ಲಕ್ಷಿಸುವುದರಿಂದ ದುಬಾರಿ ವೈದ್ಯಕೀಯ ವೆಚ್ಚಗಳನ್ನ ಭರಿಸಬೇಕಾಗುತ್ತದೆ. ಆದ್ದರಿಂದ ನಮಗೆ ಭೌತಿಕ ಸಂಪತ್ತಿಗಿಂತ ಆರೋಗ್ಯಕ್ಕೆ ಹೆಚ್ಚಿನ ಆದ್ಯತೆ ನೀಡುವುದು ಮುಖ್ಯವಾಗಿದೆ. ದೇಹ ಮತ್ತು ಮನಸ್ಸಿನಲ್ಲಿ ಅನಾರೋಗ್ಯದ ಸಮಸ್ಯೆಗಳಿಲ್ಲದೆ ಬದುಕುವ ಸಾಮರ್ಥ್ಯವೇ ನಿಜವಾದ ಸಂಪತ್ತು. ಅದ್ದರಿಂದ ಪ್ರತಿಯೊಬ್ಬರು ಆರೋಗ್ಯವನ್ನು ಕಾಪಾಡಿಕೊಳ್ಳಬೇಕು.

52. ಕೊಟ್ಟಿದ್ದು ತನಗೆ ;ಬಚ್ಚಿಟ್ಟಿದ್ದು ಪರರಿಗೆ.

ಗಾದೆಗಳು ವೇದಕ್ಕೆ ಸಮ. ವೇದ ಸುಳ್ಳಾದರು ಗಾದೆ ಸುಳ್ಳಾಗದು. ಗಾದೆಗಳು ಹಿರಿಯರ ಅನುಭವದ ಮಾತಾಗಿವೆ. ನಮ್ಮ ಜನಪದರು ತಮ್ಮಬುದ್ಧಿಶಕ್ತಿಯಿಂದ ಸೃಷ್ಟಿಸಿರುವ ಸತ್ಯದ ನುಡಿಗಳಾಗಿವೆ. ಇದೊಂದು ಜನಪ್ರಿಯ ಗಾದೆಗಳಲ್ಲಿ ಒಂದಾಗಿದೆ. ಈ ಗಾದೆ ಮಾತಿನ ಅರ್ಥವೇನೆಂದರೆ.

ಕೊಟ್ಟಿದ್ದು ತನಗೆ ಬಚ್ಚಿಟ್ಟಿದ್ದು ಪರರಿಗೆ, ಕೊಟ್ಟು ಕೆಟ್ಟೆನೆನಬೇಡ ಅದು ಮುಂದೆ ಕಟ್ಟಿಹುದು ಬುತ್ತಿ ಎಂದು ಸರ್ವಜ್ಞ ಕವಿ ಹೇಳಿದ್ದಾರೆ. ನಾವು ಇನ್ನೊಬ್ಬರಿಗೆ ಮನಃಪೂರ್ವಕವಾಗಿ ಕೊಟ್ಟಿದ್ದು ಪ್ರತಿಫಲ ನೀಡುತ್ತದೆ. ಇನ್ನೊಬ್ಬರಿಗೂ ಕೊಡದೆ ತಾನೂ ಅನುಭವಿಸದೆ ಜಿಪುಣತನದಿಂದ ಕೂಡಿಟ್ಟರೆ ಅದು ಅನ್ಯರ ಪಾಲಾಗುವುದು. ಕೊಡುವುದನ್ನು ಕೂಡ ಅಗತ್ಯವಿರುವವರಿಗೆ ಮಾತ್ರ ಕೊಟ್ಟರೆ ಅವರ ಬದುಕು ಹಸನಾಗಿ ಅವರು ನಮ್ಮನ್ನು

ನೆನಪಿಸಿಕೊಳ್ಳುತ್ತಾರೆ. ಕೊಡುವುದರಿಂದ ನಮಗೆ ಪುಣ್ಯ ಬರುತ್ತದೆ ಎಂಬುದು ಭಾರತೀಯರ ನಂಬಿಕೆ. ಈ ಪುಣ್ಯವೇ ಮುಂದೆ ನಮ್ಮನ್ನು ಕಾಪಾಡುತ್ತದೆ. ಮುಂದಿನ ಬದುಕಿಗೆ ದಾರಿದೀಪವಾಗಿರುತ್ತದೆ. ಹೀಗಾಗಿ ಬಚ್ಚಿಡುವುದು ಒಳ್ಳೆಯದಲ್ಲ, ಬಚ್ಚಿಡುವುದರಿಂದ ಕಳ್ಳರಪಾಲಾಗಬಹುದು. ಕೆಲವರು ನೆಲದಲ್ಲಿ ಬಚ್ಚಿಡುತ್ತಾರೆ. ಅದು ಕ್ರಮೇಣ ನಾಶವಾಗಬಹುದು. ಅದರ ಬದಲು ಇದ್ದಾಗ ಸಂತ್ರಸ್ತರಿಗೆ ಕೊಟ್ಟರೆ ಮುಂದೆ ನಮಗೆ ಅವಶ್ಯಕತೆ ಇದ್ದಾಗ ದೊರಕುತ್ತದೆ ಎಂಬ ನಂಬಿಕೆ ಇದೆ. ಇದ್ದಾಗ ಅವಶ್ಯಕತೆಯಿರುವವರಿಗೆ ಕೊಡು, ಮುಂದೆ ನಿನಗೆ ಅವಶ್ಯಕತೆಯಿದ್ದಾಗ ತಂತಾನೆ ದೊರೆಯುತ್ತದೆ.

VII.

53. ಆಯ್ಕೆ: ಈ ಮೇಲಿನ ವಾಕ್ಯವನ್ನು ಗಿರೀಶ್ಕಾರ್ನಾಡ್ರುವರು ಬರೆದಿರುವ, 'ತಲೆದಂಡ' ಎಂಬ ನಾಟಕದ ಮೂರನೇ ದೃಶ್ಯದ 'ಅಧಿಕಾರ' ಎಂಬ ಪಠ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ: ಬಸವಣ್ಣನವರು ಗುಡ್ಡೆವ್ವನಿಗೆ ಆಕೆಯ ಸೊಸೆಯ ಬಗ್ಗೆ ಸಮಾಧಾನ ಮಾಡುತ್ತಾ ನನ್ನ ಮಾತು ಕೇಳಂಗಿದ್ದರೆ ಒಂದು ಮಾತು ಹೇಳತೀನಿ ಎಂದಾಗ ಗುಡ್ಡೆವ್ವ ಮೇಲ್ಕಂಡ ಮಾತನ್ನು ಹೇಳಿದಳು.
ಸ್ವಾರಸ್ಯ :- ಗುಡ್ಡೆವ ಮುದುಕಿಯ ಈ ಮಾತಿನಲ್ಲಿ ಬಸವಣ್ಣನವರ ಬಗ್ಗೆ ಜನರು ಹೊಂದಿರುವ ಒಳ್ಳೆಯ ಅಭಿಪ್ರಾಯ, ಗೌರವ, ನಂಬಿಕೆ, ಮತ್ತು ವಿಶ್ವಾಸ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

54. ಆಯ್ಕೆ: ಈ ಮೇಲಿನ ವಾಕ್ಯವನ್ನು ಗಿರೀಶ್ಕಾರ್ನಾಡ್ರುವರು ಬರೆದಿರುವ, 'ತಲೆದಂಡ' ಎಂಬ ನಾಟಕದ ಮೂರನೇ ದೃಶ್ಯದ 'ಅಧಿಕಾರ' ಎಂಬ ಪಠ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ :- ಗುಡ್ಡೆವ್ವ ಮಹಾಮನೆಯಲ್ಲಿ ದಲಿತರೆಲ್ಲ ಇರುವ ಜಾಗದಲ್ಲಿ ನಾನು ಬಂದು ಹಾಡೋದೆ ಎಂದು ಕೇಳಿದ ಸಂದರ್ಭದಲ್ಲಿ ಬಸವಣ್ಣನವರು ಮೇಲಿನ ಮಾತನ್ನು ಹೇಳಿದ್ದಾರೆ.
ಸ್ವಾರಸ್ಯ :- ಬಸವಣ್ಣನವರ ಮಹಾಮನೆಯಲ್ಲಿ ಜಾತಿಭೇದವಿಲ್ಲದೆ ಎಲ್ಲರಿಗೂ ಪ್ರವೇಶವಿತ್ತು ಎಂಬುದು ಈ ವಾಕ್ಯದ ಸ್ವಾರಸ್ಯವಾಗಿದೆ.

55. ಆಯ್ಕೆ: ಈ ಮೇಲಿನ ವಾಕ್ಯವನ್ನು ಗಿರೀಶ್ಕಾರ್ನಾಡ್ರುವರು ಬರೆದಿರುವ, 'ತಲೆದಂಡ' ಎಂಬ ನಾಟಕದ ಮೂರನೇ ದೃಶ್ಯದ 'ಅಧಿಕಾರ' ಎಂಬ ಪಠ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ :- ಬಿಜ್ಜಳ ಮಹಾರಾಜರು ಹೊಸ ಶಾಸನದ ಬಿರುದಾವಳಿಗಳನ್ನು ಮಂಚ್ಯಣಕ್ರಮಿತರಿಂದ ರಚಿಸಿದ್ದರು. ಅದರ ಬಗ್ಗೆ ಬಿಜ್ಜಳನು ಬಸವಣ್ಣನ ಅಭಿಪ್ರಾಯ ಕೇಳಿದ ಸಂದರ್ಭದಲ್ಲಿ ಮೇಲಿನ ಮಾತನ್ನು ಬಸವಣ್ಣನು ಹೇಳಿದ್ದಾನೆ.
ಸ್ವಾರಸ್ಯ: **12**ನೇ ಶತಮಾನದಲ್ಲಿ ಪಂಡಿತರಿಗೆ ಕನ್ನಡಕ್ಕಿಂತ ಹೆಚ್ಚಾಗಿ ಸಂಸ್ಕೃತ ಭಾಷೆಯ ಮೇಲೆ ಒಲವು ಹೆಚ್ಚಾಗಿದ್ದು, ಕನ್ನಡ ಭಾಷೆಯನ್ನು ಕೀಳಾಗಿ ಕಾಣುತ್ತಿದ್ದುದು ಸ್ವಾರಸ್ಯವಾಗಿ ಕಾಣಬಹುದು.

56. ಆಯ್ಕೆ: ಈ ಮೇಲಿನ ವಾಕ್ಯವನ್ನು ಗಿರೀಶ್ಕಾರ್ನಾಡ್ರುವರು ಬರೆದಿರುವ, 'ತಲೆದಂಡ' ಎಂಬ ನಾಟಕದ ಮೂರನೇ ದೃಶ್ಯದ 'ಅಧಿಕಾರ' ಎಂಬ ಪಠ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ: ಬಿಜ್ಜಳನು ಬಸವಣ್ಣನ ಕಾರ್ಯವೈಖರಿಯ ಬಗ್ಗೆ ಹೇಳಿದ ಸಂದರ್ಭದಲ್ಲಿ ಬಸವಣ್ಣನವರು ಮೇಲಿನ ಮಾತನ್ನು ಹೇಳಿದ್ದಾರೆ.
ಸ್ವಾರಸ್ಯ :- ರಾಜನಾಗಲೀ ಅಧಿಕಾರಿಯಾಗಲೀ ಪ್ರಜೆಗಳ ಪಾಲಕರು. ಸಂಪತ್ತು ಇರುವುದು ಜನರಿಗಾಗಿ ಹೊರತು, ರಾಜನ ಅನುಕೂಲಕ್ಕಾಗಿ ಅಲ್ಲ, ಎಂಬುದು ಬಸವಣ್ಣನ ಮಾತಿನ ಸ್ವಾರಸ್ಯವಾಗಿದೆ.

57. ಆಯ್ಕೆ: ಈ ಮೇಲಿನ ವಾಕ್ಯವನ್ನು ಗಿರೀಶ್ಕಾರ್ನಾಡ್ರುವರು ಬರೆದಿರುವ, 'ತಲೆದಂಡ' ಎಂಬ ನಾಟಕದ ಮೂರನೇ ದೃಶ್ಯದ 'ಅಧಿಕಾರ' ಎಂಬ ಪಠ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ: ಬಿಜ್ಜಳ ಮಹಾರಾಜನಿಗೆ ಇರುವ ಮಗನಿಗೆ ಪಟ್ಟ ಕಟ್ಟಿ 'ಯುವರಾಜ' ಎಂದು ಕರೆದರೆ ಮಹಾರಾಣಿಗೂ ಸಂತೋಷ ಉಂಟಾಗುತ್ತದೆ ಎಂದು ಹೇಳಿದಾಗ, ಬಸವಣ್ಣನವರು ಪಟ್ಟಕಟ್ಟಿರುವ ವಿಷಯವು ತಿಳಿದಿಲ್ಲ ಎಂದು ಹೇಳುವ ಸಂಧರ್ಭದಲ್ಲಿ ಮೇಲಿನ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ: ಅಧಿಕಾರ ಎಂಬುದು ವಂಶಪಾರಂಪರ್ಯವಾಗಿ ಬರುವಂತದ್ದಲ್ಲ. ಅವರಲ್ಲಿ ಯೋಗ್ಯತೆ ಇರಬೇಕು ಎಂದು ಹೇಳುವುದು ಸ್ವಾರಸ್ಯಪೂರ್ಣವಾಗಿದೆ.

58. ಆಯ್ಕೆ: ಈ ಮೇಲಿನ ವಾಕ್ಯವನ್ನು ಗಿರೀಶ್ಕಾರ್ನಾಡರುವರು ಬರೆದಿರುವ, 'ತಲೆದಂಡ' ಎಂಬ ನಾಟಕದ ಮೂರನೇ ದೃಶ್ಯದ 'ಅಧಿಕಾರ' ಎಂಬ ಪಠ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ: ಬಿಜ್ಜಳ ಮಹಾರಾಜನಿಗೆ ಇರುವ ಮಗನಿಗೆ ಪಟ್ಟಕಟ್ಟಿ 'ಯುವರಾಜ' ಮಾಡುವ ಒಲವನ್ನು ವ್ಯಕ್ತಪಡಿಸಿದಾಗ ರಾಜನಾಗಲು ಆತನಿಗಿರಬೇಕಾದ ಅರ್ಹತೆ ಮತ್ತು ಕರ್ತವ್ಯದ ಬಗ್ಗೆ ಹದಿನೈದು ವರ್ಷದ ಹಿಂದೆ ಹೇಳಿದ ಮಾತನ್ನು ನೆನಪಿಸುವ ಸಂದರ್ಭದಲ್ಲಿ ಬಸವಣ್ಣನವರು ಹೇಳಿದ್ದಾರೆ.
ಸ್ವಾರಸ್ಯ : ವಂಶದಲ್ಲಿ ಹುಟ್ಟಿದ ಮಾತ್ರಕ್ಕೆ ಯುವರಾಜನಾಗುವುದು ಯೋಗವೂ ಅಲ್ಲ, ಯೋಗ್ಯತೆಯೂ ಅಲ್ಲ. ರಾಜ ಎಂದರೆ ಕೇವಲ ರಾಜ್ಯಭಾರ ಮಾಡುವುದಲ್ಲ. ಬದಲಾಗಿ ಅದೊಂದು ಪವಿತ್ರವಾದ ಕಾಯಕ ಎಂದು ಹೇಳುವುದೇ ಸ್ವಾರಸ್ಯವಾಗಿದೆ.

59. ಆಯ್ಕೆ: ಈ ಮೇಲಿನ ವಾಕ್ಯವನ್ನು ಗಿರೀಶ್ಕಾರ್ನಾಡರುವರು ಬರೆದಿರುವ, 'ತಲೆದಂಡ' ಎಂಬ ನಾಟಕದ ಮೂರನೇ ದೃಶ್ಯದ 'ಅಧಿಕಾರ' ಎಂಬ ಪಠ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ : ಬಿಜ್ಜಳ ಮಹಾರಾಜನಿಗೆ ಇರುವ ಮಗನಿಗೆ ಪಟ್ಟಕಟ್ಟದೇ 'ಯುವರಾಜ' ಎಂದು ಕರೆಯುವುದರ ಮೂಲಕ ಬಸವಣ್ಣನಿಗೆ ಆಶ್ಚರ್ಯ ಉಂಟು ಮಾಡುವ ಸಂದರ್ಭದಲ್ಲಿ ಬಸವಣ್ಣನವರು ಮೇಲಿನ ಮಾತನ್ನು ಹೇಳಿದ್ದಾರೆ.
ಸ್ವಾರಸ್ಯ : ಬಿಜ್ಜಳನ ಮಾತನ್ನು ಕೇಳಿ ಬಸವಣ್ಣನು ಆಶ್ಚರ್ಯಕರವಾಗಿ ಪಟ್ಟ ಕಟ್ಟಿರುವ ವಿಚಾರವು ತಿಳಿದಿಲ್ಲವೆಂದು ಹೇಳಿರುವುದೇ ಸ್ವಾರಸ್ಯವಾಗಿದೆ.

VIII.

60. ಬಿಜ್ಜಳನನ್ನು ಬಸವಣ್ಣನ ಇರುವಲ್ಲಿಗೆ ಬಂದು ತಾನು ಕೆತ್ತಿಸಲಿರುವ ಶಿಲಾಶಾಸನ ಬಿರುದಾವಳಿಯ ಬಗ್ಗೆ ಕೇಳಿದಾಗ, ಬಸವಣ್ಣನವರು ಕಿವಿ ತುಂಬಿ ತುಳುಕುವ ಹಾಗಿದೆ. ಆದರೆ ಸಂಸ್ಕೃತ ಸ್ವಲ್ಪ ಹೆಚ್ಚಾಯಿತೇನೋ ಎನಿಸುತ್ತದೆ ಎನ್ನುತ್ತಾರೆ. ಬಿರುದಾವಳಿಗಳು ಬೆಳೆಯುತ್ತಾ ಹೋದರೆ ರಾಜ್ಯದಲ್ಲಿ ಸಿಗುವ ಅಷ್ಟು ಕಲ್ಲುಗಳನ್ನು ಸೇರಿಸಿದರೂ, ಮಹಾರಾಜರ ಶಾಸನಗಳಿಗೆ ಸಾಕಾಗುವುದಿಲ್ಲವೆಂದು ಹೇಳಿದರು. ಆಗ ಬಿಜ್ಜಳನು ಬಸವಣ್ಣ ನೀ ಬಂದರೆ ಒಲಗಕ್ಕೆ ಒಗ್ಗರಣೆ ಹಾಕಿದ ಹಾಗಿರುತ್ತದೆ ಎನ್ನುತ್ತಾನೆ. ಬಸವಣ್ಣನವರು ಧಣಿ ಭಂಡಾರದ ಕೀಲಿಕೈಯನ್ನು ನಂಬಿಕೆಯಿಂದ ನನಗೆ ಒಪ್ಪಿಸಿದ್ದೀರಿ. ಈಗ ನನಗೆ ಇದು ಭಾರ ಅನಿಸುತ್ತಿದೆ. ಇದನ್ನು ಮರಳಿ ತೆಗೆದುಕೊಳ್ಳಿ ಎನ್ನುತ್ತಾರೆ. ಮಹಾರಾಜನಿಗೂ ಬಸವಣ್ಣನಿಗೂ ಆಗಿಬರುವುದಿಲ್ಲ ಎಂದು ಜನರು ಆಡಿಕೊಳ್ಳುತ್ತಿದ್ದಾರೆ. ನಾ ತೊಗೊಳಲ್ಲ ಎಂದನು ಬಿಜ್ಜಳ. ಅದಕ್ಕೆ ಬಸವಣ್ಣನವರು ಅರಮನೆ ಒಳಗೆ ಇರುವ ಶಿವಾಲದ ಲಿಂಗಕ್ಕೆ ಅರ್ಪಿಸಿ ಹೋಗುವೆನ್ನುತ್ತಾರೆ. ಬಿಜ್ಜಳನು ನೀನು ನನ್ನ ಅರಸುತ್ತಿಗೆಯನ್ನು ಹಂಗಿಸಿ ವಚನ ಬರೆದು ಅನುಭವಗೋಷ್ಠಿಯಲ್ಲಿ ಹಾಡಿದ್ದು ನನಗೆ ಗೊತ್ತಿದೆ ಎಂದು ಹೇಳಿದನು. ಅದಕ್ಕೆ ಬಸವಣ್ಣನು ಭಂಡಾರದಲ್ಲಿ ದುಡಿಯುವುದು ಮಹಾರಾಜನ ಅನುಕೂಲತೆಗಾಗಿ ಅಲ್ಲ. ಸಂಪತ್ತು ರಾಜವಂಶದ ಸ್ವತ್ತಲ್ಲ. ರಾಜನ ಮನೆಯವರಿಗೆ ಪ್ರವೇಶವಿರಬಾರದು ಎಂದು ಬಸವಣ್ಣನು ಬಿಜ್ಜಳನಿಗೆ ಹೇಳಿದನು. ರಾಜತ್ವದ ಬಗ್ಗೆ ಹೇಳುತ್ತಾ ಹೀಗೆ ಮಾತನಾಡುತ್ತ ಬಿಜ್ಜಳನು ತಾನು ಸಾಮಂತನಾಗಿದ್ದವನು ಈಗ ಕಲ್ಯಾಣದ ಚಕ್ರವರ್ತಿಯಾಗಿರುವುದಕ್ಕೆ ಬಸವಣ್ಣನ ಮಾತುಗಳೇ ಪ್ರೇರಣೆ ಎಂದು ಅಭಿಪ್ರಾಯ ಪಡುತ್ತಾನೆ.

61. ಅಧಿಕಾರದ ಕುರಿತಾದ ಚರ್ಚೆ ಮಂಚ್ಯಣಕ್ರಮಿತರು ಮತ್ತು ಬಸವಣ್ಣನವರ ಸಂಭಾಷಣೆಯಿಂದಲೇ ಪ್ರಾರಂಭವಾಗುತ್ತದೆ. ಮಂಚ್ಯಣಕ್ರಮಿತ ನಾವು ಮಹಾರಾಜರ ಪ್ರಜೆಗಳು. ಮಹಾರಾಜರ ಕೀರ್ತಿಗೋಸ್ಕರ ಗೋಳನ್ನು ಸಹಿಸಿಕೊಳ್ಳಬೇಕೆಂದಾಗ, ಬಸವಣ್ಣನವರು ನಾವು ಮಹಾರಾಜರ ಅಧಿಕಾರಿಗಳು. ಮಹಾರಾಜರ ಪ್ರಜೆಗಳ ಗೋಳನ್ನು ಮಹಾರಾಜರ ಕಿವಿಮೇಲೆ ಹಾಕೋದು ನಮ್ಮ ಕರ್ತವ್ಯ ಎನ್ನುತ್ತಾರೆ. ಬಿಜ್ಜಳನು ನೀನು ನಮ್ಮ ಅರಸೊತ್ತಿಗೆಯನ್ನು ಹಂಗಿಸಿ ವಚನ ಬರೆದು ಅನುಭವಗೊಷ್ಠಿಯೊಳಗೆ ಹಾಡಿದ್ದು ನನಗೆ ಗೊತ್ತಿದೆ ಎಂದಾಗ, ಬಸವಣ್ಣನವರು ಭಂಡಾರದಲ್ಲಿ ದುಡಿಯುವುದು ಮಹಾರಾಜನ ಅನುಕೂಲತೆಗಾಗಿ ಅಲ್ಲ. ಸಂಪತ್ತು ರಾಜವಂಶದ ಸ್ವತ್ತಲ್ಲ. ರಾಜನಮನೆಯವರಿಗೆ ಅಲ್ಲಿ ಪ್ರವೇಶವಿರಬಾರದು. ರಾಜ್ಯಭಾರ ಎನ್ನುವುದು ಒಂದು ಕಾಯಕ. ಅದು ಹುಟ್ಟಿನಿಂದ ಬರತಕ್ಕದಲ್ಲ. ಅಧಿಕಾರ ಗಳಿಸಿಕೊಳ್ಳಬೇಕು. ಆಮೇಲೆ ಅದನ್ನು

ಶ್ರದ್ಧೆಯಿಂದ ಮಾಡಬೇಕು ಎನ್ನುತ್ತಾರೆ. ಬಸವಣ್ಣ ಹದಿನೈದು ವರ್ಷಗಳ ಹಿಂದೆ ಹೇಳಿದಂತೆ ರಾಜ್ಯಭಾರ ಎನ್ನುವುದು ಕಾಯಕ. ಅದಕ್ಕೆ ವಂಶ ಇದ್ದರೆ ಸಾಲದು ಯೋಗ್ಯತೆ ಬೇಕು, ಎಂಬ ಮಾತಿನಿಂದಲೇ ಚಾಲುಕ್ಯರನ್ನು ಸೋಲಿಸಿ ತಾನು ಕಲ್ಯಾಣದ ಚಕ್ರವರ್ತಿ ಆದದ್ದನ್ನು ಸ್ಮರಿಸುತ್ತಾನೆ ಬಿಜ್ಜಳ. ಹೀಗೆ ಅಧಿಕಾರ ಎನ್ನುವುದು ಕಾಯಕ ಎನ್ನುವ ಭಾವನೆ ಅಧಿಕಾರ ನಾಟಕದಲ್ಲಿ ಮೂಡಿಬಂದಿದೆ.

62. ಬಸವಣ್ಣನವರದು ಸಮಾಜದಲ್ಲಿ ಹಿರಿಯ - ಕಿರಿಯ ಮೇಲು - ಕೇಳು ಎಂಬ ಭಾವನೆ ಇಲ್ಲದಂತೆ ನಡೆದುಕೊಳ್ಳುವ ವ್ಯಕ್ತಿತ್ವ. ಅವರಿಗೆ ರಾಜನಾಗಲಿ, ಅಧಿಕಾರಿಯಾಗಲಿ ಎಲ್ಲರೂ ಪ್ರಜಾಸೇವಕರು. ರಾಜ, ಮಂತ್ರಿ ಮುಂತಾದವರಿಗೆ ಇರುವ ಅಧಿಕಾರ ಅದು ಕೇವಲ ಜನಸೇವೆಗಾಗಿ, ಕಾಯಕ ಮಾಡುವುದಕ್ಕಾಗಿ ಇರುವುದೇ ಹೊರತು, ಬಿರುದಾವಳಿಗಳನ್ನು ಬರೆಸಿಕೊಂಡು ಮೆರೆಯುವುದಕ್ಕಲ್ಲ ಎಂಬ ಪ್ರಜಾಹಿತ ಭಾವನೆ ಹೊಂದಿರುವ ವಿಶಾಲ ಸಹೃದಯಿ. ರಾಜನಾದರೂ ಸರಿ ಅವರಿಗೆ ದಿಟ್ಟವಾಗಿ ಸತ್ಯವನ್ನು ಮನವರಿಕೆ ಮಾಡುವ ಧೈರ್ಯವಂತರು, ಕನ್ನಡ ಭಾಷೆಯ ಬಗ್ಗೆ ಒಲವುಳ್ಳವರು, ಅವರಿಗೆ ಅಧಿಕಾರದ ಆಸೆ ಇರಲಿಲ್ಲ, ಬದಲಾಗಿ ತಾನು ರಾಜನಿಗೆ ಸೇವಕನೆಂಬ ಹಂಗಿರಲಿಲ್ಲ. ಮಂಚ್ಯಣಕ್ರಮಿತರು ಅಹಂಕಾರಿ. ಅವರಿಗೆ ಮಹಾರಾಜನನ್ನು ಹೊಗಳಿ ಮೆಚ್ಚಿಸಿಕೊಳ್ಳಬೇಕೆಂಬುದು ಅವರ ಅಭಿಲಾಷೆ. ಬಿಜ್ಜಳನಿಗಾಗಿ ರಚಿಸಿದ ಬಿರುದಾವಳಿಗಳಿಂದ ತಿಳಿಯುತ್ತದೆ. ಹೆಚ್ಚಾಗಿ ಸಂಸ್ಕೃತದ ಬಳಕೆ ಮಾಡುವುದೇ ಶ್ರೇಷ್ಠ ಎಂಬ ಮನೋಭಾವನೆಯ ಜೊತೆಗೆ ಕನ್ನಡಭಾಷೆಯ ಬಗ್ಗೆ ಕೀಳರಿಮೆ ಭಾವನೆಯುಳ್ಳವರು. ಬಿಜ್ಜಳ ರಾಜನಲ್ಲಿ ಯುದ್ಧದ ದಾಹವನ್ನು ಹೆಚ್ಚಿಸಿ ಅವನನ್ನು ಪ್ರಚೋದಿಸುವ ಹಾಗೂ ಅವರಿಗೆ ಪ್ರಜೆಗಳ, ರಾಜ್ಯದ ಯೋಗಕ್ಷೇಮದ ಬಗ್ಗೆ ಕಾಳಜಿ ಇಲ್ಲ ಎಂಬುದು ಅವರ ಮಾತುಗಳಲ್ಲಿ ವ್ಯಕ್ತವಾಗುತ್ತದೆ. ಒಟ್ಟಾರೆಯಾಗಿ ಹೇಳಬೇಕೆಂದರೆ ಮಂಚ್ಯಣಕ್ರಮಿತರದು ಬಸವಣ್ಣನವರ ವ್ಯಕ್ತಿತ್ವಕ್ಕೆ ವಿರುದ್ಧವಾದ ವ್ಯಕ್ತಿತ್ವ ಎಂದು ಹೇಳಬಹುದು.

7- ನಾಕಂಡಂತೆ ಬಿ. ಜಿ. ಎಲ್.ಸ್ವಾಮಿ -ಎಸ್. ಎಲ್ ಭೈರಪ್ಪ

1)ಎ) ಕರ್ತ್ರರ್ಥ
2) ಸಿ) ಉತ್ತರ
3)' ಡಿ) ಅನ್ವರ್ಥನಾಮ
4) ಸಿ) ತಾನು
5) ಬಿ) ಮಾಡುತ್ತವೆ
6) ಸಿ) ಪರಿಮಾಣವಾಚಕ
7) ಸಿ) ಕರ್ಮಾರ್ಥ
8) ಡಿ) ಕರಣಾರ್ಥ
9) ಎ) ಸಂಪ್ರದಾನ
10) ಎ) ಅಪಾದಾನ
11) ಎ) ಸಂಬಂಧ
12) ಡಿ) ಅಧಿಕರಣ
13) ಸಿ) ಉ
14) ಸಿ) ಅನ್ನು
15) ಬಿ) ಇಂದ
16) ಎ)~ಗೆ,~ಇಗೆ,~ ಕೆ,~ಕ್ಕೆ
17) ಡಿ) ದೆಸೆಯಿಂದ
18) ಡಿ) ಅ
19) ಎ) ಅಲ್ಲಿ
20) ಶರಣನನ್ನು
21) ಶರಣನಿಗೆ

22) ಶರಣನ
23) ರಾಜ
24) ದಿಸೆ
25) ಸಿರಿ
26) ವಿಜ್ಞಾಪನೆ

27) ಸ್ವಾಮಿಯವರಿಗೂ ಲೇಖಕರಿಗೂ ಪರಿಚಯವಾಗಿದ್ದು ವೈಸೂರು ವಿಶ್ವವಿದ್ಯಾನಿಲಯದಲ್ಲಿ.

28) ಸ್ವಾಮಿಯವರು ನುಡಿಸುತ್ತಿದ್ದ ಸಂಗೀತವಾದ್ಯ ಪಿಟೀಲು.

29) ಸ್ವಾಮಿಯವರು ವಿಜ್ಞಾನದ ಸಸ್ಯಶಾಸ್ತ್ರದ ವಿಭಾಗದಲ್ಲಿ ಪರಿಣಿತರಾಗಿದ್ದರು.

30) ಸ್ವಾಮಿಯವರಿಗೆ ಎಹೂದಿ ಮೆನೋಹಿನ್ ರ ಪಿಟೀಲು ವಾದನವೆಂದರೆ ಬಹಳ ಆಸೆ.

31) ಲೇಖಕರಿಗೂ, ಬಿ, ಜಿ, ಎಲ್ , ಸ್ವಾಮಿಯವರಿಗೂ ಸಮಾನ ಪ್ರೀತಿಯಿದ್ದ ಚಿತ್ರಕಲಾ ಪ್ರದರ್ಶನ ಶಾಲೆ ಪ್ಯಾರಿಸ್ ನ ಲೂವ್ರ ಚಿತ್ರಕಲಾ ಪ್ರದರ್ಶನ ಶಾಲೆ .

32) ಬಿ,ಜಿ ,ಎಲ್, ಸ್ವಾಮಿಯವರು ಗಂಗೋತ್ರಿಯ ಅತಿಥಿಗೃಹದಲ್ಲಿ ವಾಸವಾಗಿದ್ದರು.

33) ಲೇಖಕರು ಮತ್ತು ಸ್ವಾಮಿಯವರು, ಹಳಗನ್ನಡ, ದಕ್ಷಿಣದ ದೇವಾಲಯಗಳು, ಸಮಕಾಲಿನ ಸಾಹಿತ್ಯ , ಫ್ರೆಂಚ್ ವಸ್ತುಸ್ಥಿತಿವಾದ, ಸಂಗೀತ, ಸಸ್ಯಶಾಸ್ತ್ರ ,ವೇದ, ಉಪನಿಷತ್ತು, ಸಂಸ್ಕೃತಕಾವ್ಯಗಳ ಕುರಿತು ಚರ್ಚೆ ಮಾಡುತ್ತಿದ್ದರು.

34) ಸ್ವಾಮಿಯವರ ಕಣ್ಣಲ್ಲಿ ಚಿಕ್ಕಮಕ್ಕಳಿಗೆ ಸಹಜವೆನ್ನುವ ರೂಪದಲ್ಲಿ ಕೌತುಕತೆ ಇರುತ್ತಿತ್ತು. ಸಸ್ಯಗಳ ರಚನಾ ರಹಸ್ಯವನ್ನು ತಮ್ಮ ಕಲ್ಪನಾ ಶಕ್ತಿಗಳಿಂದ ರೂಪಿಸಿ, ರೂಢಿಸಿ ಬೆಳೆಸಿಕೊಂಡಿದ್ದರು. ಸೂಕ್ಷ್ಮದರ್ಶಕದ ಮೊದಲ ನೋಟದಲ್ಲೇ ಅವರು ಅದರ ಗುಟ್ಟು ಬಿಡಿಸುತ್ತಿದ್ದರು. ಕಲೆಯ ರಸ ಆನಂದ ಮತ್ತು ಕೌತುಕಗಳುಅವರ ಸಂಶೋಧನೆಯ ಇನ್ನೊಂದು ಮುಖವಾಗಿರುತ್ತಿತ್ತು. ಅವರ ಸಂಶೋಧನಾ ಕ್ಷೇತ್ರ ತುಂಬಾ ವಿಸ್ತೃತವಾದದ್ದು.ಇತಿಹಾಸ ಸಾಹಿತ್ಯ ಹಾಗೂ ಇತರ ಲಲಿತ ಕಲೆಗಳಲ್ಲಿ ಅವರ ಸಂಶೋಧಕ ಬುದ್ಧೀ ಕೆಲಸ ಮಾಡುತ್ತಲೇ ಇತ್ತು.

35) ಸಾವು ಯಾವತ್ತು ಅವರನ್ನು ದುಃಖದಲ್ಲಿ ಮುಳುಗಿಸುವುದಿಲ್ಲ. ಆದರೆ ಬಿ.ಜಿ.ಎಲ್. ಸ್ವಾಮಿಯವರ ಸಾವು ಪ್ರಶ್ನಾತೀತವಾಗಿ ಕಾಡಿತು. ಅವರು ಆಹಾರದಲ್ಲಿ ಕ್ಲುಪ್ತವಾಗಿದ್ದವರು. ಸಂಶೋಧನೆ ಮತ್ತು ಬರಹಗಳಲ್ಲಿ ತಮ್ಮನ್ನು ಮಗ್ನರಾಗಿಸಿಕೊಂಡರೂ ಸಂತೋಷ ಪಡುತ್ತದ್ದರು. ಸಂತೋಷ ಯಾರನ್ನು ಸವೆಯುವುದಿಲ್ಲ. ಆದರೂ ಅನೇಕರು ಇದಾವದೂ ಇಲ್ಲದೆ ದೀರ್ಘಾಯುಗಳಾಗಿದ್ದಾರೆ. ಸಾವಿನ ಕಾರಣ ಹುಡುಕ ಹೋಗುವುದು ದುಃಖವನ್ನು ತಗಲು ಹಾಕಲು ನಾವು ಸೃಷ್ಟಿಸುವ ಒಂದು ನಿಮಿತ್ತ ಮಾತ್ರ ಎಂದು ಸ್ವಾಮಿ ಅವರ ಸಾವು ಲೇಖಕರಿಗೆ ಕಾಡಿತು.

36) ಲೇಖಕರು ಮತ್ತು ಬಿಜಿಎಲ್ ಸ್ವಾಮಿಯವರು ತುಂಬ ದಿನ ಒಡನಾಡಿಯಾಗಿ ಜೊತೆಯಲ್ಲಿ ಕೆಲಸ ಮಾಡಿ , ವ್ಯಕ್ತಿತ್ವದ ಪರೀಕ್ಷೆಯಾಗುವ ಸಂದರ್ಭಗಳನ್ನು ದಾಟಿದ ನಂತರ ಬಿ ,ಜಿ ,ಎಲ್, ಸ್ವಾಮಿಯವರ ಬಗ್ಗೆ ಸ್ಪಷ್ಟ ಭಾವ ಅಭಿಪ್ರಾಯ ಬೆಳೆಯಿತು.

37) ಮೇಧಾಶಕ್ತಿಯುಳ್ಳ ಯಾವ ವ್ಯಕ್ತಿಯಾದರೂ, ಹಲವು ಕ್ಷೇತ್ರಗಳಲ್ಲಿಆಸಕ್ತಿಯನ್ನು ಬೆಳೆಸಿಕೊಂಡು ,ಕಾಡು ಹರಟೆಯಲ್ಲಿ ಕಾಲ ಕಳೆಯದೆ, ಜ್ಞಾನಾರ್ಜನೆ, ಸಂಶೋಧನೆಗಳಲ್ಲಿ ಜೀವನದ ಸಂತೋಷವನ್ನು ಕಾಣುವ ಅಭ್ಯಾಸ ಮಾಡಿಕೊಂಡರೆ ಅದ್ಭುತ ರಾಗಬಹುದು.

38) ಲೇಖಕರು ಮತ್ತು ಬಿಜಿಎಲ್ ಸ್ವಾಮಿ ಅವರು ಜೊತೆಯಲ್ಲಿ ಕಾಡುಗಳಿಗೆ ಹೋಗಬೇಕು, ಅಲ್ಲಿ ಹಲವು ರೀತಿಯ ಸಸ್ಯಗಳನ್ನು ನನಗೆ (ಲೇಖಕರಿಗೆ) ವಿವರಿಸಬೇಕು. ತಂಜಾವೂರಿಗೆ ಹೋಗಿ ಓಲಗ ಕೇಳುವ ಆಲೋಚನೆ ಮಾಡಿದ್ದರು.
39) ಬಿಜಿಎಲ್ ಸ್ವಾಮಿಯವರ ಸಂಶೋಧನಾ ಕ್ಷೇತ್ರಗಳು ಇತಿಹಾಸ ಸಾಹಿತ್ಯಮತ್ತು ಇತರ ಲಲಿತ ಕಲೆಗಳು.

40) ಬಿ,ಜಿ,ಎಲ್, ಸ್ವಾಮಿಯವರು ಮಕ್ಕಳಿಗೆ ವಿಜ್ಞಾನವನ್ನು ಹೇಗೆಆಕರ್ಷಕವಾಗಿ ಬೋಧಿಸಬಹುದೆಂಬ ಮಾದರಿಗಳನ್ನು ವಿವರಿಸಿದಾಗ ಬೋಧನಾ ಕ್ರಮದ ಪರಿಣಿತರೆಲ್ಲ ನಿಬ್ಬೆರಗಾದರು.
41) ಕಲೆಯ ರಸ, ಆನಂದ ಮತ್ತು ಕೌತುಕಗಳು ಬಿ,ಜಿ,ಎಲ್ ,ಸ್ವಾಮಿಯವರ ಸಂಶೋಧನೆಯ ಇನ್ನೊಂದು ಮುಖವಾಗಿರುತ್ತಿತ್ತು ಆದ್ದರಿಂದಲೇ ಅವರು ಸಂಶೋಧನೆಗೆ ಎಂದು ವಿದಾಯ ಹೇಳಲಿಲ್ಲ.

42) ಬೆಳಗ್ಗೆ ಮೂರುವರೆ ಮೂರು ಮುಕ್ಕಾಲು ಹೊತ್ತಿಗೆ ಏಳುವುದು. ಪಿಟೀಲು ಅಭ್ಯಾಸ ಮಾಡುವುದು.

43) ವಿದ್ವತ್ತು ಸಂಶೋಧನೆಗಳಲ್ಲಿ ಸ್ವಲ್ಪ ಮೇಲೆ ಏರಿದ ತಕ್ಷಣ ತಾನುಪ್ರೊಫೆಸರನಾಗಲಿಲ್ಲ, ಉಪಕುಲಪತಿ ಯಾಗಲಿಲ್ಲ, ನಿರ್ದೇಶಕನಾಗಲಿಲ್ಲವೆಂಬ ಕೊರಗು ಹತ್ತುತ್ತದೆ. ಜ್ಞಾನದ ಬೆಳವಣಿಗೆಯಲ್ಲೇ ಜೀವನ ಸಂತೋಷದ ರುಚಿ ಅವರಿಗೆ ಹತ್ತುವುದೇ ಇಲ್ಲ.

44) ವಿಶ್ವವಿದ್ಯಾನಿಲಯದ ಸಸ್ಯಶಾಸ್ತ್ರ ವಿಭಾಗದಲ್ಲಿದೆಯಲ್ಲ, ವಿದ್ಯುತ್ಸೂಕ್ಷ್ಮದರ್ಶಕ ಯಂತ್ರ, ಇದೇನು ಕಡಿಮೆಯದಲ್ಲ. ಕೇಂಬ್ರಿಜ್ ಹಾರ್ವಡ್ಗಳಲ್ಲಿ ಕೂಡ ಎರಡು-ಮೂರು ಇಲಾಖೆಗಳು ಇಂಥ ಒಂದೊಂದು ಯಂತ್ರವನ್ನು ಹಂಚಿಕೊಂಡು ಅಂಥ ದೊಡ್ಡ ಸಂಶೋಧನೆ ಮಾಡುತ್ತವೆ ಎಂದು ಹೇಳಿದರು.

45) ಸೂಕ್ಷ್ಮದರ್ಶಕ ಯಂತ್ರದ ಮೂಲಕ ನಮ್ಮ ದೇಶದಲ್ಲಿ ಎಷ್ಟು ಜನ ನೋಡುವ ಅಭ್ಯಾಸ ಬೆಳೆಸಿಕೊಂಡಿದ್ದಾರೋ ನಾ ಕಾಣೆ. ನೋಡಿದರು ಸ್ವಾಮಿಗೆ ಕಾಣುತ್ತಿದ್ದದು ಅವರಿಗೆ ಕಾಣುತ್ತಿರಲಿಲ್ಲ. ಇತರರು ನೂರು ಬಾರಿ ಇಣುಕಿ ತಿಣುಕಿದರು ತಪ್ಪಿಸಿಕೊಳ್ಳುತ್ತಿದ್ದ ಉತ್ತರವು ಸ್ವಾಮಿಯ ಕಣ್ಣಿಗೆ ಮೊದಲ ಬಾರಿ ಕಾಣಿಸುತ್ತಿತೆಂದು ಅವರ ಸಹೋದ್ಯೋಗಿಗಳು ಲೇಖಕರಿಗೆ ಹೇಳಿದರು.

46) ಡಾ . ಎಸ್ . ಎಲ್ . ಭೈರಪ್ಪ ಭಾರತದ ಪ್ರಸಿದ್ಧ ಸಾಹಿತಿ , ಕಾದಂಬರಿಕಾರರು . ಇವರು ಹಾಸನ ಜಿಲ್ಲೆಯ ಚನ್ನರಾಯ ಪಟ್ಟಣದ ಸಂತೇಶಿವರದಲ್ಲಿ ೨೦ ಆಗಸ್ಟ ೧೯೩೧ ರಲ್ಲಿ ಜನಿಸಿದರು. ಧರ್ಮಶ್ರೀ , ಗೃಹಭಂಗ , ವಂಶವೃಕ್ಷ , ಅನ್ವೇಷಣ , ದಾಟು , ಪರ್ವ , ಮಂದ್ರ ಆವರಣ ಮೊದಲಾದ ಕೃತಿಗಳು ಭಾರತದ ಹಲವು ಭಾಷೆಗಳಿಗೆ ಅನುವಾದಗೊಂಡಿವೆ . ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ , ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ , ಸರಸ್ವತಿ ಸಮ್ಮಾನ್ , ನಾಡೋಜ ಪ್ರಶಸ್ತಿಗಳು ಬಂದಿವೆ.

47) ಗಾದೆಗಳು ಜನಪದರ ಜೀವನದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ಚಿಕ್ಕವಾದರೂ ಅರ್ಥದಲ್ಲಿ ಹಿರಿದಾಗಿವೆ. ವೇದ ಸುಳ್ಳಾದರು ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ವವನ್ನುಅರ್ಥೈಸುತ್ತದೆ.
ಕೆಲವು ಸಲ ಅನಿರೀಕ್ಷಿತವಾಗಿ ಆಗಬೇಕಾದ ಕೆಲಸಕ್ಕೆ ಬದಲಾಗಿ ಇನ್ನೇನೋ ಆಗುವ ಸಂಭವವಿದೆ. ಹಾಗಾದಾಗ ಅದಕ್ಕಾಗಿ ಯೋಚಿಸಿದರೆ, ತಲೆ ಕೆಡಿಸಿಕೊಂಡರೆ ಉಪಯೋಗವಿಲ್ಲವೆಂದು ಈ ಗಾದೆ ತಿಳಿಸುತ್ತದೆ. ವರ್ಷವೆಲ್ಲಾ ಓದಿ ಪರೀಕ್ಷೆಗಾಗಿ ಪೂರ್ವಸಿದ್ದತೆ ಮಾಡಿಕೊಂಡ ವಿದ್ಯಾರ್ಥಿಗೆ ಪರೀಕ್ಷೆಯ ಸಮಯಕ್ಕೆ ಸರಿಯಾಗಿ ವಿಷಮ ಶೀತ ಜ್ವರ, ಡೆಂಗಿಯಂತಹ ರೋಗ ಕಾಡಿ ಪರೀಕ್ಷೆಗೆ ಹೋಗಲಾಗದಿದ್ದರೆ ಅವನಿಗೆ ವಿಪರೀತ ವ್ಯಥೆಯಾಗುವುದು ಸಹಜ. ಆದರೆ ಚಿಂತಿಸಿ ಫಲವೇನು ಧೈರ್ಯದಿಂದ ಅಂಥದನ್ನು ಎದುರಿಸಬೇಕು ಎನ್ನುವುದೇಈ ಗಾದೆ ತತ್ವರ್ಯವಾಗಿದೆ.
ಅಥವಾ
ಇರುಳು ಕಂಡ ಬಾವಿಗೆ ಹಗಲು ಬಿದ್ದಂತೆ.
ಗಾದೆಗಳು ಜನಪದರ ಜೀವನದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ಚಿಕ್ಕವಾದರೂ ಅರ್ಥದಲ್ಲಿ ಹಿರಿದಾಗಿವೆ. ವೇದ ಸುಳ್ಳಾದರು ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ವವನ್ನು ಅರ್ಥೈಸುತ್ತದೆ.

ರಾತ್ರಿ ಹೊತ್ತು ರಸ್ತೆಯಲ್ಲಿ ನಡೆದು ಹೋಗುತ್ತಿರಬೇಕಾದರೆ ಅದೇ ದಾರಿಯ ಮಧ್ಯದಲ್ಲಿರುವ ಬಾವಿಯಲ್ಲಿ ಬಿದ್ದು ಬಿಟ್ಟರೆ ಕತ್ತಲು ಕಾಣಿಸಲಿಲ್ಲ ಅಥವಾ ಕಣ್ಣೆ ಕಾಣಿಸುವುದಿಲ್ಲವೆನ್ನಬಹುದು ಅಥವಾ ಗೊತ್ತೇ ಆಗಲಿಲ್ಲವೆನ್ನಬಹುದು . ಅದೇ ರಾತ್ರಿ ಕಾಣಿಸಿದ್ದ ಬಾವಿಯಲ್ಲಿ ಹಗಲು ಬಿದ್ದರೆ ? ಗೊತ್ತಿದ್ದು ತಪ್ಪು ಮಾಡಿದಂತಾಗುತ್ತದೆ . ತಿಳಿದೂ ತಿಳಿದೂ ತಪ್ಪು ಮಾಡುವವರಿಗೆ ಈ ಗಾದೆ ಮಾತನ್ನು ಹೇಳುವ ರೂಢಿಯಿದೆ . ಅಂದರೆ ಅದು ತಪ್ಪೆಂದು ಗೊತ್ತಿದ್ದು ಅದನ್ನೇ ಮಾಡುತ್ತಾರೆ .

ಮದ್ಯಪಾನ ಮಾಡುವುದು ಧೂಮಪಾನ ಮಾಡುವುದು ತಪ್ಪೆಂದು ಗೊತ್ತಿದ್ದು ಮಾಡುತ್ತಾರೆ . ಅದರಿಂದಮಾರಣಾಂತಿಕ ಕಾಯಿಲೆಗಳಿಗೆ ಗುರಿಯಾಗುತ್ತೇವೆಂದು ಗೊತ್ತಿದ್ದರೂ ಅಂತಹ ಚಟಗಳನ್ನು ಬಯಸಿ ಬಯಸಿ ಕಲಿಯುತ್ತೇವೆ . ಇದು ಸರಿಯಲ್ಲ , ನಾವು ನಡೆಯುತ್ತಿರುವ ದಾರಿ ಸರಿಯಿಲ್ಲವೆಂದು ಗೊತ್ತಾದ ಮೇಲಾದರೂ ತಿದ್ದಿಕೊಂಡುನಡೆಯಬೇಕು . ಅದನ್ನು ಬಿಟ್ಟು ಅಜಾರೂಕತೆಯಿಂದ ಸ್ವಯಂಪ್ರೇರಿತರಾಗಿ ತೊಂದರೆಗಳನ್ನು ಮೈಮೇಲೆ ಎಳೆದುಕೊಳ್ಳುವುದು ಸರಿಯಲ್ಲವೆಂಬ ಸಂದೇಶ ವನ್ನು ಈ ಗಾದೆ ಸಾರುತ್ತದೆ.

48) ಆಯ್ಕೆ:-ಈ ಮೇಲಿನ ವಾಕ್ಯವನ್ನು ಎಸ್. ಎಲ್. ಭೈರಪ್ಪ ಬರೆದಿರುವ "ನಾನು ಕಂಡಂತೆ ಡಾ.ಬಿ.ಜಿ.ಎಲ್. ಸ್ವಾಮಿ" ಎಂಬ ಗದ್ಯ ಪಾಠದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಬಿ.ಜಿ.ಎಲ್. ಸ್ವಾಮಿಯವರು ತುಂಬಾ ಸಂಗೀತಾಸಕ್ತಿಯುಳ್ಳ ಬಹುಮುಖ ಪ್ರತಿಭಾವಂತರಾಗಿದ್ದರು. ಶ್ರೀಯುತರು ಗಂಗೋತ್ರಿಯ ಅತಿಥಿ ಗೃಹದ ಕೋಣೆಯೊಂದರಲ್ಲಿ ತಂಗಿದ್ದರು. ಮುಂಜಾನೆ ಐದೂವರೆ ಹೊತ್ತಿಗೆಲೇಖಕರು ಆ ಮಾರ್ಗವಾಗಿಯೇ ವಾಕಿಂಗ್ ಹೋಗುವಾಗ ಅವರ ಕೋಣೆಯ ಬಳಿಯಲ್ಲಿ ನಿಂತರು. ಕಿಟಕಿಯ ಬಾಗಿಲುಗಳನ್ನು ಮುಚ್ಚಿ ಸ್ವಾಮಿಯವರು ಪಿಟೀಲು ಅಭ್ಯಾಸ ಮಾಡುತ್ತಿದ್ದರು. ಅವರು ಪಿಟೀಲು ಗುರು ಹೇಳಿಕೊಟ್ಟದ್ದಕ್ಕೆಸೀಮಿತರಾಗಿದೆ ಹೊಸ-ಹೊಸದುದನ್ನು ಪಿಟೀಲಿನಲ್ಲಿ ಪ್ರಯೋಗಿಸಲು ಯತ್ನಿಸುತ್ತಿದ್ದರು. ಅರ್ಧಗಂಟೆಗೂ ಹೆಚ್ಚುಸಮಯ ಅಲ್ಲಿಯೇ ನಿಂತು ಆಲಿಸಿದರು. ಮೇಟಿ ಕಾಫಿ ತಂದನಂತರ ಹೊರಬಂದ ಸ್ವಾಮಿಯವರು " ನೀವೇಕೆ ಬಾಗಿಲು ತಟ್ಟಲಿಲ್ಲ? ಎಂದಾಗ ಲೇಖಕರು ಈ ಮೇಲಿನಂತೆ ನುಡಿದರು.

ಸ್ವಾರಸ್ಯ: ಸಂಗೀತವು ಹೃದಯಕ್ಕೆ ಅಪ್ಯಾಯಮಾನವಾದದ್ದು. ಸಂಗಿತಗಾರರಿಗೆ ತೊಂದರೆಯಾಗದಂತೆ ಅದನ್ನುಸವಿಯಬೇಕೆಂದು ಈ ವಾಕ್ಯದ ಸ್ವಾರಸ್ಯ. ಒಂದುವೇಳೆ ಲೇಖಕರ ಬಾಗಿಲು ತಟ್ಟಿ ಒಳಗಡೆ ಹೋಗಿದ್ದರೆ ಅದು ನಿಲ್ಲುತ್ತಿತ್ತು.

49) ಸಂದರ್ಭ:- ವಿದ್ಯುತ್ ಸೂಕ್ಷ್ಮದರ್ಶಕ ಸಂಶೋಧಕನಿಗೆ ತೀರ ಅಗತ್ಯ ಸಾಧನ. ತಾನು ಏನನ್ನು ಹುಡುಕಬೇಕು ಕಲ್ಪನೆ ಸ್ವಾಮಿಗೆ ಸದಾ ಇರುತ್ತಿತ್ತು. ಒಂದು ಸಣ್ಣ ಕಾಂಡವನ್ನು ಕತ್ತರಿಸಿ ವಿದ್ಯುತ್ ಸೂಕ್ಷದರ್ಶಕದಲ್ಲಿ ನೋಡಿದರೆ ಎಂತಹ ಅದ್ಭುತ ರಚನಾ ವೈಖರಿ ಎಂದು ಅದನ್ನು ಕುರಿತಾಗಿ ಹೇಳುವಾಗ ಸ್ವಾಮಿಯವರು , ಒಂದೊಂದು ಸಸ್ಯದ ಕಾಂಡ ಇನ್ನೊಂದಕ್ಕಿಂತ ಭಿನ್ನವಾಗಿದೆ ಎನ್ನುವಲ್ಲಿ ಈ ಮೇಲಿನಂತೆ ಉದ್ಗರಿಸಿದರು.

ಸ್ವಾರಸ್ಯ:-ಪ್ರತಿಯೊಂದು ಸಸ್ಯದ ಕಾಂಡ ಗಮನಿಸಿದರೆ ಒಂದರಂತೆ ಒಂದಿಲ್ಲ. ತುಂಬಾ ವೈವಿಧ್ಯತೆಯ ರಚನೆ ಹೊಂದಿರುತ್ತವೆ. ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ

50) ಸಂದರ್ಭ: ಸಸ್ಯಶಾಸ್ತ್ರ ವಿಭಾಗದಲ್ಲಿ ಪರಿಣಿತರಾಗಿದ್ದ ಸ್ವಾಮಿಯವರು ಇತಿಹಾಸ, ಸಾಹಿತ್ಯ, ಇತರ ಲಲಿತ ಕಲೆಗಳಲ್ಲೂಸಂಶೋಧನೆ ಮಾಡುತ್ತಿದ್ದರು. ಇದನ್ನು ಅರಿತ ಲೇಖಕರ ಕಾಲೇಜಿನವರು ಸ್ವಾಮಿಯವರು ನಿಮ್ಮ ಸ್ನೇಹಿತರಲ್ಲ? ನಮ್ಮ ಕಾಲೇಜಿಗೆ ಒಂದು ಭಾಷಣಕ್ಕೆ ಬರುವಂತೆ ಒಪ್ಪಿಸಿ "ಎಂದು ನನ್ನ ಕಾಲೇಜಿನವರು ನನಗೆ ಗಂಟು ಬಿದ್ದರೂಎಂದು ತಿಳಿಸುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳಿದ್ದಾರೆ

ಸ್ವಾರಸ್ಯ : ಮೇಧಾಶಕ್ತಿಯುಳ್ಳ ಸ್ವಾಮಿಯವರು ಲೇಖಕರ ಸ್ನೇಹಿತರಾಗಿದ್ದು ಸ್ವಾಮಿಅವರ ಭಾಷಣಕ್ಕೆ ಲೇಖಕರ ಕಾಲೇಜಿನವರು ಕಾತುರದಿಂದ ಕಾಯುತ್ತಿದ್ದದು ಇಲ್ಲಿ ಸ್ವಾರಸ್ಯಕರವಾಗಿದೆ.

51)ಸ್ವಾಮಿಯವರಿಗೆ ಸಂಗೀತದಲ್ಲಿ ತುಂಬಾ ಆಸಕ್ತಿಯಿತ್ತು. ಅವರು ಬೆಳಗಿನ ಜಾವ ಪಿಟೀಲು ಅಭ್ಯಾಸ ಮಾಡುವ ಕ್ರಮವನ್ನು ಹೊಂದಿದ್ದರು. ಪಿಟೀಲು ನುಡಿಸುವಾಗ ಅವರು ಹುಡುಕುತ್ತಿದ್ದುದು ಶಬ್ದ ರಚನಾವೈಖರಿಯನ್ನು. ಸ್ವಾಮಿಯವರು ಲೇಖಕರ ಮನೆಗೆ ಬಂದಾಗ ಅವರಲ್ಲಿರುವ ಸಂಗೀತದ

ರೆಕಾರ್ಡುಗಳನ್ನು ಕೇಳುತ್ತಿದ್ದರು. ಯಹೂದಿ ಮೆನೋಹಿನ್ ರ ಪಿಟೀಲು ಎಂದರೆ ಅವರ ರೆಕಾರ್ಡುಗಳು ಕೇಳುವುದೆಂದರೆ ತುಂಬಾ ಇಷ್ಟ.

52) ಸ್ವಾಮಿಯವರ ಕಣ್ಣಲ್ಲಿ ಚಿಕ್ಕಮಕ್ಕಳಿಗೆ ಸಹಜವೆನ್ನುವ ರೂಪದಲ್ಲಿ ಕೌತುಕತೆ ಇರುತ್ತಿತ್ತು. ಸಸ್ಯಗಳ ರಚನಾ ರಹಸ್ಯವನ್ನು ತಮ್ಮ ಕಲ್ಪನಾ ಶಕ್ತಿಗಳಿಂದ ರೂಪಿಸಿ, ರೂಢಿಸಿ ಬೆಳೆಸಿಕೊಂಡಿದ್ದರು. ಸೂಕ್ಷ್ಮದರ್ಶಕದ ಮೊದಲ ನೋಟದಲ್ಲೇ ಅವರು ಅದರ ಗುಟ್ಟು ಬಿಡಿಸುತ್ತಿದ್ದರು. ಕಲೆಯ ರಸ ಆನಂದ ಮತ್ತು ಕೌತುಕಗಳು ಅವರ ಸಂಶೋಧನೆಯ ಇನ್ನೊಂದು ಮುಖವಾಗಿರುತ್ತಿತ್ತು. ಅವರ ಸಂಶೋಧನಾ ಕ್ಷೇತ್ರ ತುಂಬಾ ವಿಸ್ಕೃತವಾದದ್ದು. ಇತಿಹಾಸ ಸಾಹಿತ್ಯ ಹಾಗೂ ಇತರ ಲಲಿತ ಕಲೆಗಳಲ್ಲಿ ಅವರ ಸಂಶೋಧಕ ಬುದ್ಧಿ ಕೆಲಸ ಮಾಡುತ್ತಲೇ ಇತ್ತು.

8. ಹರಲೀಲೆ

ಕಲಿಕಾ ಫಲ /ಸಾಮರ್ಥ: ಹಳೆಗನ್ನಡ ನಡುಗನ್ನಡ ಹೊಸಗನ್ನಡ ಸಾಹಿತ್ಯ ಪ್ರಕಾರಗಳನ್ನು ಓದಿ ಅರ್ಥೈಸಿಕೊಂಡು ಹೇಳುವರು.

1. ಇ. ೦೩
2.ಆ. ರಗಳೆ
3. ಆ. ಅನುಕರಣಾವ್ಯಯ
4. ಇ. ಗಿಳಿ
5.ಇ. ಮಾತ್ರಾಗಣ
6. ಇ. ಬಹುವ್ರೀಹಿ
7.ಈ. ಅವತಾರ ಪುರುಷ

8. ಬಿನ್ನಹ
9. ಸಪ್ತಮೀ
10.: ದ್ವಿರುಕ್ತಿ
11. ನಾಲ್ಕಮಾತ್ರೆ
12. ಊರುಗೋಲು
13.ಘಳಿಗೆ+ಬಟ್ಟಲು
14. ಅಕ್ಕಿ
15. ತೊದಲು ಮಾತು
16. ಗುಂಪುಗೂಡಿ
17. ಲೋಪಸಂಧಿ

18. ಪುಷ್ಪದತ್ತ
19. ನಂಬಿಯಣ್ಣನರಗಳೆ
20.ಹರಿಹರ
21. ದೇವಾಲಯದಲ್ಲಿ
22. ಗಿರಿಜಾಕಲ್ಯಾಣ, ಮುಡಿಗೆಯ ಅಷ್ಟಕ
23. ತುಪ್ಪದಕೊಡ
24. ಮಣಮಂದ ಪುತ್ತೂರಿಗೆ
25. ಮಣಮಂದಪುತ್ತೂರು
26. ಶುಕಗಳ ಸಮೂಹ
27. ನಮಃಶಿವಾಯ

28. ಪ್ರಮಾಣಪತ್ರ
29. ಕೊಡೆಯ ಕಾವಾಗಿ ಬದಲಾಯಿತು
30. ತಮ್ಮ ಆಯುಷ್ಯಭಾಷೆಗಳನ್ನು ಹೊರಗಿಡುವಂತೆ
31. ಪೊಸ ಪೂವನ್
32. ಪರವೆ ಸಂಕಿಲೆ

33. ಶಿವನು ಗಿರಿಜೆಯನ್ನು ಕುರಿತು -``ದೇವಿ, ಕೇಳು, ನಮ್ಮ ಪುತ್ರನಾದ ಪುಷ್ಪದತ್ತನು ನರಲೋಕದಲ್ಲಿ(ಭೂಲೋಕದಲ್ಲಿ) ಹುಟ್ಟಿ, ನಂಬಿ ಎಂಬ ಹೆಸರನ್ನು ಪಡೆದು ಸಂಸಾರದಿಂದ ಕೆಟ್ಟು ಹೋಗುವುದಕ್ಕೆ ಸಿದ್ಧವಾಗಿದ್ದಾನೆ. ಆತನಿಗೆ ಮುಂಚೆ ನೀಡಿದ ನಂಬಿಕೆಯ ಮಾತನ್ನು ಅನುಸರಿಸಿಕೊಂಡು ನಾವು ಕಳುಹಿಸಿದ ರುದ್ರಕನ್ನಿಕೆಯರಿಬ್ಬರೂ ಚೋಳದೇಶದ ತಿರುವಾರೂರು ಮತ್ತು ತಿರುವತ್ತಿಯೂರಿನಲ್ಲಿ ಪರವೆ ಮತ್ತು ಸಂಕಿಲಿ ಎಂಬ ಹೆಸರಿನಿಂದ ಹುಟ್ಟಿದ್ದಾರೆ. ಅವರನ್ನು ಆತನೊಡನೆ ಸೇರಿಸಿ, ಸಕಲಸುಖವನ್ನು ಪೂಜೆಯಾಗಿ ಸ್ವೀಕರಿಸಿ ಬರುವೆನು'' ಎಂದು ಹೇಳಿದನು.
34. ಚೋಳದೇಶದಲ್ಲಿದ್ದ ಮೂರು ಗ್ರಾಮಗಳೆಂದರೆ ಮಣಮಂದಪುತ್ತೂರು, ತಿರುವಾರೂರು ಮತ್ತು ತಿರುವತ್ತಿಯೂರು
35. ವೃದ್ಧಮಾಹೇಶ್ವರನು ಪುಣ್ಯವೇ ಹಣ್ಣಾದಂತೆ ಒಮ್ಮೊಮ್ಮೆ ಕೆಮ್ಮುತ್ತ, ಒಮ್ಮೊಮ್ಮೆ ಗೂಹೆಗೂಹೆ ಗುಟ್ಟುತ್ತಾ, ತೊದಲುವ ಮಾತುಗಳಿಂದ ನಮಃಶಿವಾಯ, ನಮಃಶಿವಾಯ ಎನ್ನುತ್ತಿದ್ದನು.
36. ಕೆಳಗೆ ಬಿದ್ದವೃದ್ಧನನ್ನು ನೋಡಿ ಅಲ್ಲಿ ಸೇರಿದ್ದ ಜನರೆಲ್ಲಾ ``ಈ ವೃದ್ಧ ಬ್ರಾಹ್ಮಣನನ್ನು, ಮುಪ್ಪಿನ ಮೂರ್ಖನನ್ನು, ಗೌತಮನ ಗೋವನ್ನು(ಬಡಕಲಾದಗೋವು), ಬ್ರಹ್ಮಹತ್ಯಾ ದೋಷಿಯನ್ನು ಒಳಗೆ ಬಿಟ್ಟವರಾರು? ಕರೆದು ತಂದವರು ಯಾರು? ಇದು ಅಪಶಕುನ. ಇನ್ನೇನು ಈ ಮದುವೆ ಸರಿಯಾಗುವುದಿಲ್ಲ'' ಎಂದು ಮಾತನಾಡಿಕೊಂಡರು.

37. ಮುದುಡಿದ ನೈದಿಲೆಗಳು ಅರಳಲು ಚಂದ್ರನನ್ನು ಕಾಯುವಂತೆ, ಆಹಾರ ಹುಡುಕಿ ಹೊರಹೋದ ಗಂಡು ಚಕೋರವನ್ನು ಹೆಣ್ಣು ಚಕೋರಪಕ್ಷಿಯು ಕಾಯುವಂತೆ, ರಸಭರಿತ ಹಣ್ಣುಗಳನ್ನು ಹುಡುಕುತ್ತಿರುವ ಗಿಳಿಗಳ ಸಮೂಹದಂತೆ, ಮಕರಂದವನ್ನು ಹೀರಲು ಹೊಸಹೂವುಗಳನ್ನು ಹುಡುಕುತ್ತಿರುವ ದುಂಬಿಗಳಿಗೆ ನಂಬಿಯಣ್ಣನ ಮನದ ಕಾತುರತೆಯನ್ನು ಕವಿ ಹೋಲಿಸಿದ್ದಾನೆ.

38. ಹರಿಹರನ ಕಾಲ ಸುಮಾರು ಸಾ.ಶ. ೧೨೦೦. ಈತನ ಸ್ಥಳ ಹಂಪೆ. ಹಂಪೆಯ ವಿರೂಪಾಕ್ಷ ಈತನ ಆರಾಧ್ಯದೈವ. ಈತ ಕನ್ನಡಸಾಹಿತ್ಯದಲ್ಲಿ ರಗಳೆ ಕಾವ್ಯಪ್ರಕಾರವನ್ನು ಜೀವಂತಗೊಳಿಸಿದ ಸುಪ್ರಸಿದ್ಧ ಕವಿ. ಹರಿಹರನು 'ಪಂಪಾಶತಕ', 'ರಕ್ಷಾಶತಕ' ಮತ್ತು 'ಮುಡಿಗೆಯ ಅಷ್ಟಕ' ಗಳನ್ನು ವೃತ್ತ ಛಂದಸ್ಸಿನಲ್ಲಿ ರಚಿಸಿದ್ದಾನೆ. ಗಿರಿಜಾ ಕಲ್ಯಾಣ ಪ್ರೌಢ ಚಂಪೂ ಪರಂಪರೆಯಲ್ಲಿ ರಚಿತವಾಗಿರುವ ಕಾವ್ಯ. ರಗಳೆ ಪ್ರಕಾರದಲ್ಲಿ ಹಲವಾರು ಕೃತಿಗಳನ್ನು ಬರೆದಿರುವ ಈತನು 'ರಗಳೆಕವಿ'ಯೆಂದೇ ಪ್ರಸಿದ್ಧನಾಗಿದ್ದಾನೆ.

39.
UUU– | UUUUU | –UUU | UUU– ೫ ೫ ೫ ೫
ರಸಫಳಂ | ಗಳನಱುಸು | ತಿರ್ಪಶುಕ | ನಿಕರಮಂ

UU –U | UU–U | UUU– | UUU– ೫ ೫ ೫ ೫
ಪೊಸಪೊವ | ನೆಳಸಿರ್ಪ | ಮಧುಕರ | ಪ್ರಕರಮಂ.
ಛಂದಸ್ಸು: ಲಲಿತರಗಳೆ

40. ಕೈಲಾಸದಲ್ಲಿನ ಗಣಗಳಲ್ಲಿ ಪುಷ್ಪದತ್ತ ಮತ್ತು ರುದ್ರಕನ್ನಿಕೆಯರಿಬ್ಬರೂ ವಿಕಾರಭಾವನೆಯನ್ನು ಹೊಂದಿರುವುದನ್ನು ಕಂಡ ಶಿವನು ಮೂವರಿಗೂ ಇಹಲೋಕದಲ್ಲಿ ಮನುಜರಾಗಿ ಹುಟ್ಟಿ ಎಂದು ಶಪಿಸಿದನು. ಆದರೆ ಪುತ್ರನಾದ ಪುಷ್ಪದತ್ತನು ನರಲೋಕದಲ್ಲಿ(ಭೂಲೋಕದಲ್ಲಿ) ಹುಟ್ಟಿ, ನಂಬಿ ಎಂಬ ಹೆಸರನ್ನು ಪಡೆದು ಸಂಸಾರದಿಂದ ಕೆಟ್ಟು ಹೋಗುವುದಕ್ಕೆ ಸಿದ್ಧವಾಗಿದ್ದನು. ಅವನ ಮದುವೆಯನ್ನು ನಿಲ್ಲಿಸಿ ಆತನಿಗೆ ಮುಂಚೆ

ನೀಡಿದ ನಂಬಿಕೆಯ ಮಾತನ್ನು ಅನುಸರಿಸಿಕೊಂಡು ಅವರು ಕಳುಹಿಸಿದ ರುದ್ರಕನ್ನಿಕೆಯರಿಬ್ಬರೂ ಚೋಳದೇಶದ ತಿರುವಾರೂರು ಮತ್ತು ತಿರುವತ್ತಿಯೂರಿನಲ್ಲಿ ಪರವೆ ಮತ್ತು ಸಂಕಿಲಿ ಎಂಬ ಹೆಸರಿನಿಂದ ಹುಟ್ಟಿದ್ದರು. ಅವರನ್ನು ನಂಬಿಯಣ್ಣನೊಡನೆ ಸೇರಿಸಿ, ಸಕಲಸುಖವನ್ನು ಪೂಜೆಯಾಗಿ ಸ್ವೀಕರಿಸಿ ಬರಲು ಶಿವನು ವೃದ್ಧಮಾಹೇಶ್ವರನಾಗಿ ವೇಷಧರಿಸಿದನು.

41. ಶಿವನು ಪಾದದಿಂದ ತಲೆಯವರೆಗೂ ಲೇಪಿಸಿಕೊಂಡ ವಿಭೂತಿ, ನರೆತ ತಲೆ, ಸುಕ್ಕುಗಟ್ಟಿದ ದೇಹಹೊಂದಿದನು. ಆತನ ಜಟೆಯಲ್ಲಿದ್ದ ಚಂದ್ರಕಳೆಯೇ ಕೊಡೆಯಾಯಿತು. ಹಿಡಿದಿದ್ದ ತ್ರಿಶೂಲ ಕೊಡೆಯ ಹಿಡಿಕೆಯಾಯಿತು. ನರಕಪಾಲ ಹೊಂದಿದ ದಂಡ(ಖಟ್ವಾಂಗ) ಊರುಗೋಲಾಯಿತು(ಯಷ್ಟಿ). ಸರ್ಪವು ಪ್ರಮಾಣ ಪತ್ರವಾಯಿತು. ಬ್ರಹ್ಮನಶಿರವೇ ಕಮಂಡಲವಾಯಿತು. ಹುಲಿ ಮತ್ತು ಜಿಂಕೆಯ ಚರ್ಮಗಳು ಉಡುವ ಮತ್ತು ಹೊದೆಯುವ ವಸ್ತ್ರವಾದವು. ಶಿವನು ಕಾಲಿನಿಂದ ಮೆಟ್ಟಿಕೊಂಡಿರುವ ನಾಗಾಸುರ ಎಂಬ ರಾಕ್ಷಸನೆ ಪಾದರಕ್ಷೆಗಳಾಗಿ, ಕೊರಳಿನಲ್ಲಿ ಕಟ್ಟಿಕೊಂಡಿರುವ ತಲೆಬುರುಡೆಗಳ ಹಾರವೆ ಜಪಮಾಲೆಯಾಯಿತು.
ಕೈಯಲ್ಲಿರುವ ಕೊಡೆ, ಮೈಯಸುಕ್ಕು, ಜೋತಾಡುವ ಹುಬ್ಬು, ನೇತಾಡುವ ತೋಳಿನ ಚರ್ಮ, ಇಟ್ಟಿರುವ ವಿಭೂತಿ, ನೆಲಕ್ಕೆ ಊರಿದ ಊರುಗೋಲು, ಹಿಡಿದ ಕಮಂಡಲ, ಇಳಿಬಿಟ್ಟ ಬಿಳಿಯಗಡ್ಡ, ನಡುಗುವ ನರೆತ ತಲೆ, ನರೆತು ಹೋಗಿ ಸಡಿಲವಾಗಿರುವ ಸರ್ವಾಂಗದಿಂದ ಶಿಥಿಲವಾಗಿದ್ದ ವೃದ್ಧನು ಪುಣ್ಯವೇ ಹಣ್ಣಾದಂತೆ ಒಮ್ಮೊಮ್ಮೆ ಕೆಮ್ಮುತ್ತ, ಒಮ್ಮೊಮ್ಮೆ ಗೊಹೆ ಗೊಹೆಗುಟ್ಟುತ, ತೊದಲುವ ಮಾತುಗಳಿಂದ ನಮಃಶಿವಾಯ, ನಮಃಶಿವಾಯ ಎನ್ನುತ್ತಾ, ಎನ್ನಲಾರದಂತೆ ನಡುಗುತ್ತಾ ಮದುವೆ ಚಪ್ಪರದ ಬಳಿ ಬಂದನು" ಎಂದು ಕವಿ ವೃದ್ಧಮಾಹೇಶ್ವರನನ್ನು ವರ್ಣಿಸಿದ್ದಾನೆ.

42. ವಿವಾಹಮಂಟಪದೊಳಗೆ ಶಿವನು ಮೆಲ್ಲಮೆಲ್ಲನೆ ನೋಡುತ್ತಾ, ಮನದೊಳಗೆ ನಗುತ್ತಾ, ಕೋಲನೂರಿ ಕೊಂಡು ಕೆಮ್ಮುತ್ತಾ ವಿವಾಹಮಂಟಪದ ಬಳಿ ಸಾಲಾಗಿ ಜೋಡಿಸಲಾಗಿದ್ದ ತುಪ್ಪದ ಕೊಡಗಳ ಮೇಲೆ ನಾಲ್ಕೆರಡನ್ನು ಎಡವಿ `ನಮಃಶಿವಾಯ' ಎಂಬ ವೃದ್ಧ ಧ್ವನಿ ಅವನ ಬಾಯಿಂದ ಬರುತ್ತಿದ್ದಂತೆ ಕೊಡಗಳ ಮೇಲೆಬಿದ್ದು ಅಲ್ಲಿ ಕುಳಿತಿದ್ದವರ ಮುಖಕ್ಕೆ, ಕಣ್ಣುಗಳಿಗೆ, ಮೈಯ ಮೇಲೆ ತುಪ್ಪ ಚೆಲ್ಲಿತು. ಅಲ್ಲಿ ನೆರೆದಿದ್ದವರೆಲ್ಲಾ ಹಾಗೆ ಬಿದ್ದ ವೃದ್ಧಮಾಹೇಶ್ವರನನ್ನು ಎತ್ತಿ ನಿಲ್ಲಿಸಿದರು. ಆದರೆ ಅವನು ಒಂದು ಹೆಜ್ಜೆ ಇಟ್ಟು ಮತ್ತೆ ತಡವರಿಸಿ ನಿಲ್ಲಲಾರದೆ ತಟ್ಟನೆ ಘಳಿಗೆ ಬಟ್ಟಲಿನ ಮೇಲೆ ಬಿದ್ದನು. ಆಗ ಅಲ್ಲಿದ್ದ ಕಳಶ ಒಡೆದು, ಘಳಿಗೆ ಬಟ್ಟಲು ಮುರಿದು ಹೋಗಿ, ಅಕ್ಕಿಯೆಲ್ಲಾ ಚೆಲ್ಲಿಹೋಯಿತು. ಅಲ್ಲಿದ್ದ ಜೋಯಿಸರು ಚದುರಿ ಅತ್ತಿತ್ತ ಓಡಿಹೋದರು. ನಂತರ ಮೂರ್ಚೆ ಹೋದಂತೆ ಬಿದ್ದಿದ್ದ ಅವನನ್ನು ಎಲ್ಲರೂ ಸುತ್ತುವರಿದು ನೀರುಹಾಕಿ ಎಚ್ಚರಿಸಿ ನಿಲ್ಲಿಸಿದ ಕೂಡಲೆ ಅವನು ತುಪ್ಪದ ಕೊಡದ ಮೇಲಲ್ಲದೆ ಬೇರೆಲ್ಲಿಗೂ ಬೀಳುತ್ತಿರಲಿಲ್ಲ. ಎಲ್ಲರೂ ಮೆಲ್ಲಗೆ ಅವನ ಕೈಯನ್ನು ಕಾಲನ್ನು ಹಿಡಿದು ಎತ್ತಿಕೊಂಡು ಹೋಗಿ ಚಪ್ಪರದ ಹೊರಗೆ ಮೆಲ್ಲಗೆ ಇಳಿಸಿದರು. ಅವರು 'ಇವನನ್ನು ಒಳಗೆ ಬಿಡಬೇಡವೆಂದು' ದ್ವಾರಪಾಲಕನಿಗೆ ಹೇಳಿ ವಿವಾಹಮಂಟಪದ ಬಾಗಿಲನ್ನು ಹಾಕಿಕೊಂಡು ಒಳಗೆ ಹೋಗುವಷ್ಟರಲ್ಲಿ ವೃದ್ಧಮಾಹೇಶ್ವರನು ಅವರಿಗಿಂತ ಮುನ್ನವೇ ಒಳಗೆ ಬಂದು ಅಲ್ಲಿದ್ದ ತೋರಣದ ತಳಿರನ್ನು ಕಿತ್ತು ಬಿಸಾಡುತ್ತಾ "ಶಿವಾ ಶಿವಾ..." ಎನ್ನುತ್ತ ಅವಾಂತರ ಮಾಡಿದನು.

43. ಆಯ್ಕೆ:- ಈ ವಾಕ್ಯವನ್ನು ಹರಿಹರ ಕವಿಯ 'ನಂಬಿಯಣ್ಣನ ರಗಳೆ' ಕೃತಿಯಿಂದ ಆಯ್ದ 'ಹರಲೀಲೆ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ:- ಈ ಮಾತನ್ನು ಶಿವನು ಗಿರಿಜೆಗೆ ಹೇಳುತ್ತಾನೆ. ಶಿವನ ಶಾಪದಿಂದ ಚೋಳ ದೇಶದಲ್ಲಿ 'ನಂಬಿ' ಎಂಬ ಹೆಸರಿನಿಂದ ಪುಷ್ಪದತ್ತ ಹಾಗೂ ಪರವೆ-ಸಂಕಿಲಿ ಎಂಬ ಹೆಸರಿನಿಂದ ಜನಿಸಿದ್ದ ರುದ್ರಕನ್ನಿಕೆಯರನ್ನು ಅವರಿಗೆ ಮಾತು ಕೊಟ್ಟಿದ್ದಂತೆ ಕೈಲಾಸಕ್ಕೆ ಕರೆತರುವುದಾಗಿ ಹೇಳುತ್ತಾ ಭೂಲೋಕದಲ್ಲಿ ನಂಬಿಯಣ್ಣ ಮತ್ತು ರುದ್ರಕನ್ನಿಕೆಯರನ್ನು ಸೇರಿಸಿ ಸಕಲಸುಖವನ್ನು ಅವರಿಂದ ಸೇವೆಯಾಗಿ ಪಡೆದು ಬರುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತಾನೆ.
ಸ್ವಾರಸ್ಯ: ಭಕ್ತರಕ್ಷಕನಾದ ಶಿವನು ಭೂಲೋಕಕ್ಕೆ ಹೋಗಿ ಅಲ್ಲಿ ನಂಬಿಯಣ್ಣನಿಂದ ಸಕಲಸುಖವನ್ನು ಪಡೆದು ಬರುವುದಾಗಿ ಹೇಳಿರುವುದು ಸ್ವಾರಸ್ಯಕರವಾಗಿದೆ.

44. ಆಯ್ಕೆ: ಈ ವಾಕ್ಯವನ್ನು ಹರಿಹರ ಕವಿಯ 'ನಂಬಿಯಣ್ಣನ ರಗಳೆ' ಕೃತಿಯಿಂದ ಆಯ್ದ 'ಹರಲೀಲೆ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ: ನಂಬಿಯಣ್ಣನ ಮದುವೆಯನ್ನು ನಿಲ್ಲಿಸಲು ಭೂಲೋಕಕ್ಕೆ ಹೋಗುವುದಾಗಿ ಶಿವನು ಹೇಳಿದಾಗ ಗಿರಿಜೆ ತಾನೂ ಬರುತ್ತೇನೆಂದು ಕೇಳಿಕೊಳ್ಳುತ್ತಾಳೆ. ಆ ಸಂದರ್ಭದಲ್ಲಿ ಶಿವನು ಹೀಗೆ ಹೇಳುತ್ತಾನೆ. ನೀನು

ಕರುಣಾಮಯಿ, ಆದರೆ ನಾನು ಮಾಡುವುದು ನಿಷ್ಠುರದ ಕೆಲಸ ಆದ್ದರಿಂದ ನೀನು ಬರುವುದು ಬೇಡವೆನ್ನುತ್ತಾನೆ.
ಸ್ವಾರಸ್ಯ: ಶಿವನು ನಂಬಿಯಣ್ಣನ ಮದುವೆಯಲ್ಲಿ ಅವಾಂತರ ಮಾಡಲು ಹೋಗುವ ಉದ್ದೇಶ ಹೊಂದಿದ್ದು ಕರುಣಾಮಯಿಯಾದ ಗಿರಿಜೆ ಬಂದರೆ ತನ್ನಕಾರ್ಯಕ್ಕೆ ಅಡ್ಡಿಯುಂಟು ಮಾಡಬಹುದೆಂದು ಹೇಳಿರುವುದು ಸ್ವಾರಸ್ಯಕರವಾಗಿದೆ.

45. ಆಯ್ಕೆ:- ಈ ವಾಕ್ಯವನ್ನು ಹರಿಹರ ಕವಿಯ 'ನಂಬಿಯಣ್ಣನ ರಗಳೆ' ಕೃತಿಯಿಂದ ಆಯ್ದ 'ಹರಲೀಲೆ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ: ಭೂಲೋಕಕ್ಕೆ ಹೋಗುವಾಗ ಶಿವನು ಧರಿಸಿದ ವೃದ್ಧಮಾಹೇಶ್ವರ ವೇಷವನ್ನು ವರ್ಣಿಸುವ ಸಂದರ್ಭದಲ್ಲಿ ಕವಿ ಈ ಮಾತನ್ನುಹೇಳಿದ್ದಾನೆ. ಸುಕ್ಕುಗಟ್ಟಿ ನೇತಾಡುವ ಚರ್ಮ, ನೆಲಕ್ಕೆ ಊರಿದ ಊರುಗೋಲು, ಇಳಿಬಿಟ್ಟ ಬಿಳಿಯಗಡ್ಡ, ನಡುಗುವ ನರೆತ ತಲೆ, ಹೀಗೆ ಶಿಥಿಲವಾಗಿದ್ದ ವೃದ್ಧನು ಪುಣ್ಯವೇ ಹಣ್ಣಾದಂತೆ ಇದ್ದನು ಎಂದು ಕವಿ ವರ್ಣಿಸಿದ್ದಾನೆ.
ಸ್ವಾರಸ್ಯ: ಪುಣ್ಯ ವಿಶೇಷನಾದ ವೃದ್ಧಮಾಹೇಶ್ವರನ ಆ ವೇಷವನ್ನು ಪುಣ್ಯವೇ ಹಣ್ಣಾದಂತೆ ಎಂದು ವರ್ಣಿಸಿರುವುದು ಸ್ವಾರಸ್ಯಕರವಾಗಿದೆ.

46. ಆಯ್ಕೆ:- ಈ ವಾಕ್ಯವನ್ನು ಹರಿಹರ ಕವಿಯ 'ನಂಬಿಯಣ್ಣನ ರಗಳೆ' ಕೃತಿಯಿಂದ ಆಯ್ದ 'ಹರಲೀಲೆ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ: ವೃದ್ಧಮಾಹೇಶ್ವರನ ಕಾಟ ತಾಳಲಾರದೆ ಜನರೆಲ್ಲಾ ಸೇರಿ ಅವನನ್ನು ಮದುವೆ ಚಪ್ಪರದ ಹೊರಗೆ ತಂದು ಇಳಿಸಿ ಒಳಗೆ ಹೋಗುವಷ್ಟರಲ್ಲಿ ಅವನು ಅವರಿಗಿಂತ ಮುಂದೆ ಒಳಗೆ ಇದ್ದನು. ಅಲ್ಲದೆ ಅಲ್ಲಿದ್ದ ತೋರಣವನ್ನು ಕಿತ್ತುಹಾಕುತ್ತಾ "ಶಿವಶಿವಾ..." ಎನ್ನುತ್ತಿರುವುದನ್ನು ನೋಡಿ ಆ ಜನರೆಲ್ಲಾ ಆಶ್ಚರ್ಯಗೊಂಡು 'ಈ ವೃದ್ಧ ನಮಗೆ ಕಿರುಕುಳ ಕೊಡುವವನಲ್ಲ. ಈತನಾರೋ ಪವಾಡ ಪುರುಷನಿರಬೇಕು' ಎಂದು ಮಾತನಾಡಿಕೊಳ್ಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.
ಸ್ವಾರಸ್ಯ: ವೃದ್ಧನ ನಡವಳಿಕೆಯನ್ನು ನೋಡಿ ಜನರು ಈತನು ಪವಾಡಪುರುಷನಾಗಿಬೇಕು ಎಂದು ಯೋಚಿಸಿದ್ದು ಸ್ವಾರಸ್ಯಕರವಾಗಿದೆ.

47. ಆಯ್ಕೆ:- ಈ ವಾಕ್ಯವನ್ನು ಹರಿಹರ ಕವಿಯ 'ನಂಬಿಯಣ್ಣನ ರಗಳೆ' ಕೃತಿಯಿಂದ ಆಯ್ದ 'ಹರಲೀಲೆ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ: ಕೈಲಾಸದ ಪುಷ್ಪದತ್ತನು ಭೂಲೋಕದ ಚೋಳದೇಶದಲ್ಲಿ ನಂಬಿಯಣ್ಣನೆಂಬ ರಾಜಕುಮಾರನಾಗಿ ಹುಟ್ಟಿ ಮಣಮಂದಪುತ್ತೂರಿನಲ್ಲಿ ಮದುವೆಯಾಗುವ ಸಂದರ್ಭದಲ್ಲಿ ಕೈಲಾಸದ ಶಿವನು ಗಿರಿಜೆಗೆ ಈ ಮಾತನ್ನು ಹೇಳುತ್ತಾನೆ.
ಸ್ವಾರಸ್ಯ: ಕೈಲಾಸದ ಗಣಾಧರನಾದ ಪುಷ್ಪದತ್ತನು ಶಾಪಗ್ರಸ್ತನಾಗಿ ಭೂಲೋಕದಲ್ಲಿ ಹುಟ್ಟಿ ವಿವಾಹತತ್ಪರನಾಗಿ ಹಾಳಾಗುತ್ತಿರುವನೆಂದು ಶಿವನು ಹೇಳಿರುವುದು ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ

48. **ರಾಷ್ಟ್ರೀಯ ಹಬ್ಬಗಳ ಮಹತ್ವ.**
ಪೀಠಿಕೆ:- ಒಂದು ದೇಶದ ಐಕ್ಯತೆಯನ್ನು ಕಾಪಾಡುವ ನಿಟ್ಟಿನಲ್ಲಿ ರಾಷ್ಟ್ರೀಯ ಹಬ್ಬಗಳು ಬಹಳ ಪ್ರಾಮುಖ್ಯತೆಯನ್ನು ಪಡೆದು ಕೊಳ್ಳುತ್ತವೆ. ಭಾರತದಂತಹ ವಿವಿಧತೆಯುಳ್ಳ ರಾಷ್ಟ್ರಗಳಲ್ಲಿ ಏಕತೆಯನ್ನು ತರುವುದು ಇಂತಹ ರಾಷ್ಟ್ರೀಯ ಹಬ್ಬಗಳ ಮೂಲಕ ಸಾಧ್ಯವಿದೆ. ಇಡಿ ರಾಷ್ಟ್ರದ ಜನರೆಲ್ಲರೂ ಯಾವುದೇ ಭೇಧಭಾವವಿಲ್ಲದೆ, ಜಾತಿ, ಧರ್ಮ, ಪ್ರಾದೇಶಿಕ ಭಿನ್ನತೆಯನ್ನು ತೊರೆದು ಒಟ್ಟಾಗಿ ಆಚರಿಸುವ ಹಬ್ಬಗಳೇ ರಾಷ್ಟ್ರೀಯ ಹಬ್ಬಗಳು. ನಮ್ಮದೇಶದಲ್ಲಿ ಮೂರು ರಾಷ್ಟ್ರೀಯ ಹಬ್ಬಗಳೆಂದು ಘೋಷಿಸಲಾಗಿದೆ. ಅವುಗಳೆಂದರೆ ೧) ಸ್ವಾತಂತ್ರ್ಯದಿನಾಚರಣೆ ೨) ಗಣರಾಜ್ಯೋತ್ಸವ ೩) ಗಾಂಧಿಜಯಂತಿ.
ವಿಷಯ ನಿರೂಪಣೆ:- ೧) ಸ್ವಾತಂತ್ರ್ಯ ದಿನಾಚರಣೆ:- ಭಾರತ ಸುಮಾರು ಎರಡು ನೂರುವರ್ಷಗಳ ಕಾಲ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿತ್ತು. ವ್ಯಾಪಾರದ ಉದ್ದೇಶದಿಂದ ಬಂದ ಬ್ರಿಟಿಷರು ಭಾರತೀಯ ಅರಸರ ದೌರ್ಬಲ್ಯಗಳನ್ನು ಉಪಯೋಗಿಸಿಕೊಂಡು ಭಾರತದೇಶದ ಆಡಳಿತ ಚುಕ್ಕಾಣಿ ಹಿಡಿದಿದ್ದರು. ಭಾರತೀಯರಿಗೆ ಸ್ವಾತಂತ್ರ್ಯ ಎನ್ನುವುದೇ ಇರಲಿಲ್ಲ. ಹಾಗಾಗಿ ಭಾರತೀಯರೆಲ್ಲರೂ ಒಟ್ಟಾಗಿ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಹೋರಾಟದ ರಣಕಹಳೆಯನ್ನು ಊದಿ ಕೊನೆಗೆ ಸಾ.ಶ.೧೯೪೭ನೇ ಆಗಸ್ಟ್ ೧೫ ರಂದು ಸ್ವಾತಂತ್ರ್ಯವನ್ನು ಪಡೆದರು. ಆ ದಿನವನ್ನು ಪ್ರತಿವರ್ಷ ಭಾರತೀಯರೆಲ್ಲರೂ ಒಟ್ಟಾಗಿ ರಾಷ್ಟ್ರೀಯ ಹಬ್ಬವನ್ನಾಗಿ ಆಚರಿಸಿ

ರಾಷ್ಟ್ರೀಯ ಏಕತೆಯನ್ನು ಮೆರೆಯುತ್ತಾರೆ. ಅಂದು ಶಾಲೆ, ಕಾಲೇಜು, ಕಛೇರಿಗಳಲ್ಲಿ ರಾಷ್ಟ್ರೀಯ ಧ್ವಜವನ್ನು ಹಾರಿಸಿ ದೇಶಭಕ್ತಿ ಸಾರುವ ಕಾರ್ಯಕ್ರಮಗಳನ್ನು ಆಚರಿಸಿ ಒಗ್ಗಟ್ಟನ್ನು ಪ್ರದರ್ಶಿಸುತ್ತಾರೆ.

೨) ಗಣರಾಜ್ಯೋತ್ಸವ: ಭಾರತ ದೇಶವು ಸ್ವಾತಂತ್ರ್ಯವನ್ನು ಪಡೆದ ನಂತರ ಆಡಳಿತದ ರೂಪುರೇಷೆಗಳನ್ನು ಸಿದ್ಧಪಡಿಸಲಾಯಿತು. ಆ ರೂಪುರೇಷೆಗಳನ್ನು ಒಳಗೊಂಡಿರುವುದೇ ನಮ್ಮಸಂವಿಧಾನ. ಎಲ್ಲ ರಾಜ್ಯಗಳನ್ನು ಗಣಗಳನ್ನಾಗಿ ಮಾಡಿ (ಒಟ್ಟುಗೂಡಿಸಿ) ಉತ್ತಮವಾದ ಆಡಳಿತ ನಡೆಸಲು ಕಾನೂನು ರೂಪಪಡೆದ ಸಂವಿಧಾನವನ್ನು ಜನವರಿ ೨೬, ೧೯೫೦ ರಂದು ಜಾರಿಗೆ ತರಲಾಯಿತು. ಆ ದಿನವೇ ಗಣರಾಜ್ಯದಿನ. ಇದನ್ನು ಕೂಡ ನಮ್ಮದೇಶದ ಪ್ರಜೆಗಳೆಲ್ಲರೂ ಒಟ್ಟಾಗಿ ಸೇರಿ ಆಚರಿಸುತ್ತಾರೆ. ಈ ದಿನದಲ್ಲಿ ರಾಷ್ಟ್ರಧ್ವಜವನ್ನು ಹಾರಿಸಿ ಸಂವಿಧಾನದ ನಿರ್ಮಾತೃಗಳು ಹಾಗೂ ತತ್ತ್ವಗಳನ್ನು ಸ್ಮರಿಸಿ ಕೊಳ್ಳುತ್ತಾರೆ. ಪ್ರತಿಯೊಬ್ಬರು ಸಂವಿಧಾನ ಪಾಲಿಸುವ ಮನೋಧರ್ಮವನ್ನು ಬೆಳೆಸಿಕೊಳ್ಳುವ ಆಶಯನ್ನು ಸ್ಮರಿಸುತ್ತಾರೆ. ಹಾಗೆಯೇ ದೇಶಭಕ್ತಿ ಸಾರುವ ಕಾರ್ಯಕ್ರಮಗಳನ್ನು ಆಚರಿಸಿ ಒಗ್ಗಟ್ಟನ್ನು ಪ್ರದರ್ಶಿಸುತ್ತಾರೆ.

೩) ಗಾಂಧಿ ಜಯಂತಿ: ಯಾವುದೇ ಒಂದು ದೇಶದ ಜನರೆಲ್ಲರೂ ಒಟ್ಟಾಗಿ ಸೇರಲು ನಾಯಕತ್ವಬೇಕು. "ನಾಯಕರಿಲ್ಲದ ನಾವೆ ದಡ ಸೇರಲಾರದು" ಅಂತೆಯೇ ನಮ್ಮದೇಶದ ಸ್ವಾತಂತ್ರ್ಯ ಪಡೆಯಲು ನಾಯಕತ್ವ ವಹಿಸಿಕೊಂಡವರು ನಮ್ಮದೇಶದ ರಾಷ್ಟ್ರಪಿತ ಎನಿಸಿಕೊಂಡ ಮಹಾತ್ಮಗಾಂಧೀಜಿಯವರು. ಅವರು ಹುಟ್ಟಿದ ದಿನವೇ ಅಕ್ಟೋಬರ್ ೨. ಆ ದಿನವನ್ನು ಗಾಂಧಿ ಜಯಂತಿಯೆಂದು ರಾಷ್ಟ್ರೀಯಹಬ್ಬವನ್ನಾಗಿ ಆಚರಿಸಲಾಗುತ್ತದೆ. ಏಕೆಂದರೆ ಗಾಂಧೀಜಿಯವರು ಸ್ವಾತಂತ್ರ್ಯ ಚಳವಳಿಯ ಮುಂದಾಳತ್ವವನ್ನು ವಹಿಸಿಕೊಂಡು ಸ್ವಾತಂತ್ರ್ಯವನ್ನು ತಂದುಕೊಡುವಲ್ಲಿ ಪ್ರಮುಖ ಪಾತ್ರವಹಿಸಿದರು. ಆದ್ದರಿಂದ ಅವರ ಆದರ್ಶಗಳನ್ನು ನೆನೆಯುವ ದಿನವಾಗಿ ಈ ದಿನವನ್ನು ಆಚರಿಸಲಾಗುತ್ತದೆ.

ಉಪಸಂಹಾರ:- ಭಾರತದಲ್ಲಿ ರಾಷ್ಟ್ರೀಯ ಹಬ್ಬಗಳನ್ನು ಆಚರಿಸುವುದರಿಂದ ಪ್ರತಿಯೊಬ್ಬ ನಾಗರಿಕರಲ್ಲಿ ಏಕತೆ, ದೇಶಭಕ್ತಿ, ಸಂವಿಧಾನದ ಮಹತ್ವ, ನಾಯಕತ್ವದ ಗುಣ ಮುಂತಾದ ವಿಚಾರಗಳನ್ನು ತಿಳಿಯಲು ಮತ್ತು ನಾವು ಅದೇ ರೀತಿ ನಡೆದುಕೊಳ್ಳಲು ನೆರವಾಗುತ್ತದೆ.

49. ರಾಷ್ಟ್ರೀಯ ಭಾವೈಕ್ಯ.

ಪೀಠಿಕೆ:- ಭಾರತವು ಅನೇಕ ಜನಾಂಗಗಳು, ಪಂಗಡಗಳು ಇರುವಂತಹ ಒಂದು ವಿಶಾಲ ರಾಷ್ಟ್ರ. ಇಲ್ಲಿ "ವಿವಿಧ ಭಾಷೆ, ಸಂಸ್ಕೃತಿ, ಧರ್ಮ, ಜಾತಿಗಳ ಜನರು ತಮ್ಮ ವಿವಿಧತೆಯನ್ನು ಮರೆತು ನಾವೆಲ್ಲರೂ ಭಾರತೀಯರು ಎಂಬ ರಾಷ್ಟ್ರೀಯ ಮನೋಭಾವನೆಯನ್ನು ಹೊಂದಿರುವುದೇ 'ರಾಷ್ಟ್ರೀಯ ಭಾವೈಕ್ಯತೆ". ಭಾರತವು ಪ್ರಜಾಪ್ರಭುತ್ವ ತಳಹದಿಯ ಮೇಲೆ ರೂಪಿತವಾಗಿರುವ ಒಂದು ಜಾತ್ಯತೀತ ರಾಷ್ಟ್ರವಾಗಿದ್ದು ಪ್ರತಿಯೊಂದು ಧರ್ಮದವರು ತಮ್ಮ ಸಂಪ್ರದಾಯ, ಪದ್ಧತಿಗಳನ್ನು ಆಚರಿಸಲು ಅವಕಾಶವಿದೆ.

ವಿಷಯ ನಿರೂಪಣೆ:- ಭಾರತವು ವಿವಿಧ ಧರ್ಮ, ಭಾಷೆ, ಬುಡಕಟ್ಟು, ಜನಾಂಗಗಳನ್ನು ಹೊಂದಿದ್ದು, ದೇಶದ ಯಾವುದೇ ಮೂಲೆಗೆ ಹೋದರೂ ಅಲ್ಲಿ ವೈವಿಧ್ಯತೆಯನ್ನು ಕಾಣುತ್ತೇವೆ. ಏಕೆಂದರೆ ಭಾರತೀಯ ನಾಗರಿಕತೆಯು ಯಾವಾಗಲೂ ಧಾರ್ಮಿಕ ಹಾಗೂ ನೈತಿಕ ತಳಹದಿಯ ಮೇಲೆ ನಿಂತಿದೆ. ದೇಶದ ಎಲ್ಲ ಭಾಗಗಳಲ್ಲಿಯೂ, ಸಾಂಸ್ಕೃತಿಕ ಮತ್ತು ಜೀವನ ಮಾರ್ಗದ ಒಗ್ಗಟ್ಟು ಹಾಗೂ ದೃಷ್ಟಿಕೋನವು ಧರ್ಮ, ನಂಬಿಕೆ ಮತ್ತು ಆಚರಣೆಗಳಲ್ಲಿ ವಿಶಾಲ ವೈವಿಧ್ಯತೆಯನ್ನು ಹೊಂದಿದೆ. ಆದರೂ ನಮ್ಮಲ್ಲಿ ನಾವು ಭಾರತೀಯರು ಎಂಬ ಬಲವಾದ ಒಗ್ಗಟ್ಟಿನ ಮಂತ್ರವಿದೆ. ನಮ್ಮ ದೇಶದ ರಾಷ್ಟ್ರಗೀತೆ, ರಾಷ್ಟ್ರಧ್ವಜ, ರಾಷ್ಟ್ರಮುದ್ರೆ ಇವು ನಮ್ಮ ಏಕತೆಯ ಸಂಕೇತಗಳಾಗಿವೆ. ಅಲ್ಲದೇ 'ವಂದೇ ಮಾತರಂ, ಸಾರೇ ಜಹಾಂಸೇ ಅಚ್ಛಾ, ಜನಗಣಮನದಂತಹದೇಶಭಕ್ತಿಗೀತೆಗಳುನಮ್ಮಲ್ಲಿದೇಶಪ್ರೇಮ, ದೇಶಾಭಿಮಾನವನ್ನುಹುಟ್ಟಿಸುತ್ತವೆ. ಇಡೀ ದೇಶವೇವೈವಿಧ್ಯಮಯವಾದ ಸಾಂಸ್ಕೃತಿಕ ಆಚರಣೆಯಲ್ಲಿರುವಾಗ ನಾವು ಒಂದೇ ಮನೆಯವರಂತೆ ಕೂಡಿಬಾಳುತ್ತಿರುವುದು ಇಡೀ ಜಗತ್ತಿಗೆ ಮಾದರಿಯಾಗಿದೆ ಎಂದು ಹೇಳಬಹುದು.

ಉಪಸಂಹಾರ: ಇತ್ತೀಚೆಗೆ ಭಾರತೀಯ ಸಂಸ್ಕೃತಿಯು ಪ್ರಗತಿ ಹಾಗೂ ಬದಲಾವಣೆಯ ಹಂತದಲ್ಲಿದೆ. ಭಾರತೀಯರಾದ ನಾವು ನಮ್ಮ ನೆರೆಹೊರೆಯ ರಾಷ್ಟ್ರಗಳೊಂದಿಗೆ ಪ್ರೀತಿ ಹಾಗೂ ಸೌಹಾರ್ದತೆಯಿಂದ ನಡೆದುಕೊಳ್ಳುತ್ತಾ, ನಮ್ಮ ದೇಶದ ಏಕತೆಯನ್ನು ಎತ್ತಿ ಹಿಡಿದಿದ್ದೇವೆ.

****

ಪದ್ಯ ಭಾಗ

1. ಪಾರಿವಾಳ

1. ಬಿ) ಪೂರ್ಣೋಪಮಾಲಂಕಾರ
2. ಬಿ) ದೃಷ್ಟಾಂತಾಲಂಕಾರ
3. ಸಿ) ತೊಟ್ಟಿಲು
4. ಡಿ) ಹಾರಾಡುವುದು
5. ಎ) ರೂಪಕಾಲಂಕಾರ
6. ಬಿ) ವಿದ್ಯಾರ್ಥಿ
7. ಡಿ) ಉಪಮಾಲಂಕಾರ

8. ಮುದ್ದು ಪಾರಿವಾಳಗಳ ಜೋಡಿ ದಟ್ಟಕಾಡಿನಲ್ಲಿದ್ದ ಹೆಮ್ಮರದ ಹೊದರಿನಲ್ಲಿ ಸಂಸಾರ ಹೂಡಿದ್ದವು.
9. ಜೋಡಿ ಪಾರಿವಾಳಗಳು ಹಗಲಿರುಳು ಜೊತೆಗೂಡಿ ಬಾಳುತ್ತಿದ್ದವು.
10. ಬಲೆಯಲ್ಲಿದ್ದ ಮರಿಗಳು ಹೊರಗೆ ಬರಲು ಚೀತ್ಕರಿಸಿದವು .
11. ವ್ಯಾಮೋಹವನ್ನು ತೊರೆದು ಬಾಳಬೇಕು.
12. ಪಾರಿವಾಳ ಪದ್ಯ ಬರೆದ ಕವಿ ಸು. ರಂ. ಎಕ್ಕುಂಡಿ.
13. ಪಾರಿವಾಳ ಪದ್ಯವನ್ನು ಸಮಗ್ರ ಕಥನಕವನಗಳು ಎಂಬ ಕೃತಿಯಿಂದ ಆರಿಸಲಾಗಿದೆ.
14. ಬೇಡನು ಬಲೆಯನ್ನು ಹರಡಿದನು.
15. ಬಲೆಯಲ್ಲಿದ್ದ ಮರಿಗಳನ್ನು ಕಂಡು ತಾಯಿ ಪಾರಿವಾಳವು ಸಹ ಬಲೆಗೆ ಧುಮುಕಿತು.
16. ಕುರುಡು ವಾತ್ಸಲ್ಯದಿಂದ ಪಾರಿವಾಳದ ಹಿಂಡು ವಿವೇಕ ಕಳೆದುಕೊಂಡು ಬಲೆಗೆ ನುಗ್ಗಿತು.
17. ಮೋಹ ಮುಸುಕಿದ ಬುದ್ಧಿ ಸರ್ವನಾಶದ ಸಿದ್ಧಿ.

18. ಪಾರಿವಾಳಗಳ ಸಂಸಾರದಲ್ಲಿ ಹಗಲಿರುಳು ಸಂತೋಷ ತುಂಬಿರುತ್ತಿತ್ತು. ಅವುಗಳ ಮೊಟ್ಟೆ ಒಡೆದು ಮರಿಗಳು ಹೊರಬಂದಾಗ ಅವುಗಳ ಮಧುರ ಸದ್ದು ಕೇಳಿ ಪಾರಿವಾಳಗಳಿಗೆ ಆನಂದವಾಯಿತು.
19. ಕಾಡಿಗೆ ಬಂದ ಬೇಡನು ಪಾರಿವಾಳಗಳನ್ನು ಹಿಡಿಯಲು ಬಲೆ ಬೀಸಿದನು. ಬೇಡನ ಬಲೆಗೆ ಪುಟ್ಟಮರಿಗಳು ಸಿಲುಕಿ ಚೀತ್ಕರಿಸ ತೊಡಗಿದವು. ಆಗ ಬೇಡನು ಬಂದು ಬಲೆಯನ್ನು ಹೊತ್ತು ಕೊಂಡು ಹೋದನು.
20. ಮರಿಗಳ ದುರಾವಸ್ಥೆಯನ್ನು ಕಂಡು ತಾಯಿಪಾರಿವಾಳಕ್ಕೆ ಸಂಕಟವಾಯಿತು. ಮರಿಗಳನ್ನು ಅಗಲಿರಲಾರದೆ ತಾಯಿ ಪಾರಿವಾಳ ಬಲೆಗೆ ಧುಮುಕಿತು. ಹೆಂಡತಿಯನ್ನಗಲಿರದೆ ಗಂಡು ಹಕ್ಕಿಯು ಬಲೆಗೆ ಧುಮುಕಿತು.
21. ಸು. ರಂ. ಎಕ್ಕುಂಡಿ ಇವರ ಪೂರ್ಣ ಹೆಸರು ಸುಬ್ಬಣ್ಣ ರಂಗಣ್ಣ ಎಕ್ಕುಂಡಿ. ಇವರು ಹುಟ್ಟಿದ್ದು 1923 ರಂದು ಹಾವೇರಿ ಜಿಲ್ಲೆಯ ರಾಣೆಬೆನ್ನೂರಿನಲ್ಲಿ.
    ಇವರು ಬರೆದಿರುವ ಕೃತಿಗಳೆಂದರೆ 'ಶ್ರೀಆನಂದ ತೀರ್ಥರು' ಸಂತಾನ, ಹಾವಾಡಿಗರ ಹುಡುಗ, ಮತ್ಸ್ಯಗಂಧಿ, ಬಕುಳದ ಹೂಗಳು ಇವರ ಕಥಾ ಸಂಕಲನ ನೆರಳು ಹಾಗು ಕಾದಂಬರಿ ಪ್ರತಿಬಿಂಬಗಳು.
    ಇವರಿಗೆ ಸೋವಿಯತ್ ಲ್ಯಾಂಡಿನ ನೆಹರು ಪುರಸ್ಕಾರ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ, ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ದೊರೆತಿದೆ.

22. ಅಲಂಕಾರ : ಉಪಮಾಲಂಕಾರ
    ಲಕ್ಷಣ : ಎರಡು ವಸ್ತುಗಳಲ್ಲಿ ಪರಸ್ಪರ ಇರುವ ಹೋಲಿಕೆಯನ್ನು ವರ್ಣಿಸುವುದೇ ಉಪಮಾಲಂಕಾರವೆನಿಸುತ್ತದೆ.
    ಉಪಮೇಯ : ಬಾನಿನಲ್ಲಿ ಗಾಳಿಪಟಗಳು
    ಉಪಮಾನ : ಹಕ್ಕಿಗಳು
    ಉಪಮಾವಾಚಕ : ಅಂತೆ
    ಸಮಾನಧರ್ಮ : ಹಾರಾಡುವುದು.
    ಸಮನ್ವಯ: ಉಪಮೇಯವಾದ ಬಾನಿನಲ್ಲಿನ ಗಾಳಿಪಟಗಳನ್ನು ಉಪಮಾನವಾದ ಹಕ್ಕಿಗಳಿಗೆ ಹೋಲಿಸಿ ವರ್ಣಿಸಲಾಗಿದೆ. ಅಂತೆ ಎಂಬ ಉಪಮಾವಾಚಕಪದವನ್ನು ಹಾರಾಡುವುದು ಎಂಬ ಸಮಾನಧರ್ಮವನ್ನು ಮೀರಿ ನಾಲ್ಕು ಅಂಶಗಳನ್ನು ತಿಳಿಸಿರುವುದರಿಂದ ಇದು ಪೂರ್ಣೋಪಮಾಲಂಕಾರ

23. ಅಲಂಕಾರ : ರೂಪಕಾಲಂಕಾರ
ಲಕ್ಷಣ: : ಉಪಮೇಯ ಉಪಮಾನಗಳೆರಡೂ ಒಂದೇ ಎಂದು ಬೇಧವಿಲ್ಲದಂತೆ ಹೇಳುವ ಅಲಂಕಾರವೇ ರೂಪಕಾಲಂಕಾರ
ಉಪಮೇಯ : ವಿದ್ಯಾರ್ಥಿ
ಉಪಮಾನ : ರತ್ನ
ಸಮಾನಧರ್ಮ: ಉಪಮೇಯವಾದ ವಿದ್ಯಾರ್ಥಿಯನ್ನು ಉಪಮಾನವಾದ ರತ್ನಕ್ಕೆ ಅಭೇದವಾಗಿ ರೂಪಿಸಿದೆ. ಹಾಗಾಗಿ ಇದು ರೂಪಕಾಲಂಕಾರ

24. ಅಲಂಕಾರ : ರೂಪಕಾಲಂಕಾರ
ಲಕ್ಷಣ: : ಉಪಮೇಯ ಉಪಮಾನಗಳೆರಡೂ ಒಂದೇ ಎಂದು ಬೇಧವಿಲ್ಲದಂತೆ ಹೇಳುವ ಅಲಂಕಾರವೇ ರೂಪಕಾಲಂಕಾರ
ಉಪಮೇಯ : ಮನೆ
ಉಪಮಾನ : ಧರ್ಮಾಶ್ರಮ
ಸಮಾನಧರ್ಮ : ಉಪಮೇಯವಾದ ಮನೆಯನ್ನು ಉಪಮಾನವಾದ ಧರ್ಮಾಶ್ರಮಕ್ಕೆ ಅಭೇದವಾಗಿ ರೂಪಿಸಿದೆ. ಹಾಗಾಗಿ ಇದು ರೂಪಕಾಲಂಕಾರ

25. ಅಲಂಕಾರ : ರೂಪಕಾಲಂಕಾರ
ಲಕ್ಷಣ: : ಉಪಮೇಯ ಉಪಮಾನಗಳೆರಡೂ ಒಂದೇ ಎಂದು ಬೇಧವಿಲ್ಲದಂತೆ ಹೇಳುವ ಅಲಂಕಾರವೇ ರೂಪಕಾಲಂಕಾರ
ಉಪಮೇಯ : ಸೀತೆಯ ಮುಖ
ಉಪಮಾನ : ಕಮಲ
ಸಮಾನಧರ್ಮ : ಉಪಮೇಯವಾದ ಸೀತೆಯ ಮುಖಯನ್ನು ಉಪಮಾನವಾದ ಕಮಲಕ್ಕೆ ಅಭೇದವಾಗಿ ರೂಪಿಸಿದೆ. ಹಾಗಾಗಿ ಇದು ರೂಪಕಾಲಂಕಾರ

26. ಅಲಂಕಾರ : ದೃಷ್ಟಾಂತಾಲಂಕಾರ
ಲಕ್ಷಣ: : ಎರಡು ಬೇರೆಬೇರೆ ವಾಕ್ಯಗಳು ಅರ್ಥಸಾದೃಶ್ಯದಿಂದ ಒಂದಕ್ಕೊಂದು ಬಿಂಬ ಪ್ರತಿಬಿಂಬ ಭಾವದಂತೆ ತೋರುತ್ತಿದ್ದರೆ ಅದು ದೃಷ್ಟಾಂತಾಲಂಕಾರ
ಉಪಮೇಯ : ಮಾತು ಬಲ್ಲವನಿಗೆ ಜಗಳವಿಲ್ಲ.
ಉಪಮಾನ : ಊಟ ಬಲ್ಲವನಿಗೆ ರೋಗವಿಲ್ಲ.
ಸಮಾನ ಧರ್ಮ: : ಇಲ್ಲಿ ಉಪಮೇಯವಾದ ಮಾತು ಬಲ್ಲವನಿಗೆ ಜಗಳವಿಲ್ಲ ಹಾಗು ಉಪಮಾನವಾದ ಊಟ ಬಲ್ಲವನಿಗೆ ರೋಗವಿಲ್ಲ ಎರಡೂ ಬಿಂಬ ಪ್ರತಿಬಿಂಬದಂತೆ ಇರುವುದರಿಂದ ಇದು ದೃಷ್ಟಾಂತಾಲಂಕಾರವಾಗಿದೆ.

27. ಆಯ್ಕೆ: ಈ ವಾಕ್ಯವನ್ನು ಸು. ರಂ. ಎಕ್ಕುಂಡಿ. ಅವರು ರಚಿಸಿರುವ ಸಮಗ್ರ ಕಥನಕವನಗಳು ಎಂಬ ಕೃತಿಯಿಂದ ಆಯ್ದ ಪಾರಿವಾಳ ಎಂಬ ಪದ್ಯಭಾಗದಿಂದ ಆರಿಸಲಾಗಿದೆ.
ಸಂದರ್ಭ : ಬೇಡ ಹರಡಿದ ಬಲೆಗೆ ಮರಿಪಾರಿವಾಳಗಳು ಸಿಲುಕಿ ಚೀತ್ಕರಿಸತೊಡಗಿದವು. ಇದನ್ನು ನೋಡಿದ ತಾಯಿ ಪಾರಿವಾಳ ಕೂಡ ಬಲೆಗೆ ಧುಮುಕಿತು. ಹೆಂಡತಿಯನ್ನು ಅಗಲಿರದ ಗಂಡು ಹಕ್ಕಿಯು ಬಿಕ್ಕಿಬಿಕ್ಕಿ ಅಳುತ್ತಾ ಅದು ಕೂಡ ಸಿಲುಕಿದ ಸಂದರ್ಭದಲ್ಲಿ ಈ ಮಾತನ್ನು ಕವಿ ಹೇಳುತ್ತಾರೆ.
ಸ್ವಾರಸ್ಯ : ಈ ಮಾತಿನಲ್ಲಿ ತಂದೆತಾಯಿ ಪಾರಿವಾಳಗಳ ಕುರುಡು ವಾತ್ಸಲ್ಯದ ಅವಿವೇಕದಿಂದ ಸರ್ವನಾಶಕ್ಕೆ ಕಾರಣವಾಗಿದ್ದು ವ್ಯಕ್ತವಾಗಿದೆ.

28. ಆಯ್ಕೆ: ಈ ವಾಕ್ಯವನ್ನು ಸು. ರಂ. ಎಕ್ಕುಂಡಿ. ಅವರು ರಚಿಸಿರುವ ಸಮಗ್ರ ಕಥನಕವನಗಳು ಎಂಬ ಕೃತಿಯಿಂದ ಆಯ್ದ ಪಾರಿವಾಳ ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ : ಪ್ರೀತಿಯಿಂದ ಬಾಳುತ್ತಿದ್ದ ಪಾರಿವಾಳಗಳು ಕುರುಡು ವಾತ್ಸಲ್ಯಕ್ಕೆ ಒಳಗಾಗಿ ಬೇಡನ ಬಲೆಗೆ ಸಿಲುಕಿದ ಸಂದರ್ಭವನ್ನು ಕುರಿತು ಈ ಮೇಲಿನ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ: ಈ ಮಾತನಲ್ಲಿ ವ್ಯಾಮೋಹವನ್ನು ತೊರೆದು ಬಾಳಬೇಕು. ತಾಳ್ಮೆಯಿಂದ ಯೋಚಿಸಿ ಕಾರ್ಯಸಾಧನೆ ಮಾಡಬೇಕು ಎಂಬುದು ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

29. ದಟ್ಟಕಾಡಿನಲೊಂದು ಹೆಮ್ಮರದ ಹೊದರಿನಲಿ
ಇರುತ್ತಿತ್ತು ಪುಟ್ಟ ಸಂಸಾರ ಹೂಡಿ
ಮುದ್ದು ಬಿಳಿಪಾರಿವಾಳಗಳ ಜೋಡಿ

30. ಹಗಲಿರುಳು ಜೊತೆಗೂಡಿ ಬಾಳಿದವು ಈ ಜೋಡಿ
ಎಂದಿಗೂ ಅಗಲಿರವು ಒಂದನೊಂದು
ಹಿಗ್ಗು ತುಂಬಿತು ಹೊದರಿನಲ್ಲಿ ಬಂದು

31. ಆಯ್ಕೆ: ಈ ಭಾಗವನ್ನು ಸು. ರಂ. ಎಕ್ಕುಂಡಿ. ಅವರು ರಚಿಸಿರುವ ಸಮಗ್ರ ಕಥನ ಕವನಗಳು ಎಂಬ ಕೃತಿಯಿಂದ ಆಯ್ದ ಪಾರಿವಾಳ ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ದಟ್ಟಕಾಡಿನ ಹೆಮ್ಮರದಲ್ಲಿ ಇದ್ದ ಪಾರಿವಾಳಗಳ ಜೋಡಿಯು ಪರಸ್ಪರ ಅಗಲಿ ಇರಲಾರದೆ ತಮ್ಮ ಮರಿಗಳೊಡನೆ ಅವುಗಳ ಧ್ವನಿ ಕೇಳುತ್ತಾ ಆನಂದದಿಂದ ಬಾಳುತ್ತಿದ್ದವು. ಒಂದು ದಿನ ಬೇಡನು ಬಂದು ಬಲೆಯನ್ನು ಹಾಕಿದನು. ಅದರಲ್ಲಿ ಮರಿಪಾರಿವಾಳಗಳು ಸಿಲುಕಿ ಚೀತ್ಕರಿಸ ತೊಡಗಿದವು. ಆಗ ತಾಯಿ ಪಾರಿವಾಳ ಗಂಡುಹಕ್ಕಿಯು ಒಂದೊಂದಾಗಿ ಬಲೆಗೆ ಧುಮುಕಿ ಬಿಕ್ಕಿಬಿಕ್ಕಿ ಅಳತೊಡಗಿತು.

ಮರಿಪಾರಿವಾಳಗಳ ಮೇಲಿನ ವ್ಯಾಮೋಹದಿಂದ ವಿವೇಕವನ್ನು ಕಳೆದುಕೊಂಡು ಜೋಡಿಪಾರಿವಾಳಗಳು ಬಲೆಯೊಳಗೆ ಬಿದ್ದವು. ಹೀಗೆ ಇಡೀ ಪಾರಿವಾಳಗಳ ಸಂಸಾರ ಬಲೆಗೆ ಬಿದ್ದಿತು. ಹಸಿದ ಬೇಡನು ಬಲೆಯೊಳಗೆ ಬಿದ್ದಪಾರಿವಾಳಗಳನ್ನು ಎತ್ತಿಕೊಂಡು ಹೋದನು.

ವ್ಯಾಮೋಹ ತೊರೆದು ತಾಳ್ಮೆಯಿಂದ ಯೋಚಿಸಿ ಕಾರ್ಯಸಾಧನೆ ಮಾಡಬೇಕು ಎಂಬುದೇ ಈ ಕಥನ ಕವನದ ಮೌಲ್ಯವಾಗಿದೆ.

32. ಆಯ್ಕೆ: ಈ ಭಾಗವನ್ನು ಸು. ರಂ. ಎಕ್ಕುಂಡಿ. ಅವರು ರಚಿಸಿರುವ ಸಮಗ್ರ ಕಥನ ಕವನಗಳು ಎಂಬ ಕೃತಿಯಿಂದ ಆಯ್ದ ಪಾರಿವಾಳ ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ದಟ್ಟಕಾಡಿನ ಹೆಮ್ಮರದಲ್ಲಿ ಇದ್ದ ಪಾರಿವಾಳಗಳ ಜೋಡಿಯು ಪರಸ್ಪರ ಅಗಲಿ ಇರಲಾರದೆ ತಮ್ಮ ಮರಿಗಳೊಡನೆ ಅವುಗಳ ಧ್ವನಿ ಕೇಳುತ್ತಾ ಆನಂದದಿಂದ ಬಾಳುತ್ತಿದ್ದವು. ಒಂದು ದಿನ ಬೇಡನು ಬಂದು ಬಲೆಯನ್ನು ಹಾಕಿದನು. ಅದರಲ್ಲಿ ಮರಿ ಪಾರಿವಾಳಗಳು ಸಿಲಿಕಿಕೊಂಡು ಚೀತ್ಕರಿಸ ತೊಡಗಿದವು. ಆಗ ತಾಯಿ ಪಾರಿವಾಳ ಅದನ್ನು ನೋಡಿ ಬಲೆಗೆ ಧುಮುಕಿ ನಂತರ ಗಂಡು ಹಕ್ಕಿಯು ಬಲೆಗೆ ಧುಮುಕಿ ಬಿಕ್ಕಿಬಿಕ್ಕಿ ಅಳತೊಡಗಿತು.

ಮರಿ ಪಾರಿವಾಳಗಳ ಮೇಲಿನ ವ್ಯಾಮೋಹದಿಂದ ವಿವೇಕವನ್ನು ಕಳೆದುಕೊಂಡು ಜೋಡಿ ಪಾರಿವಾಳಗಳು ಬಲೆಯೊಳಗೆ ಬಿದ್ದವು. ಹೀಗೆ ಇಡೀ ಪಾರಿವಾಳಗಳ ಸಂಸಾರ ಬಲೆಗೆ ಬಿದ್ದಿತು. ಹಸಿದ ಬೇಡನು ಬಲೆಯೊಳಗೆ ಬಿದ್ದ ಪಾರಿವಾಳಗಳನ್ನು ಎತ್ತಿಕೊಂಡು ಹೋದನು.

ವ್ಯಾಮೋಹ ತೊರೆದು ತಾಳ್ಮೆಯಿಂದ ಯೋಚಿಸಿ ಕಾರ್ಯಸಾಧನೆ ಮಾಡಬೇಕು ಎಂಬುದೇ ಈ ಕಥನ ಕವನದ ಮೌಲ್ಯವಾಗಿದೆ.

33. ಜೋಡಿ ಪಾರಿವಾಳಗಳು ದುಡಿಕಿನಿಂದ ತಮ್ಮ ಮರಿಗಳ ಮೇಲಿನ ವ್ಯಾಮೋಹದಿಂದ ತಾವೂ ಸಹಬೇಡನಿಗೆ ಆಹಾರವಾದದ್ದು ಸರಿಯಲ್ಲ. ತಮ್ಮ ಮರಿಗಳು ಬಲೆಗೆ ಸಿಕ್ಕಿಕೊಂಡಿದ್ದನ್ನು ನೋಡಿದ ಹೆಣ್ಣುಪಾರಿವಾಳ ವಿವೇಚನೆಯಿಲ್ಲದೆ ಮರಿಗಳ ಮೇಲಿನ ಅತಿಯಾದ ವಾತ್ಸಲ್ಯದಿಂದ ತಾನೂ ಬಲೆಗೆ ಸಿಕ್ಕಿಕೊಂಡಿತು. ಹೆಣ್ಣು ಪಾರಿವಾಳವನ್ನು ಬಿಟ್ಟಿರದಷ್ಟು ಹಚ್ಚಿಕೊಂಡಿದ್ದ ಗಂಡು ಪಾರಿವಾಳವು ತಾನೂ ಕೂಡ ಬಲೆಗೆಸಿ ಕ್ಕಿಕೊಂಡಿತು. ಹೀಗೆ ಜೋಡಿ ಪಾರಿವಾಳಗಳು ಅತಿಯಾದ ವ್ಯಾಮೋಹದಿಂದ ಪ್ರಾಣ ಕಳೆದುಕೊಂಡವು. ಸಾಧ್ಯವಾದರೆ ತಮ್ಮನ್ನು ರಕ್ಷಿಸಿಕೊಂಡು ಮರಿಗಳನ್ನು ಕಾಪಾಡಲು ಯೋಚಿಸಬಹುದಿತ್ತು. ಸಾಧ್ಯವಾಗದಿದ್ದರೆ ತಾವಾದರೂ ಬದುಕಬಹುದಿತ್ತು. ಆದ್ದರಿಂದ ವ್ಯಾಮೋಹ ಒಳ್ಳೆಯದಲ್ಲ ಎಂದು ಹೇಳಬಹುದು.

34. ದಟ್ಟವಾದ ಕಾಡಿನ ಹೆಮ್ಮರದ ಪೊಟರೆಯಲ್ಲಿ ಪಾರಿವಾಳಗಳ ಜೋಡಿ ವಾಸವಾಗಿದ್ದವು. ಅವು ಪರಸ್ಪರ ಒಂದನ್ನೊಂದು ಬಿಟ್ಟಿರದಷ್ಟು ಪ್ರೀತಿ ಹೊಂದಿದ್ದವು. ಒಮ್ಮೆ ಹೆಣ್ಣು ಪಾರಿವಾಳವು ಮೊಟ್ಟೆಗಳನ್ನು ಇಟ್ಟಿತು. ಮೊಟ್ಟೆಗಳು ಒಡೆದು ಹೊರಬಂದು ಚಿಲಿಪಿಲಿ ಸದ್ದು ಮಾಡುವುದನ್ನು ಕೇಳುತ್ತಾ ಪಾರಿವಾಳಗಳು ಆನಂದದಿಂದ ಬಾಳುತ್ತಿದ್ದವು. ಹೀಗಿರುವಾಗ ಒಂದು ದಿನ ಒಬ್ಬ ಬೇಡನು ಬಲೆ ಹಾಕಿದನು. ಆಟವಾಡುತ್ತಿದ್ದ ಮರಿಗಳು ಬೇಡನು ಹಾಕಿದ ಬಲೆಗೆ ಸಿಕ್ಕಿಬಿದ್ದವು. ಬಿಡಿಸಿಕೊಳ್ಳಲು ಚೀತ್ಕರಿಸ ತೊಡಗಿದವು. ಬಲೆಗೆ ಸಿಲುಕಿದ ಪುಟ್ಟಪಾರಿವಾಳಗಳನ್ನು ಕಂಡ ತಾಯಿ ಪಾರಿವಾಳ ತಾನೂ ಬಲೆಗೆ ಧುಮುಕಿತು. ಹೆಣ್ಣು ಪಾರಿವಾಳವನ್ನು ಬಿಟ್ಟಿರಲಾರದ ಗಂಡು ಪಾರಿವಾಳವು ಕಣ್ಣೀರಿಡುತ್ತಾ ತಾನೂ ಬಲೆಯ ಒಳಗೆ ಹೋಯಿತು. ಹೀಗೆ ಜೋಡಿ ಪಾರಿವಾಳಗಳು ಕುರುಡು ವಾತ್ಸಲ್ಯ ಅವಿವೇಕದಿಂದ ತಾವೂ ಬಲೆಗೆ ಸಿಲುಕಿ ಬೇಡನ ಪಾಲಾದವು.

ಮೋಹ ಎಂಬುದು ಸರ್ವನಾಶಕ್ಕೆ ಕಾರಣ. ವ್ಯಾಮೋಹ ತೊರೆದು ತಾಳ್ಮೆಯಿಂದ ಯೋಚಿಸಿ ಕಾರ್ಯಸಾಧನೆ ಮಾಡಬೇಕು ಎಂಬುದೇ ಈ ಕಥನ ಕವನದ ಆಶಯವಾಗಿದೆ.

2. ಹೊಸಹಾಡು

I.

1. ಆಕಾಶ
2. ಶತಮಾನದಗಾನ
3. ವ
4. ದ
5. ಉತ್ತ
6. ಹೋಗುತ್ತಾನೆ
7.ಹೋದನು
8.ಹೋಗುವನು

II.

9. ಜುಗ
10. ಸೂರ್ಯ
11. ತರಂಗ
12. ಭವಿಷ್ಯತ್ ಕಾಲ

III.

13.ಕೈಯಾರ ಕಿಞ್ಞಣ್ಣರೈ.
14. ನವಭಾವ ನವಜೀವ ನವಶಕ್ತಿ ತುಂಬಿಸುವ ಹಾಡನ್ನು ಒಮ್ಮೆ ಹಾಡಬೇಕೆಂದು ಕವಿ ಬಯಸಿದ್ದಾರೆ.
15. ಜಾತಿ ಕುಲ ಮತಧರ್ಮ ಇವೆ ಮೊದಲಾದವು ಕಡಿದೊಗೆಯ ಬೇಕಾದ ಪಾಶಗಳು.
16. ಹಾಡು ನುಡಿ ಗುಂಡುಗಳು ಭಯದ ಬೆನ್ನಟ್ಟಬೇಕು.
17. ಜಡನಿದ್ರೆ ಸಿಡಿದೆದ್ದ ವೀರಟ್ಟಾಸದಲಿ ಬಾನು ಭುವಿ ಬೆಳಗಬೇಕು.
18. ಹೊಸಹಾಡು ಪದ್ಯದ ಆಕಾರ ಗ್ರಂಥ ಶತಮಾನದ ಗಾನ.

IV.

19. ನವಭಾವ ನವಜೀವ ನವಶಕ್ತಿ ತುಂಬಿಸುವ ಹಾಡನ್ನು ಹಾಡಬೇಕು. ತೀವ್ರತರವಾದ ಗಂಭೀರವಾದ ಭಾವನೆಗಳನ್ನು ಒಮ್ಮಿಸುವ ಅದರ ಅಲೆ ಎಲ್ಲಾ ಕಡೆ ಹರಡುವಂತಹ ಹಾಡು ಅದಾಗಿರಬೇಕು. ಹಾಡು ಬದುಕಿನ ಗತಿಯಲ್ಲಿ ಹೊಸಪ್ರಗತಿ ಪರ ಬದಲಾವಣೆ ತರುವಂತದ್ದಾಗಿರಬೇಕು ಹೊಸಚೇತನ ತುಂಬಬೇಕು ಅಂತಹ ಹಾಡನ್ನು ಹಾಡಿದಾಗ ವೀರಧ್ವನಿಯೇರಬೇಕು ಎಂದು ಕವಿ ಬಯಸಿದ್ದಾರೆ.

20. ಜಾತಿ ಕುಲ ಧರ್ಮಗಳ ಪಾಶವನ್ನು ಕಡಿದೊಗೆದು ಸಂತೋಷದಿಂದ ಹಾಡನ್ನು ಹಾಡಬೇಕು. ಆ ಹಾಡು ಯಾವುದೇ ಮಿತಿಗೆ ಒಳಪಡಬಾರದು. ಯುಗಯುಗಗಳ ಆಚೆ ಎಲ್ಲ ಲೋಕಗಳಲ್ಲಿ ಜಾತಿಧರ್ಮದ ಎಲ್ಲೆಯನ್ನು ಮೀರಿದ ಹಾಡು ಗುಡುಗಬೇಕು ಎಂದು ಕವಿ ಹೇಳಿದ್ದಾರೆ.

21. ಹಳೆಯ ಪಾಡನ್ನು ಮರೆಸುವಂತಹ ಕೊನೆಗೊಳಿಸುವಂತಹ ಹಾಡು ಇದಾಗಿದ್ದು ಇದು ಜನತೆಗೆ ಭರವಸೆಯನ್ನು ಗೌರವವನ್ನು ತರುವ ಹಾಡು ಇದಾಗಿದೆ ಆದ್ದರಿಂದ ಇದು ಹೊಸ ಹಾಡು ಎಂದು ಕವಿ ಹೇಳಿದ್ದಾರೆ.

22. ಬದುಕನ್ನು ನಿತ್ಯನೂತನವಾಗಿಸುವ ಹೊಸ ಚೈತನ್ಯ ಮೂಡಿಸುವ ಶಕ್ತಿ ತುಂಬುವ ಜಗತ್ತನ್ನೇ ಬೆಳಗಿಸುವ ಬದುಕಿನ ಗತಿಯನ್ನೇ ಬದಲಿಸುವ ಶಕ್ತಿ ಈ ಹಾಡಿಗೆ ಇದೆ.

V.

23. ಕೈಯಾರ ಕಿಞ್ಞಣ್ಣರೈ ಅವರು ಕ್ರಿಸ್ತಶಕ ೧೯೧೫ ಕಾಸರಗೋಡು ಜಿಲ್ಲೆಯ ಕೈಯಾರ ಗ್ರಾಮದವರು. ಶಿಕ್ಷಕ ಸಾಹಿತಿ ಪತ್ರಿಕೋದ್ಯಮಿ ಹಾಗೂ ಸ್ವಾತಂತ್ರ್ಯ ಹೋರಾಟಗಾರರಾಗಿ ಹಲವಾರು ಕ್ಷೇತ್ರಗಳಲ್ಲಿ ಗುರುತಿಸಿಕೊಂಡಿದ್ದರು. ಶ್ರೀಮುಖ ಐಕ್ಯಗಾನ ಪುನರ್ನವ ಚೇತನ ಮತ್ತು ಕರಗ ಗಂಧವತಿ-ಎಂಬ ಕವನಸಂಕಲನಗಳನ್ನು ರಚಿಸಿದ್ದಾರೆ. ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ನಾಡೋಜ ಪ್ರಶಸ್ತಿ ದೊರಕಿದೆ.

VI.

24. ಉಪಮೇಯ: ಗೀಜುಗನ ಗೂಡುಗಳು
ಉಪಮಾನ: ತೊಟ್ಟಿಲು
ಉಪಮವಾಚಕ: ಅಂತೆ
ಸಮಾನಧರ್ಮ: ತೂಗಾಡುವುದು
ಸಮನ್ವಯ: ಉಪಮೇಯವಾದ ಗೀಜಗನ ಗೂಡುಗಳನ್ನು ಉಪಮಾನವಾದ ತೊಟ್ಟಿಲಿಗೆ ಹೋಲಿಸಿ ವರ್ಣಿಸಲಾಗಿದೆ. 'ಅಂತೆ' ಎಂಬ ಉಪಮ ವಾಚಕಪದ, ತೂಗಾಡುವುದು ಎಂಬ ಸಮಾನಧರ್ಮ, ನಾಲ್ಕು ಅಂಶಗಳನ್ನು ತಿಳಿಸಿರುವುದರಿಂದ ಇದು ಪೂರ್ಣೋಪಮಾಲಂಕಾರ.
ಅಲಂಕಾರ: ಉಪಮಾಲಂಕಾರ

VII.

25. ಈ ಮೇಲಿನ ವಾಕ್ಯವನ್ನು ಕೈಯಾರ ಕಿಞ್ಞಣ್ಣರೈರವರು ಬರೆದ ಶತಮಾನದ ಗಾನ ಕವನಸಂಕಲನದಿಂದ ಆರಿಸಲಾದ ಹೊಸಹಾಡು ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನುಕವಿ ಹೇಳಿದ್ದಾರೆ.
ಸಂದರ್ಭ: ನವಭಾವ, ನವಜೀವ, ನವಚೇತನವನ್ನು ನೀಡುವ ಹಾಡನ್ನು ಹಾಡಬೇಕು. ತೀವ್ರವಾದ ಗಂಭೀರ ಭಾವನೆಯನ್ನು ಅಲೆಗಳ ರೀತಿ ಹರಡಿಸುವಂತೆ ವೀರಧ್ವನಿಯೇರಬೇಕು ಎಂದು ಕವಿ ಹೇಳಿದ್ದಾರೆ.
ಸಾರಸ್ಯ : ಹಾಡು ಗಂಭೀರವಾದ ವಿಚಾರಗಳನ್ನು ಹೊರಹೊಮ್ಮಿಸಿ ಹಾಡಿನ ವಿಚಾರಕ್ಕೆ ಸಹೃದಯರು ಸ್ಪಂದಿಸುವಂತಿರಬೇಕು ಎಂದು ಕವಿ ಅಪೇಕ್ಷಿಸಿದ್ದಾರೆ.

26. ಈ ಮೇಲಿನ ವಾಕ್ಯವನ್ನು ಕೈಯಾರ ಕಿಞ್ಞಣ್ಣರೈರವರು ಬರೆದ ಶತಮಾನದಗಾನ ಕವನ ಸಂಕಲನದಿಂದ ಆರಿಸಲಾದ ಹೊಸಹಾಡು ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಕವಿ ಹೇಳಿದ್ದಾರೆ
ಸಂದರ್ಭ: ಹಾಡಿಗೆ ಮಿತಿ ಅಥವಾ ಎಲ್ಲೇ ಇರಬಾರದು ಜಾತಿಕುಲ ಮತಧರ್ಮಪಾಶಗಳ ಬಂಧನ ಬಿಗಿದಿರಬಾರದು ಯುಗಗಳು ಕೊನೆಯದರೂ ಎಲ್ಲ ಲೋಕಗಳಲ್ಲೂ ಆ ಹಾಡು ಗುಡುಗಬೇಕು ಎಂದು ಕವಿ ಹೇಳಿದ್ದಾರೆ.
ಸ್ವಾರಸ್ಯ: ಹಾಡಿನ ವಿಚಾರಗಳು ಎಲ್ಲಾ ಕಡೆಯಲ್ಲೂ ಮಾಮಾರ್ದನಿಸಬೇಕು ಎಲ್ಲಾ ಲೋಕಗಳಲ್ಲಿ ಈ ಹಾಡು ಉಳಿಯುವಂತಿರಬೇಕು ಎಂಬುದು ಕವಿಯ ವಿಚಾರವಾಗಿದೆ.

27. ಈ ಮೇಲಿನ ವಾಕ್ಯವನ್ನು ಕೈಯಾರ ಕಿಞ್ಞಣ್ಣರೈರವರು ಬರೆದ ಶತಮಾನದ ಗಾನ ಕವನಸಂಕಲನದಿಂದ ಆರಿಸಲಾದ ಹೊಸಹಾಡು ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಕವಿ ಹೇಳಿದ್ದಾರೆ.
ಸಂದರ್ಭ: ಹಾಡು ಹೇಗಿರಬೇಕೆಂದರೆ ಸೋಮಾರಿತನದ ನಿದ್ರೆಯನ್ನು ಅದು ಹೊಡೆದೋಡಿಸಬೇಕು ಅಟ್ಟಹಾಸದಿಂದ ಭಾನುಭುವಿಗಳಲ್ಲಿ ಜಾಗೃತಿಯನ್ನು ಮೂಡಿಸುವಂತಹ ಹಾಡು ಅದಾಗಿರಬೇಕು ಎಂದು ಕವಿ ಹೇಳಿದ್ದಾರೆ.
ಸ್ವಾರಸ್ಯ: ಜಗತ್ತಿನ ಜನರ ಅಜ್ಞಾನವನ್ನು ಹೋಗಲಾಡಿಸಿ ಎಚ್ಚರಿಕೆ ಮೂಡಿಸುವ ಹಾಡು ಹೊಮ್ಮಲಿ ಎಂದು ಕವಿ ಹೇಳಿದ್ದಾರೆ.

28. ಈ ಮೇಲಿನ ವಾಕ್ಯವನ್ನು ಕೈಯಾರ ಕಿಞ್ಞಣ್ಣರೈರವರು ಬರೆದ ಶತಮಾನದ ಗಾನ ಕವನ ಸಂಕಲನದಿಂದ ಆರಿಸಲಾದ ಹೊಸಹಾಡು ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಕವಿ ಹೇಳಿದ್ದಾರೆ.
ಸಂದರ್ಭ : ನಮ್ಮ ನಡೆನುಡಿಗಳಲ್ಲಿ ಜಾಗೃತಿ ಮೂಡಿಸುವ ಹೆಜ್ಜೆಹೆಜ್ಜೆಗೂ ಎಚ್ಚರಿಸುವ ಕ್ರಾಂತಿಯನ್ನು ಉಂಟು ಮಾಡುವಂತಹ ಹಾಡು ಮೂಡಬೇಕು ಎಂದು ಕವಿ ಹೇಳಿದ್ದಾರೆ.
ಸಾರಸ್ಯ: ಜನರ ನಡೆ-ನುಡಿಯಲ್ಲಿ ಜಾಗೃತಿ ಹುಟ್ಟಿಸುವ ಅವರ ವ್ಯಕ್ತಿತ್ವ ವಿಚಾರಗಳಲ್ಲಿ ಬದಲಾವಣೆ ತರುವ ಹಾಡು ಇದಾಗಿರಬೇಕು ಎಂದು ಕವಿ ಹೇಳಿದ್ದಾರೆ.

29. ಈ ಮೇಲಿನ ವಾಕ್ಯವನ್ನು ಕೈಯಾರ ಕಿಞ್ಞಣ್ಣರೈರವರು ಬರೆದ ಶತಮಾನದ ಗಾನ ಕವನ ಸಂಕಲನದಿಂದ ಆರಿಸಲಾದ ಹೊಸಹಾಡು ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಕವಿ ಹೇಳಿದ್ದಾರೆ.
ಸಂದರ್ಭ: ನಮ್ಮಭಾವ ನವಜೀವ ನವಶಕ್ತಿ ತುಂಬಿಸುವ ಹೊಸಹಾಡು ಆಡಬೇಕು ಈ ರೀತಿ ಹಾಡು ಮೊದಲು ಇಲ್ಲ ಇದೇ ಹೊಸತು ಇದೆ ಮೊದಲು ಹಳೆಯ ವ್ಯಥೆ ಎಲ್ಲವೂ ಕರಗುವಂತೆ ಹೊಸದಾದ ಹೊಸಹಾಡು ಎಂದು ಕವಿ ಹೇಳಿದ್ದಾರೆ .
ಸಾರಸ್ಯ : ಹಾಡಿನ ಭಾವಕ್ಕೆ ಹಳೆಯ ಚಿಂತೆಗಳು ಕೊನೆಗೊಂಡು ಹೊಸಶಕ್ತಿಯನ್ನು ಹೊಮ್ಮಿಸುವಂತಿರಬೇಕು ಎಂಬುದು ಕವಿಯ ಆಶಯವಾಗಿದೆ.

VIII.

30. ನವಭಾವ ನವಜೀವ ನವಶಕ್ತಿ ತುಂಬಿಸುವ
ಹಾಡೊಮ್ಮೆ ಹಾಡಬೇಕು
ತೀವ್ರತರ ಗಂಭೀರ ಭಾವನೆಯ ತೆರೆಮಸಗಿ
ವೀರಧ್ವನಿಯೇರಬೇಕು .

31 ಜಾತಿಕುಲ ಮತಧರ್ಮ ಪಾಶಗಳ ಕಡಿದೊಗೆದು
ಎದೆ ಹಿಗ್ಗಿ ಹಾಡಬೇಕು
ಯುಗಯುಗಗಳ ಆಚೆಯಲ್ಲಿ ಲೋಕಲೋಕಾಂತದಲಿ
ಆ ಹಾಡು ಗುಡುಗಬೇಕು.

IX.

32 ಈ ಪದ್ಯವನ್ನು ಕೈಯಾರ ಕಿಯಣ್ಣರೈರವರು ಬರೆದಿರುವ ಹೊಸಹಾಡು ಪದ್ಯದಿಂದ ಆರಿಸಲಾಗಿದೆ. ಈ ಪದ್ಯದಲ್ಲಿ ನಾವು ಆಡುವಂತಹ ಹಾಡು ಎಲ್ಲಿ ಹಾಡಬೇಕು. ಅಂದರೆ ಉನ್ನತವಾದ ಅಂದರೆ ಎತ್ತರವಾದ ಶ್ರೇಷ್ಠವಾದ ಹಿಮಾಲಯದ ಪರ್ವತವನ್ನು ಅತ್ತಿ ಅಲ್ಲಿ ಹಾಡನ್ನು ಹಾಡಬೇಕು. ಈ ಹಾಡು ಹೇಗಿರಬೇಕೆಂದರೆ ಈ ಹಾಡಿನ ಸಾಹಿತ್ಯ ಕೇಳಿಸಿಕೊಂಡವರಿಗೆ ಗುಂಡಿನ ಸದ್ದಿನ ರೀತಿ ತುಂಬಾ ಜೋರಾಗಿ ಹತ್ತುದಿಕ್ಕುಗಳಲ್ಲೂ ಕೂಡ ಈ ಹಾಡು ಪಸರಿಸಿ ಜನರ ಮನಸ್ಸಿನಲ್ಲಿರುವ ಭಯವನ್ನು ಹೋಗಲಾಡಿಸುವಂತೆ ಈ ಹಾಡು ಇರಬೇಕು ಮೌಲ್ಯ ಅಥವಾ ಮಹತ್ವ ಈ ಪದ್ಯದ ಮೂಲಕ ಜನರಲ್ಲಿ ಹಾಡಿನ ಶ್ರೇಷ್ಠತೆ ತಿಳಿಸುತ್ತಾ ಭಯ ಎಲ್ಲವನ್ನು ಹೋಗಲಾಡಿಸಿ ಐಕ್ಯತೆ ಮೂಡಿಸುವಂತಹ ಹಾಡು ಹಾಡಬೇಕು ಎಂಬುದು ತಿಳಿಯುತ್ತದೆ.

33. ಬದುಕಿಗೆ ಹೊಸತಿರುವನ್ನುನೀಡಬಲ್ಲ, ಹೊಸಆಶಯವನ್ನು, ಜೀವನದ ಗತಿಯನ್ನು ಬದಲಿಸಿ ಹೊಸಹುರುಪನ್ನು ತುಂಬಬಲ್ಲ, ಹಳೆಯ ಮೌಢ್ಯವನ್ನು ಕಡಿದೊಗೆದು ಹೊಸಭಾವನೆಗಳನ್ನು ಸೃಜಿಸಬಲ್ಲ ಹೊಸ ಹಾಡನ್ನು ಹಾಡಬೇಕು. ನಮ್ಮನ್ನು ಬಿಗಿದಿರುವ ಜಾತಿ-ಕುಲ-ಮತ-ಧರ್ಮ ಎಂಬ ಪಾಶಗಳನ್ನು ಕತ್ತರಿಸಿ ಉತ್ಸಾಹದಿಂದ ಹಾಡಬೇಕು. ಆ ಸಮಾನತಾ ಭಾವವು ಯುಗಯುಗಗಳಲ್ಲಿ ಜಗತ್ತಿನ ಮೂಲೆಮೂಲೆಯನ್ನು ತಲುಪಬೇಕು. ಆ ಹೊಸಹಾಡನ್ನು ಉನ್ನತ ಶಿಖರದ ತುದಿಯಲ್ಲಿ ನಿಂತು ಹಾಡಿದಾಗ ಅದರ ನುಡಿಗುಂಡುಗಳು ದಶ ದಿಕ್ಕಿಗೂಸಿಡಿದು ಜನರಲ್ಲಿ ತುಂಬಿರುವ ಭಯವನ್ನು ಓಡಿಸಬೇಕು.

34. ಗಂಡೆದೆಯ ಗರ್ಜನೆಗೆ ನಮ್ಮದೇಶದ ಕೋಟ್ಯಂತರ ಜನರು ದನಿಗೂಡಿಸಬೇಕು. ಆ ಒಕ್ಕೊರಲಿನ ಏಕತಾ ಭಾವದ ಪ್ರತಿಧ್ವನಿಯು ಭೂಮಿ-ಆಕಾಶವನ್ನು ಆವರಿಸಬೇಕು. ಜಡತ್ವದಿಂದ ಕೂಡಿರುವ ಜನರು ಎಚ್ಚೆತ್ತು ಅಂಧಕಾರದ ಕತ್ತಲೆಯಿಂದ ಆವರಿಸಲ್ಪಟ್ಟಿರುವ ಬಾನು-ಭೂಮಿಯನ್ನು ಬೆಳಗಬೇಕು. ಪ್ರತಿಯೊಬ್ಬರ ನಡೆ-ನುಡಿಯಲ್ಲಿ ಕ್ರಾಂತಿಯ ಕಿಡಿ ಕೆರಳಬೇಕು.
ಜಯವನ್ನು ಹೊಂದಿದ ಮಾತೆಯೇ ನೀನು ಹೆದರದೆ ಧೈರ್ಯದಿಂದ ತಲೆ ಎತ್ತಿನೋಡು. ಹಿಂದಿನ ಪಾಡು ಹಿಂದೆಯೇ ಮುಗಿಯಿತು. ಇದೇ ಮೊದಲು. ಇದಕ್ಕಿಂತ ಮುಂಚೆ ಇಂತಹ ಹಾಡು ಇರಲಿಲ್ಲ. ಆದ್ದರಿಂದ ಇಂದು ಇದೇ ಹೊಸಹಾಡು ಎಂದು ಹೇಳುತ್ತಾ ಹೊಸ ಹುರುಪನ್ನು ತುಂಬುವ ಹಾಡು ಇದಾಗಿದೆ. ಇಂತಹ ಸ್ಫೂರ್ತಿಯ ಚಿಲುಮೆಯಾಗುವ ಹಾಡನ್ನು ಹಾಡಬೇಕು, ಅದು ನಿತ್ಯನೂತನವಾಗಿರಬೇಕೆಂಬುದು ಪದ್ಯದ ಆಶಯವಾಗಿದೆ.

****

3. ಚಕ್ರಗ್ರಹಣ

1. **ಬಿ)** ದ್ವಿತೀಯಾ
2. ಎ) ಸಂಬಂಧ
3. ಸಿ) ತೃತೀಯಾ
4. ಸಿ) ಕ್ರೋಧಗೊಂಡು
5. ಡಿ)ಬಹುವ್ರೀಹಿ
6 . ಎ) ಕಂಠವನಿರಿ
7. ಬಿ) ಲೋಪ
8. ಡಿ) ಕಡಿವಾಣ
II.
9. ಯುದ್ಧ
10. ಇಂದ್ರ
11. ಹರ್ಷ
12. 5 ಮಾತ್ರೆ
13. ಅಪಾದಾನ
14. ಶಿವ
15. ಕುಮಾರವ್ಯಾಸ

16. ಪಾರ್ಥನು ಬಾಣದಿಂದ ಭೀಷ್ಮರಿಗೆ ವಂದಿಸಿದನು.
17. ಎಳೆಯರೊಡನೆ ಯುದ್ಧ ಮಾಡುವುದು ವಿವೇಕವೇ **?** ನಮ್ಮಿಬ್ಬರಲ್ಲಿ ಭೇದ ತೋರುವುದು ಸರಿಯೇ **?** ಎಂದು ಕೇಳಿದನು.
18. ಪರಶುರಾಮರಿಂದ ಶರವನ್ನು ಪಡೆದವರು ಭೀಷ್ಮರು.
19. ಕೃಷ್ಣನು ಚಕ್ರವನ್ನು ಹಿಡಿದಾಗ ಚತುರ್ದಶ ಭುವನ ತಲ್ಲಣಿಸಿತು .
20. ಚಕ್ರಗ್ರಹಣ ಪದ್ಯದ ಪ್ರಮುಖ ಆಕರ ಗ್ರಂಥ ಕುಮಾರವ್ಯಾಸಭಾರತ.
21. ಚಕ್ರಗ್ರಹಣ ಪದ್ಯ ಕುರುಕ್ಷೇತ್ರ ಯುದ್ಧದ ಮೂರನೇ ದಿನದ ವಿದ್ಯಮಾನವನ್ನು ವರ್ಣಿಸುತ್ತದೆ.

22. ಕುರುಕ್ಷೇತ್ರ ಯುದ್ಧದಲ್ಲಿ ಕೃಷ್ಣನು ತಾನು ಚಕ್ರವನ್ನು ಹಿಡಿಯುವುದಿಲ್ಲ ಎಂದು ಪ್ರತಿಜ್ಞೆ ಮಾಡಿದ್ದನು.

23. ಹರಿಯೇ ಕೇಳು, ಈ ದಿನ ನಮ್ಮ ಹಿರಿಯರೊಂದಿಗೆ ಯುದ್ಧ ಮಾಡುವ ಸಂದರ್ಭ ದೊರಕಿದೆ. ನಾನು ಅವರಿಗೆ ಬಾಣಗಳಿಂದ ವಂದಿಸುವೆ. ನನ್ನ ಪರಾಕ್ರಮವನ್ನು ಪರೀಕ್ಷಿಸು ಎನ್ನುತ್ತಾನೆ.

24. ಭೀಷ್ಮನು ಅರ್ಜುನನಿಗೆ ಶಿವನು ಕೊಟ್ಟ ಬಾಣವನ್ನು ಪ್ರಯೋಗಿಸಲು ಹೇಳುತ್ತಾರೆ.

25. ಭೀಷ್ಮರು ಕೃಷ್ಣನಿಗೆ "ಎನಗೆ ನಗೆಯು ಬಂತು" ಎಂದು ಹೇಳಲು ಕಾರಣ ಹುಲ್ಲುಕಡ್ಡಿಯನ್ನು ಮುರಿಯುವುದಕ್ಕೆ ಕೊಡಲಿಯು ಬೇಕೆ? ನನ್ನನ್ನು ಕೊಲ್ಲಲು ಚಕ್ರಬೇಕೆ? ಅದು ನನ್ನ ದೇಹದಲ್ಲಿನ ಒಂದು ಕೂದಲನ್ನು ಕತ್ತರಿಸಿದರೆ ನಾನು ನಿಮಗೆ ಶರಣಾಗುತ್ತೇನೆ .

26. - ಭೀಷ್ಮರು ಕ್ರೋಧಗೊಳ್ಳಲು ಕಾರಣ ಯುದ್ಧದಲ್ಲಿ ಅರ್ಜುನನ ಬಾಣ ಪ್ರಯೋಗದ ವೈಖರಿಯನ್ನು ಕಂಡ ಭೀಷ್ಮರು ಅರ್ಜುನನ್ನು ಮೆಚ್ಚಿ, ತಾವು ಸಹಬಾಣಗಳನ್ನು ಪ್ರಯೋಗಿಸುತ್ತಾರೆ. ಆದರೆ ಕೃಷ್ಣನು ಅರ್ಜುನನ ಸಾರಥಿಯಾಗಿರುವುದರಿಂದ ಆತನಿಗೆ ಅಪಜಯ ಆಗಲಿಲ್ಲ. ಆದ್ದರಿಂದ ಹೇಗಾದರು ಮಾಡಿ ನಾನು ಕೃಷ್ಣನನ್ನು ಗೆಲ್ಲುವೆನೆಂದು ಭೀಷ್ಮರು ಕ್ರೋಧಗೊಂಡರು.

27. ಭೀಷ್ಮರು ಅರ್ಜುನನ ರಥದ ಸಾರಥಿಯಾದ ಶ್ರೀಕೃಷ್ಣನ ಮೇಲೆ ಪರಶುರಾಮರು ನೀಡಿದ ಬಾಣವನ್ನು ಹೂಡಿದರು. ಆ ಬಾಣದಿಂದ ಶ್ರೀಕೃಷ್ಣನ ಹಣೆಯು ಬಿರಿಯಿತು. ಇದರಿಂದ ಕೋಪಗೊಂಡ ಶ್ರೀಕೃಷ್ಣನು ತನ್ನ ದವಡೆಯನ್ನು ಕಚ್ಚಿ ಹಿಡಿದು ಬಹಳ ರೋಷದಿಂದ ಕುರುಬಲವನ್ನು ಅರೆಯುವ ಕಲ್ಲಿನಲ್ಲಿಟ್ಟು ಜಜ್ಜುವೆನು; ಭೀಷ್ಮರನ್ನು ನಾಶಮಾಡುವೆನು. ಈರೇಳು ಲೋಕವು ಬಂದರೂ ಬ್ರಹ್ಮ, ಮಹೇಶ, ಇಂದ್ರ , ವೈವಸ್ವತರು ಬಂದರೂ ಬಿಡೆನು ಎಂದು ಗರ್ಜಿಸುತ್ತಾ ಕುದುರೆಯ ಕಡಿವಾಣವನ್ನು ಬಿಸುಟು ಚಕ್ರವನ್ನು ಹಿಡಿದು ರಥದಿಂದ ಧುಮುಕಿದಾಗ ನಾಲ್ಕುದಿಕ್ಕುಗಳಲ್ಲಿ ತಲ್ಲಣವುಂಟಾಯಿತು.

28. ಕೃಷ್ಣನ ಕ್ರೋಧವನ್ನು ನೋಡಿ ಕೌರವ ಪಾಂಡವರೆರಡೂ ಪಕ್ಷದಲ್ಲಿದ್ದವರು ಬೆರಗಾಗಿ ಭಯದಿಂದ ಕಣ್ಣನ್ನು ಮುಚ್ಚಿರಲು ಭೀಷ್ಮರು ಬೆದರಿ ರಥದಿಂದಿಳಿದು ಕೃಷ್ಣನ ಬಳಿಗೆ ಬರುತ್ತಾರೆ. ಅವನ ಕೋಪವೆಂಬ ಬೆಂಕಿಯನ್ನು ಆರಿಸಲು ಭೀಷ್ಮರು ಲಕ್ಷ್ಮೀಪತಿ, ಮುಕುಂದ, ಮುರಾರಿ ನಿನಗೆ ಜಯವಾಗಲಿ ಎನ್ನುತ್ತಾ, ಕೃಷ್ಣನ ಪಾದಗಳಿಗೆ ನಮಸ್ಕರಿಸಿ ಅವನ ಮೃದುವಾದ ಕೈಯನ್ನು ಹಿಡಿದು ಅವನಲ್ಲಿ ನಿವೇದಿಸಿಕೊಂಡನು.

29. ಶ್ರೀಮನೋಹರಸ್ವಾಮಿ, ನಿನಗೆ ಜಯವಾಗಲಿ, ಪ್ರೇಮದಿಂದ ನನ್ನ ಮಾತನ್ನು ಆಲಿಸಿ ಲೋಕವನ್ನು ರಕ್ಷಿಸು ದೇವ, ನಿನ್ನ ಸೇವಕತ್ವವನ್ನು ಕರುಣಿಸು. ನಾನು ಕೌರವ ಪಾಂಡವರ ಜಗಳವನ್ನು ನೋಡಲಾರೆ, ಈ ದೇಹ ಎಂದಾದರೂ ಅಳಿಯುವುದೇ ಆಗಿದೆ, ಅದು ನಿನ್ನಿಂದಲೇ ನಾಶವಾಗಲಿ. ಹುಲ್ಲನ್ನು ಕಡಿಯಲು ಕೊಡಲಿಯುಬೇಕೆ? ನಿನ್ನ ಚಕ್ರವು ನನ್ನ ಒಂದು ರೋಮವನ್ನು ಕತ್ತರಿಸಿದರೂ ನಾನು ನಿನಗೆ ಶರಣಾಗುವೆನು ಎಂದು ನಿವೇದಿಸಿಕೊಂಡನು.

30. ತನ್ನೆಡೆಗೆ ಬಾಣವನ್ನು ಬಿಟ್ಟ ಭೀಷ್ಮರಿಗೆ ಅರ್ಜುನನು ನಗುತ್ತಾ ಭೀಷ್ಮರನ್ನು ಕುರಿತು ಹೀಗೆ ಹೇಳಿದನು- ನಾವು ತಂದೆಯನ್ನು ಕಳೆದು ಕೊಂಡ ದಿನದಿಂದ ನಮ್ಮನ್ನು ನೀವೇ ರಕ್ಷಿಸಿ, ಇಂದು ಕೌರವರಿಗೆ ಸಹಾಯ ಮಾಡಲು ಬಂದಿದ್ದೀರಾ? ಚಿಕ್ಕ ಮಕ್ಕಳೊಂದಿಗೆ ಹೋರಾಡುವುದು ವಿವೇಕವೇ? ಈ ಎರಡು ಪಕ್ಷಗಳಲ್ಲಿ ಇರುವವರು ನಿಮ್ಮ ಮಕ್ಕಳೇ ಆಗಿರುವಾಗ ನಮ್ಮಲ್ಲಿ ಭೇದ ತೋರುವುದು ಸರಿಯೇ ? ಎಂದು ಹೇಳಿದನು .

31. ಭೀಷ್ಮರು ಕೃಷ್ಣನ ಮೇಲೆ ತಾನು ಪರಶುರಾಮರಿಂದ ಪಡೆದ ಬಾಣವನ್ನು ಪ್ರಯೋಗಿಸಿದಾಗ ಬೆಂಕಿಯ ಜ್ವಾಲೆಯನ್ನು ಉಗುಳುವ ಆ ಬಾಣವು ಕೃಷ್ಣನ ಹಣೆಗೆ ನಾಟಿತು. ಕುದುರೆಗಳು ಹೊರಳಿದವು. ರಥದ ಧ್ವಜದಲ್ಲಿದ್ದ ಹನುಮನು ಹೆದರಿದನು. ರಥವು ತಿರುಗಿತು. ಆ ಕ್ಷಣದಲ್ಲಿ ಕೃಷ್ಣನ ಹಣೆ ಬಿರಿದು ರಕ್ತ ಹರಿಯಿತು.

IV

32. **ದೇವಿದಾಸ** .

ಕವಿ ದೇವಿದಾಸರು ಅದ್ಭುತ ರಂಗಪ್ರಜ್ಞೆವುಳ್ಳವರು . ಇವರ ಕಾಲ ಸುಮಾರು **1800.** ಇವರು ರಚಿಸಿರುವ ಕೃತಿಗಳು- ದೇವಿ ಮಹಾತ್ಮೆ, ಗಿರಿಜಾ ಕಲ್ಯಾಣ, ಚಿತ್ರಸೇನ ಕಾಳಗ, ದ್ರೌಪದಿ ಕಲ್ಯಾಣ, ಕೃಷ್ಣಸಂಧಾನ- ಭೀಷ್ಮಪರ್ವ ಮತ್ತು ಅಭಿಮನ್ಯು ಕಾಳಗ. ದೇವಿ ಮಹಾತ್ಮೆ ಪ್ರಸಂಗದ ಪದ್ಯಗಳಲ್ಲಿ ಒಗಟಿನ ರೂಪದಲ್ಲಿ ತಮ್ಮ ಬಗ್ಗೆ ಹೇಳಿ ಕೊಂಡಿದ್ದಾರೆ.

V

33.
U U U U U _ U _ U U U _ U U U U U
ನೊಸಲೊಡೆದು | ರಕ್ತಸೂ | ಸಲುದ್ರುಗು | ದ್ವಯದಿಕಿಡಿ |
U U U _ UU U U U _ U _ U U U U U
ಮಸಗಲೌ | ಡಗಿದುಘನ | ರೋಷದಿಂ | ಕುರುಬಲವ|
U U U U U _ U UU _ U U U _ _ U U U U U U U U - U -
ನಸಿಯರೆದು | ಭೀಷ್ಮನವಿ | ಭಾಡಿಸುವ | ನೀರೇಳು | ಜ ಗ ವೆ ರ ಸಿ | ಶತಕೋಟಿ | ಯ
ಛಂದಸ್ಸು: ವಾರ್ಧಕ ಷಟ್ಪದಿ.

34.
U UU U U UU - U - U U
ಎನಲು| ಕಿರುನಗೆ | ಗೂಡಿ | ಚಕ್ರುವ |
U UU - U U - U UU -
ದನುಜ | ದಲ್ಲಣ | ಮುಚ್ಚಿ| ವರಸ್ಯಂ |
U UU - U U - U UU UU - U - U U -
ದನವ | ನೇರಿಕಿ | ರೀಟಿ | ಗಭಯವ | ನೀಯ | ಲಚ್ಯುತ | ನ ||
ಛಂದಸ್ಸು : ಭಾಮಿನಿ ಷಟ್ಪದಿ

35. ಆಯ್ಕೆ **:** ಪ್ರಸ್ತುತ ಈ ವಾಕ್ಯವನ್ನು ದೇವಿದಾಸರವರು ಬರೆದಿರುವ ಕೃಷ್ಣಸಂಧಾನ **–** ಭೀಷ್ಮಪರ್ವದಿಂದ ಆರಿಸಲಾದ 'ಚಕ್ರ ಗ್ರಹಣ 'ಎಂಬ ಪದ್ಯಭಾಗದಿಂದ ಆಯ್ಕೆ ಮಾಡಿಕೊಳ್ಳಲಾಗಿದೆ.
ಸಂದರ್ಭ **:** ಈ ಮಾತನ್ನುಅರ್ಜುನ ಭೀಷ್ಮರಿಗೆ ಹೇಳಿದನು. ಮಹಾಭಾರತ ಯುದ್ದದಲ್ಲಿ ತನಗೆ ಎದುರಾಗಿ ನಿಂತ ಭೀಷ್ಮರನ್ನು ನಮ್ಮನ್ನು ರಕ್ಷಿಸಿದ ನೀವೇ ಈಗ ಕೌರವನ ಪಕ್ಷದಲ್ಲಿದ್ದು ಪಾಡವರೊಡನೆ ಯುದ್ದ ಮಾಡುವುದು ಸರಿಯೇ**?** ಎಂದು ಕೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.
ಸ್ವಾರಸ್ಯ**: -** ಪಾಂಡವ ಕೌರವರಿಬ್ಬರನ್ನು ಸಾಕಿಸಲಹಿದ ಭೀಷ್ಮರು ಇಂದು ಕೇವಲ ಕೌರವರ ಪಕ್ಷದಲ್ಲಿದ್ದು ಪಾಂಡವರ ವಿರುದ್ದ ಯುದ್ದ ಮಾಡುವುದು ಎಷ್ಟು ಸರಿ ಎಂಬುದು ಈ ವಾಕ್ಯದ ಸ್ವಾರಸ್ಯವಾಗಿದೆ **.**

36. ಆಯ್ಕೆ **:** ಪ್ರಸ್ತುತ ಈ ವಾಕ್ಯವನ್ನು ದೇವಿದಾಸರವರು ಬರೆದಿರುವ ಕೃಷ್ಣಸಂಧಾನ **–** ಭೀಷ್ಮಪರ್ವದಿಂದ ಆರಿಸಲಾದ 'ಚಕ್ರ ಗ್ರಹಣ 'ಎಂಬ ಪದ್ಯಭಾಗದಿಂದ ಆಯ್ಕೆ ಮಾಡಿಕೊಳ್ಳಲಾಗಿದೆ.
ಸಂದರ್ಭ **:** ಕೃಷ್ಣನು ಭೀಷ್ಮರನ್ನು ಬಿಡೆನು ಎಂದು ಚಕ್ರವನ್ನು ಹಿಡಿದಾಗ ಭೂಮಿಯ ನಾಲ್ಕು ದಿಕ್ಕುಗಳಲ್ಲೂ ತಲ್ಲಣ ಉಂಟಾಯಿತು ಎಂದು ಹೇಳುವಾಗ ಈ ಮಾತು ಬಂದಿದೆ.
ಸ್ವಾರಸ್ಯ **:-** ತಾನು ಯುದ್ದದಲ್ಲಿ ಶಸ್ತ್ರವನ್ನು ಹಿಡಿಯುವುದಿಲ್ಲ ಎಂದ ಕೃಷ್ಣನು ಕೋಪಗೊಂಡು ಚಕ್ರವನ್ನು ಹಿಡಿದು ಯುದ್ದಕ್ಕೆ ಸಿದ್ದನಾಗಿರುವುದು ಇಲ್ಲಿ ಸ್ವಾರಸ್ಯ ಪೂರ್ಣವಾಗಿ ವ್ಯಕ್ತವಾಗಿದೆ.

37. ಆಯ್ಕೆ **:** ಪ್ರಸ್ತುತ ಈ ವಾಕ್ಯವನ್ನು ದೇವಿದಾಸರವರು ಬರೆದಿರುವ ಕೃಷ್ಣಸಂಧಾನ **–** ಭೀಷ್ಮಪರ್ವದಿಂದ ಆರಿಸಲಾದ 'ಚಕ್ರ ಗ್ರಹಣ 'ಎಂಬ ಪದ್ಯಭಾಗದಿಂದ ಆಯ್ಕೆ ಮಾಡಿಕೊಳ್ಳಲಾಗಿದೆ.
ಸಂದರ್ಭ**:** ಭೀಷ್ಮರು ಶ್ರೀಕೃಷ್ಣನ ಕ್ರೋಧಕ್ಕೆ ಪ್ರತಿಕ್ರಿಸುವ ಸಂದರ್ಭದಲ್ಲಿ ಕೃಷ್ಣನಿಗೆ ಈ ಮಾತನ್ನು ಹೇಳುತ್ತಾರೆ.
ಸ್ವಾರಸ್ಯ **:** ಭೀಷ್ಮರು ಶ್ರೀಕೃಷ್ಣನಲ್ಲಿಇಟ್ಟಿರುವ ಭಕ್ತಿ ಮತ್ತು ಕೃಷ್ಣನ ಮಹಿಮೆ ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

38. ಆಯ್ಕೆ **:** ಪ್ರಸ್ತುತ ಈ ವಾಕ್ಯವನ್ನು ದೇವಿದಾಸರವರು ಬರೆದಿರುವ ಕೃಷ್ಣಸಂಧಾನ **–** ಭೀಷ್ಮಪರ್ವದಿಂದ ಆರಿಸಲಾದ 'ಚಕ್ರ ಗ್ರಹಣ 'ಎಂಬ ಪದ್ಯಭಾಗದಿಂದ ಆಯ್ಕೆ ಮಾಡಿಕೊಳ್ಳಲಾಗಿದೆ.
ಸಂದರ್ಭ **:-** ಭೀಷ್ಮರು ಶ್ರೀಕೃಷ್ಣನು ಕ್ರೋಧಗೊಂಡಾಗ ಅವರ ಕೈಯನ್ನು ಹಿಡಿದು ಭಕ್ತಿಯಿಂದ ನಿವೇದಿಸಿ ಕೊಳ್ಳುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.
ಸ್ವಾರಸ್ಯ **:-** ಕೃಷ್ಣನ ಮುಂದೆ ತಾನು ಅತ್ಯಲ್ಪನೆಂದು ಮತ್ತು ಕೃಷ್ಣನಿಂದ ಮೋಕ್ಷ ಹೊಂದುವುದರಲ್ಲಿ ಶ್ರೇಷ್ಠತೆ ಇದೆ ಎಂದು ಭೀಷ್ಮರು ಹೇಳಿರುವುದು ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

39. ಆಯ್ಕೆ : ಪ್ರಸ್ತುತ ಈ ವಾಕ್ಯವನ್ನು ದೇವಿದಾಸರವರು ಬರೆದಿರುವ ಕೃಷ್ಣಸಂಧಾನ – ಭೀಷ್ಮಪರ್ವದಿಂದ ಆರಿಸಲಾದ 'ಚಕ್ರ ಗ್ರಹಣ 'ಎಂಬ ಪದ್ಯಭಾಗದಿಂದ ಆಯ್ಕೆ ಮಾಡಿಕೊಳ್ಳಲಾಗಿದೆ.

ಸಂದರ್ಭ: ಅರ್ಜುನನು ಭೀಷ್ಮರನ್ನು ಕುರಿತು ಕೌರವರು ಮತ್ತು ನಾವು ನಿಮ್ಮದೇ ಮೊಮ್ಮಕ್ಕಳಾಗಿರುವಾಗ ನೀವು ನಮ್ಮಲ್ಲಿ ಭೇದ ಮಾಡುವುದು ಸರಿಯೇ**?** ಎಂದು ಪ್ರಶ್ನಿಸಿದಾಗ ಅವನಿಗೆ ಉತ್ತರಿಸುತ್ತಾ, ಭೀಷ್ಮಾಚಾರ್ಯರು ನಿಮ್ಮ ಬಗ್ಗೆ ನನಗೆ ಇರುವುದು ಯಾವ ಭಾವ**?** ಎಂಬುದು ನನಗೆ ತಿಳಿದಿದೆ ಎಂದು ಮೇಲಿನಂತೆ ಹೇಳುತ್ತಾರೆ.

ಸ್ವಾರಸ್ಯ: ಪಾಂಡವರ ಬಗ್ಗೆ ತನಗಿರುವ ಭಾವನೆ ಯಾವುದು**?** ಎಂಬುದು ಶ್ರೀಕೃಷ್ಣನಿಗೆ ತಿಳಿದಿದೆ ಎಂದು ಭೀಷ್ಮಾಚಾರ್ಯರು ಹೇಳುವುದು ಇಲ್ಲಿನ ಸ್ವಾರಸ್ಯವಾಗಿದೆ.

40. ಆಯ್ಕೆ : ಪ್ರಸ್ತುತ ಈ ವಾಕ್ಯವನ್ನು ದೇವಿದಾಸರವರು ಬರೆದಿರುವ ಕೃಷ್ಣಸಂಧಾನ – ಭೀಷ್ಮಪರ್ವದಿಂದ ಆರಿಸಲಾದ 'ಚಕ್ರ ಗ್ರಹಣ 'ಎಂಬ ಪದ್ಯಭಾಗದಿಂದ ಆಯ್ಕೆ ಮಾಡಿಕೊಳ್ಳಲಾಗಿದೆ.

ಸಂದರ್ಭ: ಯುದ್ಧಭೂಮಿಯಲ್ಲಿ ಭೀಷ್ಮಾಚಾರ್ಯರು ಪ್ರಯೋಗಿಸಿದ ಬಾಣದಿಂದ ಕೃಷ್ಣನ ಹಣೆಯಲ್ಲಿ ರಕ್ತ ಬಂದಾಗ, ಕ್ರೋಧಿತನಾದ ಕೃಷ್ಣನು ಸುದರ್ಶನ ಚಕ್ರವನ್ನು ಕೈಯಲ್ಲಿ ಹಿಡಿದು ಭೀಷ್ಮನನ್ನು ಕೊಲ್ಲಲು ಮುಂದಾಗುತ್ತಾನೆ. ಯುದ್ಧಭೂಮಿಯಲ್ಲಿ ಎಲ್ಲರೂ ಭಯಭೀತರಾಗಿದ್ದಾಗ ಭೀಷ್ಮರು ಕೃಷ್ಣನ ಬಳಿ ಬಂದು, ಕೃಷ್ಣನನ್ನು ಓಲೈಸುವ ಸಂದರ್ಭ ಇದಾಗಿದೆ.

ಸ್ವಾರಸ್ಯ :- ಕೃಷ್ಣನ ಮೇಲೆ ಬಾಣ ಪ್ರಯೋಗಮಾಡಿದ ಭೀಷ್ಮರೇ ಕೃಷ್ಣನ ಕೋಪವನ್ನು ಓಲೈಸುವುದು ಇಲ್ಲಿನ ಸ್ವಾರಸ್ಯವಾಗಿದೆ.

41. ಆಯ್ಕೆ : ಪ್ರಸ್ತುತ ಈ ವಾಕ್ಯವನ್ನು ದೇವಿದಾಸರವರು ಬರೆದಿರುವ ಕೃಷ್ಣಸಂಧಾನ – ಭೀಷ್ಮಪರ್ವದಿಂದ ಆರಿಸಲಾದ 'ಚಕ್ರ ಗ್ರಹಣ 'ಎಂಬ ಪದ್ಯಭಾಗದಿಂದ ಆಯ್ಕೆ ಮಾಡಿಕೊಳ್ಳಲಾಗಿದೆ.

ಸಂದರ್ಭ: ಕೋಪಗೊಂಡ ಕೃಷ್ಣನು ಭೀಷ್ಮರನ್ನು ಕೊಲ್ಲಲು ಮುಂದಾದಾಗ, ಭೀಷ್ಮಾಚಾರ್ಯರು ಕೃಷ್ಣನನ್ನು ಹೊಗಳುತ್ತಾ ಸಮಾಧಾನ ಮಾಡುತ್ತಾರೆ. ಹಾಗೂ ತಾನು ಈ ಯುದ್ಧದಿಂದ ಬೇಸತ್ತಿರುವುದಾಗಿಯೂ ಕೊಲ್ಲಬೇಕೆಂದು ಅನಿಸಿದರೆ ತನ್ನ ಮೇಲೆ ಚಕ್ರಪ್ರಯೋಗ ಮಾಡಿಕೊಲ್ಲಬಹುದು ಎಂದು ಕೃಷ್ಣನಿಗೆ ಹೇಳುವ ಸಂದರ್ಭದಲ್ಲಿ ಈ ಮಾತು ಬರುತ್ತದೆ.

ಸ್ವಾರಸ್ಯ :- ಭೂಮಿಯ ಮೇಲೆ ಹುಟ್ಟಿದ ಪ್ರತಿಯೊಬ್ಬರು ಒಂದಲ್ಲ ಒಂದು ದಿನ ಸಾಯಲೇಬೇಕು. ಹಾಗಾಗಿ ಎಂದೋ ಹೋಗುವ ಪ್ರಾಣ ಈ ದಿನವೇ ಹೋಗಲಿ ಎನ್ನುತ್ತಾ ಭೀಷ್ಮರು ತನ್ನನ್ನು ಕೊಲ್ಲಲು ಕೃಷ್ಣನಿಗೆ ಹೇಳುವುದು ಇಲ್ಲಿನ ಸ್ವಾರಸ್ಯವಾಗಿದೆ.

42. ಆಯ್ಕೆ : ಪ್ರಸ್ತುತ ಈ ವಾಕ್ಯವನ್ನು ದೇವಿದಾಸರವರು ಬರೆದಿರುವ ಕೃಷ್ಣಸಂಧಾನ – ಭೀಷ್ಮಪರ್ವದಿಂದ ಆರಿಸಲಾದ 'ಚಕ್ರ ಗ್ರಹಣ 'ಎಂಬ ಪದ್ಯಭಾಗದಿಂದ ಆಯ್ಕೆ ಮಾಡಿಕೊಳ್ಳಲಾಗಿದೆ.

ಸಂದರ್ಭ: ಕೋಪಗೊಂಡಿರುವ ಕೃಷ್ಣನನ್ನು ಹೊಗಳುತ್ತಾ ಸಮಾಧಾನ ಮಾಡುವ ಭೀಷ್ಮರು ತನಗೆ ಕೌರವ ಮತ್ತು ಪಾಂಡವರ ಯುದ್ಧವನ್ನು ನೋಡುವುದು ಇಷ್ಟವಿಲ್ಲ. ಈ ಜೀವ ಎಂದಾದರೂ ಹೋಗುವುದೇ ಸರಿ. ಆದ್ದರಿಂದ ತಾನು ಸಾಯಲು ಸಿದ್ಧವಿರುವುದಾಗಿ ಹೇಳುವ ಸಂದರ್ಭದಲ್ಲಿ ಈ ಮಾತು ಬರುತ್ತದೆ.

ಸ್ವಾರಸ್ಯ :- ಕೌರವರ ಮತ್ತು ಪಾಂಡವರ ನಡುವಿನ ಯುದ್ಧವು ಭೀಷ್ಮಾಚಾರ್ಯರಿಗೆ ಎಷ್ಟು ನೋವು ಉಂಟು ಮಾಡಿತ್ತು ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ.

43. ಭೀಷ್ಮನ ಬಾಣವು ತಗುಲಿ ಕೃಷ್ಣನ ಕೋಪಗೊಂಡಾಗ ಎರಡು ಪಕ್ಷಗಳ ಜನರು ಹೆದರಿ ಕಣ್ಣುಮುಚ್ಚಿದರು. ಇದನ್ನು ಕಂಡ ಭೀಷ್ಮರು ಹೆದರಿ ರಥದಿಂದ ಇಳಿದು ಅವನ ಬಳಿ ಬಂದುದುರಿತವನ, ಲಕ್ಷ್ಮಿಪತಿ, ಮುಕುಂದ, ಮುರಾರಿ ನಿನಗೆ ಜಯವಾಗಲಿ ಎನ್ನುತ್ತಾ ಕೃಷ್ಣನಿಗೆ ಬಾಗಿ ನಮಸ್ಕರಿಸಿ ನಂತರ ಮೇಲೆದ್ದು ಅವನ ಮೃದುವಾದಕೈಯನ್ನು ಹಿಡಿದು ಹೀಗೆ ಹೇಳಿದನು.

ಶ್ರೀಮನೋಹರಸ್ವಾಮಿಯಾದ ಕೃಷ್ಣನೇ ನಿನಗೆ ಜಯವಾಗಲಿ. ಪ್ರೀತಿಯಿಂದ ನನ್ನ ಮಾತನ್ನು ಆಲಿಸಬೇಕು.

ನನ್ನ ಕುತ್ತಿಗೆಯನ್ನು ಸೀಳಲು ಚಕ್ರವನ್ನು ಹಿಡಿದಿರುವೆಯಾ**?** ಚೆನ್ನಾಗಿದೆ ನಿನ್ನ ಸೇವಕ ನಾನು. ಲೋಕವನ್ನು ರಕ್ಷಿಸುವ ಪ್ರಭುವೇ ಮಹಾನುಭಾವ ನನಗೆ ಇವರಿಬ್ಬರ ಜಗಳವನ್ನು ಕಣ್ಣಾರೆ ನೋಡಲು ಸಾಧ್ಯವಾಗುತ್ತಿಲ್ಲ. ಎಂದಾದರೂ ಈ ದೇಹ ಮಣ್ಣು ಪಾಲಾಗುವುದು ನಿಶ್ಚಿತ. ಎಂದೋ ಮಣ್ಣಾಗುವ ಈ ದೇಹ ಇಂದೇ ಅಳಿಯಲಿ ನೀನು ನಿನ್ನ ಚಕ್ರವನ್ನು ಪ್ರಯೋಗಿಸಿ ನನ್ನನ್ನು ತೀರಿಸು ಎಂದು ಹೇಳಿದನು.

ಮುಂದುವರೆದು ಶ್ರೀಮನೋಹರ ನಿನ್ನನ್ನು ಹೀಗೆ ನೋಡಿ ನನಗೆ ನಗು ಬರುತ್ತಿದೆ. ಹುಲ್ಲನ್ನು ಕತ್ತರಿಸುವುದಕ್ಕೆ ಕೊಡಲಿಬೇಕೇ**?** ಚಕ್ರವನ್ನು ಪ್ರಯೋಗಿಸಿ ನನ್ನ ಕೂದಲನ್ನು ಕತ್ತರಿಸಿದರೆ ಸಾಕು ನಾನು ನಿನಗೆ ಶರಣಾಗುತ್ತೇನೆ ಎಂದು ಹೇಳಿದನು.

44. ಈ ದಿನ ನಮ್ಮ ಹಿರಿಯರೊಡನೆ ಯುದ್ಧ ಮಾಡುವ ಸಂದರ್ಭ ಬಂದಿದೆ. ಹಾಗಾಗಿ ಮೊದಲು ಅವರಿಗೆ ಬಾಣಗಳಿಂದ ವಂದಿಸುವೆ. ನನ್ನ ಪರಾಕ್ರಮವನ್ನು ಪರೀಕ್ಷಿಸು ಎನ್ನುತ್ತಾ ಅರ್ಜುನನು ತನ್ನ ಗಾಂಡೀವಕ್ಕೆ ಬಾಣವನ್ನು ಹೂಡಿ ಹಿರಿಯರಿಗೆ ವಂದನೆಗಳು ಎಂದು ಭೀಷ್ಮನೆಡೆಗೆ ಬಿಟ್ಟಾಗ, ಆ ಬಾಣಗಳು ಬಂದು ಭೀಷ್ಮರ ಪಾದಗಳ ಬಳಿಯಲ್ಲಿ ವಂದನೆ ಗೆಯುತ್ತಾ ಬೀಳುತ್ತವೆ. ಅದನ್ನು ನೋಡಿ ಭೀಷ್ಮರು ಸಂತೋಷಗೊಂಡು ತಾವು ಕೂಡ ಅರ್ಜುನನ ಬಾಣಗಳಿಗೆ ಪ್ರತಿಯಾಗಿ ಬಾಣವನ್ನು ಹೂಡಿದರು. ಹೀಗೆ ಭೀಷ್ಮರು ಬಿಟ್ಟಬಾಣಗಳನ್ನು ಅರ್ಜುನನ್ನು ತುಂಡರಿಸಿದ ನಂತರ ನಗುತ್ತಾ ಭೀಷ್ಮರನ್ನು ಕುರಿತು ಹೀಗೆ ಹೇಳಿದನು. ನಮ್ಮ ತಂದೆಯನ್ನು ಕಳೆದು ಕೊಂಡ ದಿನದಿಂದ ನಮ್ಮನ್ನು ನೀವೇ ರಕ್ಷಿಸಿ ಇಂದು ಕೌರವರಿಗೆ ಸಹಾಯ ಮಾಡಲು ಬಂದಿದ್ದೀರಾ? ಚಿಕ್ಕ ಮಕ್ಕಳೊಂದಿಗೆ ಹೀಗೆ ಹೋರಾಡುವುದು ವಿವೇಕವೇ? ಎರಡು ಬಣಗಳಲ್ಲಿರುವವರು ನಿಮ್ಮ ಮಕ್ಕಳೇ ಆಗಿರುವಾಗ ನಮ್ಮಲ್ಲಿ ನಿಮಗೆ ಭೇದವೇ ಎಂದನು. ಆಗ ಭೀಷ್ಮರು ಅರ್ಜುನನಿಗೆ ಸಣ್ಣಮಕ್ಕಳಂತೆ ಮಾತನಾಡಬೇಡ ನಿಮ್ಮ ಐದು ಜನರ ಕುರಿತು ನನ್ನ ಗಮನ ಹಿರಿದು ದಯವೋ, ದುಗುಡವೋ ಎಂಬುದನ್ನು ಶ್ರೀಕೃಷ್ಣ ಬಲ್ಲ. ಈಗ ಏತಕ್ಕೆ ಆ ಮಾತು? ಶಿವ ಕೊಟ್ಟ ಬಾಣವನ್ನು ತೆಗೆದು ನನ್ನ ಮೇಲೆ ಪ್ರಯೋಗಿಸು ಎಂದು ಹೇಳಿ ಆಕಾಶವನ್ನೆಲ್ಲ ಆವರಿಸಿಕೊಳ್ಳುವಂತೆ ತಾನು ಬಾಣಗಳ ಸುರಿಮಳೆಗೆ ಯ್ದನು.

45. ಆಯ್ಕೆ : ಮೇಲಿನ ಪದ್ಯಭಾಗವನ್ನು 'ದೇವಿದಾಸ'ರ 'ಚಕ್ರಗ್ರಹಣ 'ಎಂಬ ಪದ್ಯದಿಂದ ಆರಿಸಲಾಗಿದೆ.
ಭೀಷ್ಮರು ಪ್ರಯೋಗಿಸಿದ ಬಾಣದಿಂದ ಕೃಷ್ಣನ ಹಣೆಯಲ್ಲಿ ರಕ್ತಬರುತ್ತದೆ. ಇದರಿಂದ ಕೋಪಗೊಂಡ ಕೃಷ್ಣನು ಭೀಷ್ಮ ಆಚಾರ್ಯರನ್ನು ಕೊಂದೇ ಬಿಡುವುದಾಗಿ ಚಕ್ರವನ್ನು ಹಿಡಿದಾಗ 14 ಲೋಕಗಳು ತಲ್ಲಣಗೊಳ್ಳುತ್ತವೆ. ಯುದ್ಧಭೂಮಿಯಲ್ಲಿದ್ದ ಎಲ್ಲ ವೀರರು ಈಗ ಕೃಷ್ಣನ ಕೋಪವನ್ನು ಕಡಿಮೆ ಮಾಡುವುದು ಹೇಗೆ? ಎಂದು ಚಿಂತಿಸುತ್ತಾರೆ. ಆಗ ರಥದಿಂದಿಳಿದ ಭೀಷ್ಮಾಚಾರ್ಯರು ನಿಧಾನವಾಗಿ ಕೃಷ್ಣನ ಬಳಿಗೆ ನಡೆದು ಕೊಂಡು ಬಂದು ಮೃದುವಾದ ಮಾತುಗಳಲ್ಲಿ ದುರಿತವನ, ದಾವಾಗ್ನಿ, ಲಕ್ಷ್ಮಿಪತಿ, ಮುಕುಂದ, ಮುರಾರಿ ನಿಮಗೆ ಜಯವಾಗಲಿ ಎಂದು ಕೃಷ್ಣನ ಹೊಗಳುತ್ತಾ, ಕೃಷ್ಣನ ಮೃದುವಾದ ಕೈಯನ್ನು ಹಿಡಿದು ಹೀಗೆ ಹೇಳುತ್ತಾನೆ. ಎಂಬುದು ಇಲ್ಲಿನ ಸಾರಾಂಶವಾಗಿದೆ.
ಮೌಲ್ಯ: ಕೃಷ್ಣನ ಪರಾಕ್ರಮ ಹಾಗೂ ಯುದ್ಧಕ್ಕೆ ಮುಂಚೆ ಕೃಷ್ಣ ಮಾಡಿದ ಶಪಥದ ಬಗ್ಗೆ ಭೀಷ್ಮರಿಗೆ ತಿಳಿದಿದ್ದರೂ, ಕೃಷ್ಣನ ಕೈಯಲ್ಲಿ ಚಕ್ರ ಹಿಡಿಸುವುದಾಗಿ ಶಪಥ ಮಾಡಿ ಅದನ್ನು ನೆರವೇರಿಸುವುದು ಹಾಗೂ ಕೋಪಗೊಂಡ ಕೃಷ್ಣನನ್ನು ಭಿಷ್ಮಾಚಾರ್ಯರೇ ಶಾಂತಗೊಳಿಸುವುದು ಇಲ್ಲಿನ ಮೌಲ್ಯವಾಗಿದೆ.

****

4 . ಬಲಿಯನಿತ್ತೊಡೆ ಮುನಿವೆಂ

II.

1. ಅಕ್ಕಿ
2. ನಾಲ್ಕು
3. ಕುಸುಮಾವಳಿ
4. ಆಗಮಸಂಧಿ
5. ಶಿಥಲದಿತ್ವ
6. ದೊರೆ
7. ಳ/ಳ/ಳ/

8. ಬಲಿಯನಿತ್ತೊಡೆ ಮುನಿವೆಂ ಈ ಪದ್ಯದಲ್ಲಿ ಭಿಕ್ಷೆ ಬೇಡಲು ಬಂದ ಮಕ್ಕಳ ಹೆಸರು ಅಭಯರುಚಿ ಮತ್ತು ಅಭಯಮತಿ.

9. ಅಭಯಮತಿ ಮತ್ತು ಅಭಯರುಚಿಯನ್ನು ಭಿಕ್ಷೆ ಬೇಡಲು ಬಂದಾಗ ಸೆರೆ ಹಿಡಿಯಲಾಯಿತು.

10. ಅಭಯರುಚಿ ಮತ್ತು ಅಭಯಮತಿಯ ಸೋದರ ಮಾವನ ಹೆಸರು ಮಾರಿದತ್ತ .

11. ಅಭಯರುಚಿಯು ಮಾರಿದತ್ತನ ಪಾಪಗಳಿಗೆ ನರಕದಲ್ಲಿ ಪರಿಹಾರ ಸಿಗುತ್ತದೆ ಎಂದು ಹೇಳಿದನು.

12. ಚಂಡಮಾರಿಯು ಪ್ರತ್ಯಕ್ಷಳಾಗಿ ಅಭಯರುಚಿಗೆ "ನೀನು ಆಚಾರ್ಯನು "ಎಂದು ಸಂಬೋಧಿಸಿದಳು.

13. ಚಂಡಮಾರಿಯು ಜನರಿಗೆ ನನಗೆ ಜೀವಬಲಿಯನ್ನು ಕೊಟ್ಟಾಗ ಕೋಪಗೊಳ್ಳುತ್ತೇನೆ ಎಂದು ಹೇಳುತ್ತಾಳೆ.

14. ಚಂಡಮಾರಿಯು ಜನಸಮೂಹಕ್ಕೆ ನನ್ನನ್ನು ಹೂಮಾಲೆ, ಅಕ್ಷತೆ, ಧೂಪ, ದೀಪ, ಹವಿಸ್ಸು, ತಾಂಬೂಲದ ಸಮೂಹದಿಂದ ಪೂಜಿಸಬೇಕೆಂದು ಹೇಳುತ್ತಾಳೆ.

15. ಮಾರಿದತ್ತನು ಬಲಿಗಾಗಿ ತಂದಿದ್ದ ಜೀವರಾಶಿಯನ್ನು ಬಿಡಿಸಿ ಆನಂದದಿಂದ ತನ್ನ ತಂಗಿಯ ಮಕ್ಕಳನ್ನು ಲಾಲಿಸಿದನು.

16. ಮಾರಿದತ್ತನು ತಾನು ಮಾಡಿರುವ ಪಾಪಕೃತ್ಯಗಳಿಗೆ ಭಯ ಪಟ್ಟು ದೀಕ್ಷೆ ಕೈಗೊಂಡನು.

17. ಮಾರಿದತ್ತನಿಗೆ ತಪದ ಫಲವಾಗಿ ಮೂರನೆಯ ಸ್ವರ್ಗ ಪ್ರಾಪ್ತಿಯಾಯಿತು.

IV.

18. ಅಭಯರುಚಿಯು ಮಾರಿದತ್ತನ್ನು ನೋಡಿದಾಗ "ಮಾರಿದತ್ತ ದೊರೆಯೆ ನಾನು ಅಭಯರುಚಿಕುಮಾರ ಈಕೆಯು ಅಭಯಮತಿ ಎಂದು ಪ್ರಸಿದ್ಧಳಾದ ನನ್ನ ಸಹೋದರಿ ನಾವು ಮಾಡಿದ ನಾನಾ ವಿಧವಾದ ಕರ್ಮದಿಂದ ಈ ಜನ್ಮದಲ್ಲಿ ಜನಿಸಿರುವೆವು. ನಮ್ಮ ಬಗ್ಗೆ ಏನನ್ನು ಕೇಳುವೆ ?" ಹೇಳಿದನು

19. ಅಭಯರುಚಿಯು ಮಾರಿದತ್ತನಿಗೆ ನಾನು ಸಂಕಲ್ಪ ಹಿಂಸೆ ಒಂದರಿಂದಲೇ ನಾನಾ ಜನ್ಮಾಂತರಗಳಲ್ಲಿ ದುಃಖವನ್ನು ಅನುಭವಿಸಿದೆನು. ಆದರೆ ನೀನು ಭಯವಿಲ್ಲದೆ ಇಷ್ಟು ದೇಹಗಳನ್ನು ಕೊಲ್ಲುತ್ತಿರುವೆ. ಇದಕ್ಕೆ ನರಕದಲ್ಲಿ ಪರಿಹಾರ ಪಡೆಯುವೆ. ಆದ್ದರಿಂದ ನಿನಗೆ ಉಂಟಾಗುವ ಕೇಡನ್ನು ಆಲೋಚಿಸಿ ಕರುಣೆಯಿಂದ ತಲ್ಲಣಗೊಂಡನು.

20. ಬಲಿ ಕೊಡುವುದನ್ನು ನೋಡಿದಾಗ ಅಭಯರುಚಿಯು ಮಾರಿದತ್ತನಿಗೆ " ಮನದಲ್ಲಿ ಮೂಡಿದ ಹಿಂಸೆಯ ಆಲೋಚನೆ ಒಂದರಿಂದಲೇ ನಾವು ಅನೇಕ ಜನ್ಮಗಳಲ್ಲಿ ಹುಟ್ಟಿ ದುಃಖವನ್ನು ಅನುಭವಿಸಿದೆವು. ನೀನು ಭಯವಿಲ್ಲದೆ ಇಷ್ಟು ಜನರನ್ನು ಕೊಲ್ಲುತ್ತಿರುವೆ. ಈ ಪಾಪಕ್ಕೆ ತಕ್ಕ ಪರಿಹಾರವು ನಿನಗೆ ನರಕದಲ್ಲಿ ದೊರೆಯುವುದು" ಎಂದು ಹೇಳಿದನು.

21. ಅಭಯರುಚಿಯು ಮಾರಿದತ್ತನಿಗೆ " ನಾನು ಸಂಕಲ್ಪ ಹಿಂಸೆ ಒಂದರಿಂದಲೇ ನಾನಾ ಜನ್ಮಾಂತರಗಳಲ್ಲಿ ದುಃಖವನ್ನು ಅನುಭವಿಸಿದೆನು. ಆದರೆ ನೀನು ಭಯವಿಲ್ಲದೆ ಇಷ್ಟುದೇಹಗಳನ್ನು ಕೊಲ್ಲುತ್ತಿರುವೆ. ಇದಕ್ಕೆ ನರಕದಲ್ಲಿ ಪರಿಹಾರವನ್ನು ಪಡೆಯುವೆ" ಎಂದು ಹೇಳಿದ ಮಾತುಗಳು ಅಲ್ಲಿದ್ದ ಜೀವಸಮೂಹಗಳಿಗೆ ಅಭಯವನ್ನು ನೀಡುವ ಡಂಗೂರದಂತೆ ಒಪ್ಪಿಗೆಯನ್ನು ಪಡೆಯಿತು. ಆದ್ದರಿಂದ ಮಾರಿದತ್ತ ದೊರೆಯು ಹೆದರಿ ವಿಸ್ಮಯಗೊಂಡು ಉದ್ವಿಗ್ನನಾದನು.

22. ಚಂಡಮಾರಿಯು ಜನರನ್ನು ಕುರಿತು "ಪ್ರಜೆಗಳೆಲ್ಲರು ನನ್ನನ್ನು ಜಲಗಂಧ, ಹೂಮಾಲೆ, ಅಕ್ಕಿ , ಧೂಪ , ದೀಪ , ಹವಿಸ್ಸು, ತಾಂಬೂಲ ಸಮೂಹದಿಂದ ಪೂಜಿಸುವುದು. ನನಗೆ ಜೀವಜಾತಗಳನ್ನು ಬಲಿಕೊಟ್ಟರೆ ಕೋಪಗೊಳ್ಳುವೆನು" ಎಂದು ಹೇಳುತ್ತಾಳೆ.

23. ಮಾರಿದತ್ತನು ಅಭಯರುಚಿಯನ್ನು ಭೇಟಿಯಾಗುವವರೆಗೂ ಚಂಡಮಾರಿಗೆ ಪ್ರಾಣಿ ಬಲಿ ಕೊಡುವುದು ಹಿಂಸೆ ಮಾಡುವುದು , ಪಾಪಕೃತ್ಯಗಳನ್ನು ಮಾಡುತ್ತಿರುತ್ತಾನೆ. ಆಗ ಅಭಯರುಚಿಯು ನೀನು ಮಾಡಿರುವ ಪಾಪಕೃತ್ಯಗಳಿಗೆ ನರಕದಲ್ಲೂ ನಿವಾರಣೆ ಪಡೆಯುವುದಿಲ್ಲ ಎಂದು ಹೇಳುತ್ತಾನೆ. ಆಗ ಮಾರಿದತ್ತನು ಅದುವರೆಗೂ ತಾನು ಮಾಡಿದ ಪಾಪಕೃತ್ಯಗಳಿಗೆ ಹೆದರಿ ದೀಕ್ಷೆಕೈಗೊಂಡನು.

24. "ಹಿಂಸೆಯು ಮಾನವನನ್ನು ದಾನವನಾಗಿಸುತ್ತದೆ". ಹಿಂಸೆಯನ್ನು ಮಾಡುವುದಿರಲಿ, ಹಿಂಸೆಯನ್ನು ಸಂಕಲ್ಪಿಸುವುದು ಕೂಡ ಘೋರ ಪಾಪ. ಇದು ಜನ್ಮಜನ್ಮಗಳಲ್ಲೂ ಕಾಡದೆ ಬಿಡದು. "ಅಹಿಂಸೆ ಪರಮ ಧರ್ಮ

"ಎನ್ನುವುದು ನಿತ್ಯಸತ್ಯ. ಜೀವಿಗಳನ್ನು ಬಲಿಕೊಡುವುದರಿಂದ ಅನೇಕ ನಾನಾ ಜನ್ಮಾಂತರಗಳಲ್ಲಿ ನಾನಾ ಪ್ರಾಣಿಗಳ ಜನ್ಮವನ್ನು ಪಡೆದು ನಿರಂತರವಾಗಿ ದುಃಖವನ್ನು ಅನುಭವಿಸಬೇಕಾಗುತ್ತದೆ.

25. ದೀಕ್ಷಾಬದ್ಧನಾದ ಮಾರಿದತ್ತನು ಕೆಲವು ಕಾಲ ಉಗ್ರ ತಪಸ್ಸು ಮಾಡಿ ಸಮಾದಿ ಸ್ಥಿತಿಯಲ್ಲಿ ಪ್ರಾಣತ್ಯಾಗ ಮಾಡಿದನು. ಅವನು ಮಾಡಿದ ತಪದ ಫಲವಾಗಿ ಮೂರನೆಯ ಸ್ವರ್ಗವು ದೊರಕಿ ಕಲಿಯನ್ನು ಮೊದಲಿಸುವಂತೆ ದೇವನಾದನು .

V.

26. ಆಯ್ಕೆ; ಈ ವಾಕ್ಯವನ್ನು ಶ್ರೀಗೋಪಾಲ ಭಟ್ಟ ಅವರು ಸಂಪಾದಿಸಿರುವ ಜನ್ನ ಕವಿಯು ರಚಿಸಿರುವ ' ಬಲಿಯನಿತ್ತೊಡೆ ಮುನಿವೆಂ ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.
ಸಂಧರ್ಭ ;- ಮಾರಿದತ್ತನು ಜಾತ್ರೆಯ ಸಮಯದಲ್ಲಿ ಭಿಕ್ಷೆಗಾಗಿ ಬಂದ ಅಭಯರುಚಿ ಮತ್ತು ಅಭಯಮತಿಯನ್ನು ಸೆರೆ ಹಿಡಿಸಿ ಚಂಡಮಾರಿಗೆ ಬಲಿ ಕೊಡಲು ಸಿದ್ದನಾದ ಸಂದರ್ಭದಲ್ಲಿ ಅಭಯರುಚಿಯು ಮಾರಿದತ್ತನಿಗೆ ಈ ಮಾತನ್ನು ಹೇಳುತ್ತಾನೆ.
ಸ್ವಾರಸ್ಯ :- ಮಾರಿದತ್ತನಿಗೆ ಮುಂದೆ ಒದಗಬಹುದಾದ ನರಕವನ್ನು ನೆನೆದು ಅಭಯರುಚಿಯು ಕರುಣೆಯಿಂದ ತಳಮಳಗೊಂಡಿರುವುದು ಸ್ವಾರಸ್ಯವಾಗಿದೆ.

27. ಆಯ್ಕೆ; ಈ ವಾಕ್ಯವನ್ನು ಶ್ರೀಗೋಪಾಲ ಭಟ್ಟ ಅವರು ಸಂಪಾದಿಸಿರುವ ಜನ್ನ ಕವಿಯು ರಚಿಸಿರುವ ' ಬಲಿಯನಿತ್ತೊಡೆ ಮುನಿವೆಂ ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.
ಸಂದರ್ಭ ;- ಮಾರಿದತ್ತನು ಜಾತ್ರೆಯ ಸಮಯದಲ್ಲಿ ಭಿಕ್ಷೆಗಾಗಿ ಬಂದ ಅಭಯರುಚಿ ಮತ್ತು ಅಭಯಮತಿಯನ್ನು ಸೆರೆಹಿಡಿಸಿ ಚಂಡಮಾರಿಗೆ ಬಲಿ ಕೊಡಲು ಸಿದ್ದನಾದ ಸಂದರ್ಭದಲ್ಲಿ ಅಭಯರುಚಿಯು ಮಾರಿದತ್ತನಿಗೆ ಈ ಮಾತನ್ನು ಹೇಳುತ್ತಾನೆ.
ಸ್ವಾರಸ್ಯ ;-ಅಭಯರುಚಿಯು ಮಾರಿದತ್ತನಿಗೆ ತಾನು ಮಾಡಿರುವ ಪಾಪಕೃತ್ಯಗಳಿಗೆ ನರಕದಲ್ಲಿ ನಿವಾರಣೆ ಪಡೆಯುವೆ ಎಂದು ಹೇಳುವ ಮೂಲಕ ಆತನಲ್ಲಿ ತಳಮಳ ಉಂಟು ಮಾಡಿರುವುದು ಸ್ವಾರಸ್ಯವಾಗಿದೆ.

28. ಆಯ್ಕೆ; ಈ ವಾಕ್ಯವನ್ನು ಶ್ರೀಗೋಪಾಲ ಭಟ್ಟ ಅವರು ಸಂಪಾದಿಸಿರುವ ಜನ್ನ ಕವಿಯು ರಚಿಸಿರುವ ' ಬಲಿಯನಿತ್ತೊಡೆ ಮುನಿವೆಂ ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.
ಸಂದರ್ಭ :- ಚಂಡಮಾರಿಯು ಪ್ರತ್ಯಕ್ಷಳಾಗಿ ಅಭಯರುಚಿಯ ಹಿನ್ನಲೆಯನ್ನು ಅಲ್ಲಿ ನೆರೆದಿದ್ದ ಜನಸಮೂಹಕ್ಕೆ ತಿಳಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ
ಸ್ವಾರಸ್ಯ : ಚಂಡಮಾರಿಯು ಪ್ರತ್ಯಕ್ಷಳಾಗಿ ಅಲ್ಲಿ ನೆರೆದಿದ್ದ ಜನಸಮೂಹಕ್ಕೆ ಹೇಳಿರುವುದು ಸ್ವಾರಸ್ಯವಾಗಿದೆ.

29. ಆಯ್ಕೆ; ಈ ವಾಕ್ಯವನ್ನು ಶ್ರೀಗೋಪಾಲ ಭಟ್ಟ ಅವರು ಸಂಪಾದಿಸಿರುವ ಜನ್ನ ಕವಿಯು ರಚಿಸಿರುವ ' ಬಲಿಯನಿತ್ತೊಡೆ ಮುನಿವೆಂ ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.
ಸಂದರ್ಭ ;- ಚಂಡಮಾರಿಯು ಪ್ರತ್ಯಕ್ಷಳಾಗಿ ಪ್ರಜೆಗಳೆಲ್ಲರೂ ನನ್ನನ್ನು ಜಲ, ಗಂಧ, ಹೂಮಾಲೆ, ಅಕ್ಕಿ , ಧೂಪ , ದೀಪ, ಹವಿಸ್ಸು, ತಾಂಬೂಲ ಸಮೂಹದಿಂದ ಪೂಜಿಸುವುದು ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಚಂಡಮಾರಿಯು ಜನರಿಗೆ ಈ ಮಾತನ್ನು ಹೇಳುತ್ತಾಳೆ
ಸ್ವಾರಸ್ಯ ;- ದೇವರಿಗೆ ಪೂಜೆಯನ್ನು ಮಾಡುವ ನೆಪದಲ್ಲಿ ಪ್ರಾಣಿಬಲಿ ನೀಡಿ ಪ್ರಾಣಿಹಿಂಸೆ ಮಾಡುವುದು ತಪ್ಪು ಇದನ್ನು ದೇವರು ಸಹ ಒಪ್ಪುದಿಲ್ಲ ಎಂದು ಹೇಳಿರುವುದು ಸ್ವಾರಸ್ಯವಾಗಿದೆ.

30. ಆಯ್ಕೆ; ಈ ವಾಕ್ಯವನ್ನು ಶ್ರೀಗೋಪಾಲ ಭಟ್ಟ ಅವರು ಸಂಪಾದಿಸಿರುವ ಜನ್ನ ಕವಿಯು ರಚಿಸಿರುವ ' ಬಲಿಯನಿತ್ತೊಡೆ ಮುನಿವೆಂ ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.
ಸಂದರ್ಭ ;- ಬಲಿ ಕೊಡಲು ಅಭಯರುಚಿ ಮತ್ತು ಅಭಯಮತಿಯನ್ನು ಸೆರೆಹಿಡಿದು ಚಂಡಮಾರಿಯ ದೇವಾಲಯಕ್ಕೆ ಕರೆದು ಕೊಂಡು ಬಂದಾಗ ಆ ದೇವಾಲಯದ ಭಯಂಕರ ದೃಶ್ಯವನ್ನು ನೋಡಿ ಹೆದರದ ಅಭಯರುಚಿಯು ಮಾರಿದತ್ತನಿಗೆ ಈ ಮಾತನ್ನು ಹೇಳುತ್ತಾನೆ.
ಸ್ವಾರಸ್ಯ ;- ಚಂಡಮಾರಿ ದೇವಾಲಯದ ಭಯಂಕರ ದೃಶ್ಯವನ್ನು ನೋಡಿ ಹೆದರದ ಅಭಯಮತಿ ಮತ್ತು ಅಭಯರುಚಿಯ ಧೈರ್ಯ ಸ್ವಾರಸ್ಯವಾಗಿದೆ.

31. ಆಯ್ಕೆ; ಈ ವಾಕ್ಯವನ್ನು ಶ್ರೀಗೋಪಾಲ ಭಟ್ಟ ಅವರು ಸಂಪಾದಿಸಿರುವ ಜನ್ನ ಕವಿಯು ರಚಿಸಿರುವ ' ಬಲಿಯನಿತ್ತೊಡೆ ಮುನಿವೆಂ ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ ;- ಅಭಯರುಚಿಯು ಮಾರಿದತ್ತನಿಗೆ ತಾವು ಸಂಕಲ್ಪಹಿಂಸೆ ಮಾಡಿದ್ದರಿಂದ ಅನೇಕ ಜನ್ಮಗಳಲ್ಲಿ ಅನುಭವಿಸಿದ ದುಃಖದ ಬಗ್ಗೆ ತಿಳಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ.
ಸ್ವಾರಸ್ಯ ;- ಹಿಂಸೆ ಮಾಡುವುದಿರಲಿ ಸಂಕಲ್ಪ ಹಿಂಸೆ ಮಾಡುವುದರಿಂದಲೂ ಕೂಡ ಅನೇಕ ಜನ್ಮಗಳಲ್ಲಿ ದುಃಖ ಅನುಭವಿಸ ಬೇಕಾಗುತ್ತದೆ ಎಂದು ಅಹಿಂಸೆಯ ಸಂದೇಶವನ್ನು ಸಾರಿರುವುದು ಸ್ವಾರಸ್ಯವಾಗಿದೆ

32. ಆಯ್ಕೆ; ಈ ವಾಕ್ಯವನ್ನು ಶ್ರೀಗೋಪಾಲ ಭಟ್ಟ ಅವರು ಸಂಪಾದಿಸಿರುವ ಜನ್ನ ಕವಿಯು ರಚಿಸಿರುವ ' ಬಲಿಯನಿತ್ತೊಡೆ ಮುನಿವೆಂ ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.
ಸಂದರ್ಭ ; ಅಭಯರುಚಿಯ ಮಾತುಗಳು ಮಾರಿದತ್ತನ ಮೇಲೆ ಪರಿಣಾಮ ಬೀರಿ ಅವನು ಕೆಲಕಾಲ ಉಗ್ರತಪಸ್ಸು ಮಾಡಿ ಧ್ಯಾನ ಸಮಾಧಿಯಲ್ಲಿ
ಪ್ರಾಣತ್ಯಾಗ ಮಾಡಿ ತಪದ ಫಲವಾಗಿ ಮೂರನೆಯ ಸ್ವರ್ಗವು ದೊರೆಯಿತು ಎಂದು ಹೇಳುವ ಸಂದರ್ಭದಲ್ಲಿ ಕವಿಯು ಈ ಮಾತನ್ನು ಹೇಳುತ್ತಾನೆ
ಸ್ವಾರಸ್ಯ: ಮಾನವನು ತನ್ನಲ್ಲಿ ಅಡಗಿರುವ ದಾನವಗುಣಗಳನ್ನು ಹೋಗಲಾಡಿಸಿಕೊಂಡರೆ ದೇವಮಾನವನಾಗ ಬಹುದು ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ.

VI.

33. ಜನ್ನ. ಈತನ ಕಾಲ ಸಾ.ಶ ೧೨೨೫.. ಈತನ ಸ್ಥಳ ಹಳೇಬೀಡು. ಈತನು ನರಸಿಂಹಬಲ್ಲಾಳನ ಆಸ್ಥಾನದಲ್ಲಿ ದಂಡಾಧಿಪತಿಯೂ ಮಂತ್ರಿಯೂ ಆಗಿದ್ದನು. ಈತನ ಕೃತಿಗಳು ಯಶೋಧರಚರಿತೆ, ಅನುಭವ ಮುಕುರ, ಅನಂತನಾಥಪುರಾಣ. ಈತನಿಗೆ ಕವಿಚಕ್ರವರ್ತಿ ಎಂಬ ಬಿರುದು ಇದೆ.

VII.

34. ಸಂಕಲ್ಪಹಿಂಸೆಯೊಂದರೊ-
ಳಾಂಕಂಡೆಂ ಭವದದುಃಖಮುಂಡೆ ನೀನ್ ನಿಃ
ಶಂಕತೆಯಿನಿನಿತು ದೇಹಿಗ-
ಳಂಕೊಂದಪೆ ನರಕದೊಳ್ ನಿವಾರಣೆವಡೆವಯ್

ಅಥವಾ

ಪ್ರಜೆಯೆಲ್ಲಂ ಜಲಗಂಧ
ಸ್ರಜ ತಂಡುಲ ಧೂಪದೀಪ ಚರುತಾಂಬೂಲ
ವ್ರಜದಿಂ ಪೂಜಿಸುವುದು ಜೀ-
ವಜಾತದಿಂದೆನಗೆ ಬಲಿಯನಿತ್ತೊಡೆ ಮುನಿವೆಂ

VIII.

35. ಆಯ್ಕೆ ;- ಈ ಪದ್ಯಭಾಗವನ್ನು ಜನ್ನ ಬರೆದಿರುವ ಬಲಿಯನಿತ್ತೊಡೆ ಮುನಿವೆಂ ಎಂಬ ಪದ್ಯಭಾಗದಿಂದ ಆರಿಸಲಾಗಿದೆ
ಹಿನ್ನಲೆ;-ಮಾರಿದತ್ತನು ಚಂಡಮಾರಿಗೆ ಪ್ರಾಣಿಬಲಿ ಕೊಡುವುದನ್ನು ನೋಡಿದ ಅಭಯರುಚಿಯು ಹಿಂಸೆಯ ಪರಿಣಾಮವನ್ನು ತಿಳಿಸುವ ಹಿನ್ನಲೆಯಲ್ಲಿ ಈ ಪದ್ಯಭಾಗವನ್ನು ರಚಿಸಲಾಗಿದೆ.
ಸಾರಾಂಶ;- ಹಿಂಸೆಮಾಡುವುದಿರಲಿ ಸಂಕಲ್ಪಹಿಂಸೆ ಮಾಡುವುದು ಕೂಡ ಘೋರ ಪಾಪವಾಗಿದೆ. ಅಭಯರುಚಿಯು ಮಾರಿದತ್ತನಿಗೆ ಸಂಕಲ್ಪಹಿಂಸೆ ಮಾಡಿದ್ದರಿಂದಲೇ ನಾವು ಅನೇಕ ಜನ್ಮಗಳಲ್ಲಿ ಹುಟ್ಟಿ ದುಃಖವನ್ನು ಅನುಭವಿಸಿದೆವು. ನೀನು ಭಯವಿಲ್ಲದೆ ಇಷ್ಟು ಜನರನ್ನು ಕೊಲ್ಲುತ್ತಿರುವೆ. ಈ ಪಾಪಕ್ಕೆ ತಕ್ಕ ಪರಿಹಾರವು ನಿನಗೆ ನರಕದಲ್ಲಿ ದೊರೆಯುವುದು ಎಂದು ಹೇಳಿದನು.
ಮೌಲ್ಯ;- ಮನದಲ್ಲಿ ಹಿಂಸೆಯ ಆಲೋಚನೆಯು ಕೂಡ ಹಿಂಸೆಮಾಡಿದುದಕ್ಕೆ ಸಮಾನ ಎಂದು ಅಹಿಂಸೆ ಸಾರವನ್ನು ಹೇಳಿರುವುದು ಮೌಲ್ಯಯುತ ಅಂಶವಾಗಿದೆ.

IX.

36. ರಾಜಪುರ ಎಂಬ ಪಟ್ಟಣದಲ್ಲಿ ಚಂಡಮಾರಿ ದೇವಾಲಯವಿತ್ತು. ಅಲ್ಲಿಯ ದೊರೆಯಾದ ಮಾರಿದತ್ತ ಮತ್ತು ಪ್ರಜೆಗಳು ಆಶ್ವಯುಜ ಹಾಗೂ ಚೈತ್ರಮಾಸದಲ್ಲಿ ಜಾತ್ರೆ ನಡೆಸಿ ಚಂಡಮಾರಿಯನ್ನು ಆರಾಧಿಸುತ್ತಿದ್ದರು. ಒಮ್ಮೆ ವಸಂತಮಾಸದಲ್ಲಿ ಜಾತ್ರೆ ನಡದೆಯ ಬೇಕಿತ್ತು. ಮಾರಿದತ್ತನು ತಳಾರನಾದ ಚಂಡಕರ್ಮನು ಸುದಾತ್ತಾಚಾರ್ಯ ಮುನಿಗೊಳಡನೆ ರಾಜಪುರ ಪಟ್ಟಣಕ್ಕೆ ಬಂದು ಭಿಕ್ಷೆಗೆ ಹೊರಟಿದ್ದ ಎಳೆ ವಯಸ್ಸಿನ ಅಣ್ಣತಂಗಿಯರಾದ ಅಭಯರುಚಿ ಮತ್ತು ಅಭಯಮತಿಯರನ್ನು ಹಿಡಿದು ತಂದನು. ನರಬಲಿ ನೀಡುವ ಚಂಡಮಾರಿ ದೇವಾಲಯದ ಭಯಂಕರ ದೃಶ್ಯವನ್ನು ಕಂಡು ಸ್ವಲ್ಪವೂ ವಿಚಲಿತರಾಗದೆ ಅಭಯರುಚಿ ಮಾತ್ತು ಅಭಯಮತಿಯರ

ಧೈರ್ಯವನ್ನು ಕಂಡು ಮಾರಿದತ್ತನು ಬೆಕ್ಕಸ ಬೆರಗಾದನು. ಮಾರಿದತ್ತನು ಅವರನ್ನು ಬಲಿಕೊಡದೆ ಅವರ ವೃತಾಂತವನ್ನು ತಿಳಿಯಬಯಸಿದನು. ಹೀಗೆ ಅಭಯರುಚಿಯು ಮಾರಿದತ್ತನನ್ನು ಭೇಟಿಯಾದನು.

37. ಮಾರಿದತ್ತನು ತಳಾರನಾದ ಚಂಡಕರ್ಮನಿಗೆ ಮಾರಿಗೆ ನರಬಲಿ ಕೊಡುವುದಕ್ಕಾಗಿ ಇಬ್ಬರನ್ನು ಹಿಡಿದು ತರುವಂತೆ ಹೇಳಿದನು. ಚಂಡಕರ್ಮನು ಸುದಾತ್ತಾಚಾರ್ಯ ಮುನಿಗಳೊಡನೆ ರಾಜಪುರ ಪಟ್ಟಣಕ್ಕೆ ಬಂದು ಭಿಕ್ಷೆಗೆ ಹೊರಟ್ಟಿದ್ದ ಎಳೆವಯಸ್ಸಿನ ಅಣ್ಣತಂಗಿಯರಾದ ಅಭಯರುಚಿ ಮತ್ತು ಅಭಯಮತಿಯರನ್ನು ಹಿಡಿದು ತಂದನು.. ಅಭಯರುಚಿ ಮತ್ತು ಅಭಯಮತಿಯರು ನರಬಲಿ ನೀಡುವ ಚಂಡಮಾರಿ ದೇವಾಲಯದ ಭಯಂಕರ ದೃಶ್ಯವನ್ನು ಕಂಡು ಸ್ವಲ್ಪವೂ ವಿಚಲಿತರಾಗಲಿಲ್ಲ. ಅಭಯರುಚಿ ಮತ್ತು ಅಭಯಮತಿಯರ ಧೈರ್ಯವನ್ನು ಕಂಡು ಮಾರಿದತ್ತನು ಬೆಕ್ಕಸಬೆರಗಾದನು. ಅಭಯರುಚಿಯು ಮಾರಿದತ್ತನಿಗೆ ನಾನು ಸಂಕಲ್ಪಹಿಂಸೆ ಒಂದರಿಂದಲೇ ನಾನಾ ಜನ್ಮಗಳಲ್ಲಿ ದುಃಖವನ್ನು ಅನುಭವಿದೆನು. ಆದರೆ ನೀನು ಭಯವಿಲ್ಲದೆ ಇಷ್ಟು ದೇಹಗಳನ್ನು ಕೊಲ್ಲುತ್ತಿರುವೆ. ಇದಕ್ಕೆ ನೀನು ನರಕದಲ್ಲಿ ಪರಿಹಾರವನ್ನು ಪಡೆಯುವೆ. ಆದ್ದರಿಂದ ನಿನಗೆ ಉಂಟಾಗುವ ಕೇಡನ್ನು ಆಲೋಚಿಸಿ ಕರುಣೆಯಿಂದ ತಲ್ಲಣಗೊಂಡನು. ಎಂದು ಹೇಳುತ್ತಾನೆ.. ಈ ಮಾತುಗಳನ್ನು ಕೇಳಿ ಮಾರಿದತ್ತನು ಹೆದರಿ ವಿಸ್ಮಯಗೊಂಡು ಉದ್ವಿಗ್ನನಾದನು. ಚಂಡಮಾರಿಯು ಪ್ರತ್ಯಕ್ಷಳಾಗಿ ಪ್ರಜೆಗಳೆಲ್ಲರು ನನ್ನನ್ನು ಜಲಗಂಧ, ಹೂಮಾಲೆ , ಅಕ್ಕಿಧೂಪ, ದೀಪ, ಹವಿಸ್ಸು , ತಾಂಬೂಲ ಸಮೂಹದಿಂದ ಪೂಜಿಸುವುದು , ನನಗೆ ಜೀವಜಾತಗಳನ್ನು ಬಲಿಕೊಟ್ಟರೆ ಕೋಪಗೊಳ್ಳುವೆನು ಎಂದು ಹೇಳಿದುದದನ್ನು ಕೇಳಿ ಮಾರಿದತ್ತನಿಗೆ ತಾನು ಅದುವರೆಗೂ ಮಾಡಿದ ಪಾಪಕೃತ್ಯಗಳಿಗಾಗಿ ಭಯವುಂಟಾಯಿತು. ಆದ್ದರಿಂದ ಮಾರಿದತ್ತನು ಕುಸುಮದತ್ತನಿಗೆ ಪಟ್ಟವನ್ನು ಕಟ್ಟಿ ರಾಜ್ಯವನ್ನು ತ್ಯಜಿಸಿದನು.

38. ಅಭಯರುಚಿಯು ಮಾರಿದತ್ತನಿಗೆ ನಾನು ಸಂಕಲ್ಪ ಹಿಂಸೆ ಒಂದರಿಂದಲೇ ನಾನಾ ಜನ್ಮಗಳಲ್ಲಿ ದುಃಖವನ್ನು ಅನುಭವಿಸಿದೆನು.. ಆದರೆ ನೀನು ಭಯವಿಲ್ಲದೆ ಇಷ್ಟು ದೇಹಗಳನ್ನು ಕೊಲ್ಲುತ್ತಿರುವೆ. ಇದಕ್ಕೆ ನರಕದಲ್ಲಿ ಪರಿಹಾರವನ್ನು ಪಡೆಯುವೆ. ಆದ್ದರಿಂದ ನಿನಗೆ ಉಂಟಾಗುವ ಕೇಡನ್ನು ಆಲೋಚಿಸಿ , ಕರುಣೆಯಿಂದ ತಲ್ಲಣಗೊಂಡೆನು.. ಎಂದು ಹೇಳುತ್ತಾನೆ. ಈ ಮಾತುಗಳು ಅಲ್ಲಿದ್ದ ಜೀವಸಮೂಹಗಳಿಗೆ ಅಭಯವನ್ನು ನೀಡುವ ಡಂಗೂರದಂತೆ ಒಪ್ಪಿಗೆಯನ್ನು ಪಡೆಯಲು ಮಾರಿದತ್ತನು ಹೆದರಿ ವಿಸ್ಮಯಗೊಂಡು ಉದ್ವಿಗ್ನನಾದನು.. ಮಾರಿದತ್ತನು ನರಬಲಿಯನ್ನು ನೀಡಲು ಕರೆತಂದಿದ್ದ ಜೀವರಾಶಿಗಳನ್ನು ಸೆರೆಯಿಂದ ಬಿಡಿಸಿದನು. ಇದರಿಂದ ಆನಂದ ಪರವಶವಾದ ಜನರನ್ನು ತನ್ನ ತಂಗಿಯ ಮಕ್ಕಳನ್ನು ಲಾಲಿಸಿದನು. ಮಾರಿದತ್ತನಿಗೆ ಗುಡುಗುಡನೆ ಸುರಿಯುವ ಕಂಬನಿಯಿಂದ ಅಶುಭಕ್ಕೆ ಮಂಗಳ ಸ್ನಾನವನ್ನು ಮಾಡಿದಂತಾಗಲು, ತನ್ನ ಸೋದರ ಮಕ್ಕಳನ್ನು ಒಡಲಿನಲ್ಲಿ ಇಟ್ಟುಕೊಳ್ಳುವಂತೆ ಅಪ್ಪಿಕೊಂಡು ಬೆಚ್ಚನೆಯ ನಿಟ್ಟುಸಿರು ಬಿಟ್ಟನು. ಮಾರಿದತ್ತನು ತಾನು ಅದುವರೆವಿಗೂ ಮಾಡಿದ ಪಾಪಕಾರ್ಯಗಳಿಗೆ ಭಯಗೊಂಡು ಕುಸುಮದತ್ತನಿಗೆ ಧರಿತ್ರನಾಥ ಪದವಿಯನ್ನು ಕೊಟ್ಟು ಸಂನ್ಯಾಸತ್ವದ ದೀಕ್ಷೆಯನ್ನು ಕೈಗೊಂಡನು. ಕೆಲವು ಕಾಲ ಉಗ್ರತಪಸ್ಸು ಮಾಡಿ ಸಮಾಧಿಸ್ಥಿತಿಯಲ್ಲಿ ಪ್ರಾಣತ್ಯಾಗವನ್ನು ಮಾಡಿದನು. ನಂತರ ಅವನು ಮಾಡಿದ ತಪದ ಫಲವಾಗಿ ಮೂರನೆಯ ಸ್ವರ್ಗವು ದೊರಕಿ ಕಲಿಯನ್ನು ಮೂದಲಿಸುವಂತೆ ದೇವನೇ ಆದನು.

39. ಅಭಯರುಚಿ ಮತ್ತು ಮಾರಿದತ್ತರಲ್ಲಿ ಅಭುರುಚಿಯ ಪಾತ್ರ ಮೆಚ್ಚುಗೆಯಾಗುತ್ತದೆ. ಎಕೆಂದರೆ ಹಿಂಸೆ ಮಾಡುವುದಿರಲಿ ಹಿಂಸೆಯನ್ನು ಸಂಕಲ್ಪಿಸುವುದು ಘೋರ ಪಾಪ . ಅಹಿಂಸೆ ಪರಮಧರ್ಮ ಎನ್ನುವ ನಿತ್ಯಸತ್ಯವನ್ನು ತಿಳಿಸುವ ಮೂಲಕ ಅಭಯರುಚಿಯು ಮಾರಿದತ್ತನನ್ನು ಹಿಂಸಾಮಾರ್ಗದಿಂದ ವಿಮುಖನಾಗುವಂತೆ ಮಾಡುತ್ತಾನೆ. ಮನಃಪರಿವರ್ತನೆಗೊಂಡ ಮಾರಿದತ್ತನು ಮುಂದೆ ತನಗೆ ಬರಬಹುದಾದ ನರಕವನ್ನು ನೆನೆದು ಹೆದರಿ ಚಂಡಮಾರಿಗೆ ನರಬಲಿಯನ್ನು ನೀಡಲು ಕರೆತಂದಿದ್ದ ಜೀವರಾಶಿಗಳನ್ನು ಸೆರೆಯಿಂದ ಬಿಡಿಸುವುದರ ಮೂಲಕ ಜೀವರಕ್ಷಣೆ ಮಾಡುತ್ತಾನೆ.. ತಾನು ಅದುವರೆಗೂ ಮಾಡಿದ ಪಾಪಕಾರ್ಯಗಳಿಗೆ ಭಯಗೊಂಡು ಕುಸುಮದತ್ತನಿಗೆ ಧರಿತ್ರೀ ಪದವಿಯನ್ನು ಕೊಟ್ಟು ದೀಕ್ಷೆಯನ್ನು ಕೈಗೊಂಡನು. ಹೀಗೆ ಅಭಯರುಚಿಯು ಮಾರಿದತ್ತನಲ್ಲಿದ್ದ ದಾನವ ಗುಣವನ್ನು ಹೋಗಲಾಡಿಸಿ ದೈವತ್ವಕ್ಕೆ ಏರಿಸುತ್ತಾನೆ. ಆದ್ದರಿಂದ ಅಭಯರುಚಿಯ ಪಾತ್ರ ಮೆಚ್ಚುತ್ತೇನೆ.

****

5. ಹೇಮಂತ

1. ಮಾರುತ
2. ಚೇತನ
3.ಮುಖ
4.ಆದೇಶಸಂಧಿ
5.ಸಾಮಾನ್ಯಾರ್ಥಕ ಅವ್ಯಯ
6.ಮುಖ ಪರದೆ
7.ಗಾಳಿ
8. ಜೋಡುನುಡಿ

9 ಹೇಮಂತರಾಜನು ಇಳೆಗೆ ಬಂದಾಗ ವೃಕ್ಷಗಳು ಎಲೆಗಳನ್ನು ಉದುರಿಸಿ ಬೋಳಾಗಿ ನಿಲ್ಲುತ್ತವೆ.
10. ಮಂಜುಮುಸುಕನ್ನು ಒದ್ದು ಮಲಗಿರುವುವು ಹೊಲಗದ್ದೆಗಳು.
11. ಕಾನನದ ಹಕ್ಕಿ ಕಣ್ಣೀರು ಸುರಿಸುತ್ತಿದೆ.
12. ಪ್ರಕೃತಿಯಲ್ಲಿ ಎಲ್ಲೆಲ್ಲೂ ಚಳಿ, ಹಿಮಮಂಜು ಜಡತ್ವ ಹಾಗೂ ನೀರಸ ವಾತಾವರಣ ತುಂಬಿರುತ್ತದೆ.
13. ಹೇಮಂತ ಋತುವಿನಲ್ಲಿ ತುಂಗೆಯ ತೊರೆ ನಡುಗುತ್ತಾ ಹಿಮದಿಂದ ಮೈನೆದು ಅರಿಯುತ್ತಿದೆ.
14. ಹೇಮಂತನಾಳ್ವಿಕೆಯ ಕಠಿಣ ಶಾಸನಕ್ಕೆ ತಲೆಬಾಗಬೇಕೆಂದು ಕವಿ ಹೇಳುತ್ತಾರೆ.
15. ಸಂಸ್ಕಾರವನ್ನು ಪಡೆಯುವುದೇ ಜೀವಿಗಳ ಧರ್ಮ.
16. ವಸಂತ ಋತು, ಗ್ರೀಷ್ಮ ಋತು, ವರ್ಷ ಋತು, ಶರದ್ ಋತು, ಹೇಮಂತ ಋತು, ಶಿಶಿರ ಋತು .

17. ಹೇಮಂತ ಬಂದಾಗ ಗಿಡಗಳಲ್ಲಿ ಹೂವಿಲ್ಲ ಹಸುರಿಲ್ಲ ಮರಗಳಲ್ಲಿ ಚಿಗುರೆಲೆಗಳಿಲ್ಲ. ದುಂಬಿಗಳ ಧ್ವನಿ ಇಲ್ಲ, ಹಕ್ಕಿಗಳ ಹಾಡಿಲ್ಲ, ಸುವಾಸನೆ ತರುವ ಗಾಳಿಯೂ ಇಲ್ಲ.
18. ಹೊಲಗದ್ದೆಗಳ ಮೇಲೆಲ್ಲಾ ಹೇಮಂತನು ಮಂಜು ಮುಸುಕನ್ನು ಹಾಸಿರುತ್ತಾನೆ, ಹೇಮಂತ ಋತುವಿನಲ್ಲಿ ನದಿಗಳು ಮೆಲ್ಲಮೆಲ್ಲನೆ ಮೆಲ್ಲನೆ ಹರಿಯುತಿರುತ್ತವೆ.
19. ಹೇಮಂತನ ಈ ಕಠಿಣ ಶಾಸನಕ್ಕೆ ತಲೆಬಾಗುವುದೇ ಸೃಷ್ಟಿಯು ತನ್ನನ್ನು ಉಳಿಸಿಕೊಳ್ಳುವ ಒಳಮರ್ಮ. ಋತುಗಳಿಗೆ ತಕ್ಕಂತೆ, ಕಾಲಕ್ಕೆ ತಕ್ಕಂತೆ ತನ್ನಲ್ಲಿ ಬದಲಾವಣೆ ಮಾಡಿಕೊಳ್ಳುವುದೇ ಪ್ರಕೃತಿಯ ಸಹಜ ಧರ್ಮ.
20. ಹೇಮಂತ ಋತುವಿನ ಆಗಮನವಾದಾಗ ಪ್ರಕೃತಿಯು ಮೈಮುದರಿ ಕೂರುತ್ತದೆ. ಮರಗಳು ಹಣ್ಣೆಲೆಗಳನ್ನು ಉದುರಿಸಿಕೊಂಡು ಬೋಳಾಗಿ ನಿಲ್ಲುತ್ತವೆ. ಕಾಡಿನ ಪಕ್ಷಿಗಳು ಕಣ್ಣೀರು ಸುರಿಸುತ್ತವೆ. ತಂಪಾದ ಗಾಳಿ ಹಿಮದ ಸೋನೆಗೆ ಸಿಲುಕಿದ ಮಾನವನ ಜೀವಸರ ಸಿಕ್ಕಂತೆ ಹೊಯ್ದಾಡುತ್ತದೆ.
21. ಆಯ್ಕೆ: ಈ ವಾಕ್ಯವನ್ನು ಎಸ್ವಿ ಪರಮೇಶ್ವರಭಟ್ಟ ಅವರು ಬರೆದಿರುವ ಗಗನಚುಕ್ಕಿ ಕವನ ಸಂಕಲನದಿಂದ ಆಯ್ದ ಹೇಮಂತ ಪದ್ಯಭಾಗದಿಂದ ಆರಿಸಲಾಗಿದೆ
ಸಂದರ್ಭ:- ಹೇಮಂತ ಋತುವಿನ ಕಾಲದಲ್ಲಿ ಪ್ರಕೃತಿ ಮೈಮುದುರಿ ಕೂರುತ್ತದೆ ಹಿಮಗಾಳಿಯಿಂದ ಕೂಡಿದ ಹಾಗೆ ಭಾಸವಾಗುತ್ತದೆ.
ಸ್ವಾರಸ್ಯ :- ಹೇಮಂತ ಋತುವಿನಲ್ಲಿ ಇಡೀ ಪ್ರಕೃತಿಯು ತಟಸ್ಥಭಾವಕ್ಕೆ ಜಾರುದನ್ನು ಸ್ವಾರಸ್ಯಪೂರ್ಣವಾಗಿ ವಿವರಿಸಲಾಗಿದೆ.
22. ಆಯ್ಕೆ: ಈ ವಾಕ್ಯವನ್ನು ಎಸ್ವಿ ಪರಮೇಶ್ವರಭಟ್ಟ ಅವರು ಬರೆದಿರುವ ಗಗನಚುಕ್ಕಿ ಕವನ ಸಂಕಲನದಿಂದ ಆಯ್ದ ಹೇಮಂತ ಪದ್ಯಭಾಗದಿಂದ ಆರಿಸಲಾಗಿದೆ
ಸಂದರ್ಭ:- ಹೇಮಂತ ಋತುವಿನ ಆಗಮನವಾದಾಗ ಮರಗಳು ಹಣ್ಣೆಲೆಗಳನ್ನು ಉದುರಿಸಿಕೊಂಡು ಬೋಳಾಗಿ ನಿಂತಿರುತ್ತವೆ ಮರಗಳನ್ನೇರಿ ಆಡಲು ಬರುವ ಕಾನನದ ಪಕ್ಷಿಗಳು ಕಣ್ಣೀರು ಸುರಿಸುತ್ತವೆ ಎನ್ನುವ ಸಂದರ್ಭದಲ್ಲಿ ಈ ಮಾತನ್ನುಹೇಳಲಾಗಿದೆ
ಸ್ವಾರಸ್ಯ :- ಕಾನನದ ಹಕ್ಕಿಗಳ ಪರದಾಟವನ್ನು ಸ್ವಾರಸ್ಯಪೂರ್ಣವಾಗಿ ವಿವರಿಸಲಾಗಿದೆ.
23. ಆಯ್ಕೆ: ಈ ವಾಕ್ಯವನ್ನು ಎಸ್ವಿ ಪರಮೇಶ್ವರಭಟ್ಟ ಅವರು ಬರೆದಿರುವ ಗಗನಚುಕ್ಕಿ ಕವನ ಸಂಕಲನದಿಂದ ಆಯ್ದ ಹೇಮಂತ ಪದ್ಯಭಾಗದಿಂದ ಆರಿಸಲಾಗಿದೆ

ಸಂದರ್ಭ:- ಹೇಮಂತ ಋತುವಿನ ಈ ಸಮಯದಲ್ಲಿ ತೀವ್ರವಾದ ಮಂಜುಮುಸುಕು ಬೀಳುತ್ತಿರುವುದು ಮರ-ಗಿಡಗಳು ಎಲೆಗಳನ್ನು ಉದುರಿಸಿ ಬೋಳಾಗಿ ನಿಂತಿರುತ್ತವೆ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ

ಸ್ವಾರಸ್ಯ :- ಹೇಮಂತ ಋತುವಿನಲ್ಲಿ ಪ್ರಕೃತಿಯ ಎಲ್ಲಡೆ ಜಡತ್ವ ತುಂಬಿರುವುದನ್ನು ಸಾರಸ್ಯಪೂರ್ಣವಾಗಿ ವಿವರಿಸಲಾಗಿದೆ.

24. ಆಯ್ಕೆ: ಈ ವಾಕ್ಯವನ್ನು ಎಸ್ವಿ ಪರಮೇಶ್ವರಭಟ್ಟ ಅವರು ಬರೆದಿರುವ ಗಗನಚುಕ್ಕಿ ಕವನ ಸಂಕಲನದಿಂದ ಆಯ್ದ ಹೇಮಂತ ಪದ್ಯಭಾಗದಿಂದ ಆರಿಸಲಾಗಿದೆ

ಸಂದರ್ಭ :- ಹೇಮಂತ ಆಗಮನವಾದಾಗ ಪ್ರಕೃತಿ ಮೈಮುದುರಿ ಕೂರುತ್ತದೆ. ಕೆಂಪಾದ ಚಿಗುರುಗಳನ್ನು ರಥಗಳೆನಿಸಿ ಮೆರೆಯುತ್ತಾ ಗಿಡಮರಬಳ್ಳಿಗಳು ಮುಖದ ಕಾಂತಿ ಕಳೆದುಕೊಂಡು ಮನಸ್ಸುನೊಂದು ಭಾಗ್ಯಹೀನರಂತೆ ಕಾಣುತ್ತಿವೆ.

ಸ್ವಾರಸ್ಯ :- ಹೇಮಂತ ಋತುವಿನ ಕಾಲದಲ್ಲಿ ಪ್ರಕೃತಿಯಲ್ಲಿ ಹಾಗುವ ಬದಲಾವಣೆಗಳು ಸ್ವಾರಸ್ಯಪೂರ್ಣವಾಗಿ ವಿವರಿಸಲಾಗಿದೆ.

25. ಆಯ್ಕೆ: ಈ ವಾಕ್ಯವನ್ನು ಎಸ್ವಿ ಪರಮೇಶ್ವರಭಟ್ಟ ಅವರು ಬರೆದಿರುವ ಗಗನಚುಕ್ಕಿ ಕವನ ಸಂಕಲನದಿಂದ ಆಯ್ದ ಹೇಮಂತ ಪದ್ಯಭಾಗದಿಂದ ಆರಿಸಲಾಗಿದೆ

ಸಂದರ್ಭ :- ಹೇಮಂತ ಋತುವಿನ ಕಠಿಣಶಾಸನವನ್ನು ತಲೆಬಾಗಿ ಸ್ವೀಕರಿಸಬೇಕು. ಇದೇ ಸೃಷ್ಟಿಯು ತನ್ನನ್ನು ಉಳಿಸಿಕೊಳ್ಳುವ ಒಳಮರ್ಮ ಋತುಗಳಿಗೆ ತಕ್ಕಂತೆ ತನ್ನಲ್ಲಿ ಬದಲಾವಣೆಯನ್ನು ಮಾಡಿಕೊಳ್ಳುವುದು ಪ್ರಕೃತಿಯ ಸಹಜಧರ್ಮವಾಗಿದೆ.

ಸ್ವಾರಸ್ಯ :- ಪ್ರಕೃತಿಯು ಜಡವಾದಂತೆ ಕಂಡರು ಮತ್ತೆ ಹೊಸ ಋತುಬಂದಾಗ ಅದು ಚಿಗುರೊಡೆದು ನಳನಳಿಸುವಂತೆ ಮನುಷ್ಯರು ಕೂಡ ಹೊಸಕಾಲಕ್ಕೆ ಹೊಸಬದಲಾವಣೆಗೆ ಒಳಗಾಗಲೇಬೇಕು ಎಂಬುದನ್ನು ಕವಿಯು ಸ್ವಾರಸ್ಯಪೂರ್ಣವಾಗಿ ವಿವರಿಸಿದ್ದಾರೆ.

26. ಪರಮೇಶ್ವರಭಟ್ಟ ಅವರು 1914, ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿಯಲ್ಲಿ ಜನಿಸಿದರು. ಇವರು ಬರೆದಿರುವ ಕೃತಿಗಳೆಂದರೆ ಇಂದ್ರುಚಾಪ, ಹೊನ್ನೆ, ಉಪ್ಪುಕಡಲು, ರಾಗಿಣಿ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಲಭಿಸಿರುವ ಪ್ರಶಸ್ತಿಗಳೆಂದರೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಲಭಿಸಿವೆ.

27. ಹೇಮಂತ ಋತುರಾಜನಿಳೆಗೆ ಬಂದಿಳಿವಂದು
ಹೂವಿಲ್ಲ ಹಸುರಿಲ್ಲ ಚಿಗುರೆಲೆಗಳಿಲ್ಲ.
ದುಂಬಿಗಳ ದನಿಯಿಲ್ಲ ಹಕ್ಕಿಗಳ ಹಾಡಿಲ್ಲ
ಕುಸುಮ ಗಂಧವ ತರುವ ಮರುತನಿಲ್ಲ.

28 .ಹೇಮಂತನಾಳಿಕೆಯ ಕಠಿಣ ಶಾಸನವಿಂತು
ಅದಕೆ ತಲೆವಾಗುವುದೆ ಸೃಷ್ಟಿಯೊಳ ಮರ್ಮ
ಒಂದೊಂದು ಋತುವಿನಲಿ ಒಂದೊಂದು ರೀತಿಯಲಿ
ಸಂಸ್ಕಾರ ಪಡೆಯುವುದೆ ಜೀವಗಳ ಧರ್ಮ

29. ಆಯ್ಕೆ:- ವಾಕ್ಯವನ್ನು ಎಸ್ ವಿ ಪರಮೇಶ್ವರಭಟ್ಟರವರು ರಚಿಸಿರುವ ಗಗನಚುಕ್ಕಿ ಕವನಸಂಕಲನದಿಂದ ಆರಿಸಲಾಗಿದೆ.

ಹೇಮಂತ ಕವಿತೆಯಲ್ಲಿ ಪರಮೇಶ್ವರಭಟ್ಟರವರು ಪ್ರಕೃತಿಯಲ್ಲಿ ಕಂಡು ಬರುವ ದೃಶ್ಯಗಳನ್ನು ಮನಮುಟ್ಟುವಂತೆ ಸೆರೆಹಿಡಿದಿದ್ದಾರೆ. ಸಮಯದಲ್ಲಿ ಉತ್ತರಾರ್ಧಗೋಳಕ್ಕೆ ಚಳಿಗಾಲ. ಪ್ರಕೃತಿ ಈ ಸಮಯದಲ್ಲಿ ಮೈಮುದರಿ ಕೂರುತ್ತದೆ. ಹೇಮಂತ ಋತುವಿನ ಆ ಗಮನವಾದಾಗ ಪ್ರಕೃತಿ ಮುದುರಿ ಕೂರುತ್ತದೆ. ಮರಗಳು ಹಣ್ಣೆಲೆಗಳನ್ನು ಉದುರಿಸಿಕೊಂಡು ಬೋಳಾಗಿ ನಿಲ್ಲುತ್ತವೆ. ಬರಡು ಗಾಳಿಮರಗಳನ್ನೇರಿ ಕಾನನದ ಪಕ್ಷಿಯು ಬಹುದುಃಖ ಪಟ್ಟು ಕಣ್ಣೀರು ಸುರಿಸುತ್ತದೆ. ಹಿಮಗಾಳಿ ಮಂಜು ತುಂಬಿರುತ್ತದೆ ಹೇಮಂತನಾಳ್ವಿಕೆಯ ಕಠಿಣಶಾಸನಕ್ಕೆ ತಲೆಬಾಗುವುದೇ ಸೃಷ್ಟಿಯು ತನ್ನನ್ನು ಉಳಿಸಿಕೊಳ್ಳುವವರ ಒಳಮರ್ಮವಾಗಿದೆ

ಮೌಲ್ಯ :- ಹೊಸ ಬದಲಾವಣೆಗಳಿಗೆ ಕಾಯಬೇಕು ಕಷ್ಟಸುಖಗಳನ್ನು ಸಮಾನವಾಗಿ ಸ್ವೀಕರಿಸಬೇಕೆಂಬ ಮೌಲ್ಯವನ್ನು ತಿಳಿಸುತ್ತದೆ.

30. ಹೇಮಂತ ಬಂದಿಳಿದಾಗ ಇಳೆಯಲ್ಲಿ ಹೂವಿಲ್ಲ, ಹಸುರಿಲ್ಲ ಚಿಗುರೆಲೆಗಳಿಲ್ಲ. ಹಕ್ಕಿಗಳ ಹಾಡಿಲ್ಲ ದುಂಬಿಗಳ ದನಿಇಲ್ಲ, ಕುಸುಮ ಗಂಧವ ತರುವ ಮರುತನು ಇರಲಿಲ್ಲ. ಕೆಂಪಾದ ಚಿಗುರೆಲೆಗಳು ರಥಗಳೆನಿಸಿ ಬೆಳೆಯುತಿರುವ ಗಿಡಮರಬಳ್ಳಿಗಳು ಮೌನವಾಗಿ ಮುಖದ ಕಾಂತಿ ಕಳೆದುಕೊಂಡು, ಮನಸ್ಸುನೊಂದು ಭಾಗ್ಯಹೀನರಂತೆ, ಧೀನರಂತೆನಿಂತಿವೆ. ಹೊಲಗದ್ದೆಗಳ ಮೇಲೆ ಹೇಮಂತನು ಮಂಜು ಮುಸುಕನ್ನು ಹಾಸಿರುತ್ತಾನೆ. ಹೇಮಂತ ಋತುವಿನಲ್ಲಿ ನದಿಗಳು ಮೆಲ್ಲಮೆಲ್ಲನೆ ಮೈನಡುಗುತ್ತ ಹರಿಯುತ್ತವೆ. ಪ್ರಕೃತಿ ಆ ಸಮಯದಲ್ಲಿ ಮೈಮುದುರಿ ಕೂರುತ್ತದೆ. ಹಿಮದ ಸೋನೆಗೆ ಮಾನವನ ಜೀವಸೆರೆಸಿಕ್ಕಂತೆ ಆಗುತ್ತದೆ. ಸೃಷ್ಟಿಯ ಕಠಿಣಶಾಸನದ ಮುಂದೆ ಪ್ರತಿಯೊಬ್ಬರು ತಲೆಬಾಗಲೇಬೇಕು. ಪ್ರತಿಕಾಲವು ವಸಂತಕಾಲವಾಗುವುದಿಲ್ಲ ಪ್ರತಿಯೊಂದನ್ನು ನೈಸರ್ಗಿಕ ಎಂದು ಸ್ವೀಕರಿಸಬೇಕು ಎಂದು ಕವಿಯು ಮಾನವರಿಗೆ ಪ್ರಕೃತಿಯೊಂದಿಗೆ ಉತ್ತಮ ಸಂದೇಶವನ್ನು ನೀಡಿದ್ದಾರೆ.

31ಶ. ಹೇಮಂತ ಋತುವಿನಲ್ಲಿ ಪ್ರಕೃತಿಯಲ್ಲಿ ಜಡತ್ವ ತುಂಬಿರುತ್ತದೆ. ಚಳಿ ಹಿಮಗಾಳಿಯಿಂದಾಗಿ ಪ್ರಕೃತಿಯು ಮೈಮುದುರಿ ಕುಳಿತಿರುತ್ತದೆ. ಏನನ್ನು ಮಾಡಲು ಆಸಕ್ತಿ ಇಲ್ಲ ಎಂಬಂತೆ ತೋರುತ್ತದೆ. ಹಕ್ಕಿಯು ಧ್ವನಿ ಎತ್ತಿ ಹಾಡುವುದಿಲ್ಲ. ಹೊಲಗದ್ದೆಗಳು ಮೈಮುದರಿ ಕುಳಿತಿರುತ್ತವೆ. ಹಕ್ಕಿಯು ಕಣ್ಣೀರು ಸುರಿಸುತ್ತದೆ. ಗಿಡಗಳು ಬೋಳುಬೋಳಾಗಿ ನಿಂತಿರುತ್ತವೆ. *ನದಿಗಳುಮೈನಡಗಿಸುತ್ತಾಹರಿಯುತ್ತವೆ.* ಪ್ರತಿ ಋತು ಪ್ರಕೃತಿಯಲ್ಲಿ ಅಗತ್ಯವಾಗಿದೆ. ಸದಾ ವಸಂತ ಋತುವೆ ಬೇಕೆಂದು ಬಯಸಬಾರದು. ಪ್ರಾಣಿಗಳಿಗೆ ಸರಿಯಾಗಿ ಆಹಾರ ಸಿಗುವುದಿಲ್ಲ, ಈ ಕವಿತೆಯನ್ನು ನಮ್ಮ ಜೀವನಗಳಿಗೆ ನಾವು ಅನ್ವಯಿಸಿಕೊಳ್ಳಬಹುದು. ಹೇಮಂತನಾಳ್ವಿಕೆಯ ಕಠಿಣ ಶಾಸನಕ್ಕೆ ತಲೆಬಾಗುವುದೇ ಸೃಷ್ಟಿಯ ಧರ್ಮ. ಒಂದೊಂದು ರೀತಿಯಲ್ಲಿ ಸಂಸ್ಕಾರ ಪಡೆಯುವುದೇ ಜೀವಿಗಳ ಧರ್ಮ ಎಂದು ಕವಿ ಪರಮೇಶ್ವರಭಟ್ಟರವರುವಿ ವರಿಸಿದ್ದಾರೆ.

****

6: ತತ್ವಪದಗಳು

1 ಎ. ಅನ್ನ
2 ಬಿ. ವೇತ್ರ
3 ಸಿ. ನಿಷ್ಕರುಣೆ
4 ಡಿ. ದೋಣಿ ನಡೆಸುವ
5 ಬಿ. ಜೋಡಿ ನುಡಿ
6 ಡಿ. ಸಪ್ತಮಿ
7 ಎ. ಸವರ್ಣದೀರ್ಘ ಸಂಧಿ
8 ಡಿ. ಲೋಪ ಸಂಧಿ.
9 ಎ. ಚತುರ್ಥಿ
10 ಸಿ. ಅ
11 ಬಿ. ಜನುಮ
12 ಡಿ. ನಿಚ್ಚ

13. ಕಿರಿದು
14. ಆಗಮ ಸಂಧಿ
15. ಚತುರ್ಥಿ ವಿಭಕ್ತಿ
16. ಎತ್ತಿನ ಗಾಡಿ
17. ಶತೃ
18 ಮೈತುಂಬಿಕೊಳ್ಳು
19 ಬೀಜ ಬಿತ್ತುವ ಸಾಧನ
20 ದ್ವಿರುಕ್ತಿ
21 ಅಸತ್ಯ

22. ಗುರು ಕರಣವಿಲ್ಲದವನ ಸ್ನೇಹವು ಸಾಯುವ ತನಕ ಬೇಡ ಎಂದಿದ್ದಾರೆ.
23. ಹೀನ ಮನುಷ್ಯನ ಸ್ನೇಹವನ್ನು ಮಾಡಿ ಕೆಡಬಾರದು.
24. ತತ್ವಪದಕಾರರು ಸಾಧುಸತ್ಪುರುಷರ ಸೇವೆ ಮಾಡಬೇಕು ಎಂದಿದ್ದಾರೆ.
25. ಹುಟ್ಟುತ್ತ ಹುಲ್ಲಾಗಿ ಬೆಳೆಯುತ್ತ ಮೈತುಂಬಿಕೊಂಡು ದಿವಿನಾಗಿ ಬೆಳೆಯಿತು.
26. ಬಿದಿರಿನ ಚಪ್ಪರವು ನೆರಳನ್ನು ಕೊಡುತ್ತದೆ.
27. ಬಿದಿರು ಶಿಶುನಾಳಧೀಶನಿಗೆ ಓಲಗವಾಗುತ್ತದೆ.
28. ಕರ್ನಾಟಕದ ಕಬೀರ ರೆಂದು ಹೆಸರು ಪಡೆದವರು ಶಿಶುನಾಳ ಶರೀಫರು.
29. ಕಡಕೋಳ ಮಡಿವಾಳಪ್ಪ ಅವರ ಅಂಕಿತನಾಮ ಮಹಾಂತೇಶ.
30. ಮಡಿವಾಳಪ್ಪ ಅವರ ತಂದೆ ವಿರೂಪಾಕ್ಷಯ್ಯ ತಾಯಿ ಗಂಗಮ್ಮ.
31. ಶಿಶುನಾಳ ಶರೀಫರ ಬಾಲ್ಯದ ಹೆಸರು ಮಹಮ್ಮದ್ ಶರೀಫ.

32. ಬಿದಿರು ಮಕ್ಕಳಿಗೆ ತೂಗುವ ತೊಟ್ಟಿಲಾಗಿ, ರೈತರಿಗೆ ಬಿತ್ತುವ ಕೂರಿಗೆಯಾಗಿ, ಮಹಾತ್ಮರ ಕೈಗೆ ಬೆತ್ತವಾಗಿ ಉಪಯೋಗವಾಗುತ್ತದೆ.

33. ಧಾನ್ಯಗಳನ್ನು ಕುಟ್ಟಲು ಒನಕೆಯಾಗಿ, ಬೀಸುವ ಕಲ್ಲಿಗೆ ಗೂಟವಾಗಿ, ಕೇರಲು ಮೊರವಾಗಿ ಬಿದಿರು ಸಹಾಯಕವಾಗಿರುತ್ತದೆ.

34. ತತ್ವಪದಕಾರರು ಸ್ನೇಹ ಮಾಡುವ ಬಗೆಗೆ ಗುರುಕರಣ ವಿಲ್ಲದವನ ಸ್ನೇಹವನ್ನು ಸಾಯುವವರೆಗೂ ಮಾಡಬಾರದು, ಕೊಟ್ಟ ಮಾತಿನಂತೆ ನಡೆಯದವನ ಸ್ನೇಹ ಮಾಡಬಾರದು, ಹೀನ ಮನುಷ್ಯನ ಸ್ನೇಹ ಮಾಡಿ ಕೆಡಬಾರದು ಎಂದು ತಿಳಿಸಿದ್ದಾರೆ.

35. ಅಕ್ಕ ತಂಗಿಯರೆಂದು ಬಾಯಲ್ಲಿ ಕರೆದು ಅವರ ಬಗ್ಗೆ ಕೆಟ್ಟದಾಗಿ ಯೋಚಿಸಬಾರದು. ಸುಮ್ಮನೆ ಊಟ ಮಾಡಿಕೊಂಡು ಕುಳಿತು ಕಾಲಕಳೆಯಬಾರದು. ಹಳೆಯದೆಲ್ಲವೂ ಶ್ರೇಷ್ಠವಲ್ಲವೆಂದು ಕಡೆಗಣಿಸಿ, ಇಂದಿನದೆ ಶ್ರೇಷ್ಠವೆಂದು ಸರಿ ಮಾಡಬಾರದು, ಎಂದು ಗುರುಕರುಣೆ ಪದ್ಯದಲ್ಲಿ ಹೇಳಲಾಗಿದೆ.

36. ಕಡಕೋಳ ಮಡಿವಾಳಪ್ಪ ಅವರು ಕ್ರಿ.ಶ 1765 ರಲ್ಲಿ ಕಲ್ಬುರ್ಗಿ ಜಿಲ್ಲೆಯ ಅಫಜಲಪುರ ತಾಲೂಕಿನ ಬಿದನೂರು ಗ್ರಾಮದಲ್ಲಿ ಜನಿಸಿದರು. ಇವರ ತಾಯಿ ಗಂಗಮ್ಮ, ತಂದೆ ವಿರೂಪಾಕ್ಷಯ್ಯ. ಇವರು ಲಿಂಗ ದೀಕ್ಷೆಯನ್ನು ಪಡೆದರು. ಇವರ ಅಂಕಿತನಾಮ ಮಹಾಂತೇಶ. ತತ್ವಪದಗಳನ್ನು ರಚಿಸಿದ್ದಾರೆ.

37. ಸಂತ ಶಿಶುನಾಳ ಶರೀಫ ಅವರು ಕ್ರಿ.ಶ 1819 ರಲ್ಲಿ ಧಾರವಾಡ ಜಿಲ್ಲೆಯ ಶಿಗ್ಗಾಂವಿ ತಾಲೂಕಿನ ಶಿಶುನಾಳದಲ್ಲಿ ಜನಿಸಿದರು. ಬಾಲ್ಯದ ಹೆಸರು ಮಹಮ್ಮದ್ ಶರೀಫ. ಗುರು ಕಳಸದ ಗೋವಿಂದ ಭಟ್ಟರು. ಇವರು ಕರ್ನಾಟಕದ ಕಬೀರರೆಂದೇ ಪ್ರಸಿದ್ಧರಾಗಿದ್ದಾರೆ. ಇವರ ಅಂಕಿತನಾಮ ಶಿಶುನಾಳಾಧೀಶ, ಶಿಶುನಾಳೇಶ. ಇವರು ನೂರಾರು ತತ್ವಪದಗಳನ್ನು ರಚಿಸಿದ್ದಾರೆ.

37. ಬೀಸುವ ಗೂಟವಾದೆ

ಕೇರುವ ಮರವಾದೆ
ಮುದುಕರಿಗೆ ಊರುವ ಬೆತ್ತವಾದೆ.

38. ಮಾತಿನೊಳಗ ಮತಿಲ್ಲದವನ ಸ್ನೇಹ
ಜಾತಿಜನ್ಮಕು ಬೇಡ|
ಹೀನ ಮನುಷ್ಯನ ಸ್ನೇಹ ಮಾಡಿ
ನೀನು ಕೆಡಲಿಬೇಡ

39. ಈ ಪದ್ಯ ಭಾಗವನ್ನು ಶ್ರೀ ಕಡಕೋಳ ಮಡಿವಾಳಪ್ಪನವರು ರಚಿಸಿರುವ ತತ್ವಪದಗಳಿಂದ ಆಯ್ದ ಗುರುಕರುಣೆ ತತ್ವಪದ ದಿಂದ ಆರಿಸಿಕೊಳ್ಳಲಾಗಿದೆ. ತತ್ವಪದಕಾರರು ಗುರು ಕರುಣವಿಲ್ಲದವರ ಸ್ನೇಹವನ್ನು ಸಾಯುವ ತನಕ ಮಾಡಬಾರದು. ತಾನಾಡುವ ಮಾತಿನಂತೆ ನಡೆದುಕೊಳ್ಳದವನು ಸ್ನೇಹವನ್ನು ಜನ್ಮಜನ್ಮಾಂತರಕ್ಕೂ ಮಾಡಬಾರದು. ಹಾಗೂ ಹೀನ ಮನುಷ್ಯನ ಸ್ನೇಹವನ್ನು ಮಾಡಿ ಕೆಡಬಾರದು ಎಂದು ತಿಳಿಸಿದ್ದಾರೆ.

40. ಆಯ್ಕೆ: ಈ ವಾಕ್ಯವನ್ನು ಕಡಕೋಳ ಮಡಿವಾಳಪ್ಪನವರು ಬರೆದಿರುವ ಗುರು ಕರುಣ ಎಂಬ ತತ್ವಪದದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಎಂತಹ ಜನರ ಸ್ನೇಹ ಮಾಡಬಾರದು ಎಂದು ತಿಳಿಸುವ ಸಂದರ್ಭದಲ್ಲಿ ಮಡಿವಾಳಪ್ಪನವರು ಈ ಮಾತನ್ನು ಹೇಳಿದ್ದಾರೆ.
ಸ್ವಾರಸ್ಯ: ಗುರು ಕರುಣೆ ಇಲ್ಲದವನ ಕೊಟ್ಟ ಮಾತಿನಂತೆ ನಡೆಯದವನ ಹೀನ ಮನುಷ್ಯರ ಸ್ನೇಹ ಮಾಡಬಾರದು ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ.

41. ಆಯ್ಕೆ: ಈ ವಾಕ್ಯವನ್ನು ಕಡಕೋಳ ಮಡಿವಾಳಪ್ಪನವರು ಬರೆದಿರುವ ಗುರುಕರಣ ತತ್ವಪದದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ: ಸುಮ್ಮನೆ ವ್ಯರ್ಥವಾಗಿ ಕಾಲಕಳೆಯಬಾರದು ಎಂಬುದನ್ನು ತಿಳಿಸುವ ಸಂದರ್ಭದಲ್ಲಿ ಮಡಿವಾಳಪ್ಪನವರು ಈ ಮಾತನ್ನು ಹೇಳಿದ್ದಾರೆ.
ಸ್ವಾರಸ್ಯ: ಯಾವುದೇ ವ್ಯಕ್ತಿ ಸೋಮಾರಿಯಾಗಿ ಕಾಲ ಕಳೆಯಬಾರದು ಈ ಮಾತಿನ ಸ್ವಾರಸ್ಯವಾಗಿದೆ.

42. ಆಯ್ಕೆ: ಈ ವಾಕ್ಯವನ್ನು ಶಿಶುನಾಳ ಶರೀಫರು ಬರೆದಿರುವ ಬಿದಿರು ಎಂಬ ತತ್ವಪದದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ: ಬಿದುರಿನ ಉಪಯೋಗಗಳನ್ನು ವರ್ಣಿಸುವ ಸಂದರ್ಭದಲ್ಲಿ ಶಿಶುನಾಳ ಶರೀಫರು ಈ ಮಾತುಗಳನ್ನು ಹೇಳಿದ್ದಾರೆ.
ಸ್ವಾರಸ್ಯ : ಬಹುಪಯೋಗಿಯಾದ ಬಿದುರು ಅನೇಕ ರೀತಿಯಲ್ಲಿ ಮಾನವನ ಜೀವನದಲ್ಲಿ ಬಳಸಲ್ಪಡುತ್ತದೆ. ಅದೇ ರೀತಿ ಮಹಾತ್ಮರು ಬಳಸುವ ಬೆತ್ತವಾಗಿದೆ ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ.

43. ಆಯ್ಕೆ: ಈ ವಾಕ್ಯವನ್ನು ಶಿಶುನಾಳ ಶರೀಫರು ಬರೆದಿರುವ ಬಿದಿರು ಎಂಬ ತತ್ವಪದ ದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ: ಬಿದಿರು ಬೆಳೆಯುವ ಬಗೆಯನ್ನು ವರ್ಣಿಸುವ ಸಂದರ್ಭದಲ್ಲಿ ಶರೀಫರು ಈ ಮಾತನ್ನು ಹೇಳಿದ್ದಾರೆ.
ಸ್ವಾರಸ್ಯ : ಬೃಹದಾಕಾರವಾಗಿ ಬೆಳೆಯುವ ಬಿದಿರು ಹುಟ್ಟುವಾಗ ಹುಲ್ಲಾಗಿ ಹುಟ್ಟುತ್ತದೆ, ಆದರೆ ಬೆಳೆ ಬೆಳೆಯುತ್ತಾ ಮೈತುಂಬಿ ಕೊಳ್ಳುತ್ತದೆ ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ.

44. ಕಡಕೋಳ ಮಡಿವಾಳಪ್ಪನವರು ಗುರುಕರುಣೆ ಎಂಬ ತತ್ವಪದದಲ್ಲಿ ಸ್ನೇಹ, ಸಂಬಂಧ, ಸೇವೆ ಮುಂತಾದ ವಿಷಯಗಳನ್ನು ಕುರಿತು ಹೇಳಿದ್ದಾರೆ.
ಯಾವ ವ್ಯಕ್ತಿಯು ಗುರುಗಳ ಬಗ್ಗೆ ಗೌರವವನ್ನು ಹೊಂದಿಲ್ಲವೋ, ಅವರ ಕೃಪೆಯನ್ನು ಗಳಿಸಿಲ್ಲವೋ, ಅಂತಹವನ ಸ್ನೇಹವನ್ನು ಸಾಯುವವರೆಗೂ ಮಾಡಬಾರದು. ಕೊಟ್ಟ ಮಾತಿನಂತೆ ನಡೆಯದವನ ಸ್ನೇಹ ಮಾಡಬಾರದು. ಕೆಟ್ಟ ಮನುಷ್ಯರ ಸ್ನೇಹ ಮಾಡಿ ಕೆಡಬಾರದು. ಸಾಧು ಸತ್ಪುರುಷರ ಸೇವೆ ಮಾಡುವುದರ ಮೂಲಕ ಜೀವನದಲ್ಲಿ ಸಾರ್ಥಕತೆಯನ್ನು ಪಡೆಯಬೇಕು.

ಅಕ್ಕ ತಂಗಿಯರೆಂದು ಬಾಯಲ್ಲಿ ಕರೆದು ಅವರ ಬಗ್ಗೆ ಕೆಟ್ಟದಾಗಿ ಯೋಚಿಸಬಾರದು. ಸುಮ್ಮನೆ ಊಟ ಮಾಡಿಕೊಂಡು ಕುಳಿತು ಸೋಮಾರಿಯಾಗಿ ಕಾಲ ಕಳೆಯಬಾರದು. ಹಳೆಯದೆಲ್ಲವೂ ಶ್ರೇಷ್ಠವಲ್ಲವೆಂದು ಕಡೆಗಣಿಸಿ, ಇಂದಿನದೇ ಶ್ರೇಷ್ಠವೆಂದು ಸರಿ ಮಾಡಬಾರದು.

45. ಶಿಶುನಾಳ ಶರೀಫರು ಬಿದಿರಿನ ಬಗ್ಗೆ ಈ ತತ್ವಪದದಲ್ಲಿ ತಿಳಿಸಿದ್ದಾರೆ ಹುಟ್ಟುತ್ತ ಹುಲ್ಲಾಗಿ ಬೆಳೆಯುತ್ತಾ ಬೆಳೆಯುತ್ತಾ ಮೈತುಂಬಿಕೊಳ್ಳುತ್ತದೆ ಮಕ್ಕಳನ್ನು ತೂಗುವ ತೊಟ್ಟಿಲಾಗಿ ಪಲ್ಲಕ್ಕಿಯಾಗಿ ಹೂ ಪತ್ರಗಳಿಗೆ ಬುಟ್ಟಿಯಾಗಿ ಮಹಾತ್ಮರ ಕೈಗೆ ಬೆತ್ತವಾಗಿ ಬಳಕೆಯಾಗುತ್ತದೆ.

ಕುಟ್ಟುವ ಒನಕೆಯಾಗಿ, ಅಂಬಿಗನಿಗೆ ದೋಣಿ ನಡೆಸಲು ಕೋಲಾಗಿ, ರೈತನಿಗೆ ಹೊಲದಲ್ಲಿ ಬಿತ್ತನೆ ಮಾಡಲು ಉಪಯುಕ್ತವಾದ ಕೂರಿಗೆಯಾಗಿ ಬಳಕೆಯಾಗುತ್ತದೆ.

ಬೀಸುವ ಕಲ್ಲಿನ ಗೂಟವಾಗಿ, ಧಾನ್ಯನಕೇರುವ ಮೊರವಾಗಿ, ಮುದುಕರಿಗೆ ಊರುಗೋಲಾಗಿ, ಕೋಲಾಟ ಆಡಲು ಬಳಸುವ ಕೋಲಾಗಿ, ಎತ್ತಿನ ಬಂಡಿಯಾಗಿ, ಜಾತ್ರೆಯಲ್ಲಿ ಬಳಸುವ ನಂದಿಕೋಲಾಗಿ, ನೆರಳಿಗೆ ಚಪ್ಪರವಾಗಿ, ಏಕದಂಡಿ ಎಂಬ ವಾದ್ಯವಾಗಿ ಓಲಗ(ಶಹನಾಯಿ) ಆಗಿ ಬಿದಿರು ಬಹುರೂಪದದಲ್ಲಿ ಮಾನವನಿಗೆ ಉಪಕಾರಿಯಾಗಿದೆ.

****

7._ ನಿನ್ನ ಮುತ್ತಿನ ಸತ್ತಿಗೆಯನಿತ್ತು ಸಲಹು

I. ಬಹುಆಯ್ಕೆಪ್ರಶ್ನೆ (ಕ್ರಮಾಕ್ಷರದೊಂದಿಗೆಬರೆಯುವುದು)

1. ಸಿ) ಆರು
2. ಎ) ಮಾತ್ರಾ
3. ಬಿ) ಆರು
4. ಎ) ಆದಿ
5. ಬಿ) ಗುರು
6. ಸಿ) 4 ಮತ್ತು 5

7. ಉತ್ತರಾರ್ಧ
8. ಮಾತ್ರೆಗಳು
9. -UU
10. ನಾಲ್ಕು ಮಾತ್ರೆಗಳು

11. ಹರಿಶ್ಚಂದ್ರನು ಕಾಡುಹಂದಿಯನ್ನು ಹಿಂಬಾಲಿಸುತ್ತಾ ವಿಶ್ವಾಮಿತ್ರನ ಬನಕ್ಕೆ ಬಂದನು.
12. ಹರಿಶ್ಚಂದ್ರನ ಗುರು ವಸಿಷ್ಟಮುನಿ
13. ಗಾನರಾಣಿಯರು ಅವನೀಶನನ್ನು ನೋಡಲು ಬಂದದ್ದನ್ನು ಕವಿಯು ಕಾಳರಾತ್ರಿಯ ಕನ್ಯೆಯರು ಹಗಲನ್ನು ನೋಡುವುದಕ್ಕೆಂದು ಬಂದಂತೆ ಎಂದು ಹೋಲಿಸಿದ್ದಾನೆ.
14. ಹರಿಶ್ಚಂದ್ರನು ಎರಡನೇ ಮುಕ್ಕಣ್ಣನೆನಿಪ ಗುರುವಿನ ಆಜ್ಞೆಯನ್ನು ಮೀರಿದ ದುಃಖವನ್ನು ಮರೆತನು.
15. ಗಾನರಾಣಿಯರಿಗೆ ಹರಿಶ್ಚಂದ್ರನು ಸರ್ವಾಭರಣವನ್ನು ಬಹುಮಾನವಾಗಿ ಕೊಟ್ಟನು
16. ಗಾನರಾಣಿಯರು ಹರಿಶ್ಚಂದ್ರನನ್ನು ಮುತ್ತಿನ ಸತ್ತಿಗೆಯನ್ನು ಕೊಡು ಎಂದು ಕೇಳಿದರು
17. ಯುದ್ಧರಂಗದಲ್ಲಿ ಸತ್ತಿಗೆಯನ್ನು ನೋಡಿದರೆ ಶತ್ರುಗಳು ನಿಲ್ಲುವುದಿಲ್ಲ.
18. ಈ ಸತ್ತಿಗೆಯ ನೆರಳಿನಲ್ಲಿ ಯಾವನು ಇರುವನೋ ಆತನಿಗೆ ವಿಪತ್ತು, ಅಡಚಣೆಗಳು, ಬಡತನ, ರೋಗ, ಸೋಲು, ಭಯ ಕಳೆದು ಹೋಗುವುದು.
19. ಹರಿಶ್ಚಂದ್ರನು ಸತ್ತಿಗೆ ಇಲ್ಲದೆ ತಂದೆತಾಯಿಯರು ಇಲ್ಲ ಎಂದನು.
20. ಸತ್ತಿಗೆಯು ರಾಜಪಟ್ಟ ಕಟ್ಟುವಾಗ ದೈವಸ್ವರೂಪ ಎಂದು ಹರಿಶ್ಚಂದ್ರನು ಹೇಳುತ್ತಾನೆ.

21. ಕಾಳರಾತ್ರಿಯ ಕನ್ಯೆಯರು ಹಗಲನ್ನು ನೋಡುವುದಕ್ಕೆಂದು ಬಂದರೋ ! ದೇವತೆಗಳು ಮತ್ತು ರಾಕ್ಷಸರು ಸಮುದ್ರವನ್ನು ಮಂಥನ ಮಾಡುವ ಸಮಯದಲ್ಲಿ ಹೊರಹೊಮ್ಮಿದ ಹೊಸ ವಿಷದ ಹೊಗೆ ಸುರಿದು, ಕಪ್ಪಾಗಿ ಗಟ್ಟಿಯಾದಂತೆ ಮನುಷ್ಯರಾದರೋ ! ಬ್ರಹ್ಮನು ನೀಲಿಬಣ್ಣದಿಂದ ಮಾಡಿದ ಗೊಂಬೆಗಳು ಜೀವವನ್ನು ಪಡೆದವೋ ! ಎನ್ನುವಂತೆ ಇದ್ದರು.

22. ಗಾನರಾಣಿಯರು ಮಹಾರಾಜ ಹರಿಶ್ಚಂದ್ರನನ್ನು ಕುರಿತು "ಮಝು, ಭಾಪು, ಅದಟ ರಾಯ, ಮಝುರೇ ರಾಯ, ರಾಯದಳವುಳಕಾರ, ರಾಯ ಕಂಟಕ, ರಾಯ ಜಗ್ಗಜೆಟ್ಟಿ, ರಾಯ ದಲ್ಲಣ, ರಾಯ ಕೋಳಾಹಳ, ರಾಯ ಭುಜಬಲಭೀಮ, ರಾಯ ವರ್ಧನ" ಎಂದು ಗುಣಗಾನ ಮಾಡುತ್ತಾ " ಒಡಯನೇ ಚಿರಂಜೀವಿಯಾಗು" ಎಂದು ಕೀರ್ತಿಸಿ ಹಾಡಿದರು.

23. ಬಡತನದ ಸಮಯದಲ್ಲಿ ಆನೆಯು ದೊರೆತರೆ ಫಲವಿಲ್ಲ. ಬಾಯಾರಿಕೆ ಸಮಯದಲ್ಲಿ ತುಪ್ಪವು ದೊರೆತರೆ ಫಲವಿಲ್ಲ. ರೋಗ ಬಂದು ಬಿದ್ದಿರುವಾಗ ರಂಭೆಯು ದೊರೆತರೆ ಫಲವಿಲ್ಲ ಸಾಯುವ ಸಮಯದಲ್ಲಿ ರಾಜ್ಯ ದೊರೆತರೆ ಫಲವಿಲ್ಲ. ಹಾಗೆಯೇ ಕಡುಬಿಸಿಲಿನಲ್ಲಿ ಬಳಲಿ ಬೆಂಡಾಗಿರುವ ನಮಗೆ ನೀನು ಪ್ರೀತಿಯಿಂದ ಆಭರಣಗಳನ್ನು ಕೊಟ್ಟರೆ ಫಲವಿಲ್ಲ ಎಂದು ಗಾನರಾಣಿಯರು ಹರಿಶ್ಚಂದ್ರನಿಗೆ ಹೇಳಿದರು.
24. ಗಾನರಾಣಿಯರು ಹರಿಶ್ಚಂದ್ರನನ್ನು ಕುರಿತು " ಸಮುದ್ರದಲ್ಲಿ ಮುಳುಗುವವನಿಗೆ ತೆಪ್ಪವನ್ನು, ಬಡವನಿಗೆ ಚಿನ್ನವನ್ನು ಅತಿರೋಗಿಗೆ ಅಮೃತವನ್ನು ಕೊಟ್ಟರೆ ಅವುಗಳು ಸಂತೋಷವನ್ನು ತರುತ್ತವೆ ಎಂದು ಹೇಳಿದರು.

25. ಹರಿಶ್ಚಂದ್ರನು ಗಾನರಾಣಿಯರನ್ನು ಕುರಿತು "ಸೂರ್ಯವಂಶದ ಪರಂಪರೆಯಲ್ಲಿ ಹುಟ್ಟಿದ ರಾಜರಿಗೆ ಪಟ್ಟವನ್ನು ಕಟ್ಟುವ ಸಮಯದಲ್ಲಿ ಈ ರಾಜ ಲಾಂಛನವಾದ ಸತ್ತಿಗೆಯು ಇಲ್ಲದಿದ್ದರೆ ರಾಜತನವು ದೊರೆಯುವುದಿಲ್ಲ. ಈ ಭೂಮಿಯ ಮೇಲೆ, ಯುದ್ಧರಂಗದಲ್ಲಿ ಸತ್ತಿಗೆಯನ್ನು ನೋಡಿದ ಶತ್ರುಗಳು ನಿಲ್ಲುವುದಿಲ್ಲ. ಆದ್ದರಿಂದ ಇದನ್ನು ಕೊಡುವುದಿಲ್ಲ" ಎಂದನು.

26. ಹರಿಶ್ಚಂದ್ರನು ಗಾನರಾಣಿಯರನ್ನು ಕುರಿತು " ಪ್ರೀತಿಯಿಂದ ಎಲ್ಲವನ್ನು ಕೊಡಬಹುದು, ಬಿಡಬಹುದು, ತಾಯಿಯನ್ನು, ತಂದೆಯನ್ನು, ಸತಿಯನ್ನು, ದೇವರನ್ನು, ಮನಸಾರೆ ನಂಬಿ ವಿಶ್ವಾಸವಿಟ್ಟ ಪರಿವಾರವನ್ನು ಕೊಡುವ ಅತಿಶೂರರು ಜನರಲ್ಲಿ (ಲೋಕದ) ಜನಿಸರು ಎಂದನು.

27. ಹರಿಶ್ಚಂದ್ರನು ಗಾನರಾಣಿಯರಿಗೆ "ಈ ಸತ್ತಿಗೆಯನ್ನು ಜನರಿಗೆ ಕೊಡಬಾರದು. ವಂಶಪರಂಪರೆಯಿಂದ ಬಂದಿದ್ದರಿಂದ ತಂದೆಯು ಪಟ್ಟವನ್ನು ಕಟ್ಟುವ ಸಮಯದಲ್ಲಿ ಇದನ್ನು ಪೂಜಿಸಿಕೊಡುವುದರಿಂದ ಇದು ದೇವರು, ನೆರಳಿನ ತಂಪನ್ನು ಸೊಗಸಾಗಿ ಕೊಡುವುದರಿಂದ ಇದು ಪೋಷಿಸುವ ತಾಯಿ, ಯುದ್ಧದಲ್ಲಿ ಶತ್ರುಗಳನ್ನು ನಡುಗಿಸುವುದರಿಂದ ಇದು ಚತುರಂಗಬಲ ಎನಿಸಿ ಕೊಂಡಿದೆ." ಎಂದು ಸತ್ತಿಗೆಯ ವಿಶೇಷತೆಯನ್ನು ತಿಳಿಸಿದನು.

28. ನಡುಗನ್ನಡದ ಅಗ್ರಮಾನ್ಯ ಕವಿಗಳಲ್ಲಿ ಒಬ್ಬನಾದ ರಾಘವಾಂಕನ ಕಾಲ ಸುಮಾರು ಕ್ರಿ. ಶ 1225. ಇವನು ಹಂಪಿ ಕ್ಷೇತ್ರವನಾಗಿದ್ದು ಪಂಪಾಪತಿ ವಿರೂಪಾಕ್ಷನ ಪರಮಭಕ್ತ. ಹಾಗೆಯೇ ಹರಿಹರನ ಸೋದರಳಿಯ ಮತ್ತು ಶಿಷ್ಯ.

ಇವನು ಹರಿಶ್ಚಂದ್ರಕಾವ್ಯ, ಸಿದ್ಧರಾಮ ಚಾರಿತ್ರ್ಯ, ವೀರೇಶ್ವರ ಚರಿತೆ, ಸೋಮನಾಥ ಚರಿತೆ, ಶರಭ ಚಾರಿತ್ರ. ಹರಿಹರ ಮಹತ್ವ ಮುಂತಾದ ಕಾವ್ಯಗಳನ್ನು ಷಟ್ಪದಿ ಛಂದಸ್ಸುಗಳಲ್ಲಿ ರಚಿಸಿದ್ದಾನೆ.

ಇವನು ಉಭಯಕವಿ ಕಮಲರವಿ, ಕವಿ ಶರಭ ಭೇರುಂಡ, ಷಟ್ಪದಿ ಬ್ರಹ್ಮ ಅಭಿದಾನಗಳನ್ನು ಹೊಂದಿದ್ದು ಷಟ್ಪದಿ ಕಾವ್ಯದ ನಿರ್ಮಾಪಕನೆಂಬ ಹೆಗ್ಗಳಿಕೆಗೆ ಪಾತ್ರನಾದವನು.

29. ಅನುನಯದೊಳೆಲ್ಲವಂ ಕೊಡಬಹುದು ಬಿಡಬಹುದು
ಜನನಿಯಂ ಜನಕನಂ ನಲ್ಲಳಂ ದೈವವಂ
ಮನವಾರೆ ನಂಬಿನಚ್ಚಿರ್ದ ಪರಿವಾರಮಂ ಕೊಡುವ ಬಿಡುವತಿಕಲಿಗಳು

30. ನೊಂದು ಮಾನಿಸರಾದರೋ ಕಮಲಜಂ ನೀಲ
ದಿಂದ ಮಾಡಿದ ಸಾಲಭಂಜಿಕೆಗಳೊದವಿ ಜೀ
ವಂದಳೆದವೋ ಎನಿಪ್ಪಂದದಿಂ ಬಂದರಂಗನೆಯರವನೀಶನೆಡೆಗೆ
(ಸೂಚನೆ: ಈ ಪದ್ಯದ ಸಾಲುಗಳಿಗೆ ಕಪ್ಪುಹಲಗೆ ಅಥವಾ ನೋಟ್ ಪುಸ್ತಕದಲ್ಲಿ ಬರೆಸಿ ಅಭ್ಯಾಸ ಮಾಡಿಸುವುದು. ಅಥವಾ ಘಟಕಪರೀಕ್ಷೆ ನೀಡಿ ಮೌಲ್ಯಮಾಪನ ಮಾಡುವುದು.)

31. ಆಯ್ಕೆ : ಈ ವಾಕ್ಯವನ್ನು ರಾಘವಾಂಕನು ರಚಿಸಿರುವ 'ಹರಿಶ್ಚಂದ್ರಕಾವ್ಯ'ದಿಂದ ಆರಿಸಿಕೊಳ್ಳಲಾದ' ನಿನ್ನ ಮುತ್ತಿನ ಸತ್ತಿಗೆಯನಿತ್ತು ಸಲಹು' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಹರಿಶ್ಚಂದ್ರನ ಬಳಿಗೆ ಬಂದ ಗಾನರಾಣಿಯರ ರೂಪವನ್ನು ವರ್ಣಿಸುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ. ಕಾರಿರುಳಂತಿರುವ ಕನ್ಯೆಯರು ಹಗಲಿನಂತೆ ಕಾಂತಿಯುತನಾಗಿದ್ದ ಮಹಾರಾಜನನ್ನು ನೋಡಲೆಂದು ಬಂದರೋ ಎಂದು ವರ್ಣಿಸಲಾಗಿದೆ.

ಸ್ವಾರಸ್ಯ : ಗಾನರಾಣಿಯರನ್ನು ಕಾರಿರುಳಿಗೂ ಹರಿಶ್ಚಂದ್ರನನ್ನು ಹಗಲಿಗೂ ಸಮೀಕರಿಸಿರುವುದು ಸ್ವಾರಸ್ಯಕರವಾಗಿದೆ.

32. ಆಯ್ಕೆ : ಈ ವಾಕ್ಯವನ್ನು ರಾಘವಾಂಕನು ರಚಿಸಿರುವ 'ಹರಿಶ್ಚಂದ್ರಕಾವ್ಯ'ದಿಂದ ಆರಿಸಿಕೊಳ್ಳಲಾದ' ನಿನ್ನ ಮುತ್ತಿನ ಸತ್ತಿಗೆಯನಿತ್ತು ಸಲಹು' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಹರಿಶ್ಚಂದ್ರನು ಬನಕ್ಕೆ ಬಂದಾಗ ಅಬಲೆಯರಂತೆ ಕಾಣುವ ಮಾಯದ ಗಾನರಾಣಿಯರು ನೃತ್ಯವನ್ನು ಮಾಡುತ್ತಾ ಹರಿಶ್ಚಂದ್ರನನ್ನು ಮೆಚ್ಚಿಸಲು ಈ ಮಾತುಗಳನ್ನು ಹಾಡಿ ಹೊಗಳುತ್ತಾರೆ.

ರಾಜರಿಗೆ ಕಂಟಕ ತರುವ, ಜಗಜಟ್ಟಿ ರಾಜ, ರಾಜರಿಗೆ ತಲ್ಲಣ ತರಿಸುವ, ರಾಜರಲ್ಲಿ ಕೋಲಾಹಲವನ್ನುಂಟು ಮಾಡುವ ವೀರನೂ ಶೂರನೂ ಎಂದು ಗುಣಗಾನ ಮಾಡುತ್ತಾರೆ.
ಸ್ವಾರಸ್ಯ : ಗಾನರಾಣಿಯರು ತಮ್ಮ ನೃತ್ಯದ ಮೂಲಕ ಹೊಗಳಿ ಹರಿಶ್ಚಂದ್ರನನ್ನು ಮಾಯದ ಬಲೆಗೆ ಒಳಪಡಿಸಲು ಮಾಡುವ ಪ್ರಯತ್ನ ಸ್ವಾರಸ್ಯಕರವಾಗಿ ವ್ಯಕ್ತವಾಗಿದೆ.

33. ಆಯ್ಕೆ : ಈ ವಾಕ್ಯವನ್ನು ರಾಘವಾಂಕನು ರಚಿಸಿರುವ 'ಹರಿಶ್ಚಂದ್ರಕಾವ್ಯ'ದಿಂದ ಆರಿಸಿಕೊಳ್ಳಲಾದ' ನಿನ್ನ ಮುತ್ತಿನ ಸತ್ತಿಗೆಯನಿತ್ತು ಸಲಹು' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ : ಹರಿಶ್ಚಂದ್ರನ ಬಳಲಿಕೆ, ಅಂಜಿಕೆ, ಗುರುವಿನ ಆಜ್ಞೆಯನ್ನು ಮೀರಿದ ದುಃಖವನ್ನು ಕನಸಿನ ಭಯವನ್ನು ಮರೆಯುವಂತೆ ಆವರಿಸಿದ ಸಂಗೀತದ ತಾಳಲಯದ ಸೊಗಸು ಮನದಲ್ಲಿ ಸಂತಸಮೂಡಿಸಿದ ಗಾನರಾಣಿಯರಿಗೆ ಸರ್ವಾಭರಣವನ್ನು ಬಹುಮಾನವಾಗಿ ನೀಡಿದ ಸಂದರ್ಭವನ್ನು ಕವಿ ವರ್ಣಿಸಿದ್ದಾರೆ.
ಸ್ವಾರಸ್ಯ : ಮಹಾರಾಜ ಹರಿಶ್ಚಂದ್ರನ ದುಃಖವನ್ನು ಕಳೆದು ಮನಸ್ಸಿಗೆ ಸಂತೋಷ ಮೂಡಿಸಿದ ಗಾನರಾಣಿಯರಿಗೆ ಬಹುಮಾನ ನೀಡುವ ಸಂದರ್ಭ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ

34. ಆಯ್ಕೆ : ಈ ವಾಕ್ಯವನ್ನು ರಾಘವಾಂಕನು ರಚಿಸಿರುವ 'ಹರಿಶ್ಚಂದ್ರಕಾವ್ಯ'ದಿಂದ ಆರಿಸಿಕೊಳ್ಳಲಾದ' ನಿನ್ನ ಮುತ್ತಿನ ಸತ್ತಿಗೆಯನಿತ್ತು ಸಲಹು' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ : ಹರಿಶ್ಚಂದ್ರನು ತನ್ನ ಬಳಿಗೆ ಬಂದು ಅಮೋಘವಾಗಿ ನರ್ತಿಸಿ ಮನಸ್ಸಿಗೆ ಸಂತಸ ನೀಡಿದ ಗಾನರಾಣಿಯರಿಗೆ ಆಭರಣಗಳನ್ನು ಬಹುಮಾನವಾಗಿ ನೀಡಿದಾಗ ಅವರು ತಿರಸ್ಕರಿಸಿ ಹರಿಶ್ಚಂದ್ರನಿಗೆ ಈ ಮಾತನ್ನು ಹೇಳುತ್ತಾರೆ. ತಮಗೆ ಈ ಬಹುಮಾನ ನೀಡಿದ್ದು ಸೂಕ್ತವಲ್ಲ ಎಂದು ಅವರು ಹೇಳುತ್ತಾರೆ.
ಸ್ವಾರಸ್ಯ: ಬಡತನದಿಂದ ಕೂಡಿರುವವನಿಗೆ ಆನೆಕೊಡುವುದರಿಂದ ಅವನಿಗೆ ಪ್ರಯೋಜನವಾಗುತ್ತದೆಯೇ? ಎಂದು ಹೇಳಿರುವುದು ಸ್ವಾರಸ್ಯಕರವಾಗಿದೆ.

35. ಆಯ್ಕೆ : ಈ ವಾಕ್ಯವನ್ನು ರಾಘವಾಂಕನು ರಚಿಸಿರುವ 'ಹರಿಶ್ಚಂದ್ರಕಾವ್ಯ'ದಿಂದ ಆರಿಸಿಕೊಳ್ಳಲಾದ' ನಿನ್ನ ಮುತ್ತಿನ ಸತ್ತಿಗೆಯನಿತ್ತು ಸಲಹು' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ : ಹರಿಶ್ಚಂದ್ರನು ತನ್ನ ಬಳಿಗೆ ಬಂದು ಅಮೋಘವಾಗಿ ನರ್ತಿಸಿ ಮನಸ್ಸಿಗೆ ಸಂತಸ ನೀಡಿದ ಗಾನರಾಣಿಯರಿಗೆ ಆಭರಣಗಳನ್ನು ಬಹುಮಾನವಾಗಿ ನೀಡಿದಾಗ ಅವರು ಅದನ್ನು ತಿರಸ್ಕರಿಸಿ ಹರಿಶ್ಚಂದ್ರನಿಗೆ ಈ ಮಾತನ್ನುಹೇಳುತ್ತಾರೆ. ತಮಗೆ ಬಹುಮಾನ ನೀಡಿದ್ದು ಸೂಕ್ತವಲ್ಲ ಅದಕ್ಕೆ ಬದಲಾಗಿ ಸತ್ತಿಗೆಯನ್ನು ನೀಡು ಎಂದು ಕೇಳುತ್ತಾರೆ.
ಸ್ವಾರಸ್ಯ : ವಂಶಪಾರಂಪರ್ಯವಾಗಿ ಬಂದಿರುವ ಪವಿತ್ರವಾದ ರಾಜಲಾಂಛನಗಳಲ್ಲಿ ಒಂದಾದ ಸತ್ತಿ_ಗೆಯನ್ನು (ಬೆಳ್ಗೊಡೆಯನ್ನು) ತಮ್ಮ ಬಿಸಿಲ ಬೇಗೆ ಪರಿಹರಿಸಿಕೊಳ್ಳಲು ಕೇಳುವುದು ಸ್ವಾರಸ್ಯಕರವಾಗಿದೆ.

36. ಆಯ್ಕೆ : ಈ ವಾಕ್ಯವನ್ನು ರಾಘವಾಂಕನು ರಚಿಸಿರುವ 'ಹರಿಶ್ಚಂದ್ರಕಾವ್ಯ'ದಿಂದ ಆರಿಸಿಕೊಳ್ಳಲಾದ' ನಿನ್ನ ಮುತ್ತಿನ ಸತ್ತಿಗೆಯನಿತ್ತು ಸಲಹು' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ : ಹರಿಶ್ಚಂದ್ರನು ಬಹುಮಾನವಾಗಿ ನೀಡಿದ ಆಭರಣಗಳಿಗೆ ಬದಲಾಗಿ ಗಾನರಾಣಿಯರು ನಿನ್ನ ಮುತ್ತಿನ ಸತ್ತಿಗೆಯನ್ನು ನೀಡು ಎಂದು ಕೇಳಿದಾಗ ಹರಿಶ್ಚಂದ್ರನು ಈ ಮಾತನ್ನು ಹೇಳುತಾನೆ, ಪ್ರೀತಿಯಿಂದ ಎಲ್ಲವನ್ನೂ ಕೊಡಬಹುದು-ಬಿಡಬಹುದು. ಹಾಗೆಂದು ತಾಯಿ-ತಂದೆ, ಹೆಂಡತಿ-ಮಕ್ಕಳು, ಬಂಧು-ಬಾಂಧವರು, ದೇವರು, ವಿಶ್ವಾಸವಿಟ್ಟುಕೊಂಡಿರುವ ಪರಿವಾರವನ್ನು ನೀಡಲು ಸಾಧ್ಯವೇ ಎಂದು ಹರಿಶ್ಚಂದ್ರ ಅವರಿಗೆ ಮನವರಿಕೆ ಮಾಡುತ್ತಾನೆ.
ಸ್ವಾರಸ್ಯ : ಕುಟುಂಬ, ಬಂಧು-ಬಾಂಧವರು, ದೇವರು ಮುಂತಾದವರನ್ನು ಯಾರಿಗೂ ಬಿಟ್ಟುಕೊಡದೆ ಕಾಪಾಡುವುದು ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯ ಎಂಬುದು ಇಲ್ಲಿ ಸ್ವಾರಸ್ಯಕರವಾಗಿ ವ್ಯಕ್ತವಾಗಿದೆ.

37. ಸಂದಕಾರಿರುಳು ಕನ್ನೆಯರು ಹಗಲಂ ನೋಡ
ಲೆಂದು ಬಂದರೊ ಸುರಾಸುರರಬುಧಿಯಂ ಮಥಿಸು
ವಂದು ಹೊಸವಿಷದ ಹೊಗೆ ಹೊಯ್ದು ಕಗ್ಗನೆ ಕಂದಿ ಜಲದೇವಿಯರು ಮನದಲಿ
ನೊಂದು ಮಾನಿಸರಾದರೋ ಕಮಲಜಂ ನೀಲ

ದಿಂದ ಮಾಡಿದ ಸಾಲಭಂಜಿಕೆಗಳೊದವಿ ಜೀ
ವಂದಳೆದವೋ ಎನಿಪ್ಪಂದದಿಂ ಬಂದರಂಗನೆಯರವನೀಶನೆಡೆಗೆ

38. ಬಡತನದ ಹೊತ್ತಾನೆ ದೊರಕಿ ಫಲವೇನು ನೀ
ರಡಸಿರ್ದ ಹೊತ್ತಾಜ್ಯ ದೊರಕಿ ಫಲವೇನು ರುಜೆ
ಯಡಸಿ ಕೆಡೆದಿಹ ಹೊತ್ತು ರಂಭೆ ದೊರೆಕೊಂಡಲ್ಲಿ ಫಲವೇನು ಸಾವ ಹೊತ್ತು
ಪೊಡವಿಯೊಡೆತನ ದೊರಕಿ ಫಲವೇನು ಕಡುವಿಸಿಲು
ಹೊಡೆದು ಬೆಂಡಾಗಿ ಬೀಳ್ವೆಮಗೆ ನೀನೊಲಿದು ಮಣಿ
ದೊಡಿಗೆಗಳನಿತ್ತು ಫಲವೇನು ಭೂಪಾಲ ಹೇಳೆನುತ ಮತ್ತಿಂತೆಂದರು.

39. ಆಯ್ಕೆ : ಪ್ರಸ್ತುತ ಪದ್ಯಭಾಗವನ್ನು ಕವಿ ರಾಘವಾಂಕ ರಚಿಸಿರುವ 'ಹರಿಶ್ಚಂದ್ರಕಾವ್ಯ'ದಿಂದ ಆರಿಸಿಕೊಳ್ಳಲಾದ 'ನಿನ್ನ ಮುತ್ತಿನ ಸತ್ತಿಗೆಯನಿತ್ತು ಸಲಹು' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

ಸಾರಾಂಶ : ಹರಿಶ್ಚಂದ್ರನು ಗಾನರಾಣಿಯರನ್ನು ಕುರಿತು "ಸೂರ್ಯವಂಶದ ಪರಂಪರೆಯಲ್ಲಿ ಹುಟ್ಟಿದ ರಾಜರಿಗೆ ಪಟ್ಟವನ್ನು ಕಟ್ಟುವ ಸಮಯದಲ್ಲಿ ಈ ರಾಜಲಾಂಛನವಾದ ಸತ್ತಿಗೆಯು ಇಲ್ಲದಿದ್ದರೆ ರಾಜತನವು ದೊರೆಯುವುದಿಲ್ಲ. ಈ ಭೂಮಿಯ ಮೇಲೆ, ಯುದ್ದರಂಗದಲ್ಲಿ ಸತ್ತಿಗೆಯನ್ನು ನೋಡಿದ ಶತ್ರುಗಳು ನಿಲ್ಲುವುದಿಲ್ಲ ಈ ಸತ್ತಿಗೆಯ ನೆರಳಿನಲ್ಲಿ ಯಾವನು ಇರುವನೋ ಆತನಿಗೆ ವಿಪತ್ತು, ಅಡಚಣೆಗಳು, ಬಡತನ, ರೋಗ, ಸೋಲು, ಭಯ ಕಳೆದು ಹೋಗುವುದು. ಇದನ್ನು ತಿಳಿದು ತಿಳಿದು ಸತ್ತಿಗೆಯನ್ನು ಕೊಡಬಹುದೇ ಹೇಳಿ ಎಂದನು.

ಮೌಲ್ಯ : ಮಹಾರಾಜನಾದ ಹರಿಶ್ಚಂದ್ರನು ಸತ್ಯಧರ್ಮದಿಂದ ನಡೆಯುತ್ತಿತ್ತು ಮನಸಂತೋಷ ಪಡಿಸಿದ ಗಾನರಾಣಿಯರ ಮಾಯಕ್ಕೆ ಒಳಗಾಗದೆ ಅವರು ಬೇಡಿದ ಸತ್ತಿಗೆಯನ್ನೂ ನೀಡದೆ ಮುತ್ತಿನ ಸತ್ತಿಗೆಯ ವಿಶೇಷತೆ ಹಾಗೂ ಮಹತ್ವವನ್ನು ವಿವರಿಸುವುದು ಹಾಗೂ ರಾಜನಧರ್ಮ ಮತ್ತು ಕರ್ತವ್ಯನಿಷ್ಠೆ ಇಲ್ಲಿ ಅಡಕವಾಗಿರುವ ಮೌಲ್ಯವಾಗಿದೆ.

40. ಹರಿಶ್ಚಂದ್ರನು ನೀಡಿದ ಬಹುಮಾನವನ್ನು ತಿರಸ್ಕರಿಸಿ ಗಾನರಾಣಿಯರು ಹೀಗೆ ಹೇಳುತ್ತಾರೆ "ಬಡತನದ ಸಮಯದಲ್ಲಿ ಆನೆಯು ದೊರೆತು ಫಲವೇನು? ಬಾಯಾರಿಕೆ ಸಮಯದಲ್ಲಿ ತುಪ್ಪವು ದೊರಕಿ ಫಲವೇನು? ರೋಗಬಂದು ಬಿದ್ದಿರುವಾಗ ರಂಭೆಯು ದೊರಕಿ ಫಲವೇನು? ಸಾಯುವ ಸಮಯದಲ್ಲಿ ರಾಜ್ಯದದೊರೆತನ ದೊರಕಿ ಫಲವೇನು? ಕಡುಬಿಸಿಲಿನಿಂದ ಬಳಲಿ ಬೆಂಡಾಗಿರುವ ಸಮಯದಲ್ಲಿ ನಮಗೆ ನೀನು ಪ್ರೀತಿಯಿಂದ ಆಭರಣಗಳನ್ನು ಕೊಟ್ಟು ಫಲವೇನು? ಅದರ ಬದಲು, ಸಮುದ್ರದಲ್ಲಿ ಮುಳುಗುವವನಿಗೆ ತೆಪ್ಪವನ್ನು, ಬಡವನಿಗೆಚಿನ್ನವನ್ನು, ಅತಿರೋಗಿಗೆ ಅಮೃತವನ್ನು ಕೊಟ್ಟರೆ ಅವರು ಸಂತೋಷವನ್ನು ಹೊಂದುವರು. ಅವರನ್ನು ಹೋಲುವ ನಮಗೆ ಸುಡುಸುಡುನೆ ಸುಡುವ ಈ ಬಿರು ಬಿಸಿಲ ಸೆಕೆಯಲ್ಲಿ ಉಸಿರಿನ ಬಿಸಿ ಹೆಚ್ಚಾಗಿ ಉರಿಯ ಹತ್ತಿದೆ, ನಮ್ಮ ಬಾಯಿ ಬತ್ತಿಹೋಗಿದೆ, ಬಿಸಿಲ ಝಳದಿಂದ ಸಾವು ಆವರಿಸುತ್ತದೆ, ಆದ್ದರಿಂದ ನಮಗೆ ನಿನ್ನ ಮುತ್ತಿನ ಸತ್ತಿಗೆಯನ್ನು ಕೊಟ್ಟು ನಮ್ಮನ್ನು ಕಾಪಾಡು ಎಂದರು.

41. (ಹರಿಶ್ಚಂದ್ರನು ಗಾನರಾಣಿಯರ ನೃತ್ಯವನ್ನು ಮೆಚ್ಚಿ ಆಭರಣಗಳನ್ನು ಬಹುಮಾನವಾಗಿ ನೀಡುತ್ತಾನೆ. ಆಗ ಅವರು)

ಗಾನರಾಣಿಯರು : ಕಡು ಬಿಸಿಲಿನಿಂದ ಬಳಲಿ ಬೆಂಡಾಗಿರುವ ನಮಗೆ ನೀನು ಆಭರಣಗಳನ್ನು ಕೊಟ್ಟರೆಪ್ರ ಯೋಜನವೇನು? ಅದಕ್ಕೆ ಬದಲಾಗಿ ನಿನ್ನ ಮುತ್ತಿನ ಸತ್ತಿಗೆಯನ್ನು ಕೊಟ್ಟು ನಮ್ಮನ್ನು ಕಾಪಾಡು.

ಹರಿಶ್ಚಂದ್ರ : ಸೂರ್ಯವಂಶದ ಪರಂಪರೆಯ ರಾಜರಿಗೆ ಪಟ್ಟವನ್ನು ಕಟ್ಟುವ ಸಮಯದಲ್ಲಿ ಈ ರಾಜಲಾಂಛನವಾದ ಸತ್ತಿಗೆಯು ಇಲ್ಲದಿದ್ದರೆ ರಾಜತನವು ದೊರೆಯುವುದಿಲ್ಲ. ಆದ್ದರಿಂದ ಇದನ್ನು ಕೊಡಲು ಸಾಧ್ಯವಿಲ್ಲ. ಪ್ರೀತಿಯಿಂದ ಎಲ್ಲವನ್ನು ಕೊಡಬಹುದು ಹಾಗೆಂದು ತಾಯಿ, ತಂದೆ, ಹೆಂಡತಿ, ದೇವರು ಮತ್ತು ಮನಸಾರೆ ನಂಬಿ ವಿಶ್ವಾಸವಿಟ್ಟ ಪರಿವಾರವನ್ನು ಕೊಡುವ ಶೂರ ಜಗತ್ತಿನಲ್ಲಿ ಇಲ್ಲ.

ಗಾನರಾಣಿಯರು : ಮಹಾರಾಜ ನೀನು ಈಗ ಹೇಳಿದ ಇವರಲ್ಲಿ ಯಾರನ್ನಾದರು ಬೇಡಿದರೆ ಕೊಡಬೇಡ. ಆದರೆ ನಿನ್ನ ಬಳಿ ಇರುವ ಮುತ್ತಿನ ಸತ್ತಿಗೆಯನ್ನು ಕೊಡು ಎಂದರೆ ಲೋಭವೇಕೆ?

ಹರಿಶ್ಚಂದ್ರ : ಏಕೆಂದರೆ, ನನಗೆ ಇದಲ್ಲದೆ ಬೇರೆ ತಾಯಿತಂದೆಯರು ಇಲ್ಲ. ವಂಶಪರಂಪರೆಯಿಂದ ಬಂದಿದ್ದರಿಂದ ಇದನ್ನು ತಂದೆ, ಪಟ್ಟವನ್ನು ಕಟ್ಟುವ ಸಮಯದಲ್ಲಿ ಇದನ್ನು ಪೂಜಿಸಿಕೊಳ್ಳುವುದರಿಂದ ಇದು ದೇವರು, ನೆರಳಿನ ತಂಪನ್ನು ಸೊಗಸಾಗಿ ಕೊಡುವುದರಿಂದ ಇದು ನನ್ನನ್ನು ಪೋಷಿಸುವ ತಾಯಿ, ಯುದ್ಧದಲ್ಲಿ ಶತ್ರುಗಳನ್ನು ನಡುಗಿಸುವುದರಿಂದ ಇದೇ ಚತುರಂಗಬಲ ಎನಿಸಿಕೊಂಡಿದೆ.

****

ಪದ್ಯ-8 : ಕನ್ನಡ ನಾಡು ನುಡಿ

I

೧. ಚತುರ

೨. ಎಂಟು

೩. ಆರು

೪. ೨೦

೫. ಪಾಲನೆ

೬. ಶ್ರೇಷ್ಠ

೭. ಸಕ್ಕದ

೮. ೬೪

೯. 21

೧೦. ಸುಂದರ

II

೧೧. ತುಪ್ಪ

೧೨. ವ್ಯಂಜನಗಳು

೧೩. ಅಕ್ಷರಗಣ

೧೪. ೪-೪-೪

III

೧೫. ಎಣ್ಣೆಯನ್ನು ಬೆರೆಸಬಾರದು

೧೬. ಕನ್ನಡ ಭಾಷೆ ಸುಲಿದ ಬಾಳೆಯ ಹಣ್ಣಿನಂತೆ ಇದೆ.

೧೭. ಶ್ರೀ ವಿಜಯಕವಿ, ಕನ್ನಡಿಗರು ಕಾವ್ಯಪ್ರಯೋಗ ಮಾಡಬಲ್ಲರು ಎಂದಿದ್ದಾನೆ.

೧೮. ನಯಸೇನ ಕವಿ ತುಪ್ಪದಲ್ಲಿ ಎಣ್ಣೆಯನ್ನು ಬೆರೆಸಬಾರದು ಎಂದಿದ್ದಾನೆ.

೧೯. ಮಲ್ಲಿಗೆ, ಸಂಪಿಗೆ, ದಾಳಿಂಬೆ, ಮಾವು, ತೆಂಗು, ಅಡಿಕೆ, ಮುಂತಾದವು.

IV

೨೦. ಕನ್ನಡ ನಾಡಿನ ಜನತೆ ಅಂದರೆ ಕನ್ನಡಿಗರು ಸಾಹಿತ್ಯದ ಯಾವುದೇ ಪ್ರಕಾರವಾಗಲಿ ಚನ್ನಾಗಿ ಅರ್ಥಮಾಡಿಕೊಳ್ಳಬಲ್ಲರು. ಸ್ಪಷ್ಟ ಮಾತುಗಳಲ್ಲಿ ಅಭಿವ್ಯಕ್ತಪಡಿಸಬಲ್ಲರು. ಅಕ್ಷರ ಜ್ಞಾನವಿಲ್ಲದಿದ್ದರೂ ನಮ್ಮ ಜನಪದರು ಕಾವ್ಯವನ್ನು ಕಟ್ಟಬಲ್ಲರು, ಸೊಗಸಾಗಿ ಹಾಡಬಲ್ಲರು. ನಿಜವಾಗಿಯೂ ಕನ್ನಡಿಗರು ಬುದ್ಧಿಶಾಲಿಗಳು ಎಂದು ಶ್ರೀ ವಿಜಯ ಕವಿ ಮನಸಾರೆ ಹೊಗಳಿದ್ದಾರೆ.

೨೧. ನಮ್ಮ ಕನ್ನಡ ಭಾಷೆಯು ಕೆಲವು ವಿದ್ವಾಂಸರಿಂದ ಸಂಸ್ಕೃತಮಯವಾಗುವುದನ್ನು ಸಹಿಸದೆ ನಯಸೇನ ಕವಿಯು ನಮಗೆ ಎಣ್ಣೆಯೂ ಬೇಕು, ತುಪ್ಪವೂ ಬೇಕು, ಆದರೆ ಅವೆರಡನ್ನು ಮಿಶ್ರಣ ಮಾಡಿ ಬಳಸಬಾರದು. ಹಾಗೆಯೇ ಪರಿಶುದ್ಧ ಕನ್ನಡದಲ್ಲಿಯೇ ಕಾವ್ಯ ರಚನೆ ಮಾಡಿ ಎಂದಿದ್ದಾನೆ.

೨೨. ನಮ್ಮ ಕನ್ನಡ ಭಾಷೆ ತುಂಬಾ ಸರಳವಾದ, ಸುಂದರವಾದ, ಲಲಿತವಾದ ಭಾಷೆ. ಸುಲಿದ ಬಾಳೆಯ ಹಣ್ಣಿನಂತೆ, ಸಿಪ್ಪೆ ತೆಗೆದ ಕಬ್ಬಿನಂತೆ, ಕಾಯಿಸಿ ಆರಿಸಿದ ಹಾಲಿನಂತೆ ಉಪಯೋಗಿಸಲು ತುಂಬಾ ಸುಲಭ." ಕನ್ನಡದಲ್ಲಿಯೇ ಬಿನ್ನಹಗೈದೊಡೆ ಹರಿ ವರಗಳ ಮಳೆ ಕರೆಯುವನು", ಎಂಬ ಮಾತಿನಂತೆ ಕನ್ನಡದಲ್ಲಿಯೇ

ಪ್ರಾರ್ಥಿಸಿ ಮೋಕ್ಷಕ್ಕೆ ದಾರಿ ಮಾಡಿಕೊಂಡರೆ ಸಾಲದೆ, ಇದಕ್ಕಿಂತ ಸಂಸ್ಕೃತದಲ್ಲಿ ಇನ್ನೇನಿದೆ ಹೆಚ್ಚುಗಾರಿಕೆ ಎಂದಿದ್ದಾರೆ.

೨೩. ಶ್ರೀ ವಿಜಯ

ಇವರು ಒಂಬತ್ತನೇ ಶತಮಾನದಲ್ಲಿ ಬದುಕಿದ್ದರು. ರಾಷ್ಟ್ರಕೂಟ ಚಕ್ರವರ್ತಿ ಅಮೋಘವರ್ಷ ನೃಪತುಂಗನ ಆಸ್ಥಾನದಲ್ಲಿದ್ದರು. ಇವರು ಕವಿರಾಜಮಾರ್ಗ ಎಂಬ ಲಾಕ್ಷಣಿಕ ಗ್ರಂಥವನ್ನು ರಚಿಸಿದ್ದಾರೆ. ಇದು ಕನ್ನಡ ಭಾಷೆಯಲ್ಲಿ ಲಭಿಸಿರುವ ಮೊದಲ ಗ್ರಂಥ

೨೪. ನಯಸೇನಾ

ಇವರು ಕ್ರಿ.ಶ ಸುಮಾರು ೧೨ನೆಯ ಶತಮಾನದಲ್ಲಿ ಧಾರವಾಡ ಜಿಲ್ಲೆಯ ಮುಳುಗುಂದ ದಲ್ಲಿ ಜೀವಿಸಿದ್ದರು. ಇವರು' ಧರ್ಮಾಮೃತ' ಎಂಬ ಚಂಪೂ ಕಾವ್ಯವನ್ನು ರಚಿಸಿದ್ದಾರೆ. ಕನ್ನಡ ಮತ್ತು ಸಂಸ್ಕೃತ ಭಾಷೆಯನ್ನು ಬೆರೆಸಿ ಕಾವ್ಯ ರಚಿಸಲು ಇವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಅದು ಎಣ್ಣೆ- ತುಪ್ಪ ಗಳ ಮಿಶ್ರಣದ ಆಸ್ವಾದ ದಂತೆ ಎಂದಿದ್ದಾರೆ.

೨೫. ಮಹಾಲಿಂಗರಂಗ

ಇವರು ಕ್ರಿ.ಶ. ಸುಮಾರು ೧೭ನೆಯ ಶತಮಾನದಲ್ಲಿ ಜೀವಿಸಿದ್ದರು. ಇವರು 'ಅನುಭವಾಮೃತ' ಎಂಬ ಕೃತಿಯನ್ನು ರಚಿಸಿದ್ದಾರೆ. ಇವರ ನಿಜವಾದ ಹೆಸರು ಶ್ರೀರಂಗ. ಇವರು ತಮ್ಮ ಹೆಸರಿನೊಂದಿಗೆ ತಂದೆಯ ಹೆಸರನ್ನು ಸೇರಿಸಿ ಮಹಾಲಿಂಗರಂಗ ಎಂದು ಕರೆದುಕೊಂಡಿದ್ದಾರೆ. ಇವರ ಆರಾಧ್ಯ ದೈವ' ಶ್ರೀಶೈಲ ಮಲ್ಲಿಕಾರ್ಜುನ'.

೨೬. ನೇಮಿಚಂದ್ರ.

ಇವರು ಕ್ರಿ.ಶ. ಸುಮಾರು ೧೨ನೆಯ ಶತಮಾನದಲ್ಲಿ ಜೀವಿಸಿದ್ದರು. ಇವರು' ಲೀಲಾವತಿ ಪ್ರಬಂಧ' ಹಾಗೂ' ಅರ್ಧ ನೇಮಿ ಪುರಾಣ' ಎಂಬ ಪ್ರಸಿದ್ಧ ಕಾವ್ಯಗಳನ್ನು ರಚಿಸಿದ್ದಾರೆ. ಇವರು ಕವಿಗಳ ಕಾವ್ಯಶಕ್ತಿಯ ಬಗ್ಗೆ ಸೊಗಸಾಗಿ ವರ್ಣಿಸಿದ್ದಾರೆ.

೨೭. ಆಂಡಯ್ಯ

ಇವರು ಕ್ರಿ.ಶ. ಸುಮಾರು ೧೩ನೆಯ ಶತಮಾನದಲ್ಲಿ ಕದಂಬರ ದೊರೆ ಕಾಮದೇವನ ಆಶ್ರಯದಲ್ಲಿದ್ದರು. ಇವರು' ಕಬ್ಬಿಗರ ಕಾವ' ಅಥವಾ' ಕಬ್ಬಿಗರ ಕಾವಂ' ಎಂಬ ಕೃತಿಯನ್ನು ರಚಿಸಿದ್ದಾರೆ. ಸಂಸ್ಕೃತದ ಸಹಾಯ ಪಡೆಯದೇ ಕೇವಲ ತದ್ಭವ ಪದಗಳನ್ನು, ದೇಸಿ ಪದಗಳನ್ನು ಬಳಸಿ ಈ ಕೃತಿಯನ್ನು ರಚಿಸಿದ್ದಾರೆ.

VII ಛಂಧಸ್ಸಿನ ಹೆಸರು : ಕಂದ

- U U | - U U | - U U
೨೮. ಮಲ್ಲಿಗೆ | ಯಲ್ಲದೆ | ಸಂಪಿಗೆ
- U U | - - | U - U | - U U | - -
ಯಲ್ಲದೆ | ದಾಳಿಂ | ಬಮಲ್ಲ | ದೊಪ್ಪುವ | ಚೆಂದಂ

ಛಂದಸ್ಸಿನ ಹೆಸರು: ಉತ್ಪಲಮಾಲಾ ವೃತ್ತ

- U U - U - U UU - U U - U U - U - U -
೨೯. ಮುಟ್ಟುಗೆ | ಮುಟ್ಟದಿ| ರ್ಕೆ ಮುಗಿ | ಲಂನ ರ | ನಂ ಹ ರ ನೊತ್ತಿ| ಗಂಟ

೩೦." ಸುಲಿದ ಬಾಳೆಯ ಹಣ್ಣಿನಂದದಿ".
ಉಪಮೇಯ: ಲುಪ್ತವಾಗಿದೆ (ಕನ್ನಡ ಭಾಷೆ)

ಉಪಮಾನ: ಬಾಳೆಹಣ್ಣು
ವಾಚಕ ಪದ: ಅಂದದಿ
ಸಮಾನಧರ್ಮ: ಸುಲಭವಾಗಿರುವುದು.
ಸಮನ್ವಯ:- ಇಲ್ಲಿ ಉಪಮೇಯವು ಲುಪ್ತವಾಗಿದೆ. ಉಪಮಾನವಾದ ಬಾಳೆಹಣ್ಣು (ಸುಲಿದ) ತಿನ್ನಲು ಬಹಳ ಸುಲಭ. ಅಂತೆಯೇ ಕನ್ನಡ ಭಾಷೆಯನ್ನು ಹೋಲಿಸಿ ಹೇಳಿರುವುದರಿಂದ ಇದು'ಉಪಮಾಲಂಕಾರ' ವಾಗಿದೆ.

V

೩೧. ಆಯ್ಕೆ: ಈ ವಾಕ್ಯವನ್ನು 'ಕನ್ನಡ ನಾಡು ನುಡಿ' ಎಂಬ ಪದ್ಯ ಭಾಗದಿಂದ ಆರಿಸಲಾಗಿದೆ. ಬರೆದವರು ನೇಮಿಚಂದ್ರ.
ಸಂದರ್ಭ: ಕವಿಗಳ ಕವಿತಾ ಪ್ರೌಢಿಮೆಯನ್ನು ವರ್ಣಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳಲಾಗಿದೆ.
ಸ್ವಾರಸ್ಯ: 'ರವಿ ಕಾಣದ್ದನ್ನು ಕವಿ ಕಂಡ' ಎಂಬ ಲೋಕೋಕ್ತಿಯನ್ನು ನೇಮಿಚಂದ್ರ ಸಮರ್ಥಿಸಿದ್ದಾರೆ.

೩೨. ಈ ವಾಕ್ಯವನ್ನು 'ಮಹಲಿಂಗರಂಗ' ಬರೆದಿರುವ 'ಕನ್ನಡ ನಾಡು ನುಡಿ' ಎಂಬ ಪದ್ಯ ಭಾಗದಿಂದ ಆಯ್ಕೆ ಮಾಡಲಾಗಿದೆ.
ಕನ್ನಡ ಭಾಷೆಯ ಸರಳತೆ, ಶಕ್ತಿ ಸೌಂದರ್ಯವನ್ನು ವರ್ಣಿಸುತ್ತಾ ಈ ಮಾತನ್ನು ಹೇಳಿದ್ದಾರೆ.
ಸ್ವಾರಸ್ಯ:- ಕನ್ನಡ ಭಾಷೆ ಸರಳ ಹಾಗೂ ಶಕ್ತಿಶಾಲಿ ಎಂಬುದು ಕವಿಯ ಆಶಯವಾಗಿದೆ.

೩೩. ಈ ವಾಕ್ಯವನ್ನು' ಆಂಡಯ್ಯ' ರಚಿಸಿರುವ 'ಕನ್ನಡ ನಾಡು ನುಡಿ' ಎಂಬ ಪದ್ಯ ಭಾಗದಿಂದ ಆಯ್ಕೆ ಮಾಡಲಾಗಿದೆ
ಕನ್ನಡ ನಾಡಿನ ಪ್ರಾಕೃತಿಕ ಸೌಂದರ್ಯವನ್ನು, ಶ್ರೀಮಂತಿಕೆಯನ್ನು ವರ್ಣಿಸುವ ಸಂದರ್ಭದಲ್ಲಿ ಹೇಳಿದ್ದಾರೆ.
ಸ್ವಾರಸ್ಯ:- ಕವಿಗೆ ನಾಡಿನ ಬಗ್ಗೆ ಇದ್ದ ಅಭಿಮಾನವು ಇಲ್ಲಿ ಅನಾವರಣಗೊಂಡಿದೆ.

VI

೩೪. ಪದನರಿದು ನುಡಿಯಲುಂ ನುಡಿ
ದುದನರಿದಾರಯಲುಮಾರ್ಪರಾ ನಾಡವರ್ಗಳ್|
ಚದುರರ್ ನಿಜದಿಂ ಕುರಿತೋ
ದದೆಯಂ ಕಾವ್ಯಪ್ರಯೋಗ ಪರಿಣಿತ ಮತಿಗಳ್|

* ಮಲ್ಲಿಗೆಯಲ್ಲದೆ ಸಂಪಗೆ
ಯಲ್ಲದೆ ದಾಳಿಂಬಮಲ್ಲದೊಪ್ಪುವ ಚೆಂದಿA||
ಗಲ್ಲದೆ ಮಾವಲ್ಲದೆ ಕೌಂ |
ಗಲ್ಲದೆ ಗಿಡಮರಗಳೆಂಬುವಿಲ್ಲಾ ನಾಡೊಳ್ ||

VII

೩೫. "ಕಾವೇರಿಯಿಂದ ಮಾಗೋದಾವರಿ ವರಮಿರ್ದ ನಾಡದಾ ಕನ್ನಡದೊಳ್" ಎಂಬ ಮಾತೊಂದಿದೆ. ಕನ್ನಡ ನಾಡು ವಿಶಾಲವಾದ ಹಾಗೂ ಸುಂದರವಾದ, ಸಂಪದ್ಭರಿತವಾದ ನಾಡು. ಕನ್ನಡ ನಾಡು ಚಿನ್ನದ ನಾಡು, ಗಂಧದ ನಾಡು ಎಂಬ ಕೀರ್ತಿಗೆ ಭಾಜನವಾಗಿದೆ. ಇಲ್ಲಿ ಮಲ್ಲಿಗೆ, ಸಂಪಿಗೆ, ಜಾಜಿ ಮುಂತಾದ ಪರಿಮಳಭರಿತ ಹೂಗಳಿವೆ. ಶ್ರೀಗಂಧ, ನಂದಿ, ಮತ್ತಿ,ತೇಗ, ಮುಂತಾದ ಮರಗಳು ಬೆಳೆಯುತ್ತವೆ. ಮಾವು,ದಾಳಿಂಬೆ, ತೆಂಗು ಅಡಿಕೆ ಮುಂತಾದ ಮರಗಳಲಗಲ್ಲದೆ ಬೇರೆ ಮರಗಳೇ ಇಲ್ಲ ಎಂದು ಹಾಡಿ ಹೊಗಳಿದ್ದಾರೆ.

ಅಥವಾ

ಕನ್ನಡ ನಾಡಿನ ಜನರು ತಾವು ಓದಿದ್ದನ್ನು ಅರ್ಥಮಾಡಿಕೊಳ್ಳಬಲ್ಲರು. ಸಹೃದಯ ಶೀಲತೆಯಿಂದ, ಸೌಜನ್ಯದಿಂದ ವರ್ತಿಸುತ್ತಾರೆ. ಓದದೆ, ಬರೆಯದೆ ಇದ್ದರೂ ಕಾವ್ಯವನ್ನು ಕಟ್ಟುವ ಶಕ್ತಿ ಹೊಂದಿದ್ದಾರೆ. [ಜನಪದ ಸಾಹಿತ್ಯ] ಆತನ ಉಕ್ತಿ " ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣಿತ ಮತಿಗಳ" ಇದಕ್ಕೆ ಸಾಕ್ಷಿ.

ಕನ್ನಡ ಭಾಷೆ ತುಂಬಾ ಸರಳ, ಸುಂದರ, ಶ್ರೀಮಂತ ಎಂದು ಮಹಲಿಂಗರAಗ ಹೇಳಿದ್ದಾರೆ." ಸುಲಿದ ಬಾಳೆಯ ಹಣ್ಣಿನಂದದಿ, ಕಳದಸಿಗುರಿನ ಕಬ್ಬಿನಂದದಿ, ಉಷ್ಣ ಅಳಿದ ಹಾಲಿನಂದದಿ ಲಲಿತವಾಗಿದೆ ಈ ಭಾಷೆ. ಇದು ಮೋಕ್ಷಕ್ಕೆ ದಾರಿ ಮಾಡಿಕೊಡುತ್ತದೆ ಎಂದಿದ್ದಾರೆ.

VIII

೩೬. ಈ ಪದ್ಯಭಾಗವನ್ನು ಶ್ರೀವಿಜಯ ಕವಿ ಬರೆದಿರುವ 'ಕನ್ನಡ ನಾಡು ನುಡಿ' ಎಂಬ ಪದ್ಯ ಭಾಗದಿಂದ ಆರಿಸಲಾಗಿದೆ.

ಕವಿ ಈ ಪದ್ಯದಲ್ಲಿ ಕನ್ನಡಿಗರ ಭಾಷಾ ಪ್ರೌಢಿಮೆಯನ್ನು ಹಾಡಿ ಹೊಗಳಿದ್ದಾರೆ. ಸಾಹಿತ್ಯ ರಚನಾ ಶಕ್ತಿಯನ್ನು ಮನವಾರೆ ಕೊಂಡಾಡಿದ್ದಾರೆ.

ಕನ್ನಡಿಗರಿಗೆ ಓದುವ ಶಕ್ತಿ, ಅದನ್ನು ಅರ್ಥ ಮಾಡಿಕೊಂಡು ಅಭಿವ್ಯಕ್ತಿಸುವ ಸಾಮರ್ಥ್ಯವಿದೆ ಎಂದಿದ್ದಾರೆ. ಕನ್ನಡ ಜನರು ಅದೆಷ್ಟು ಚತುರರೆಂದರೆ ಈ ಸಾಲು ಅದನ್ನು ಸಮರ್ಥಿಸುತ್ತದೆ. " ಕುರಿತೋದದೆಯಂ ಕಾವ್ಯಪ್ರಯೋಗ ಪರಿಣಿತಮತಿಗಳ್"

****

ಪಠ್ಯಪೂರಕ ಅಧ್ಯಯನ

1 :ಪುಟ್ಟಹಕ್ಕಿ - ಜಂಬಣ್ಣಅಮರಚಿಂತ

1. ಪುಟ್ಟ ಹಕ್ಕಿ ಕಡ್ಡಿಕಡ್ಡಿ ಕೂಡಿಸಿ ಗೂಡು ಕಟ್ಟುತ್ತದೆ.

2. ಪುಟ್ಟಹಕ್ಕಿಯು ಬಿರುಗಾಳಿಯ ವಿರುದ್ಧ ಯುದ್ಧ ಸಾರಿದೆ.

3. ಪುಟ್ಟಹಕ್ಕಿಯು ಗೂಡಿನಿಂದ ಹೊರಬಂದು ಕುಣಿಯುತ ಜಳಕ ಮಾಡುತ್ತದೆ.

4. ಪುಟ್ಟಹಕ್ಕಿಯು ಗೀತೆಯನ್ನು ಹಾಡುತ್ತಾ ಸೂರ್ಯನನ್ನು ಸ್ವಾಗತಿಸುತ್ತದೆ.

5. ಪುಟ್ಟಹಕ್ಕಿಯು ರೆಕ್ಕೆಗಳ ಮುರಿಯುವ ಜನರ ನಯನಾಂಬರದಲ್ಲಿ ಹಾರಲು ಸಾಧ್ಯವಿಲ್ಲ ಎಂದು ಕವಿ ಹೇಳಿದ್ದಾರೆ.

6. ಪುಟ್ಟಹಕ್ಕಿ ಭೂಮಿಯಲ್ಲಿ ಹಾರಲು ಭುಜಂಗನ ಭಯವಿದೆ.

7. ಪುಟ್ಟಹಕ್ಕಿ ಜಗದಂಗಳದಲ್ಲಿ ಆ ಮೂಲೆಯಿಂದ ಈ ಮೂಲೆಗೆಸದಾಹಾರುತ್ತದೆ.

****

2 : ಚೆನ್ನಾಭೈರಾದೇವಿ

1. ಚೆನ್ನಾಭೈರಾದೇವಿಯ ಆಡಳಿತವಿದ್ದ ಪ್ರಾಂತ್ಯಗಳು ಗೇರುಸೊಪ್ಪೆ ಮತ್ತು ಹಾಡುವಳ್ಳಿ .

2. ಚೆನ್ನಾಭೈರಾದೇವಿಗೆ ಉಧ್ವಟತನದ ಪತ್ರ ಬರೆದವನು ಪೋರ್ಚುಗೀಸ್ ಗವರ್ನರ್ ಲೂಯಿಸ್ ಅಟಾಯಿಡೆ.

3. ಪೋರ್ಚುಗೀಸರು ಚೆನ್ನಾಭೈರಾದೇವಿಗೆ ನೀಡಿದ ಬಿರುದು ಕಾಳು ಮೆಣಸಿನರಾಣಿ.

4. ಪೋರ್ಚುಗೀಸರು ಹಡಗಿನ ಮೂಲಕ ಹೊನ್ನಾವರದ ಮೇಲೆ ದಾಳಿ ಮಾಡಲು ಸಜ್ಜಾಗಿದ್ದರು.

5. ಚೆನ್ನಾಭೈರಾದೇವಿಯ ರಾಯಭಾರಿಯ ಹೆಸರು ಕಂಠಪ್ಪನಾಯಕ.

6. ಚೆನ್ನಾಭೈರಾದೇವಿಯು ಕಾಡಿನ ಮಧ್ಯೆ ಕಟ್ಟಿದ ಕೋಟೆಯ ಹೆಸರು ಕಾನೂರು ಕೋಟೆ.

7. ಪೋರ್ಚುಗೀಸರು ಸುಮಾರು ನೂರ ಮೂವತ್ತು ಹಡಗುಗಳನ್ನು ಸಜ್ಜುಗೊಳಿಸಿದ್ದಾರೆ. ವಿದೇಶಿ ತರಬೇತಿ ಪಡೆದ ನಾವಿಕ ಸೈನ್ಯವನ್ನು ಪೋರ್ಚುಗಲ್‌ನಿಂದ ತರಿಸಿದ್ದಾರೆ. ಹಾಗಾಗಿ ಸಮುದ್ರಯುಧ್ಧದಲ್ಲಿ ಪೋರ್ಚುಗೀಸರನ್ನು ಗೆಲ್ಲುವುದು ಕಷ್ಟಸಾಧ್ಯ.

8. ಮನೆ ,ಕೊಟ್ಟಿಗೆ, ಅಂಗಡಿ, ದೇವಾಲಯ, ಮಸೀದಿ, ಬಸದಿ ಸೇರಿದಂತೆ ಇಡೀ ಹೊನ್ನಾವರ ಪಟ್ಟಣವನ್ನು ಸುಡುವ ಮೂಲಕ ಚೆನ್ನಾಭೈರಾದೇವಿಗೆ ಬುದ್ಧಿಕಲಿಸಬೇಕೆಂದು ಪೋರ್ಚುಗೀಸರು ಯೋಚಿಸಿದ್ದರು.

9. ಶತ್ರುಗಳು ಸುಲಭಕ್ಕೆ ಗೆಲ್ಲಲು ಸಾಧ್ಯವಾಗಬಾರದು ಹಾಗೂ ರಾಜ್ಯದ ಸಂಪತ್ತನ್ನು ಆ ಕೋಟೆಯಲ್ಲಿ ಶೇಖರಿಸಬೇಕೆಂದು ಚೆನ್ನಾಭೈರಾದೇವಿ ದಟ್ಟ ಕಾಡಿನ ಮಧ್ಯೆ ಕೋಟೆ ಕಟ್ಟಿಸಿದ್ದಳು.

10. ಯುದ್ದಕ್ಕೆ ಸಿಧ್ಧವಾಗಿದ್ದ ಎರಡು ಉದ್ದೇಶಗಳೆಂದರೆ ಮೊದಲನೆಯದು ರೊಜಾರಿಯೋನನ್ನು ಹೊತ್ತೊಯ್ಯುವುದು, ಎರಡನೆಯದು ರಾಣಿ ಚೆನ್ನಾಭೈರಾದೇವಿಯನ್ನು ಬಂಧಿಸುವುದು.

11. ಲೂಯಿಸ್ ಅಟಾಯಿಡೆ ಪತ್ರದಲ್ಲಿ ಚೆನ್ನಾಭೈರಾದೇವಿಗೆ ಹಾಡುವಳ್ಳಿ ಗೇರೆಸೊಪ್ಪೆಗಳ ಮಹಾರಾಣಿಗೆ ಗೋವೆಯ ಗವರ್ನರ್ ಲೂಯಿಸ್ ಅಟಾಯಿಡೆ ಶುಭಾಶಯಗಳು, ತಾವು ಹೊನ್ನಾವರ ಮತ್ತು ಭಟ್ಕಳ ಬಂದರುಗಳಲ್ಲಿ ನಮ್ಮ ಒಪ್ಪಿಗೆ ಪತ್ರಪಡೆಯದ ಮುಸಲ್ಮಾನರ ಹಡಗುಗಳ ವ್ಯಾಪರಕ್ಕೆ ಸಹಕರಿಸುತ್ತಿದ್ದೀರಿ ಕೊಡಲೇ ಅವರನ್ನು ಹೊರಗಟ್ಟಿ. ಪೋರ್ಚುಗೀಸ್ ರಾಜದ್ರೋಹಿ ಅಠಾಯಿಡೆಗೆ ನೀಡಿದ ಆಶ್ರಯವನ್ನು ನಿಲ್ಲಿಸಿ ನಮಗೊಪ್ಪಿಸಬೇಕು. ಇಲ್ಲವಾದಲ್ಲಿ ನಮ್ಮ ಚಕ್ರವರ್ತಿಗಳು ನಿಮಗೆ ನೀಡಿದ ಕಾಳುಮೆಣಸಿನರಾಣಿ ಎಂಬ ಬಿರುದನ್ನು ಹಿಂದಕ್ಕೆ ಪಡೆಯಬೇಕಾಗುತ್ತದೆ ಎಂದು ಬರೆದಿದ್ದನು.

3 : ಸಿರಿಯನಿನ್ನೇನ ಬಣ್ಣಿಪೆನು

1. ಭರತೇಶ ವೈಭವ ಕಾವ್ಯದ ಕರ್ತೃ ರತ್ನಾಕರವರ್ಣಿ.

2. ಭರತನನ್ನು ಹೊಗಳುತ್ತಿದ್ದ ಮೂರು ಲೋಕಗಳೆಂದರೆ ಸ್ವರ್ಗ, ಮರ್ತ್ಯ ಮತ್ತು ಪಾತಾಳ.

3. ಭರತ ಚಕ್ರವರ್ತಿಯು ಸೂರ್ಯೋದಯ ಸಮಯದಲ್ಲಿ ಎದ್ದು ದೇವರ ಪೂಜೆ ಮಾಡಿ ಓಲಗಕ್ಕೆ ಬರುತ್ತಾನೆ.

4. ದೇವೇಂದ್ರನು ರತ್ನಪುಷ್ಪಕದಲ್ಲಿ ಶೋಭಿಸುವಂತೆ ಭರತಚಕ್ರವರ್ತಿಯು ಆಸ್ಥಾನ ಭವನದೊಳಗೆ ಶೋಭಿಸುತ್ತಿರುವನು.

5. ತುಂಬಿದ ಸಭೆಯು ಭರತ ಚಕ್ರವರ್ತಿಯನ್ನು ನೋಡುವುದಕ್ಕಾಗಿ ಮೈಮರೆತು ಕಾತುರರಾಗಿದ್ದರು.

6. ಭರತ ಚಕ್ರವರ್ತಿಯು " ಗುರುವೇ , ಧ್ಯಾನ ಮಾಡುವುದಕ್ಕೆ ನನಗೆ ಬೇಸರಾದಾಗ ನಾನು ನಿನ್ನನ್ನು ಮೊದಲು ಮಾಡಿಕೊಂಡು ಕನ್ನಡದಲ್ಲಿ ಒಂದು ಕಥೆಯನ್ನು ಹೇಳುತ್ತೇನೆ. ನನ್ನೊಡೆಯನೇ ಅದು ನಿನ್ನಾಜ್ಞೆ" ಎಂದು ದೇವರಲ್ಲಿ ಪ್ರಾರ್ಥಿಸುತ್ತಾನೆ.

7. ಕವಿ ರತ್ನಾಕರವರ್ಣಿಯು ತಾನು ಬರೆಯುವ ಕಥೆಯನ್ನು ' ಆಹಾ ಬಹಳ ಚೆನ್ನಾಗಿದೆ' ಎಂದು ಕನ್ನಡಿಗರು. ' ರಯ್ಯಾ ಮಂಚಿದಿ' ಎಂದು ತೆಲುಗಿನವರು, ' ಎಂಚಪೊರ್ಲಾಂಡ್' ಎಂದು ತುಳವರು ಅತ್ಯಾಸಕ್ತಿಯಿಂದ ಕೇಳಿ ಹೊಗಳಬೇಕೆಂದು ಬಯಸಿದ್ದಾನೆ.

8.ಭರತ ಚಕ್ರವರ್ತಿಯು ನವರತ್ನ ಹಾಗೂ ಚಿನ್ನದಿಂದ ನಿರ್ಮಿತವಾದ ಆಸ್ಥಾನಭವನದಲ್ಲಿ ಸ್ವರ್ಗಲೋಕದಲ್ಲಿ ದೇವೇಂದ್ರನು ರತ್ನಪುಷ್ಪಕದಲ್ಲಿ ಶೋಭಿಸುವಂತೆ ಕಾಂತಿಯಿಂದ ಶೋಭಿಸುತ್ತಿರುವನು. ಅಲ್ಲದೆ ಚಾಮರಗಳ ಸಾಲಿನಲ್ಲಿ ಭರತಚಕ್ರವರ್ತಿಯು ' ಆಗಸದಲ್ಲಿ ತೇಲುವ ಬಿಳಿಮೋಡಗಳ ಹಿಂದೆ ಆಗಾಗ ತೋರಿ ಮರೆಯಾಗುವ ಚಂದ್ರನೋ ಸೂರ್ಯನೋ, ಎಂಬಂತೆ ಕಂಗೊಳಿಸಿದನು.

****

4. ನನ್ನಾಸೆ - ಇಂದುಮತಿ ಲಮಾಣಿ

1. ಅಜ್ಞಾನ ತೊಲಗಿಸಲು ಕವಯಿತ್ರಿ ವಾಗ್ದೇವಿಯ ಕೈಯಲ್ಲಿಯ ಗ್ರಂಥವಾಗ ಬಯಸಿದ್ದಾರೆ..
2. ದಾಹಗೊಂಡವರ ತನುವ ತಣಿಸುವಂತಾಗಲು ಸದಾ ಚಿಮ್ಮುವ ಚಿಲುಮೆಯಾಗಬೇಕು ಎಂದಿದ್ದಾರೆ.
3. ಕವಯತ್ರಿಯವರು ದಿಕ್ಕಿಲ್ಲದೆ ನರಳಾಡುವ ದೀನದಲಿತರಿಗೆ ನೆರಳಾಗ ಬಯಸಿದ್ದಾರೆ.
4. ಅಳುವ ಕಂದನ ನಗಿಸಲು ಕವಯತ್ರಿ ಅಮ್ಮನ ಕಂಠವಾಗಲು ಬಯಸಿದ್ದಾರೆ .
5. ದಾಹಗೊಂಡವರ ತನುವ ತಣಿಸಬೇಕು ಎಂದಿದ್ದಾರೆ.
6. ಕವಯತ್ರಿಯವರು ನೆಲಕ್ಕೆ ಬಿದ್ದು ಹೊರೆಯಾಗುವ ಮುನ್ನ ತನ್ನ ಅಂತ್ಯವಾಗ ಬಯಸಿದ್ದಾರೆ.

7. ನನ್ನಾಸೆ ಕವನದಲ್ಲಿ ಕವಯಿತ್ರಿಯವರು ತಾವು 'ಬೆಳಕು ನೀಡುವ ಬತ್ತಿಯಾಗಬೇಕು. ಮರವಾಗಿ ಪುಣ್ಯವಂತರಿಗೆ ನೆರಳಾಗಬೇಕು, ದಾಹಗೊಂಡವರ ತನುವ ತಣಿಸುವಂತಾಗಲು ಸದಾ ಚಿಮ್ಮುವ ಚಿಲುಮೆಯಾಗಬೇಕು. ಅಮ್ಮನ ಕಂಠದ ಜೋಗುಳವಾಗಬೇಕು. ಮಾನವನ ಅಜ್ಞಾನತೆ ತೊಲಗಿಸಲು ವಾಗ್ದೇವಿಯ ಕೈಯಲ್ಲಿಯ ಗ್ರಂಥವಾಗಿ ಧನ್ಯವಾಗಬೇಕು. ಮುಸ್ಸಂಜೆ ಹೊಸ್ತಿಲಲ್ಲಿ ದಿಕ್ಕಿಲ್ಲದೆ ನರಳಾಡುವ ದೀನರ ಊರುಗೋಲು ನಾನಾಗಬೇಕು.' ಎಂದು ಆಶಿಸಿದ್ದಾರೆ.

****

5. ಉರಿದ ಬದುಕು

1. ತನ್ನ ತಂಗಿ ಅನ್ನವ್ವ ಬಾಗಿಲು ತೆರೆಯದೆ ಇದ್ದುದ್ದರಿಂದ ತಿಪ್ಪಣ್ಣ ಸಿಟ್ಟುಗೊಂಡನು.
2. ತಿಪ್ಪಣ್ಣನು ಕಾಶೀಮಲಿಯನ್ನು ಕೊಲ್ಲಲುನಿರ್ಧರಿಸಿದ್ದನು.
3. ತಿಪ್ಪಣ್ಣ ತನ್ನ ತಂಗಿಯ ಮನೆಯಲ್ಲಿಮೂರು ನಾಕುತಾಸು ಇರುತ್ತೇನೆಂದು ಹೇಳಿದನು.
4. ಅನ್ನವ್ವ ತನ್ನ ಅಣ್ಣನಿಗೆ ತಿನ್ನಲು ರೊಟ್ಟಿ ಮತ್ತು ಗಟ್ಟಿಬ್ಯಾಳೆ ತಂದು ಕೊಟ್ಟಳು.
5. ಬಾಗಿಲು ತೆರೆದ ವ್ಯಕ್ತಿಯ ಹೆಸರು ಭೀಮ್ ರೆಡ್ಡಿ.
6. ಭೀಮ್ ರೆಡ್ಡಿ ಮತ್ತು ತಿಪ್ಪಣ್ಣ ಇಬ್ಬರೂ ಪೊಲೀಸರು, ರಜಾಕಾರರು ಹೆದರುವಷ್ಟು ಸಾಹಸಮಾಡಿದ್ದರು.
7. ಶಂಕ್ರಣ್ಣನು ಕಷ್ಟ (ಕ್ಷೌರ)ದ ವೃತ್ತಿಮಾಡುತ್ತಿದ್ದನು.
8. ಶಂಕ್ರಣ್ಣ ಬೆಟ್ಟೂರ ಗೌಡ್ರ ಜೊತೆ ತಿರುಗಾಡಲು ಪ್ರಾರಂಭಿಸಿದ್ದನು.
9. ಶಂಕ್ರಣ್ಣನನ್ನು ಮಾದ್ರು ದುರ್ಗಪ್ಪ ರಕ್ಷಿಸಿದನು.
10. ಮಾದ್ರು ದುರ್ಗಪ್ಪನ ಮನೆಯೇ ಶಂಕ್ರಣ್ಣ ಮತ್ತು ಆತನ ಜೊತೆಗಾರರ ಆಶ್ರಯ ತಾಣವಾಗಿತ್ತು.
11. ತಿಪ್ಪಣ್ಣನನ್ನು ಗಪ್ಪನೆ ಬಲವಾಗಿ ಹಿಡಿದುಕೊಂಡವರು ಶಂಕ್ರಣ್ಣ.
12. ದುರ್ಗಪ್ಪ ಮಾದ್ರು ಕುಲದ ವೇದಾಂತಿ.
13. ದುರ್ಗಪ್ಪನು ಬಸವಣ್ಣನ ಒಂದೆರಡು ವಚನಗಳನ್ನು ಹೇಳಿದನು.
14. ದುರ್ಗಪ್ಪನು, ಶಂಕ್ರಣ್ಣನಿಗೆ ತಿನ್ನಲು ಕಟಿರೊಟ್ಟಿ ಕಾರಪುಡಿ, ಉಳ್ಳಾಗಡ್ಡೆ, ಒಂದೀಟುಎಣ್ಣೆ ತಂದು ಕೊಟ್ಟನು.

15. ತಿಪ್ಪಣ್ಣನು ಅಪರಾಧಿಯಾಗಿದ್ದು ಪೊಲೀಸರಿಗೂ ಮತ್ತು ರಜಾಕಾರರಿಗೂ ತಲೆ ನೋವಾಗಿದ್ದ ವ್ಯಕ್ತಿಯಾಗಿದ್ದನು.ಈತನು ವಿವಿಧ ಶಿಬಿರಗಳ ಮೇಲೆ ದಾಳಿ ಮಾಡಿ ತಲೆಮರಿಸಿಕೊಂಡಿದ್ದನು. ತನ್ನ ತಂದೆಯನ್ನು ಕೊಂದಿದ್ದಕಾಶಿಮಲಿಯನ್ನು ಕೊಲ್ಲಲು ಸಂಚು ಹೂಡುತ್ತಿದ್ದನು. ಈ ಕಾರಣದಿಂದಾಗಿ ಅನ್ನವ್ವ ತನ್ನ ಅಣ್ಣನನ್ನುತನ್ನ ಮನೆಯ ಒಳಗೆ ಸೇರಿಸಿಕೊಳ್ಳಲಿಲ್ಲ.

16. " ಬ್ಯಾಡ ಅಣ್ಣ ಜಲ್ದಿ ನಡಿ ಅಣ್ಣಾ, ಆತ ಈಗ ಬದಲಾಗ್ಯಾನ. ಜೀವದ ಅಂಜಿಕೆ ಹೆಚ್ಚಾಗಿ ರಜಾಕಾರರ ಸೋಬ್ತಿ ಮಾಡ್ಯಾನ. ಈ ಮಾತು ನಿನಗೆಹೇಳಬಾರದಂತ ಮಾಡಿದ್ದೆ. ನನ್ನ ಹಣೇ ಬರಾ. ಅಪ್ಪನ್ನ ಕಳ್ಕೊಂಡೆ. ಈಗ ಅಣ್ಣನ್ನ ಕಳಕಳ್ಳಿಕ್ಕೆಒಲ್ಲೆ. ಆತ ಕುಡಿದು ಒಳಗೆ ಬಿದ್ದಾನ. ನೀ ಬಂದದ್ದು ಗೊತ್ತಾದ್ರೆ ರಜಾಕಾರರಿಗೆ ಹಿಡುಕೊಡಾಕ ಅವನೇನುಹೇಸೋದಿಲ್ಲ. ಎಂದು ಹೇಳಿದಳು.

17. ಗೌವ್ ಎನ್ನುವ ಕತ್ತಲೆ. ಅದರಲ್ಲಿ ಏನು ಕಾಣುತ್ತಿರಲಿಲ್ಲ. ಆ ಕತ್ತಲೆಯನ್ನು ಸೀಳಿಕೊಂಡುಎಲ್ಲಿಗೆ ಹೋಗಬೇಕು? ಊರಿಗೆ ಪೊಲೀಸರು ಬೇರೆಬಂದಿದ್ದಾರಂತೆ. ಅಲ್ಲದೆ ರಜಾಕಾರರ ದಂಡೂ ಈ ಊರಲ್ಲಿ ದೊಡ್ಡದೇ ಆದಂತೆ. ಆಗಸೆಯ ಕಡೆ ಹೋದರೆ ಪ್ರಾಣಉಳಿಯಿದು. ಈ ಓಣಿಯಲ್ಲಿ ಮಸೀದೆ, ಅಲ್ಲಿ ರಜಾಕಾರರ ಕ್ಯಾಂಪ್. ಈ ಕಡೆ ಸಣ್ಣ ಸಂಧಿಯಲ್ಲಿಯೇ ತಪ್ಪಿಸಿಕೊಂಡುಹೋಗಬೇಕು ಎಂದು ತನ್ನ ಮನದಲ್ಲಿ ಚಿಂತಿಸಿದನು.

18. ಮನೆಯಲ್ಲಿ ಮಂದಗೆ ಚಿಮ್ಮಣಿ ದೀಪ ಉರಿಯುತ್ತಿತ್ತು. ತಿಪ್ಪಣ್ಣನಿಗೆ ಜೀವದಲ್ಲಿ ಜೀವಇರಲಿಲ್ಲ. ಶಂಕ್ರಣ್ಣ ಯಾರೆಂದು ಗೊತ್ತಾಗಿತ್ತು. ಆದರೆ ಆತ ಪೊಲೀಸರಿಗೆ ಹಿಡಿದುಕೊಟ್ಟರೆ? ಯಾಕೆಂದರೆತಿಪ್ಪಣ್ಣನ ಮನೆತನದ ಮೇಲೆ ಶಂಕ್ರಣ್ಣನದು ಸಿಟ್ಟಿತ್ತು: ಸಿಟ್ಟು ಎನ್ನುವುದಕ್ಕಿಂತ ಕುನಿಸೇಇತ್ತು. ಆತ ತನ್ನ ಕೈಗಳನ್ನು ಬಿಟ್ಟು, ಹೆಗಲ ಮೇಲೆ ಕೈ ಹಾಕಿ ಬರುವಾಗ ತಾನೇಕೆ ಅವನಮೇಲೆ ಆಕ್ರಮಣ ಮಾಡಲಿಲ್ಲ? ಯಾಕೋ ಬ್ಯಾಡೆನಿಸಿತು.ಸಮಯ ಬಂದರೆ ಬಾಂಬ್ ಒಗೆದರಾಯಿತು ಎಂದು ನಿರ್ಧರಿಸಿದನು.

19. ಚಿಮ್ಮಣಿಯ ಬೆಳಕಿನಲ್ಲಿ ತಿಪ್ಪಣ್ಣ ಬಾಗಿಲು ತೆರೆದ ಇನ್ನೊಬ್ಬ ವ್ಯಕ್ತಿಯನ್ನು ನೋಡಿದನು.ದಪ್ಪ ಮೀಸೆಯ ಕುಳ್ಳನ ಮನುಷ್ಯ. ಒಂದು ಹಲ್ಲು ಮುಂದೆ ಬಂದಿತ್ತು. ವಿಶ್ವಾಸ ಸೂಸುವ ಕಣ್ಣುಗಳುಫಳಫಳ ಹೊಳೆಯುತ್ತಿದ್ದವು.

20. ತಿಪ್ಪಣ್ಣ ಆ ಕೋಣೆಯ ತುಂಬಾ ಕಣ್ಣಾಡಿಸಿ ನೋಡುತ್ತಿದ್ದಾಗ ಶಂಕ್ರಣ್ಣನು ಇದು ನನ್ ಮನೆಅಲ್ಲ; ನನ್ ಮನೇನ್ನ ನಾಕು ತಿಂಗಳ ಹಿಂದೆ ರಾಜಕಾರರು ಸುಟ್ಟೆಟ್ರು. ಇದ್ದ ಒಬ್ಬಾಕಿ ಅಮ್ಮ ಹ್ವಾದವರ್ಷ ಸತ್ತು ಹೋದ್ಲು. ನಾನೊಬ್ಬನೇ ಊರಾಗ ಕ್ಷೌರ ಮಾಡಿಕೆಂತ, ಕೈ ಬಾಯಿ ಸುಟ್ಟುಕೊಂಡು ಅಡಿಗೆಮಾಡ್ಕೊಂಡು ಹಂಗು ಹಿಂಗೂ

ಬದುಕು ನಡೆಸಿದೆ. ರಜಾಕಾರರ ಹಾವಳಿ ಸುರುವಾಯಿತಲ್ಲ, ನನಗ ಸುಮ್ನೆಕುಂದ್ರುದು ಆಗಲಿಲ್ಲ. ಬೆಟ್ಟೂರ ಗೌಡ್ರು ಜೊತೆಗೆ ತಿರುಗಾಡಲು ಆರಂಭಿಸಿದೆ.ಬೆಟ್ಟೂರ ಗೌಡ್ರು ತಲೆಮರಿಸಿಕೊಂಡು ನದಿ ದಾಟಿ ಹೋದ್ರು.ನಾನು ರಜಾಕಾರರ ಕೈಗೆ ಸಿಕ್ಕ ಹಾಕಿಕೊಂಡು ಅವರ ಕೈಯಲ್ಲಿ ಏಟು ತಿಂದು ಮಾದ್ರು ದುರ್ಗಪ್ಪನ ಮನೆಸೇರಿದೆ.

21. ಬೆಟ್ಟೂರ ಗೌಡ್ರು ಒಂದು ದೊಡ್ಡ ಗುಂಪನ್ನು ಕಟ್ಟಿ, ನಿಜಾಮನ ವಿರುದ್ದ ಸಡ್ಡು ಹೊಡೆದುನಿಂತಿದ್ದರು. ಅವರ ಉಪಟಳ, ಆಕ್ರಮಣ ರಜಾಕಾರರಿಗೆ ತಡೆದುಕೊಳ್ಳಲು ಆಗಲಿಲ್ಲ. ನಿಮಗೆಲ್ಲ ಗೊತ್ತಿರಬೇಕಲ್ಲಅವರ ಸುದ್ದಿ. ಅಲ್ಯಾರಂದ್ರ ಇಲ್ಯಾರ, ಇಲ್ಯಾರಂದ್ರ ಅಲ್ಯಾರ. ಎಲ್ಲರೂ ಶಹಬ್ಬಾಸ್ ಅನ್ನಬೇಕುಅವರಿಗೆ. ಇವತ್ತಿಗೂ ಯಾರ ಕೈಗೂ ಸಿಗ್ಲಿಲ್ಲ. ರಾತ್ರೋರಾತ್ರಿ ಒಬ್ಬರೇ ಹಿರೇ ಕುದುರೆ ಮೇಲೆ ಹೋಗಿಸೈನ್ಯದ ಶಿಬಿರದ ಮೇಲೆ ಬಾಂಬ್ ಒಗ್ದು ಬರುತ್ತಿದ್ದರು.ಈ ರೀತಿಯಾಗಿ ಅವರು ಹೆಸರು ಮಾಡಿದ್ದರು.

22. ಶಂಕ್ರಣ್ಣನು ಊರಿಗೆ ಬರುವ ಹೊತ್ತಿಗಾಗಲೇಆತನು ಬೆಟ್ಟೂರ ಗೌಡರ ಜೊತೆಗೆ ತಿರುಗಾಡುತ್ತಿದ್ದನು ಎಂಬ ಸುದ್ದಿ ಎಲ್ಲಾ ಕಡೆ ಹಬ್ಬಿತ್ತು.ರಜಾಕಾರರು ಆತನನ್ನು ಹಿಡಿದು ಬೂಟ್ ಗಾಲ್ಲೆ ಹೊದ್ರು. ಆತನ ಮನೆಗೆ ಬೆಂಕಿ ಹಚ್ಚಿದರು. ಬೆಂಕಿಯಾಗಇವನ್ನ ಒಗೀರೋ ಅಂದ್ರು. ಒಬ್ಬರು "ಕೂಳಿಲ್ದೆ ತಾನೇ ಸತ್ತೋತನ ನಾವ್ಯಾಕ ಕೊಲ್ಲುಮ್ಮ" ಎಂದು ಹೇಳಿಹೋದರು.

23. ಹೈದರಾಬಾದಿನ ನಿಜಾಮನ ಆಳ್ವಿಕೆಯ ಕಾಲವದು.ಆತನ ದುರಾಡಳಿತವನ್ನು ಖಂಡಿಸಿ ನಾಡಿನ ಧೀರರು ಆತನ ವಿರುದ್ದ ಸೆಡ್ಡು ಹೊಡೆದು, ಕಂಡ ಕಂಡಲ್ಲಿದಾಳಿ ಮಾಡಲು ಪ್ರಾರಂಭಿಸಿದ್ದರು. ಅಂತಹವ್ಯಕ್ತಿಗಳನ್ನುಹಿಡಿದು ಬಂದಿಸಿ ಕಠೋರವಾಗಿ ಶಿಕ್ಷಿಸುತ್ತಿದ್ದರು. ಇದರಿಂದಾಗಿ ಎಲ್ಲರೂ ಹೆದರುತ್ತಿದ್ದರು.ಆ ಕಾರಣದಿಂದ ಶಂಕ್ರಣ್ಣನಿಗೆ ಸಹಾಯ ಮಾಡಲು ಯಾರು ಬರಲಿಲ್ಲ.

24. ದುರ್ಗಪ್ಪ ಒಂದು ಜೋಪಡಿಯಲ್ಲಿ ವಾಸಿಸುತ್ತಾರೆ. ಇವರಿಗೆ ಹೆಂಡತಿ ಮಕ್ಕಳು ಇದ್ದು, ಅವರುದುಡಿಯುತ್ತಾರೆ. ಆತ ಭಜನೆ ಮಾಡುತ್ತಾನೆ, ತತ್ವಪದ ಹಾಡುತ್ತಾನೆ. ರಾತ್ರಿ ತುಂಬಾ ಏಕ್ ದಾರಿಹಿಡಿದು ಹಾಡ್ತಾ ಕುಂತಿರುತ್ತಾನೆ. ನಾವು ಇಲ್ಲಿ ಇರೋದು ಯಾರಿಗೂ ಸುಳಿವು ಹತ್ತದ ಹಾಗೆ ನೋಡಿಕೊಂಡಿದ್ದಾನೆ.

25. ತಿಪ್ಪಣ್ಣ ಮನೆಯ ಒಳಗೆ ಬರಲು ಹೊಸ್ತಿಲಲ್ಲಿ ಕಾಲು ಹಾಕಿದಾಗ, "ಬ್ಯಾಡ ಅಣ್ಣ ಕಾಲಿಗೆಬೀಳ್ತೀನಿ, ಒಳಗೆ ಬರಬೇಡ. ನಮ್ಮನ್ನೆಲ್ಲ ಸಾವಿನ ಬಾಯಾಗ ತುರಕಬೇಡ" ಎಂದು ಹೇಳಿದಳು.

26. "ಜೀವಕ್ಕೆ ಯಾವ ಕುಲಾನೂ ಇಲ್ಲ. ಗಾಳಿಗೆ ಕುಲ ಅದೇನು ತಮ್ಮಾ, ನೀರಿಗೆ ಕುಲಾ ಅದೇನುತಮ್ಮಾ, ನೆಲಕ್ಕೆ ಕುಲ ಅದೇನು? ಇದು ನಾವು ಮಾಡಿಕೊಂಡದ್ದು ಕುಡಿ ಎಂದು ದುರ್ಗಪ್ಪ ಶಂಕ್ರಣ್ಣನಿಗೆಕುಲದ ಬಗ್ಗೆ ತಿಳಿಸುತ್ತಾ ಕುಡಿಯಲು ಹೇಳಿದನು.

27. ದುರ್ಗಪ್ಪನು," ನಿಮ್ಮಂಗ ಪ್ರಾಣದ ಹಂಗುತೊರೆದು ದೇಶಕ್ಕಾಗಿ ನಾನಾಗಲಿ ನಮ್ ಮಕ್ಕಳಾಗಲಿ ಏನು ಮಾಡಿಲ್ಲ. ಈಗ ಇಷ್ಟಾದ್ರೂ ನಮ್ಮಿಂದ ಆಗ್ತದಲ್ಲ.ಈ ಸುಡುಗಾಡು ರಾಜ್ಯದಾಗ ಇರದಕ್ಕಿಂತ ಸಾಯದು ಬೇಸಲ್ಲೇನು? ಆದ್ರ ಈ ಹೋರಾಟದಾಗ ನಿಜಾಮ ಮಾತ್ರ ಹೇಳಹೆಸರರಿಲ್ಲದಂಗಾಗದುಖರೆ. ಗೆಲುವು ನಮಗೆ. ಬದುಕಿದ್ದರೆ ಸ್ವತಂತ್ರ ನೋಡೋಣ, ಹ್ಯಂಗಿರ್ತದ; ಸತ್ರ ದೇಶಕ್ಕಾಗಿ ಸತ್ತ ಅಂತಾರ. ಅಂತ ಸಾವು ಯಾರಿಗೂಂಟು ಯಾರಿಗಿಲ್ಲ. ಅದು ಪುಣ್ಯದಕೆಲಸ. ನಮ್ಮ ಮುಂದಿನವರಾದ್ರೂ ಸ್ವತಂತ್ರ ನೋಡ್ತಾರಲ್ಲ." ಎನ್ನುವ ಮಾತುಗಳು ಇವರ ಕೈ ಕಾಲುಗಳುಉಕ್ಕಿನಂಗೆ ಆಗುವಂತೆ ಮಾಡುತ್ತಿದ್ದವು

****

6. ಗುಣಸಾಗರಿ ಪಂಢರಿಬಾಯಿ -ಡಾ. ಜಯಮಾಲ.

1. ಪಂಢರಿಬಾಯಿಯವರು ಭಟ್ಕಳದಲ್ಲಿ ಜನಿಸಿದರು.
2. ಪಂಢರಿಬಾಯಿಯವರ ತಂದೆ ರಂಗರಾವ್ ತಾಯಿಯ ಕಾವೇರಿ ಬಾಯಿ.
3. ಪಂಢರಿಬಾಯಿಯವರ ಬಾಲ್ಯದ ಹೆಸರು ಗೀತಾ.
4. ಪಂಡರಿಬಾಯಿಯವರ ಕುಟುಂಬವು ಭಟ್ಕಳದಿಂದ ಮೈಸೂರಿಗೆಸ್ಥಳಾಂತರಗೊಂಡರು.
5. ವಿಮಲಾನಂದರು 'ಆದರ್ಶ ನಾಟಕ ಸಂಘ' ಎಂಬ ನಾಟಕ ಕಂಪನಿ ಸ್ಥಾಪಿಸಿದ್ದರು.
6. ಪಂಢರಿಬಾಯಿಯವರು ಮೊದಲು ಬಣ್ಣ ಹಚ್ಚಿದ ನಾಟಕ 'ಮುದುಕನ ಮದುವೆ'.
7. ಪಂಢರಿಬಾಯಿಯವರು ನಟಿಸಿದ ಮೊದಲ ಚಿತ್ರ 'ವಾಣಿ'.
8. ಪಿಟೀಲು ಚೌಡಯ್ಯ ಮತ್ತು ಕೆ. ಹಿರಣ್ಣಯ್ಯರವರು 'ವಾಣಿ' ಚಿತ್ರದಲ್ಲಿ ನಟಿಸಲು ಅವಕಾಶ ನೀಡಿದವರು.
9. ವಿಮಲಾನಂದರ ಗೆಳೆಯ ಸುದರ್ಶನ್.
10. ಎ.ವಿ.ಎಂ. ಸ್ಟುಡಿಯೋದ ಮಾಲೀಕರು ಚೆಟ್ಟಿಯಾರ್.
11. 'ಗುಣಸಾಗರಿ' ಸಿನಿಮಾದ ನಾಯಕ ನಟ ಹೊನ್ನಪ್ಪ ಭಾಗವತರ್.
12. ಜನರ ಮನಸ್ಸಿನಲ್ಲಿ ಪಂಢರಿಬಾಯಿಯವರು ಚಂದ್ರಮತಿ, ಸತಿಸಕ್ಕೂಬಾಯಿ ಎಂಬ ಹೆಸರಿನಿಂದ ಉಳಿದು ಕೊಂಡಿದ್ದಾರೆ.
13. ಪಂಢರಿಬಾಯಿಯವರು ' ಶ್ರೀಕೃಷ್ಣ ಚೈತನ್ಯ ನಾಟಕ ಸಭಾ' ಎಂಬ ನಾಟಕ ಕಂಪನಿಯನ್ನು ಸ್ಥಾಪಿಸಿದ್ದರು.
14. ಪಂಢರಿಬಾಯಿಯವರ ಪತಿಯ ಹೆಸರು ರಾಮರಾಯರು.
15. ಪಂಢರಿಬಾಯಿಯವರು ಕನ್ನಡದ ಮೇರು ನಟ ಡಾ. ರಾಜಕುಮಾ**ರ್, ತ**ಮಿಳಿನ ಅದ್ಭುತ ಪ್ರತಿಭೆ ಶಿವಾಜಿ ಗಣೇಶನ್ ನ ಮೊದಲ ಚಿತ್ರಗಳ ನಾಯಕಿಯಾಗಿ ನಟಿಸಿರುವದೇ ಬಹುದೊಡ್ಡ ಗೌರವವಾಗಿದೆ.
16. ಪಂಢರಿಬಾಯಿಯವರು ೨೯.೦೧.೨೦೦೨ ರಂದು ನಿಧನರಾದರು.

17. ಭಾರತೀಯ ಚಿತ್ರರಂಗವು ಎಂದೂ ಮರೆಯದ ನಟಿಯರಲ್ಲಿ ಪಂಢರಿಬಾಯಿ ಒಬ್ಬರು. ಇವರು ನಟಿ ಮಾತ್ರವಲ್ಲ, ಮಹಾನ್ವ್ಯಕ್ತಿತ್ವವುಳ್ಳವರಾಗಿದ್ದರು. ಇವರ ಬದುಕು ಮೇಣದ ಬತ್ತಿಯ ರೂಪವನ್ನು ಹೋಲುತ್ತದೆ. ಚಿತ್ರರಂಗದ ಉತ್ತುಂಗದಲ್ಲಿ ಇದ್ದಾಗಲೂ ಪಂಢರಿಬಾಯಿ ಸಾಮಾನ್ಯಳಂತೆ ಬದುಕಿದ್ದರು. ಸಿರಿಬಂದ ಕಾಲದಲ್ಲಿ ತಾನು ನಡೆದು ಬಂದ ಕಷ್ಟದ ಹಾದಿಯನ್ನು ಮರೆಯದವರು. ದೇವರಲ್ಲಿ ಗಾಢವಾದ ನಂಬಿಕೆ ಹೊಂದಿದ ಪಂಢರಿಬಾಯಿಯವರು ದುಡಿಮೆಯಲ್ಲಿ ದೇವರನ್ನು ಕಂಡವರು. ತಮ್ಮ ಬದುಕಿನಲ್ಲಿ ಮಾನವೀಯತೆಯನ್ನು ನಂಬಿದ್ದರೇ ಹೊರತು ನಟಿಸಿದವರಲ್ಲ. ಪಂಢರಿಬಾಯಿ ಎಂದರೆ ತಟ್ಟನೆ ನೆನಪಾಗುವುದು ಅಂತಃಕರಣ ತುಂಬಿದ ತಾಯಿ ಮುಖ.
18. ರಂಗರಾವ್ ಅವರಿಗೆ ಪಂಢರಾಪುರದ ಪಂಢರಿನಾಥನಲ್ಲಿ ಅತೀವ ಶ್ರದ್ಧೆ ಮತ್ತು ಭಕ್ತಿಗಳನ್ನು ಹೊಂದಿದ್ದರು. ದೇವರ ಮೇಲಿನ ನಂಬಿಕೆ ಮತ್ತು ಶ್ರದ್ಧಾಭಕ್ತಿಯಿಂದಾಗಿ ತನ್ನ ಮಗಳ ಹೆಸರನ್ನುಗೀತಾಳ ಬದಲಾಗಿ ಪಂಡರಿಬಾಯಿ ಎಂದು ಬದಲಾಯಿಸಿದರು.
19. ಒಮ್ಮೆ ವಿಮಲಾನಂದರ "ಆದರ್ಶ ನಾಟಕ ಸಂಘ' ಕಂಪನಿಯು 'ಮುದುಕನ ಮದುವೆ" ಎಂಬ ನಾಟ**ಕ**ದ ಪ್ರದರ್ಶನವನ್ನು ಆಯೋಜಿಸಿಕೊಂಡಿತ್ತು. ನಾಟಕ ಪ್ರಾರಂಭವಾಗುವ ಅರ್ಧಗಂಟೆ ಬಾಕಿ ಇರುವಾಗ ನಟಿ 'ಬರುವುದಿಲ್ಲ" ಎಂಬವಾರ್ತೆಯನ್ನುಕಳುಹಿಸಿದರು. ನಾಟಕದಟಿಕೇಟುಗಳುಪೂರ್ತಿಮಾರಾಟವಾಗಿದ್ದವು. ನಾಟಕ ನಿಂತರೆ ಬಹುದೊಡ್ಡ ಕಷ್ಟಕ್ಕೆ ಕುಟುಂಬ ಸಿಕ್ಕಿಕೊಳ್ಳುತ್ತಿತ್ತು. ಆಗ ವಿಮಲಾನಂದರು ತನ್ನ ತಂಗಿ ಪಂಢರಿಬಾಯಿಯವರಿಗೆ ಈ ಪಾತ್ರವನ್ನು ಕೊಟ್ಟು ನಾಟಕವನ್ನು ಯಶಸ್ವಿಗೊಳಿಸಿದರು.
20. ರಂಗಾರಾವ್ ಅವರು ಹರಿದಾಸರಾಗಿ ಮತ್ತು ತಾಯಿ ಶಾಲಾ ಶಿಕ್ಷಕಿಯಾಗಿ ದುಡಿದು, ಈ ದೊಡ್ಡ ಕುಟುಂಬವನ್ನು ಸಾಕಬೇಕಿತ್ತು. ಶ್ರದ್ಧಾಭಕ್ತಿಗಳನ್ನು ಮಾತ್ರ ಈ ಕುಟುಂಬ ಅತ್ಯಂತ ಶಿಸ್ತಿನಿಂದ ಪರಿ ಪಾಲಿಸುತ್ತಿತ್ತು. ಚಿಕ್ಕಂದಿನಿಂದಲೇ ಪಂಢರಿಬಾಯಿಯವರಿಗೆ ಸಂಗೀತದ ಅಭ್ಯಾಸವಾಗಿದ್ದು , ಹರಿಕಥೆ ಮಾಡುವುದನ್ನು ಹಾಗೂ ಕೀರ್ತನೆ ಹಾಡುವುದನ್ನು ಇವರು ಕಲಿತಿದ್ದರು. ಮನೆಯಲ್ಲಿ ಇದ್ದ ಸೃಜನಶೀಲ ವಾತಾವರಣ ಪಂಢರಿಬಾಯಿಯವರ 'ಕಲಾವಿದೆ' ವ್ಯಕ್ತಿತ್ವವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸಿತು.
21. ಪಂಢರಿಬಾಯಿಯವರು 'ಮುದುಕನ ಮದುವೆ' ಎಂಬ ನಾಟಕದಲ್ಲಿ ಮೊಟ್ಟ ಮೊದಲಿಗೆ ಅಭಿನಯಿಸಿದರು. ನಂತರ 'ವಾಣಿ' ಚಲನಚಿತ್ರದಲ್ಲಿ ಒಂದು ಚಿಕ್ಕಪಾತ್ರದಲ್ಲಿ ಉತ್ತಮವಾಗಿ ನಟಿಸಿದ ನಂತರ, ಅವರಿಗೆ ಕೆಲವು ಕಾಲ ಅವಕಾಶಗಳು ದೊರೆತಿರಲಿಲ್ಲ. ಅಂತಹ ಸಮಯದಲ್ಲಿ ರಂಗಭೂಮಿ ಅವರನ್ನು ಕೈ ಬಿಡಲಿಲ್ಲ. ಆ ದಿನಗಳಲ್ಲಿ ಕರ್ನಾಟಕ ಮಾತ್ರವಲ್ಲದೆ ದೂರದ ಮುಂಬೈಯವರಿಗೆ ಪ್ರವಾಸ ಮಾಡಿ ವಿವಿಧ ನಾಟಕಗಳಲ್ಲಿ ಅಭಿನಯಿಸಿ ತಮ್ಮ ಕುಟುಂಬಕ್ಕೆ ಆಸರೆಯಾಗಿ ನಿಂತರು. ಇದಲ್ಲದೆ 'ಶ್ರೀಕೃಷ್ಣ ಚೈತನ್ಯ ನಾಟಕ ಸಭಾ' ಎಂಬ

ರಂಗತಂಡವನ್ನು ಕಟ್ಟಿಕೊಂಡು ನಾಡಿನಾದ್ಯಂತ ವಿವಿಧ ನಾಟಕಗಳನ್ನು ಪ್ರದರ್ಶಿಸಿ ಸಹಕಲಾವಿದರಿಗೆ ನೆರವನ್ನು ನೀಡಿ ಉದಾರ ಮನೋಭಾವವನ್ನು ತೋರಿದರು.

22. ಪಂಢರಿಬಾಯಿಯವರು ಮೊಟ್ಟಮೊದಲು ಪಿಟೀಲು ಚೌಡಯ್ಯನವರ ಹಾಗೂ ಕೆ. ಹಿರಣ್ಣಯ್ಯರವರು ಸಿದ್ಧಗೊಳಿಸಿದ್ದ 'ವಾಣಿ' ಎಂಬ ಚಿತ್ರದಲ್ಲಿ ನಟಿಸಿದರು. ನಂತರ ಹೊನ್ನಪ್ಪ ಭಾಗವತರ ಅವರೊಂದಿಗೆ 'ಗುಣಸಾಗರಿ' ಎಂಬಸಿನಿಮಾದಲ್ಲಿನಟಿಯಾಗಿನಟಿಸಿದರು. ಇದಾದ ನಂತರ ವಿವಿಧ ಪಾತ್ರಗಳಲ್ಲಿ ಹಲವಾರು ಚಲನಚಿತ್ರಗಳಲ್ಲಿ ನಟಿಸಿದರು. ಸಂತ ಸತಿ ಸಕ್ಕುಬಾಯಿ, ರಾಯರ ಸೊಸೆ, ಮುಂತಾದ ಚಲನಚಿತ್ರಗಳಲ್ಲಿ ನಟಿಸಿದರು. ಅಲ್ಲದೆ ಕನ್ನಡ ಚಿತ್ರರಂಗದ ಮೇರುನಟರಾದ ಡಾ. ರಾಜಕುಮಾ ರ್ ಹಾಗೂ ತಮಿಳಿನ ಪ್ರತಿಭೆ ಶಿವಾಜಿ ಗಣೇಶನ್ ನಟಿಸಿದ ಮೊದಲ ಚಿತ್ರಗಳ ನಾಯಕಿ ನಟಿಯಾಗಿ ಕೂಡ ನಟಿಸಿದ್ದಾರೆ.

23. ಪಂಢರಿಬಾಯಿಯವರು ನಟಿಸಿರುವ ಪ್ರಮುಖ ಚಲನಚಿತ್ರಗಳೆಂದರೆ ವಾಣಿ, ಗುಣಸಾಗರಿ, ಸಂತ ಸತಿ ಸಕ್ಕುಬಾಯಿ, ರಾಯರ ಸೊಸೆ, ಅನ್ನಪೂರ್ಣ, ಕೇರಳಿದ ಸಿಂಹ, ಅಲ್ಲದೆ ದಕ್ಷಿಣ ಭಾರತದ ಎಲ್ಲಾ ಭಾಷೆಗಳ ಚಲನಚಿತ್ರಗಳಲ್ಲಿ ನಟಿಸಿ 'ರಾಷ್ಟ್ರೀಯ ನಟಿ' ಎನಿಸಿಕೊಂಡಿದ್ದಾರೆ.

24. ಪಂಢರಿಬಾಯಿಯವರ ನಟನೆಯ ಪ್ರತಿಭೆಗೆ ಹಲವಾರು ಪ್ರಶಸ್ತಿಗಳು ಲಭಿಸಿವೆ. ೧೯೬೫ ರಲ್ಲಿ ಸತ್ಯಹರಿಶ್ಚಂದ್ರ ಚಿತ್ರದ ಚಂದ್ರಮತಿ ಪಾತ್ರದ ನಟನೆಗಾಗಿ 'ರಾಷ್ಟ್ರೀಯ ಶ್ರೇಷ್ಠನಟಿ' ಪ್ರಶಸ್ತಿಯನ್ನು ಅಂದಿನ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರಿಂದ ಪಡೆದರು. ಅದೇ ವರ್ಷ ತಮಿಳುನಾಡು ಸರ್ಕಾರ ಪಂಢರಿಬಾಯಿಯವರಿಗೆ 'ಕಲೈಮಾಮಣಿ' ಪ್ರಶಸ್ತಿಯನ್ನು ಕೊಟ್ಟು ಗೌರವಿಸಿದೆ. ಕರ್ನಾಟಕ ಸರ್ಕಾರ ೧೯೯೪ ರಲ್ಲಿ ರಾಜ್ಯೋತ್ಸವ ಪ್ರಶಸ್ತಿಯನ್ನು, ೧೯೯೫ ರ 'ಡಾ. ರಾಜಕುಮಾರ್' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಇವರಿಗೆ ಜೀವಮಾನ ಸಾಧನೆಗಾಗಿ 'ಫಿಲ್ಮ್‌ಫೇರ್' ಪ್ರಶಸ್ತಿಯನ್ನು ನೀಡಲಾಗಿದೆ. ಇವುಗಳಲ್ಲದೆ ಹಲವಾರು ಸಂಘಸಂಸ್ಥೆಗಳು ಇವರ ಸಾಧನೆಗಳನ್ನು ಗುರ್ತಿಸಿ ವಿವಿಧ ರೀತಿಯ ಪ್ರಶಸ್ತಿಗಳನ್ನು ನೀಡಿ ಗೌರವಿಸಿದೆ.

25. ಪಂಢರಿಬಾಯಿಯವರು ಗಟ್ಟಿ ಮನಸ್ಸಿನ ವ್ಯಕ್ತಿತ್ವ ಉಳ್ಳವರಾಗಿದ್ದರು. 'ಬಂದಿದ್ದು ಬರಲಿ ಭಗವಂತನ ದಯೆ ಇರಲಿ' ಎಂಬ ತತ್ವದಲ್ಲಿ ನಂಬಿಕೆ ಇರಿಸಿದ್ದ ಪಂಢರಿಬಾಯಿಯವರು ೧೯೯೪ ರಲ್ಲಿ ರಸ್ತೆ ಅಪಘಾತದಲ್ಲಿ ಒಂದು ಕೈ ಕಳೆದು ಕೊಂಡರು. ಈ ಘಟನೆಯಿಂದ ಎದೆಗುಂದದೆ ತಮ್ಮ ನಟನೆಯ ಕಾಯಕವನ್ನು ಮುಂದುವರಿಸಿದ್ದು, ಅವರ ಜೀವನ ಪ್ರೀತಿಗೆ ಸಾಕ್ಷಿಯಾಗಿದೆ. ಪ್ರತಿಭೆ, ಅಂತಃಕರಣ ಮತ್ತು ಹೃದಯ ಶ್ರೀಮಂತಿಕೆ ಒಬ್ಬರಲ್ಲಿಯೇ ನೆಲೆಗೊಳ್ಳುವುದು ಅಪರೂಪ. ಇಂತಹ ಅಪರೂಪದ ಕಲಾವಿದೆ ಪಂಢರಿಬಾಯಿಯವರು ೨೯-೦೧-೨೦೦೨ ರಲ್ಲಿ ನಿಧನರಾಗಿ, ಕಲಾರಸಿಕರ ಮನಸ್ಸಿನಲ್ಲಿ ಎಂದೆಂದಿಗೂ ಅಮರರಾಗಿ ಉಳಿದ್ದಾರೆ.

****

ಅಪಠಿತಗದ್ಯ.

1.

ಅ. ಯುರೋಪ್. 'ಗ್ರೀನ್ಪೀಸ್' ನಂತಹ ಪೃಥ್ವಿ ರಕ್ಷಣಾ ಯೋಧರ ಕೆಚ್ಚೆದೆಯ ಸಾಹಸಗಳನ್ನಂತೂ ಬಿಡಿ; ದಟ್ಟಹೊಗೆ ಕಾರುವ ಕಾರ್ಖಾನೆಗಳ ಚಿಮಣಿಗಳ ಮೇಲೆ ಹತ್ತಿ 'ಶುದ್ಧಗಾಳಿ ನಮ್ಮೆಲ್ಲರ ಹಕ್ಕು' ಎಂದು ಘೋಷಣೆ ಬರೆಯುತ್ತಾರೆ. ಹೆಮ್ಮರಗಳನ್ನು ಕಡಿದು ಸಾಗಿಸುವ ಕಾಡಿನ ರಸ್ತೆಯಲ್ಲಿ ಹೊಂಡ ತೋಡಿ, ತಮಗೆ ತಾವೇ ಆನೆ ಸರಪಳಿ ಬಿಗಿದು, ಬೀಗಹಾಕಿ ಕೂತು ಬಿಡುತ್ತಾರೆ. ಅಂದದ ತುಪ್ಪಳಕ್ಕೆಂದು ಮುದ್ದು **ಸೀಲ್** ಪ್ರಾಣಿಗಳ ನೆತ್ತಿಯ ಮೇಲೆ ದೊಣ್ಣೆಯಿಂದ ಠಪ್ಪೆಂದು ಕುಟ್ಟಿ ಕೊಲ್ಲುವ ದುಷ್ಟರ ವಿರುದ್ಧ ಈ ಯೋಧರ ಉಪಾಯವೇನು ಗೊತ್ತೆ**?** ಅವರಿಗಿಂತ ಮೊದಲೇ ಇವರು ಹಿಮಪ್ರಾಂತ್ಯಕ್ಕೆ ಹೋಗಿ, ಸೀಲ್ಪ್ರಾಣಿಗಳ ಮೇಲೆ ಎನಾಮಲ್ಬಣ್ಣ ಸುರಿದು ಅವುಗಳ ಚರ್ಮದ ಅಂದಗೆಡಿಸಿ ಬರುತ್ತಾರೆ. ಕಾರ್ಖಾನೆಗಳು ಕೊಳವೆಯ ಮೂಲಕ ಕೊಳೆಯನ್ನು ಆಳಸಮುದ್ರಕ್ಕೆ ಹರಿಬಿಡುತ್ತಿದ್ದರೆ ಗ್ರೀನ್ಪೀಸ್‌ನ ಮುಳುಗುವೀರರು ಆ ಕೊಳವೆಯ ಬಾಯಿಯನ್ನು ನೀರಿನೊಳಗೆ ಕಟ್ಟಿ ಬರುತ್ತಾರೆ. ಹೀಗೆ ಜೀವವನ್ನೇ ಪಣಕ್ಕಿಟ್ಟು ಗಾಂಧೀಜಿಯವರ ಮಾದರಿಯ ಅಹಿಂಸಾತ್ಮಕ ಸೆಣಸಾಟ ನಡೆಸುತ್ತಾರೆ.

ಆ. ಯುರೋಪ್, ಅಮೆರಿಕಾ, ಆಸ್ಟ್ರೇಲಿಯಾ, ಜಪಾನ್‌ಗಳಲ್ಲಿ ಹಿಂದೆಂದಿಗಿಂತ ಹೆಚ್ಚಿನ ಜನಜಾಗೃತಿಯ ಕಾರ್ಯಕ್ರಮಗಳುನ ಡೆಯುತ್ತಿವೆ. ಜೂನ್೫ರ ವಿಶ್ವ ಪರಿಸರ ದಿನಾಚರಣೆಯ ಜೊತೆಗೆ ಅವರ ಏಪ್ರಿಲ್ ೨೨ರಂದು ಭೂದಿನ ಆಚರಿಸುತ್ತಾರೆ. ಏಪ್ರಿಲ್ ೨೬ರಂದು 'ಚರ್ನೋಬಿಲ್ದಿನ' ಆಗಸ್ಟ್ ೬ರಂದು 'ಹಿರೋಶಿಮಾ ದಿನ' , ಡಿಸೆಂಬರ್ ೩ರಂದು 'ಭೂಪಾಲ ದಿನ' **...**

ಅಪಠಿತಗದ್ಯ. 2

ಅ) ಬಸಯ್ಯ ಕಡು ಬಡತನದ ಯುವಕ. ಅವನಿಗೆ ರೈತನಾಗಬೇಕೆಂಬ ಬಯಕೆ. ತಂದೆಯಿಂದ ಬಂದ ಎರಡು ಎಕರೆ ಭೂಮಿಯಿತ್ತು. ಅದೂ ಬಂಜರು, ಗುಡ್ಡಗಳಿಂದ ಕೂಡಿದ ಭೂಮಿ. ನೀರಾವರಿ ಸೌಲಭ್ಯಗಳಿಲ್ಲ. ಆದರೂ ಸಾಧಿಸುವ ಛಲವಿತ್ತು. ತನ್ನ ಭೂಮಿಯಲ್ಲಿದ್ದಗಿಡಗಂಟಿಗಳನ್ನು ತೆಗೆದ. ಅಲ್ಲಲ್ಲಿ ಇದ್ದ ಸಣ್ಣಪುಟ್ಟ ಬಂಡೆಗಲ್ಲುಗಳನ್ನು ಒಡೆಸಿ ಹೊರ ಹಾಕಿದ. ನೇಗಿಲಿನಿಂದ ಉಳುಮೆ ಮಾಡಿದ. ಕೊಟ್ಟಿಗೆ ಗೊಬ್ಬರ ಹಾಕಿ ಭೂಮಿಯನ್ನು ಹದ ಮಾಡಿದನು.

ಆ) ಮಳೆಗಾಲದಲ್ಲಿ ತನ್ನ ಭೂಮಿಯ ಪಕ್ಕದಲ್ಲಿ ವ್ಯರ್ಥವಾಗಿ ಹರಿದು ಹೋಗುವ ನೀರನ್ನು ಕಂಡನು. ಸರ್ಕಾರದಿಂದ ಹಣ ಸಹಾಯ ಪಡೆದು ಹೊಂಡ ತೆಗೆಸಿದ. ಮಳೆನೀರನ್ನು ಸಂಗ್ರಹಿಸಿದ. ಕೃಷಿ ಅಧಿಕಾರಿಗಳ ಜೊತೆ ಚರ್ಚಿಸಿದ. ಸಂಗ್ರಹಿಸಿದ ಮಳೆ ನೀರಿಗೆ ಹನಿ ನೀರಾವರಿ ಅಳವಡಿಸಿದನು. ವಿವಿಧ ಬೆಳೆ ಪದ್ದತಿ ಅಳವಡಿಸಿಕೊಂಡನು. ದಾಳಿಂಬೆ, ಸಪೋಟ, ತೆಂಗು, ಹೂಬೆಳೆಗಳನ್ನು ಬೆಳೆದನು. ಅಧಿಕ ಇಳುವರಿ ಪಡೆದನು.

ಅಪಠಿತಗದ್ಯ.3

ಅ) ತಿಪ್ಪೇನಹಳ್ಳಿಯ ಪಾಠ ಶಾಲೆಯ ನೋಟಿಸು ಬೋರ್ಡ್ನ ಮೇಲೆ (೧) ಮಕ್ಕಳು ಸರಿಯಾದ ಹೊತ್ತಿಗೆ ಬರಬೇಕು. (೨) ಪಾಠ ಕಾಲದಲ್ಲಿ ಗ್ರಾಮಸ್ಥರು ಒಳಕ್ಕೆ ಬರಬಾರದು. (೩) ದಾಖಲೆಯಿಲ್ಲದ ಮಕ್ಕಳನ್ನು ಒಳಕ್ಕೆ ಸೇರಿಸುವುದಿಲ್ಲ. (೪) ಸ್ಕೂಲಿನ ಒಪ್ಪಾರದಲ್ಲಿ ಗ್ರಾಮಸ್ಥರು ಕುಳಿತು ಗಲಾಟೆ ಮಾಡ ಕೂಡದು._ ಎಂದು ದಪ್ಪಕ್ಷರಗಳಲ್ಲಿ ಬರೆದಿತ್ತು.

ಆ) ತಿಪ್ಪೇನಹಳ್ಳಿಯ ಮೇಷ್ಟ್ರು ನಿಜವಾಗಿಯೂ ರೂಲ್ಸಿಗೆ ವಿರುದ್ಧವಾಗಿ ನಡೆಯುತ್ತಿದ್ದಾನೆಯೇ ? ಇನ್ನೂ ಇತರರು ಯಾರು ಹಾಗೆ ದಾಖಲೆಯಿಲ್ಲದ ಮಕ್ಕಳನ್ನು ಸೇರಿಸಿ ಕೊಂಡಿದ್ದಾರೆ ? ನೋಡೋಣ ಎಂದು ಆಲೋಚಿಸುತ್ತ ತಿಪ್ಪೇನಹಳ್ಳಿಗೆ ಸುಮಾರು ಒಂಬತ್ತು ಗಂಟೆ ಹೊತ್ತಿಗೆ ಹೋದ.

ಅಪಠಿತಗದ್ಯ. 4

ಅ. ಆಲೂರು ವೆಂಕಟರಾಯರು ಅಖಂಡ ಕರ್ನಾಟಕದ ಕನಸನ್ನು ನನಸಾಗಿಸಲು ಹೋರಾಟ ನಡೆಸುತ್ತಾ ಸ್ವತಂತ್ರ ಭಾರತದ ಹೋರಾಟದಲ್ಲಿಯೂ ಭಾಗವಹಿಸಿದರು. "ಭಾರತವನ್ನು ಬಿಟ್ಟು ಕರ್ನಾಟಕವಿಲ್ಲ; ಕರ್ನಾಟಕವನ್ನು ಬಿಟ್ಟು ಭಾರತವಿಲ್ಲ" ಎಂಬುದು ಅವರ ಸ್ಪಷ್ಟ ನಿಲುವಾಗಿತ್ತು. ಅಂದು ವಿದೇಶಿ ವಸ್ತುಗಳ ಮಾರಾಟದಿಂದ ಸ್ವದೇಶಿವಸ್ತುಗಳ ಮಾರಾಟ ಕಡಿಮೆಯಾಗಿ ನಮ್ಮ ಅನೇಕ ಕೈಗಾರಿಕೆಗಳು ಮೂಲೆ ಸೇರುತ್ತಾ ಬಂದವು. ಇದನ್ನು ಪ್ರತಿಭಟಿಸಲು ತಲೆ ಎತ್ತಿದ ವಿದೇಶಿ ವಸ್ತುಗಳ ಬಹಿಷ್ಕಾರ, ಸ್ವದೇಶಿ ವಸ್ತುಗಳ ಪುರಸ್ಕಾರ ಚಳುವಳಿಯಲ್ಲಿ ದುಮುಕಿ ಮಂಗಳೂರು ಹೆಂಚು ಮತ್ತು ಸೀಸದ ಕಡ್ಡಿ ತಯಾರಿಸುವ ಕಾರ್ಖಾನೆಗಳ ಸ್ಥಾಪನೆಗೆ ಜನರನ್ನು ಹುರಿದುಂಬಿಸಿದರಲ್ಲದೆ ತಾವೂ ಸ್ಥಾಪಿಸಿ ಅವರಿಗೆ ಮಾದರಿಯಾದರು.

ಆ} ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವುದರಲ್ಲಿ ಶಿಕ್ಷಣದ ಪಾತ್ರ ಬಹಳ ದೊಡ್ಡದು. ಆದರೆ ಭಾರತೀಯರು ಪಡೆಯುತ್ತಿದ್ದ ಶಿಕ್ಷಣ ಅವರಿಗೆ ಸ್ವದೇಶವನ್ನೂ, ಸ್ವದೇಶ ಸಂಸ್ಕೃತಿಯನ್ನು ಮರೆಸುತ್ತಲಿದ್ದಿತು. ಈ ಅಪಾಯವನ್ನು ತಪ್ಪಿಸಲು ನಮ್ಮ ದೇಶ-ನಮ್ಮ ಸಂಸ್ಕೃತಿಯನ್ನು ಪೋಷಿಸುವ "ರಾಷ್ಟ್ರೀಯ ಶಿಕ್ಷಣ ಚಳುವಳಿ" ಯು ಆಗ ಭಾರತದಲ್ಲೆಲ್ಲಾ ವ್ಯಾಪಿಸಿದ್ದಿತು. ವೆಂಕಟರಾಯರು ಈ ಚಳುವಳಿಯಲ್ಲಿಯೂ ದುಮುಕಿ ಧಾರವಾಡದಲ್ಲಿ "ಕರ್ನಾಟಕ ನೂತನ ವಿದ್ಯಾಲಯ" ಎಂಬ ರಾಷ್ಟ್ರೀಯ ವಿದ್ಯಾಲಯವನ್ನು ಸ್ಥಾಪಿಸಿದರು.

****